ಬಿ.ಎಂ.ಶ್ರೀಕಂಠಯ್ಯ

ಎ. ಎನ್. ಮೂರ್ತಿರಾವ್



ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು

ತ್ರೈವಾರ್ಷಿಕ ಯೋಜನೆಯ ಪುಸ್ತಕಮಾಲೆ–೯೭

ಬಿ. ಎಂ. ಶ್ರೀಕಂಠಯ್ಯ

ಎ. ಎನ್. ಮೂರ್ತಿರಾವ್

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ,
ಚಾಮರಾಜಪೇಟೆ : : ಬೆಂಗಳೂರು ೧೮

B. M. Srikantaiah—(Kannada) a Study of his life and works by Prof. A. N. Murthy Rao; Published by Kannada Sahitya Parishat, Chamarajpet, Bangalore-560018 — 1975.

ಮೊದಲನೆಯ ಮುದ್ರಣ : ೧೯೭೫
ಎರಡನೆಯ ಮುದ್ರಣ : ೧೯೮೩

ಬೆಲೆ : ನಾಲ್ಕು ರೂಪಾಯಿ

ಮುದ್ರಕರು
ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ : ಬೆಂಗಳೂರು ೧೮

ಎರಡನೆಯ ಮುದ್ರಣಕ್ಕೆ ಮುನ್ನುಡಿ

ಬಿ. ಎಂ. ಶ್ರೀ. ಯವರು ಹೊಸಗನ್ನಡದ ಆಚಾರ್ಯಪುರುಷರಲ್ಲಿ ಒಬ್ಬರು. ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಇದರ ಏಳಿಗೆಗಾಗಿ ಹಗಲಿರುಳೂ ದುಡಿದವರು, ಕನ್ನಡದ ಮೇಲ್ಮೆಗಾಗಿ ಪಣ ತೊಟ್ಟವರು. 'ಕನ್ನಡ ತಲೆ ಎತ್ತುವ ಬಗೆ'ಯನ್ನು ಕುರಿತು ಬಹು ಹಿಂದೆಯೇ ಕನ್ನಡಿಗರಿಗೆ ದಾರಿ ತೋರಿದವರು. ಇಪ್ಪತ್ತನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಕನ್ನಡದ ಮುನ್ನಡೆ ಕುರಿತು ಆಳವಾಗಿ ಆಲೋಚಿಸಿದವರು. ಕನ್ನಡಕ್ಕೆ 'ಶ್ರೀ' ಸ್ವರೂಪರಾದ ಶ್ರೀಕಂಠಯ್ಯನವರ ಬದುಕು ಬರಹ ಕನ್ನಡಿಗರಿಗೆ ಹುರುಪು ತರುವಂತಹುದು. ತಮ್ಮ ವೈಯಕ್ತಿಕ ಜೀವನದಲ್ಲಿಯ ಕಷ್ಟ ನಷ್ಟಗಳನ್ನು ಲೆಕ್ಕಿಸದೆ ಋಜು ಮಾರ್ಗದಿಂದ ತ್ಯಾಗಿಗಳಾಗಿ ತಾಯಿನುಡಿಗೆ ದುಡಿದ ಈ ತಲೆಯಾಳಿನ ಬಾಳಕಥೆಯನ್ನು ಎ. ಎನ್. ಮೂರ್ತಿರಾಯರು ಚೆನ್ನಾಗಿ ಬರೆದಿದ್ದಾರೆ. ಈ ಚರಿತ್ರೆಯನ್ನು ಬರೆಯಲು ಅವರೇ ತಕ್ಕವರು. ಅವರು ಶ್ರೀಯವರ ಜೀವನವನ್ನು ಕಂಡವರಲ್ಲದೆ ಶಿಷ್ಯರಾಗಿ, ನಿಕಟ ಸಂಪರ್ಕದಲ್ಲಿದ್ದವರು. ಶ್ರೀಕಂಠಯ್ಯನವರ ಮನೋಧರ್ಮವನ್ನು ಚೆನ್ನಾಗಿ ಅರಿತವರು. ಶ್ರೀಯವರ ಕೃತಿಗಳನ್ನೂ ಸಮಕಾಲೀನ ದೃಷ್ಟಿಯಿಂದ ಅಳತೆ ಮಾಡಬಲ್ಲ ಸಮರ್ಥರು. ಮೂರ್ತಿರಾಯರ ಸಾಹಿತ್ಯ ರಚನಾ ಶಕ್ತಿಯನ್ನು ಕುರಿತು ಮಾತನಾಡುವ ಅಗತ್ಯವಿಲ್ಲ. ಅವರು ಕನ್ನಡದ ಹಿರಿಯ ಬರಹಗಾರರಲ್ಲಿ ಒಬ್ಬರು. ಅವರ ಪ್ರಬಂಧಗಳು ಹೊಸ ಸಾಹಿತ್ಯ ಪ್ರಪಂಚದಲ್ಲಿ ಪ್ರಸಿದ್ಧವಾಗಿವೆ. ಅಂಥವರು ಬಿ. ಎಂ. ಶ್ರೀಕಂಠಯ್ಯನವರ ಜೀವನ ಚರಿತ್ರೆಯನ್ನು ಪರಿಷತ್ತಿಗಾಗಿ ಬರೆದುಕೊಟ್ಟು ಉಪಕರಿಸಿದ್ದಾರೆ. ಅದಕ್ಕಾಗಿ ಪರಿಷತ್ತು ಅವರಿಗೆ ತನ್ನ ನೆನಪುಗಳನ್ನು ಎದೆತುಂಬಿ ಸಲ್ಲಿಸುತ್ತದೆ.

ಬೆಂಗಳೂರು
೧೩ – ೧ – ೧೯೮೨

ಹಂಪ. ನಾಗರಾಜಯ್ಯ
ಅಧ್ಯಕ್ಷರು

ಮುನ್ನುಡಿ

ಪ್ರಾಧ್ಯಾಪಕ ಬಿ. ಎಂ. ಶ್ರೀಕಂಠಯ್ಯನವರು ನನಗೆ ವಿದ್ಯೆಕಲಿಸಿದ ಗುರುಗಳು. ಆದ್ದರಿಂದ, ಕೆಲವು ವರ್ಷಗಳ ಹಿಂದೆ ನವದೆಹಲಿಯ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿಗಳು 'ಶ್ರೀಕಂಠಯ್ಯನವರನ್ನು ಕುರಿತ ಸಣ್ಣ ಪುಸ್ತಕವೊಂದನ್ನು ಇಂಗ್ಲಿಷಿನಲ್ಲಿ ಬರೆದುಕೊಡಿ' ಎಂದಾಗ ಸಂತೋಷದಿಂದ ಆ ಕೆಲಸವನ್ನು ಒಪ್ಪಿಕೊಂಡೆ. ಈಚೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧಿಕಾರಿಗಳಿಂದ ಅದೇ ವಿಷಯವನ್ನು ಕುರಿತ ಕನ್ನಡ ಪುಸ್ತಕವನ್ನು ಬರೆದುಕೊಡಬೇಕೆಂದು ಆಹ್ವಾನ ಬಂತು. ಈ ಪುಸ್ತಕವು ಸಾಹಿತ್ಯ ಅಕಾಡೆಮಿಗಾಗಿ ಬರೆದ ಇಂಗ್ಲಿಷ್ ಪುಸ್ತಕವನ್ನು ಬಹುಮಟ್ಟಿಗೆ ಅನುಸರಿಸಿದೆ; ಹಾಗೆ ಅನುಸರಿಸಬಹುದೆಂದು ಒಪ್ಪಿಗೆ ಕೊಟ್ಟಿದ್ದಕ್ಕಾಗಿ ಅಕಾಡೆಮಿಗೆ ಕೃತಜ್ಞನಾಗಿದ್ದೇನೆ.

ಶ್ರೀಕಂಠಯ್ಯನವರ ಜೀವನದ ವಿಷಯವಾಗಿ ಡಾ|| ಡಿ. ವಿ. ಗುಂಡಪ್ಪನವರ 'ಸಾಹಿತ್ಯೋಪಾಸಕರು', ಡಾ|| ಎಸ್.ವಿ.ರಂಗಣ್ಣನವರ 'B. M. Srikantaiah' ಎಂಬ ಪುಸ್ತಕಗಳಿಂದ ತಿಳಿದುಬಂದ ಕೆಲವು ಅಂಶಗಳನ್ನು ಇಲ್ಲಿ ಬಳಸಿಕೊಂಡಿದ್ದೇನೆ. ಈ ಋಣವನ್ನು ಕೃತಜ್ಞತಾಪೂರ್ವಕವಾಗಿ ಒಪ್ಪಿಕೊಳ್ಳುತ್ತೇನೆ.

ಶ್ರೀಕಂಠಯ್ಯನವರ ಮತ್ತು ಅವರ ಕೃತಿಗಳ ವಿಷಯದಲ್ಲಿ ನನ್ನ ಅಭಿಪ್ರಾಯಗಳಿಗೂ ಇತರರ ಅಭಿಪ್ರಾಯಗಳಿಗೂ ಸಾಮ್ಯವೂ ಇರಬಹುದು, ವಿರೋಧವೂ ಇರಬಹುದು. ನನಗೆ ದೋಷಗಳಂತೆ ಕಂಡ ಕೆಲವು ಅಂಶಗಳನ್ನು ಇಲ್ಲಿ ಕಾಣಿಸುವ ಸಾಹಸ ಮಾಡಿದ್ದೇನಾದರೂ ನನಗೆ ನನ್ನ ಗುರುಗಳಲ್ಲಿರುವ ಗೌರವ ಎಳ್ಳಷ್ಟೂ ಕುಂದಿಲ್ಲ. ಯಾವುದನ್ನೂ ನಿಷ್ಪಕ್ಷಪಾತ ದೃಷ್ಟಿಯಿಂದ ನೋಡಬೇಕು; 'ಕೊನೆಗೆ ನಿಲ್ಲುವುದು ಅಭಿಮಾನವಲ್ಲ, ಸತ್ಯ' ಎಂಬುದು ಶ್ರೀಕಂಠಯ್ಯನವರು ಕಲಿಸಿದ ಪಾಠ. ಅದಕ್ಕನುಸಾರವಾಗಿ ನಡೆಯುವ ಪ್ರಯತ್ನವನ್ನು ಇಲ್ಲಿ ಮಾಡಿದ್ದೇನೆ.

ನನ್ನ ಗುರುಗಳನ್ನೂ ಅವರ ಕೃತಿಗಳನ್ನೂ ಮತ್ತೆ ನೆನಪಿಗೆ ತಂದುಕೊಳ್ಳುವ ಸಂದರ್ಭವನ್ನು ಒದಗಿಸಿಕೊಟ್ಟಿದ್ದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಕೃತಜ್ಞನಾಗಿದ್ದೇನೆ.

ಮೈಸೂರು
೧೩-೧-೧೯೭೫

ಎ. ಎನ್. ಮೂರ್ತಿರಾವ್

ವಿಷಯಸೂಚಿಕೆ

ಜೀವನ ಚರಿತ್ರೆ

ಈ ಶತಮಾನದ ಎರಡನೆಯ ದಶಕದ ಸುಮಾರಿಗೆ ಕನ್ನಡ ಸಾಹಿತ್ಯದಲ್ಲಿ ಮಹತ್ವಪೂರ್ಣವಾದ ಕ್ರಾಂತಿಯುಂಟಾಯಿತು. ಅದನ್ನು "ರೊಮ್ಯಾಂಟಿಕ್ ಕ್ರಾಂತಿ", "ಕನ್ನಡ ಸಾಹಿತ್ಯದಲ್ಲಿ ನವೋದಯ" ಎಂದು ಮುಂತಾಗಿ ಕರೆಯುವ ವಾಡಿಕೆ. 'ಕ್ರಾಂತಿ' ಎಂದರೆ ಹಠಾತ್ತಾಗಿ, ಅನಿರೀಕ್ಷಿತವಾಗಿ ಸಂಭವಿಸುವ ಘಟನೆ ಎಂದೇ ನಮ್ಮೆಲ್ಲರ ತಿಳಿವಳಿಕೆ. ಆದರೆ ವಾಸ್ತವವಾಗಿ ಯಾವ ಸಾಹಿತ್ಯದಲ್ಲಾಗಲಿ, ಮುನ್ಸೂಚನೆಯೇನೂ ಇಲ್ಲದೆ ಹಠಾತ್ತಾಗಿ ರಾತ್ರಿ ಇದ್ದ ಪರಿಸ್ಥಿತಿ ಬೆಳಗಾಗುವುದರೊಳಗೆ ಬದಲಾಗಿ ಕ್ರಾಂತಿ ಏರ್ಪಡುವುದಿಲ್ಲ. ಅದಕ್ಕೆ ಸ್ವಲ್ಪ ಮಟ್ಟಿಗಾದರೂ ಪೂರ್ವಸಿದ್ಧತೆ ನಡೆದಿರುತ್ತದೆ. ಕರ್ಣಾಟಕದಲ್ಲಿ ೧೯ನೇ ಶತಮಾನದ ಉತ್ತರಾರ್ಧದಲ್ಲೂ ೨೦ನೇ ಶತಮಾನದ ಆದಿಭಾಗದಲ್ಲೂ ಹಳೆಯ ಕನ್ನಡ ಸಾಹಿತ್ಯದ ವಿಷಯದಲ್ಲಿ ಅತೃಪ್ತಿಗೊಂಡು ಯಾವುದೋ ಹೊಸಬಗೆಯ ಸೌಂದರ್ಯಕ್ಕಾಗಿ ಹಂಬಲಿಸುತ್ತಿದ್ದ ಜನರಿದ್ದರು. ಹಳೆಯುದರ ವಿಷಯದಲ್ಲಿ ಅತೃಪ್ತಿಯೇಕೆ ಎಂಬುದರ ಅರಿವು ಅವರ ಮನಸ್ಸಿನಲ್ಲಿ ಸಾಕಾದಷ್ಟು ಸ್ಪಷ್ಟವಾಗಿರಲಿಲ್ಲವೆನ್ನಬಹುದು ; ಹೊಸ ಬಗೆಯ ಸೌಂದರ್ಯ ಅವರ ಪಾಲಿಗೆ ಮನೋಹರವಾದ, ಆದರೆ ಮುಸುಕು ಮುಸುಕಾದ, ಕನಸೆನ್ನಬಹುದು. ಆದರೂ ಅವರು ಆ ಕನಸಿನ ರಾಜ್ಯದ ಕಡೆಗೆ ಸ್ವಲ್ಪ ಅನಿಶ್ಚಿತವಾದ ಹೆಜ್ಜೆಯನ್ನಾದರೂ ಇಟ್ಟರು. ಅವರು ಮಾಡಿದ ಪ್ರಯೋಗಗಳಲ್ಲಿ ಕೆಲವಾದರೂ ಆಕರ್ಷಕವಾದವು. ಕನ್ನಡ ಸಾಹಿತ್ಯದಲ್ಲಿ ಪ್ರಗತಿ ಶಕ್ತಿಗಳು ಜೀವಂತವಾಗಿದ್ದವೆನ್ನುವುದಕ್ಕೆ ಅದು ಸಾಕ್ಷಿ.

ಇದು ನಿಜವಾದರೂ ಅವರ ಪ್ರಯೋಗಗಳಿಗೆ ದೀರ್ಘಕಾಲದ ಪರಿಣಾಮವುಂಟುಮಾಡುವ ಶಕ್ತಿ ಸಾಲದು. ಕನ್ನಡ ಸಾಹಿತ್ಯದ ಪರಿಸ್ಥಿತಿಯನ್ನು ಸಮಗ್ರವಾಗಿ ಪರಿಶೀಲಿಸಿ, ಇತರ ಸಾಹಿತ್ಯಗಳ ಅಧ್ಯಯನದಿಂದ ವಿಶೇಷ ಚೈತನ್ಯವನ್ನು ಪಡೆದುಕೊಂಡು, ಹೊಸ ಸಾಹಿತ್ಯ ಪ್ರಪಂಚವೊಂದರ ರೂಪುರೇಷೆಗಳನ್ನು ಸ್ಫುಟವಾಗಿ ಕಲ್ಪಿಸಿಕೊಂಡು, ಹೊಸ ಶಕ್ತಿಗಳೆಲ್ಲವನ್ನೂ ಒಂದುಗೂಡಿಸಿ, ವಿಜಯಯಾತ್ರೆಯ ದಾರಿಯೇನೆಂಬುದನ್ನು ನಿರ್ಧರಿಸಿ ನೇತಾರನಾಗುವ ಮೇಧಾವಿಯೊಬ್ಬರ ಅವಶ್ಯಕತೆಯಿತ್ತು. ಅಂಥ ಮಹಾಪುರುಷರು–ಬಿ. ಎಂ. ಶ್ರೀಕಂಠಯ್ಯನವರು–ದೊರೆತದ್ದು ನಮ್ಮ ಪುಣ್ಯ.

ದಿವಂಗತ ಪ್ರಾಧ್ಯಾಪಕ ಬಿ. ಎಂ. ಶ್ರೀಕಂಠಯ್ಯನವರು ೧೮೮೪ನೆಯ ಜನವರಿ ಮೂರನೆಯ ತಾರೀಖಿನಲ್ಲಿ ಹುಟ್ಟಿದರು. ಜನ್ಮಸ್ಥಳ ತುಮಕೂರು ಜಿಲ್ಲೆಗೆ ಸೇರಿದ ಸಂಪಿಗೆ ಎಂಬ ಗ್ರಾಮ. ಅವರ ತಂದೆ ಬೆಳ್ಳೂರು ಮೈಲಾರಯ್ಯನವರು, ತಾಯಿ ಭಾಗೀರಥಮ್ಮನವರು. ಇಬ್ಬರೂ ಸಂಪ್ರದಾಯಸ್ಥ ಮಧ್ಯಮವರ್ಗದ ಮನೆತನ ದವರು. ಮೈಲಾರಯ್ಯನವರು ಮೈಸೂರಿಗೆ ಒಂಬತ್ತು ಮೈಲಿ ದೂರದಲ್ಲಿರುವ ಶ್ರೀರಂಗಪಟ್ಟಣದಲ್ಲಿ ವಕೀಲಿ ವೃತ್ತಿ ನಡೆಸುತ್ತಿದ್ದರು. ಅವರದ್ದು ಅನುಕೂಲಸ್ಥಿತಿ ಯಲ್ಲಿದ್ದ ಸಂಸಾರ. ಅವರಿಗೆ ಐದು ಮಕ್ಕಳು–ಮೂರು ಗಂಡು, ಎರಡು ಹೆಣ್ಣು ; ಶ್ರೀಕಂಠಯ್ಯನವರೇ ಹಿರಿಯರು. ದೊಡ್ಡವರಾದ ಮೇಲೆ ಪ್ರಸಿದ್ಧಿಗೆ ಬಂದವರ ನೇಕರ ಬಾಲ್ಯದ ವಿಷಯದಲ್ಲಿ ಕಥೆಗಳಿರುವಂತೆ ಶ್ರೀಕಂಠಯ್ಯನವರ ವಿಷಯದಲ್ಲೂ ಕಥೆಗಳುಂಟು. ಚಿಕ್ಕಂದಿನಲ್ಲಿ ಅವರು ಬಹಳ ತುಂಟರು. ಈಜುವುದು, ಮನ ಬಂದಂತೆ ಅಲೆಯುವುದು, ಕಂಡವರ ತೋಟಕ್ಕೆ ನುಗ್ಗಿ ಪರಂಗಿಹಣ್ಣು, ಸೀಬೆಹಣ್ಣು ತೆಂಗಿನಕಾಯಿ ಇತ್ಯಾದಿಗಳನ್ನು ಲೂಟಿಮಾಡುವುದು, ಹೊಲ ಗದ್ದೆಗಳಿಗೆ ದನ ಗಳನ್ನು ನುಗ್ಗಿಸುವುದು, ಇಂಥಾ ಪುಂಡಾಟಗಳಲ್ಲೆಲ್ಲ ಭಾಗವಹಿಸುತ್ತಿದ್ದರು. ಒಳ್ಳೆಯ ಮಾತಿಗೆ ಬಗ್ಗದೆ ಇದ್ದದ್ದರಿಂದ ಪೆಟ್ಟು ತಿಂದದ್ದೂ ಉಂಟಂತೆ.

ಬಾಲ್ಯದ ವಿದ್ಯಾಭ್ಯಾಸವನ್ನು ಶ್ರೀರಂಗಪಟ್ಟಣದಲ್ಲೇ ಮುಗಿಸಿ ಪ್ರೌಢ ವಿದ್ಯಾ ಭ್ಯಾಸಕ್ಕಾಗಿ ಮೈಸೂರಿಗೆ ಹೋದರು. ಅಲ್ಲಿ ಶ್ರೀರಂಗಪಟ್ಟಣದಿಂದ ಬಂದ ಹುಡು ಗರದ್ದೇ ಒಂದು ಗುಂಪು ಸೇರಿತ್ತು. ಹಳೆಯ ಮೈಸೂರು ರಾಜ್ಯದಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಪ್ರಸಿದ್ಧಿಗೆ ಬಂದ ಹಲವರು—ಕೇಂಬ್ರಿಜ್‌ನಲ್ಲಿ ಪ್ರಶಸ್ತಿ ಪಡೆದು ಮಹಾ ಮೇಧಾವಿಗಳೆನಿಸಿಕೊಂಡು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಪದವಿಗೆ ಏರಿದ್ದ ಎನ್. ಎಸ್. ಸುಬ್ಬರಾಯರು, ಬೆಂಗಳೂರಿನಲ್ಲಿ ಗಣ್ಯ ವಕೀಲರೂ ಪ್ರಸಿದ್ಧ ವಾಗ್ಮಿಗಳೂ ಆಗಿದ್ದ ಎಂ. ಜಿ. ವರದಾಚಾರ್ಯರು, ಪ್ರಾ. ಪಿ. ಎಸ್. ಅಣ್ಣಾಜಿರಾಯರು, ಎಂಜಿನಿಯರ್ ಎಚ್. ಆರ್. ವೆಂಕಟಸುಬ್ಬರಾಯರು, ಇವ ರೆಲ್ಲ ಶ್ರೀರಂಗಪಟ್ಟಣದ ಗುಂಪಿನವರು, ಶ್ರೀಕಂಠಯ್ಯನವರ ಜೊತೆಗಾರರು. ಮೈಸೂರಿನಲ್ಲಿ ಮೆಟ್ರಿಕ್ಯುಲೇಶನ್ ಮತ್ತು ಎಫ್. ಎ. ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ಮೇಲೆ ಶ್ರೀಕಂಠಯ್ಯನವರು ಬೆಂಗಳೂರಿಗೆ ಹೋಗಿ ಸೆಂಟ್ರಲ್ ಕಾಲೇ ಜನ್ನು ಸೇರಿದರು. ಅವರು ಬಿ. ಎ. ಪದವಿಗೆ ಏರಿದ್ದು ೧೯೦೩ರಲ್ಲಿ.

ಆ ಕಾಲದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಇನ್ನೂ ಅಸ್ತಿತ್ವಕ್ಕೆ ಬಂದಿರಲಿಲ್ಲ. ಎಂ. ಎ., ಬಿ.ಎಲ್., ಇತ್ಯಾದಿ ಸ್ನಾತಕೋತ್ತರ ಪದವಿಗಳನ್ನು ಪಡೆಯಬೇಕೆಂದು ಇಷ್ಟವಿದ್ದವರು ಮದರಾಸಿಗೆ ಹೋಗಬೇಕಾಗಿತ್ತು. ಶ್ರೀಕಂಠಯ್ಯನವರು ಮದರಾಸಿ ನಲ್ಲಿ ಮೊದಲು ಬಿ. ಎಲ್. ಪರೀಕ್ಷೆಯನ್ನೂ (೧೯೦೬ರಲ್ಲಿ) ಅನಂತರ ೧೯೦೭ರಲ್ಲಿ ಎಂ. ಎ. ಪರೀಕ್ಷೆಯನ್ನೂ ಪಾಸುಮಾಡಿದರು. ಅವರಿಗೆ ಲಾಯರ್ ಆಗಬೇಕೆಂಬ ಉದ್ದೇಶವೇನೂ ಇದ್ದಂತೆ ತೋರುವುದಿಲ್ಲ. ಬೇರೆ ಯಾವ ದಾರಿಯೂ ತೋರ

ದಿದ್ದರೆ ಲಾಯರಾಗಬಹುದು, ಹೇಗಿದ್ದರೂ ಅಭಿವೃದ್ಧಿ ಸ್ಥಿತಿಗೆ ತಂದಿರುವ ಲಾಯರ್ ಕಛೇರಿ ಇದ್ದೇ ಇದೆ—ಎಂದುಕೊಂಡು ಅವರು ಬಿ. ಎಲ್. ಪಾಸು ಮಾಡಿದರೇನೊ, ಅವರು ಲಾಯರ್ ಆಗುವುದು ಅವರ ತಂದೆಗೂ ಇಷ್ಟವಿರಲಿಲ್ಲ ವಂತೆ. ಶ್ರೀಕಂಠಯ್ಯನವರು ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗೂ ಕುಳಿತಿದ್ದರು; ಆದರೆ ಅದರಲ್ಲಿ ಉನ್ನತ ಸ್ಥಾನವನ್ನು ಗಳಿಸಲಿಲ್ಲ—ಕನ್ನಡದ ಅದೃಷ್ಟ ಚೆನ್ನಾಗಿತ್ತು. ಸಿವಿಲ್ ಸರ್ವಿಸ್ ಪಾಸು ಮಾಡಿದವರು ಸಾಹಿತ್ಯ ಸೇವೆಯನ್ನು ಮಾಡುವುದು ಅಸಾಧ್ಯವೆಂದಲ್ಲ, ಅದು ಸಾಧ್ಯವೆಂದು ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್ ಅವರು ತೋರಿಸಿಕೊಟ್ಟಿದ್ದಾರೆ. ಆದರೂ ಶ್ರೀಕಂಠಯ್ಯನವರು ಸಿವಿಲ್ ಸರ್ವಿಸ್‌ಗೆ ಸೇರಿದ್ದರೆ ಸಂದರ್ಭ ಹೇಗೆ ಬರುತ್ತಿತ್ತೋ ಏನೊ. ವಿಶ್ವವಿದ್ಯಾಲಯದಲ್ಲಿ ಉನ್ನತ ಅಧಿಕಾರದಲ್ಲಿದ್ದುಕೊಂಡು ಅವರು ಮಾಡಿದ ಕೆಲಸಗಳನ್ನು ಆಗ ಮಾಡುವುದು ಬಹಳ ಕಷ್ಟವಾಗುತ್ತಿತ್ತು ಎಂದೇನೋ ಧಾರಾಳವಾಗಿ ಹೇಳಬಹುದು.

ಅವರು ಮದರಾಸಿನಲ್ಲಿದ್ದಾಗ ಕಾಣುತ್ತಿದ್ದ ಕನಸು, ನಿಜವಾಗಿ ಸಿವಿಲ್ ಸರ್ವಿಸ್ಸಿನದಲ್ಲ. ಅವರೂ ಅವರ ಮಿತ್ರರು ಕೆಲವರೂ ಸಂಜೆಯ ಹೊತ್ತು ಸಮುದ್ರ ತೀರದಲ್ಲಿ ಕುಳಿತು "ಕನ್ನಡ ಬಹಳ ಶೋಚನೀಯವಾದ ಸ್ಥಿತಿಗೆ ಇಳಿದಿದೆ; ಅದಕ್ಕೆ ನ್ಯಾಯವಾಗಿ ಸಲ್ಲಬೇಕಾದ ಸ್ಥಾನವನ್ನು ದೊರಕಿಸಿಕೊಳ್ಳಬೇಕು; ಅದರ ಸಾಹಿತ್ಯ ಸಂಪತ್ತನ್ನು ಹೆಚ್ಚಿಸಬೇಕು; ಷೇಕ್‌ಸ್ಪಿಯರ್, ಪ್ಲೇಟೋ ಮುಂತಾದವರ ಕೃತಿಗಳನ್ನು ಕನ್ನಡಕ್ಕೆ ತರಬೇಕು"—ಇತ್ಯಾದಿ ವಿಚಾರ ನಡೆಸುತ್ತಿದ್ದರಂತೆ. ಆಗ ಅವರ ಮನಸ್ಸಿನಲ್ಲಿ ಸುಳಿದಾಡುತ್ತಿದ್ದ ಯೋಚನೆಗಳು ಬಹುಬೇಗ ನಿಷ್ಕೃಷ್ಟವಾದ ರೂಪವನ್ನು ತಳೆದಿರಬೇಕು. ೧೯೧೧ರಲ್ಲಿ ಅಂದರೆ ಎಂ. ಎ. ಪಾಸು ಮಾಡಿದ ನಾಲ್ಕು ವರ್ಷಗಳ ಮೇಲೆ, ಅವರು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ವಾರ್ಷಿಕೋತ್ಸವದ ಸಂದರ್ಭದಲ್ಲಿ 'ಕನ್ನಡ ಮಾತು ತಲೆಎತ್ತುವ ಬಗೆ'* ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು. ಆ ಭಾಷಣದಲ್ಲಿ ಆಗಲೇ ಅವರ ಆಲೋಚನಾಶಕ್ತಿ, ಪಕ್ಷಪಾತವಿಲ್ಲದೆ ಎಲ್ಲ ದೃಷ್ಟಿಗಳನ್ನೂ ಪರಿಶೀಲಿಸಿ ನಿರ್ಣಯಕ್ಕೆ ಬರುವ ಸಾಮರ್ಥ್ಯ, ಇವು ಎದ್ದು ಕಾಣುತ್ತವೆ. ಕನ್ನಡ ಅಭಿವೃದ್ಧಿಗಾಗಿ ಏನೇನು ಮಾಡಬೇಕು ಎಂಬ ವಿಷಯದಲ್ಲಿ ಅವಶ್ಯಕವಾದ ಯೋಜನೆ ಅವರ ಮನಸ್ಸಿನಲ್ಲಿ ಆಗಲೇ ರೂಪುಗೊಂಡಿತ್ತು.

೧೯೦೯ರಲ್ಲಿ ಮೈಸೂರು ಸರ್ಕಾರ ಅವರನ್ನು ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ಅಧ್ಯಾಪಕರನ್ನಾಗಿ ನೇಮಿಸಿತು. ಅವರು ಇಂಗ್ಲಿಷ್ ಮತ್ತು ಕನ್ನಡ ಎರಡು ವಿಷಯಗಳನ್ನು ಬೋಧಿಸಬೇಕಾಗಿತ್ತು. ೧೯೧೪ರಲ್ಲಿ ಅವರು ಉಪಪ್ರಾಧ್ಯಾ

---

* ಇದು ಕಾವ್ಯಾಲಯದಿಂದ ಪ್ರಕಟವಾಗಿರುವ "ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ. ಭಾಷಣಗಳು ಮತ್ತು ಲೇಖನಗಳು" ಎಂಬ ಪುಸ್ತಕದಲ್ಲಿ ಮೊದಲನೆಯ ಭಾಷಣವಾಗಿ ಅಚ್ಚಾಗಿದೆ.

ಪಕರಾದರು. ಸುಮಾರು ಅದೇ ಕಾಲದಲ್ಲಿ ಅವರು A Hand book of Rhetoric ಎಂಬ ಪುಸ್ತಕವನ್ನು ಪ್ರಕಟಿಸಿದರು. ಅದರಲ್ಲಿ ಅವರ ಸ್ವಂತ ಪ್ರತಿಭೆಯೇನೂ ಎದ್ದು ತೋರುವಂತಿಲ್ಲವಾದ್ದರಿಂದ ಅದಕ್ಕೆ ಹೆಚ್ಚು ಗಮನ ಕೊಡಬೇಕಾಗಿಲ್ಲ. ಅದೇ ಕಾಲದಲ್ಲಿಯೇ ಅವರು ಮತ್ತೊಂದು ಕೆಲಸವನ್ನು—ಇಂಗ್ಲಿಷ್ ಗೀತೆಗಳನ್ನು ಕನ್ನಡಿಸುವ ಕೆಲಸವನ್ನು—ಆರಂಭಿಸಿರಬೇಕು. ಇದರ ವಿಷಯ ಯಾರಿಗೂ ತಿಳಿದಿರಲಿಲ್ಲ. ಆದರೆ ಅವರು ಅತ್ಯುತ್ತಮ ದರ್ಜೆಯ ಇಂಗ್ಲಿಷ್ ಅಧ್ಯಾಪಕರು ಎಂಬ ಕೀರ್ತಿ ದೇಶದಲ್ಲೆಲ್ಲಾ ಹರಡಿತ್ತು. ಇದರಿಂದ ಅವರ ಮನಸ್ಸಿಗೆ ಸ್ವಲ್ಪ ಹೆಚ್ಚಿನ ಸಂತೋಷವೇ ಆಯಿತು—ಅದಕ್ಕೆ ಕಾರಣ ಮುಂದೆ ಸ್ಪಷ್ಟವಾಗುತ್ತದೆ. ಅವರ ಸಂಸಾರ ಜೀವನವೂ ಆಗ ಸುಖಮಯವಾಗಿತ್ತು. ಕೆಲವು ವರ್ಷಗಳ ಹಿಂದೆಯೇ ಅವರು ಶ್ರೀಮತಿ ದೇವಮ್ಮನವರನ್ನು ಮದುವೆಯಾಗಿದ್ದರು. ಅನುಕೂಲವಾದಂತ ದಾಂಪತ್ಯ; ಮೂರು ಜನ ಮಕ್ಕಳು, ಎರಡು ಹೆಣ್ಣು ಮತ್ತು ಒಂದು ಗಂಡು; ಮನಸ್ಸಿಗೆ ಒಗ್ಗುವ ಹಿತವಾದ ಕಸಬು, ಅದರಲ್ಲಿ ಆಗಲೇ ಗಳಿಸಿದ್ದ ಖ್ಯಾತಿ—ಇನ್ನೇನಾಗಬೇಕು?

ಆದರೆ ಈ ಸೌಖ್ಯ ಯಾವುದೋ ಮತ್ಸರದ ದೈವಕ್ಕೆ ಸಹಿಸಲಿಲ್ಲವೇನೊ! ಒಂದಾದ ಮೇಲೊಂದು ಎರಡು ದುಸ್ಸಹವಾದ ದುರಂತಗಳು ಅವರ ಸಂಸಾರದ ಮೇಲೆ ಎರಗಿ ಬಂದವು. ಅವರ ಮಗ ತಮ್ಮಯ್ಯನಿಗೆ ಕಣ್ಣು ನೋವಾಗಿತ್ತು. ಅದಕ್ಕಾಗಿ ಹಾಕಿದ ಔಷಧಿ ಆ ಹುಡುಗನಿಗೆ ಒಗ್ಗಲಿಲ್ಲವೋ ಅಥವಾ ಹುಡುಗತನದಲ್ಲಿ ಆತ ಕಣ್ಣನ್ನು ಉಜ್ಜಿದ್ದರಿಂದ ನಂಜಾಯಿತೋ—ಅಂತೂ ಆತನ ಕಣ್ಣು ಹೋಯಿತು. ಇದಾದ ಕೆಲವೇ ಕಾಲದಲ್ಲಿ ಗರ್ಭಿಣಿಯಾಗಿದ್ದ ಶ್ರೀಕಂಠಯ್ಯನವರ ಪತ್ನಿಯನ್ನು ಹೆರಿಗೆಗಾಗಿ ಆಸ್ಪತ್ರೆಗೆ ಸೇರಿಸಿದ್ದರು. ಹೆರಿಗೆಯಾಯಿತು, ಮಗು ಉಳಿಯಲಿಲ್ಲ; ಬಾಣಂತಿ ಜ್ವರದಿಂದ ತಾಯಿಯೂ ಕಾಲವಾದರು. ಮಗನಿಗೆ ಬಂದ ವಿಪತ್ತು, ಪತ್ನಿ ವಿಯೋಗ—ಈ ಸಂಕಟಗಳನ್ನು ಅವರು ಧೈರ್ಯದಿಂದ ಎದುರಿಸಿದರು ಎನ್ನಬಹುದು. ಆದರೆ ಆ ಧೈರ್ಯ ಬಹು ಕಷ್ಟಪಟ್ಟು ಸಂಪಾದಿಸಿದ ಧೈರ್ಯವಾಗಿದ್ದಿರಬೇಕು! ಕೆಲವು ವರ್ಷಗಳು ಕಳೆದ ಮೇಲೆ ವಿಧಿ ಅವರಿಗೆ ಮತ್ತೆರಡು ಪೆಟ್ಟು ಕೊಟ್ಟಿತು. ಅವರ ಅಳಿಯಂದಿರಾದ ಎಸ್. ಆರ್. ಗುಂಡಪ್ಪನವರು—ಆತ ಆಗ ಇನ್ನೂ ಯುವಕರು, ಮೇಧಾವಿಗಳೆಂದು ಹೆಸರು ಪಡೆದಿದ್ದವರು—ಹಠಾತ್ತಾಗಿ ವಿಷಮಶೀತ ಜ್ವರ ಬಂದು ಕಾಲವಾದರು. ಆತನ ಉತ್ತರಕ್ರಿಯೆಗಳು ಮುಗಿದ ದಿನವೇ ಶ್ರೀಕಂಠಯ್ಯನವರ ತಾಯಿಯೂ ಅದೇ ವ್ಯಾಧಿಗೆ ತುತ್ತಾದರು. ಈ ಸಂಕಟಗಳನ್ನು ಎಷ್ಟೇ ಧೈರ್ಯದಿಂದ ಸಹಿಸಿದರೆಂದರೂ ಬಹುಶಃ ಶ್ರೀಕಂಠಯ್ಯನವರು ಅವುಗಳಿಂದ ಸಂಪೂರ್ಣವಾಗಿ ಚೇತರಿಸಿಕೊಳ್ಳಲಿಲ್ಲವೆಂದು ತೋರುತ್ತದೆ. ಒಂದೊಂದು ವೇಳೆ ಹಠಾತ್ತಾಗಿ ಅವರಲ್ಲಿ ಕಾಣಿಸುತ್ತಿದ್ದ—ಆದರೆ

ಬೇಗ ಅದೃಶ್ಯವಾಗುತ್ತಿದ್ದ—ಒಂದು ಬಗೆಯ ಕಹಿಯು ಮೂಲ ಈ ದುರಂತಗಳಲ್ಲಿರಬಹುದು.

ಹೆಂಡತಿಯನ್ನು ಕಳೆದುಕೊಂಡಾಗ ಅವರಿಗೆ ಇನ್ನೂ ಮೂವತ್ತು ಮೂವತ್ತೊಂದು ವರ್ಷವಿದ್ದಿರಬಹುದು. ಆದರೂ ಮದುವೆ ಮಾಡಿಕೊಳ್ಳುವುದಿಲ್ಲವೆಂದು ನಿಶ್ಚಯಿಸಿದರು. ತಮ್ಮ ಜೀವನದ ಗುರಿಯೇನೆಂಬುದು ಅವರಿಗೆ ಆ ವೇಳೆಗೆ ಸ್ಪಷ್ಟವಾಗಿತ್ತು ; ತಮ್ಮ ಮನಸ್ಸನ್ನು ಸಂಪೂರ್ಣವಾಗಿ ಆ ಕಡೆಗೆ ತಿರುಗಿಸಿದರು. ಕನ್ನಡಕ್ಕೆ ನ್ಯಾಯವಾಗಿ ಸಲ್ಲಬೇಕಾದ ಸ್ಥಾನವನ್ನು ಇಂಗ್ಲಿಷ್ ಆಕ್ರಮಿಸಿಕೊಂಡಿತ್ತು ; ಆ ಸ್ಥಾನವನ್ನು ಕನ್ನಡಕ್ಕೆ ಗಳಿಸಿಕೊಡಬೇಕು. ಕನ್ನಡ ಸಾಹಿತ್ಯವು ಸಂಪ್ರದಾಯದ ಸಂಕೋಲೆಗಳಲ್ಲಿ ಸಿಕ್ಕಿ ನಿಸ್ತೇಜವಾಗಿತ್ತು ; ಅದಕ್ಕೆ ಸ್ವಾತಂತ್ರ್ಯ ಕೊಟ್ಟು ಪುನರುಜ್ಜೀವನಕ್ಕೆ ಅವಕಾಶ ಮಾಡಿಕೊಡಬೇಕು. ಕರ್ನಾಟಕದ ಎಲ್ಲ ಭಾಗಗಳು ಒಂದೇ ಆಡಳಿತಕ್ಕೆ ಒಳಪಡಬೇಕಾದದ್ದು ನ್ಯಾಯ ; ಇದನ್ನು ಸಾಧಿಸುವುದಕ್ಕೆ ಅವಶ್ಯಕವಾದ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು—ಅವರ ಇಡೀ ಜೀವನ ಈ ಕೆಲಸಗಳಿಗೆ ಮೀಸಲಾಯಿತು. ಅವರ ವೃತ್ತಿ ಇಂಗ್ಲಿಷ್ ಸಾಹಿತ್ಯವನ್ನು ಬೋಧಿಸುವುದು. ಇಂಗ್ಲಿಷ್ ಸಾಹಿತ್ಯದ ಸೊಬಗನ್ನು ಚೆನ್ನಾಗಿ ಅನುಭವಿಸಬೇಕಾದರೆ ಯೂರೋಪಿಯನ್ ಸಾಹಿತ್ಯದ, ಮುಖ್ಯವಾಗಿ ಪುರಾತನ ಗ್ರೀಕ್ ಸಾಹಿತ್ಯದ ಪರಿಚಯ ಮಾಡಿಕೊಳ್ಳಬೇಕು. ಅವರ ಅಧ್ಯಯನವೆಂದರೆ ಪುರಾತನ ಋಷಿಗಳ ತಪಸ್ಸಿನಂತೆ. ವರ್ಡ್ಸ್‌ವರ್ತ್‌ನ The Prelude ಮತ್ತು ಎಕ್ಸ್‌ಕರ್ಷನ್ (Excursion) ಎಂಬ ದೀರ್ಘ ಕವನಗಳನ್ನು—ಅವುಗಳಲ್ಲಿ ಸಾರವತ್ತಾದ ಭಾಗಗಳನ್ನು ಮಾತ್ರವಲ್ಲ, ಇಡೀ ಕವನಗಳನ್ನು—ಅಧ್ಯಯನ ಮಾಡುವುದಕ್ಕಾಗಿ ಶ್ರೀರಂಗಪಟ್ಟಣದಿಂದ ನಾಲ್ಕು ಮೈಲಿ ನಡೆದು ಹಿರೋಡೆ ಬೆಟ್ಟದ ಒಂದು ಬಂಡೆಯ ಮೇಲೆ ಕುಳಿತುಕೊಳ್ಳುತ್ತಿದ್ದರಂತೆ, ವ್ಯಾಸಂಗಕ್ಕೆ ಯಾವ ಭಂಗವೂ ಬರದಿರಲೆಂದು. ಹೀಗೆ ಅಧ್ಯಯನ ಮಾಡಿ ಒಂದು ತಿಂಗಳೊಳಗೆ ಅವೆರಡು ಕವನಗಳನ್ನೂ ಮುಗಿಸಿದರೆಂದು ಡಾ|| ಡಿ.ವಿ. ಗುಂಡಪ್ಪನವರು ತಮ್ಮ 'ಸಾಹಿತ್ಯೋಪಾಸಕರು' ಎಂಬ ಪುಸ್ತಕದಲ್ಲಿ ತಿಳಿಸಿದ್ದಾರೆ. ಅವರು (ಡಾ|| ಗುಂಡಪ್ಪನವರು) ಒಂದು ಬಾರಿ ಶ್ರೀಕಂಠಯ್ಯನವರನ್ನು ನೋಡಹೋಗಿ ಬಾಗಿಲು ತಟ್ಟಿದಾಗ ಉತ್ತರ ಬರಲಿಲ್ಲ. ಒಳಗೆ ಯಾರೋ ಏನನ್ನೋ ಹಾಡಿಕೊಳ್ಳುತ್ತಿದ್ದಂತೆ ತೋರಿತು. ಮತ್ತೆರಡು ಸಾರಿ ಗಟ್ಟಿಯಾಗಿ ತಟ್ಟಿದ ಮೇಲೆ ಶ್ರೀಕಂಠಯ್ಯನವರೇ ಬಾಗಿಲು ತೆರೆದರು. ಅವರು ಡಾಂತೆಯ 'ಡಿವೈನ್ ಕಾಮೆಡಿ' (Divine Comedy) ಯನ್ನು ಬಾಯಿಗೆ ಬರುವಂತೆ ಗಟ್ಟಿಮಾಡಲು ಪಂಕ್ತಿಗಳನ್ನು ಹೇಳಿಕೊಳ್ಳುತ್ತ ರೂಮಿನಲ್ಲಿ ತಿರುಗುತ್ತಿದ್ದರಂತೆ. ಇದನ್ನೂ ಮೇಲೆ ಹೆಸರಿಸಿದ ಪುಸ್ತಕದಲ್ಲಿ ಡಾ|| ಗುಂಡಪ್ಪನವರು ಕಾಣಿಸಿದ್ದಾರೆ. ಶ್ರೀಕಂಠಯ್ಯನವರು ಪುರಾತನ ಗ್ರೀಕ್ ಭಾಷೆಯನ್ನು ಕಲಿತಿದ್ದರೆಂದೂ ಈಸ್ಕಿಲಸ್ ಮತ್ತು ಸೋಫೊಕ್ಲೀಸರ ನಾಟಕಗಳನ್ನು ಮೂಲದಲ್ಲೇ ಓದಬಲ್ಲವರಾಗಿ

ದ್ದರೆಂದೂ ಕೇಳಿದ್ದೇನೆ. ಅವರು ಪಾಶ್ಚಾತ್ಯ ಸಾಹಿತ್ಯವನ್ನು ಸಾಹಿತ್ಯ ಪ್ರೇಮದಿಂದಾಗಿ, ಅದರ ರಸಾನುಭವಕ್ಕಾಗಿ ಓದಿದರೆಂಬುದು ನಿಜ; ಆದರೆ ಕನ್ನಡದಲ್ಲಿ ತಾವು ಮಾಡಬೇಕೆಂದಿದ್ದ ಕೆಲಸಕ್ಕೆ ಅದು ಅವಶ್ಯವಾದ ಪೂರ್ವಸಿದ್ಧತೆ ಎಂಬ ಪರಿಜ್ಞಾನದಿಂದ ಓದಿದರೆಂಬುದೂ ಅಷ್ಟೇ ನಿಜ. ಅವರು ಸಂಸ್ಕೃತವನ್ನೂ ತಮಿಳನ್ನೂ ಅಭ್ಯಾಸ ಮಾಡಿದಕ್ಕೂ ಅದೇ ಕಾರಣ. ಈ ಶತಮಾನದ ಎರಡನೆಯ ದಶಕವನ್ನು ಅವರು ಹುಗಲಿರುಳು ಶ್ರದ್ಧಾಪೂರ್ವಕವಾದ ಅಧ್ಯಯನಕ್ಕಾಗಿ ಉಪಯೋಗಿಸಿಕೊಂಡರು. ಮೇಲೆ ಕಾಣಿಸಿದ ಸಾಂಸಾರಿಕ ಸಂಕಟಗಳು ಬಂದ ಮೇಲಂತೂ ಅವರ ಅಧ್ಯಯನ ಶ್ರದ್ಧೆ ಇಮ್ಮಡಿ ಮುಮ್ಮಡಿಯಾಯಿತು. ಇಂಥ ಅಧ್ಯಯನ; ತಾವು ಮಾಡಬೇಕಾದ ಮಹತ್ವದ ಕೆಲಸವೊಂದಿದೆ ಎಂಬ ಪ್ರಜ್ಞೆ; ಕರ್ನಾಟಕದ, ಅದರ ಜನರ, ಮತ್ತು ಅದರ ಸಾಹಿತ್ಯದ ಮೇಲಿದ್ದ ಜ್ವಲಂತ ಪ್ರೇಮ—ಇವುಗಳಿಂದಾಗಿ ಅವರಿಗೆ ತಮ್ಮ ಸಂಕಟವನ್ನು ಬದಿಗೊತ್ತಿ ಅದರಿಂದ ಮನೋವೈಕಲ್ಯವನ್ನು ಜಯಿಸಲು ಸಾಧ್ಯವಾಯಿತು. ಒಂದು ಬಾರಿ ನನ್ನ ಮಿತ್ರ ಪ್ರಾ. ತೀ. ನಂ. ಶ್ರೀಕಂಠಯ್ಯನವರೊಡನೆ ಮಾತಾಡುತ್ತಿದ್ದಾಗ, “ಕನ್ನಡ ಸಾಹಿತ್ಯವಾಹಿನಿ ಮರುಭೂಮಿಯ ಕಡೆಗೆ ಸಾಗಿ ಅಲ್ಲಿ ಇಂಗಿಹೋಗುತ್ತದೆಯೇನೊ, ಎನ್ನುವಂತಿತ್ತು. ಶ್ರೀಕಂಠಯ್ಯನವರು ಅದನ್ನು ಉಳಿಸಿದರು” ಎಂದೆ. ಆಗ ತೀ. ನಂ. ಅವರು “ಕನ್ನಡವೂ ಅವರನ್ನು ಉಳಿಸಿತು. ಅವರು ಆತ್ಮಾನುಕಂಪದ ಮರುಭೂಮಿಯ ಕಡೆಗೆ ತಿರುಗಿ ಅವರ ಜೀವನ ವಿಫಲವಾಗುವ ಸಾಧ್ಯತೆಯಿತ್ತು” ಎಂದರು. ನಮ್ಮಿಬ್ಬರಿಗೂ ಆ ಸಂದರ್ಭದಲ್ಲಿ ಜಾರ್ಜ್ ಎಲಿಯಟ್‌ಳ ‘ಸೈಲಸ್ ಮಾರ್ನರ್’ (George Eliot’s Silas Marner) ಕಾದಂಬರಿಯ ನೆನಪಾಯಿತು. ಜೀವನದಲ್ಲೂ ಮಾನವನಲ್ಲೂ ನಂಬಿಕೆಯನ್ನು ಕಳೆದುಕೊಂಡು—ಹಾಗೆ ಕಳೆದುಕೊಂಡದ್ದಕ್ಕೆ ಅವನಿಗಾಗಿದ್ದ ಅನ್ಯಾಯವೇ ಕಾರಣ—ಹೇಗೋ ಬದುಕಲ್ಲದ ಬದುಕಿನಲ್ಲಿದ್ದ ಸೈಲಸ್‌ನನ್ನು ಎಪಿ (Eppie) ಎಂಬ ಚಿಕ್ಕ ಮಗುವಿನ ಪ್ರೇಮ ಉಳಿಸಿತು, ಅವನ ಹೃದಯ ಮೃದುವಾಯಿತು—ಇದೇ ಆ ಕಾದಂಬರಿಯ ವಸ್ತು. ಶ್ರೀಕಂಠಯ್ಯನವರ ಪಾಲಿಗೆ ಕನ್ನಡವೇ ಎಪಿ. ಶ್ರೀಕಂಠಯ್ಯನವರನ್ನು ಉಳಿಸಿದ್ದಕ್ಕಾಗಿ ಕನ್ನಡಕ್ಕೂ ಕನ್ನಡಕ್ಕೆ ಸುಪಥವನ್ನು ತೋರಿಸಿದ್ದಕ್ಕಾಗಿ ಶ್ರೀಕಂಠಯ್ಯನವರಿಗೂ ನಾವು ಕೃತಜ್ಞರಾಗಿರಬೇಕು.

ಅವರು ಮೊದಲು ಕೆಲಸಕ್ಕೆ ಸೇರಿದ್ದು ಇಂಗ್ಲಿಷ್ ಮತ್ತು ಕನ್ನಡ ಇವೆರಡರ ಅಧ್ಯಾಪಕರಾಗಿ. ಕೇವಲ ಕನ್ನಡ ಅಧ್ಯಾಪಕರಾದ ಜನರಿಗೆ ಆಗಿನ ಕಾಲದಲ್ಲಿ ಮರ್ಯಾದೆಯಿರಲಿಲ್ಲ! ಸಮಾಜದಲ್ಲಾಗಲಿ ವಿಶ್ವವಿದ್ಯಾಲಯದಲ್ಲಾಗಲಿ ಅವರ ಅಂತಸ್ತು ಕಡಿಮೆ; ವಿದ್ಯಾರ್ಥಿಗಳಿಗೆ ಕೂಡ ಅವರನ್ನು ಕಂಡರೆ ಗೌರವವಿರಲಿಲ್ಲ. ಆದ್ದರಿಂದ ಶ್ರೀಕಂಠಯ್ಯನವರಿಗೆ ಇಂಗ್ಲಿಷ್ ಬೋಧಿಸುವ ಕೆಲಸವನ್ನೂ ಕೊಟ್ಟರೆಂದು

ಅವರ ಹಿರಿಯ ಶಿಷ್ಯರಾದ ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್ಯರು ಹೇಳಿದ್ದಾರೆ.* ೧೯೧೯ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದವರು "ನಿಮಗೆ ಮೇಲುದರ್ಜೆಯ ಕನ್ನಡ ಪ್ರಾಧ್ಯಾಪಕರ ಕೆಲಸ, ಅಥವಾ ಕೆಳದರ್ಜೆಯ ಇಂಗ್ಲಿಷ್ ಪ್ರಾಧ್ಯಾಪಕರ ಕೆಲಸ–ಇವೆರಡರಲ್ಲಿ ಯಾವುದು ಬೇಕಾದರೂ ಕೊಡುತ್ತೇವೆ" ಎಂದು ಶ್ರೀಕಂಠಯ್ಯನವರಿಗೆ ಬರೆದರಂತೆ, ಅಥವಾ ಹೇಳಿದರಂತೆ. ಯಾವುದನ್ನಾದರೂ ಆಯ್ದುಕೊಳ್ಳುವ ಹಕ್ಕು ಶ್ರೀಕಂಠಯ್ಯನವರದ್ದು. ಕನ್ನಡಕ್ಕಾಗಿ ತಮ್ಮ ಜೀವನವನ್ನು ಮೀಸಲು ಮಾಡಿದ್ದ ಈತ ಕೆಳದರ್ಜೆಯ ಇಂಗ್ಲಿಷ್ ಪ್ರಾಧ್ಯಾಪಕ ಕೆಲಸವನ್ನು ಆರಿಸಿಕೊಂಡರು! ಈ ವಿಚಿತ್ರ ವರ್ತನೆಗೆ ವಿಶೇಷವಾದ ಕಾರಣವೊಂದಿತ್ತು.

ಇಂಗ್ಲೆಂಡಿಗೆ ಹೋಗಿ ಕೇಂಬ್ರಿಜ್ ಡಿಗ್ರಿ ಪಡೆದುಕೊಂಡು ಬಂದಿದ್ದ ಅವರ ಬಾಲ್ಯ ಸ್ನೇಹಿತ ಎನ್. ಎಸ್. ಸುಬ್ಬರಾಯರು ಯಾವುದೋ ಸಂದರ್ಭದಲ್ಲಿ ಶ್ರೀಕಂಠಯ್ಯನವರಿಗೆ ಹೇಳಿದರಂತೆ, "ಆಕ್ಸ್‌ಫರ್ಡ್, ಕೇಂಬ್ರಿಜ್ ಅಥವಾ ಯಾವುದಾವರೊಂದು ಇಂಗ್ಲಿಷ್ ವಿಶ್ವವಿದ್ಯಾಲಯದ ಡಿಗ್ರಿ ಪಡೆಯದಿದ್ದರೆ ನಿಮಗೆ ಇಲ್ಲಿಯ ವಿಶ್ವವಿದ್ಯಾಲಯದಲ್ಲಿ—ಅದರಲ್ಲೂ ಇಂಗ್ಲಿಷ್ ಇಲಾಖೆಯಲ್ಲಿ—ಅಭ್ಯುದಯ ಸಾಧ್ಯವಿಲ್ಲ" ಎಂದು. ಇದನ್ನು ಸುಬ್ಬರಾಯರು ತಮ್ಮ ದೊಡ್ಡಸ್ತಿಕೆಯನ್ನು ಪ್ರದರ್ಶಿಸಲೆಂದಾಗಲಿ ಅಥವಾ ಶ್ರೀಕಂಠಯ್ಯನವರ ಮೇಲಿನ ಮತ್ಸರದಿಂದಾಗಲಿ ಹೇಳಿದರೆಂದು ಭಾವಿಸತಕ್ಕದ್ದಲ್ಲ. ಆಗಿನ ಪರಿಸ್ಥಿತಿ ಇದ್ದದ್ದೇ ಹಾಗೆ; ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದ್ದ ಶ್ರೇಣಿಬದ್ಧ ವ್ಯವಸ್ಥೆ, "ಹೈಅರಾರ್ಕಿ" (Hierarchy) ಇತ್ತು. ಈ ಹೈಅರಾರ್ಕಿಯ ಶಿಖರದಲ್ಲಿ ಪ್ರತಿಷ್ಠಿತರಾಗಿದ್ದವರು ಆಂಗ್ಲರು ಅಥವಾ ಯೂರೋಪಿಯನ್ನರು. ಇಂಗ್ಲೆಂಡಿಗೆ ಹೋಗಿ ವಾಪಸು ಬಂದಿದ್ದ ಭಾರತೀಯರು ಎರಡನೇ ದರ್ಜೆಯವರು. ಭಾರತೀಯ ವಿಶ್ವವಿದ್ಯಾಲಯದ ಡಿಗ್ರಿ ಮಾತ್ರ ಪಡೆದವರು ಕುಂಟುತ್ತ ಹಿಂದೆ ಬರಬೇಕು. ಈ ಬಗೆಯ 'ಫಾರಿನ್' (Foreign) ವ್ಯಾಮೋಹ ಈಗಲೂ ಪೂರ್ತಿ ಅದೃಶ್ಯವಾಗಿಲ್ಲ.

ಶ್ರೀಕಂಠಯ್ಯನವರಿಗೆ ಈ ಹೈಅರಾರ್ಕಿ ವ್ಯವಸ್ಥೆ ಅಸಹ್ಯವೆನ್ನಿಸಿತ್ತು. ಎನ್. ಎಸ್. ಸುಬ್ಬರಾಯರ ಮಾತನ್ನು ಕೇಳಿದಾಗ ಅವರು "ಇರಲಿ ಈ ಮಾತು ನನಗೆ ಹಾಕಿದ ಒಂದು ಸವಾಲು ಎಂದು ಭಾವಿಸುತ್ತೇನೆ" ಎಂದುಕೊಂಡರು. ಅವರು ಸ್ಪರ್ಧಿಸಿದ್ದು ಇಂಗ್ಲೆಂಡಿನಿಂದ ವಾಪಸಾದ ಭಾರತೀಯರೊಡನೆ ಮಾತ್ರವಲ್ಲ (ಆಗ ಇಂಗ್ಲಿಷ್ ಇಲಾಖೆಯಲ್ಲಿ ಅಂಥವರು ಯಾರು ಇರಲೂ ಇಲ್ಲ), ಇಂಗ್ಲೆಂಡಿನಿಂದಲೇ ಇಳಿದ ಆಂಗ್ಲರೊಡನೆ. ಆಂಗ್ಲರಿಗೆ ಇಂಗ್ಲಿಷ್ ಮಾತೃಭಾಷೆ; ಆ ಕ್ಷೇತ್ರದಲ್ಲಿ ಅವರು ಅಜೇಯರು ಎಂಬ ಭಾವನೆಯಿತ್ತಷ್ಟೆ. ಶ್ರೀಕಂಠಯ್ಯನವರು

---

* ೧೯೪೮ರಲ್ಲಿ ವಿಶ್ವಸಾಹಿತ್ಯ ಪ್ರಕಟಣಕಾರರು ಪ್ರಕಟಿಸಿದ 'ಹೊಂಗನಸುಗಳು' ಎಂಬ ಪುಸ್ತಕದ ಮುನ್ನುಡಿಯಲ್ಲಿ

ಅವರೊಡನೆ ಅವರ ಕ್ಷೇತ್ರದಲ್ಲೇ ಸ್ಪರ್ಧೆ ಹೂಡಿ ವಿಜಯಿಯಾದವರು ; "ನಾನು ಕೀರ್ತಿಗಳಿಸಿದರೆ ಇಂಗ್ಲಿಷ್ ಪ್ರೊಫೆಸರಾಗಿಯೇ ಗಳಿಸುತ್ತೇನೆ" ಎಂಬ ಅವರ ಹಠ ಗೆದ್ದಿತು. ಬಹುಶಃ ಅದಕ್ಕಾಗಿಯೇ ಅವರು ಕೆಲವು ವರ್ಷ ತರಗತಿಗಳಲ್ಲಾಗಲಿ ಸಾರ್ವಜನಿಕ ವೇದಿಕೆಗಳ ಮೇಲಾಗಲಿ ಕನ್ನಡದಲ್ಲಿ ಮಾತಾಡುತ್ತಿರಲಿಲ್ಲ. ಕರ್ನಾಟಕ ಸಂಘಗಳಲ್ಲಿ ಕನ್ನಡದ ವಿಷಯ ಮಾತಾಡಬೇಕೆಂದಾಗಲೂ ಇಂಗ್ಲಿಷನ್ನೇ ಬಳಸುತ್ತಿದ್ದರು. ಅವರು ಪ್ರಥಮ ದರ್ಜೆಯ ಪ್ರಾಧ್ಯಾಪಕರಾಗುವುದಕ್ಕಿಂತ ಎಷ್ಟೋ ವರ್ಷಗಳ ಹಿಂದೆಯೇ—ಅವರು ಪಾಠ ಹೇಳುವುದಕ್ಕೆ ಪ್ರಾರಂಭಿಸಿದ ದಿನದಿಂದಲೇ, ಎಂದರೂ ತಡೆದೀತು—'ಇವರಿಗಿಂತ ಯಾವ ಆಂಗ್ಲನೂ ಹೆಚ್ಚಲ್ಲ' ಎನ್ನುವಂಥ ಹೆಸರು ಗಳಿಸಿದರು. "ಶ್ರೀಕಂಠಯ್ಯನವರು ಇಂಗ್ಲೆಂಡಿಗೆ ಹೋದರೆ ಅಲ್ಲಿಂದ ವಾಪಸು ಬರುವುದು ಅಸಾಧ್ಯವಾಗುತ್ತದೆ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಅವರನ್ನು ಬಿಟ್ಟುಕೊಡುವುದಿಲ್ಲ" ಎಂದು ಒಬ್ಬ ಆಂಗ್ಲ ಪ್ರೊಫೆಸರ್ ಹೇಳಿದರಂತೆ!

ಎಸ್. ಎಸ್. ಸುಬ್ಬರಾಯರ ಮಾತಿಗೂ ಶ್ರೀಕಂಠಯ್ಯನವರ ಪ್ರತಿಕ್ರಿಯೆಗೂ ನ್ಯಾಯವಾಗಿ ಕೊಡಬಹುದಾದಕ್ಕಿಂತ ಹೆಚ್ಚಿನ ಅರ್ಥವನ್ನು ಕೊಡಲಾಗಿದೆಯೆಂದು ನನಗೆ ಕೆಲವು ವೇಳೆ ಅನ್ನಿಸಿದೆ. "ಇಂಗ್ಲೆಂಡಿನಿಂದ ಬಂದವರಾಗಲಿ, ಇಂಗ್ಲೆಂಡಿನವರೇ ಆಗಲಿ, ಯಾರಿಗೂ ನಾನೇನೂ ಮಣಿಯುವುದಿಲ್ಲ" ಎಂಬ ಕೆಚ್ಚು ಶ್ರೀಕಂಠಯ್ಯನವರಲ್ಲಿ ಇತ್ತೆಂದು ಒಪ್ಪೋಣ. ಆದರೂ ಅವರು ಇಂಗ್ಲಿಷ್ ಪ್ರಾಧ್ಯಾಪಕತ್ವವನ್ನು ಆರಿಸಿಕೊಂಡದ್ದಕ್ಕೆ ಮೇಲೆ ಹೇಳಿದಕ್ಕಿಂತ ಶ್ರೇಷ್ಠತರದ ಕಾರಣವಿತ್ತು. ಅವರು ತಮ್ಮ ಸಮಸ್ಯೆಯನ್ನು ಹಲವು ದೃಷ್ಟಿಗಳಿಂದ ಪರಿಶೀಲಿಸಿ ಅನಂತರ ನಿರ್ಣಯಕ್ಕೆ ಬಂದರೆಂದು ತೋರುತ್ತದೆ. ಒಂದು ಬಾರಿ—ಯಾವ ಸಂದರ್ಭದಲ್ಲಿ ಎಂಬುದು ನನಗೆ ನೆನಪಿಲ್ಲ—"ಇದೇ ಮಾತನ್ನು ಕನ್ನಡದ ಪ್ರಾಧ್ಯಾಪಕರು ಹೇಳಿದ್ದರೆ ಅದಕ್ಕೆ ಹೆಚ್ಚು ಬೆಲೆ ಇರುತ್ತಿರಲಿಲ್ಲ" ಎಂದು ಅವರು ಹೇಳಿದ್ದುಂಟು—ಆಗ ಕನ್ನಡ ಇಲಾಖೆಯಲ್ಲಿ ಪ್ರಾಧ್ಯಾಪಕರೇ ಇರಲಿಲ್ಲ! ಇಂಗ್ಲಿಷ್ ರಾಜ ಭಾಷೆಯಷ್ಟೆ. ಆ ಕಾಲದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಿಗೆ ಸಲ್ಲುತ್ತಿದ್ದ ಮನ್ನಣೆ ಕನ್ನಡದವರಿಗೆ (ಕನ್ನಡ ರಾಜ್ಯದಲ್ಲಿ !) ಸಲ್ಲುತ್ತಿರಲಿಲ್ಲ. ಆದ್ದರಿಂದ ಶ್ರೀಕಂಠಯ್ಯನವರಿಗೆ ಅನ್ನಿಸಿರಬೇಕು ; "ನಾನು ಇಂಗ್ಲಿಷ್ ಪ್ರಾಧ್ಯಾಪಕನಾದರೆ ಅದರಿಂದ ಕನ್ನಡಕ್ಕೆ ಹೆಚ್ಚು ಪ್ರಯೋಜನವಾದೀತು" ಎಂದು. ಪ್ರವಚನಪ್ರಿಯರಾದ ಅವರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಪದವಿಯನ್ನು ಒಪ್ಪಿಕೊಂಡದ್ದಕ್ಕೂ (೧೯೩೭ರಲ್ಲಿ) ಇದೇ ಕಾರಣವಿರಬೇಕು. ಅವರು ರಿಜಿಸ್ಟ್ರಾರರಾಗಿದ್ದ ಕಾಲದಲ್ಲಿ, ಅವರ ಪ್ರಯತ್ನದಿಂದಾಗಿ, ಕನ್ನಡದಲ್ಲಿ ಎಂ.ಎ. ತರಗತಿಯನ್ನು ತೆರೆಯಲಾಯಿತು ; ಕನ್ನಡಕ್ಕೆ ಪ್ರಾಧ್ಯಾಪಕರೊಬ್ಬರನ್ನೂ ನೇಮಿಸುವಂತಾಯಿತು—ಅದುವರೆಗೆ ಕನ್ನಡಕ್ಕೆ ಪ್ರಾಧ್ಯಾಪಕರೇ ಇರಲಿಲ್ಲ. ಶ್ರೀಕಂಠಯ್ಯನವರು ರಿಜಿಸ್ಟ್ರಾರ್ ಕೆಲಸದ ಜೊತೆಗೆ ಕೆಲವು ಕಾಲ ಕನ್ನಡದ ಗೌರವ ಪ್ರಾಧ್ಯಾಪಕ

ರಾಗಿ ಕೆಲಸ ಮಾಡಿದರು. ತರುಣ ಬರಹಗಾರರಿಗೆ ಉತ್ತೇಜನ ಕೊಡುವುದಕ್ಕಾಗಿ ಶ್ರೀಕಂಠಯ್ಯನವರೇ ಸ್ವತಃ ಒಂದು ದತ್ತಿಯನ್ನು ಕೊಟ್ಟರು. ದತ್ತಿ ಹಣಕ್ಕೆ ಬಂದ ಬಡ್ಡಿಯಿಂದ ಪ್ರತಿ ವರ್ಷವೂ ಒಂದು ಚಿನ್ನದ ಪದಕವನ್ನು ಮಾಡಿಸಿ ಅದನ್ನು ಆ ವರ್ಷ ಅತ್ಯುತ್ತಮ ಕವನವನ್ನು ಬರೆದ ವಿದ್ಯಾರ್ಥಿಗೆ ಕೊಡತಕ್ಕದ್ದೆಂದು ಏರ್ಪಾಟು ಮಾಡಿದರು. "ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ" ಆರಂಭವಾದದ್ದು ಅವರು ರಿಜಿಸ್ಟ್ರಾರ್ ಪದವಿಯನ್ನು ಬಿಟ್ಟಮೇಲೆ—೧೯೩೧ರಲ್ಲಿ. ಆದರೆ ಅದಕ್ಕೆ ಹಣವನ್ನು ಮಂಜೂರು ಮಾಡಲು ಮತ್ತು ಇತರ ಸಿದ್ಧತೆಗಳನ್ನು ಮಾಡಿಕೊಳ್ಳಲು ಮಾಡಬೇಕಾದ ಪ್ರಯತ್ನವೆಲ್ಲಾ ನಡೆದದ್ದು ಅವರು ರಿಜಿಸ್ಟ್ರಾರ್ ಆಗಿದ್ದಾಗಲೇ. ಆ ಗ್ರಂಥಮಾಲೆಯಲ್ಲಿ ಸಾಹಿತ್ಯ ವಿಮರ್ಶೆ, ಸಮಾಜಶಾಸ್ತ್ರ, ತತ್ವಶಾಸ್ತ್ರ, ಅರ್ಥಶಾಸ್ತ್ರ ಇತ್ಯಾದಿ ವಿಷಯಗಳ ಮೇಲೆ ಎಷ್ಟೋ ಪುಸ್ತಕಗಳು ಪ್ರಕಟವಾಗಿವೆ. ಶ್ರೀಕಂಠಯ್ಯನವರ ಈ ಪ್ರಯತ್ನದಿಂದಾಗಿ ಕನ್ನಡದಲ್ಲಿ ಬರೆಯುವ ಅಭ್ಯಾಸವೇ ಇಲ್ಲದ ಎಷ್ಟೋ ಜನ ಬರೆಯಲು ಪ್ರಾರಂಭಿಸಿದರು.

ಅವರ ಶಿಷ್ಯರಲ್ಲೊಬ್ಬರಾದ ಶ್ರೀ ಜಿ. ಹನುಮಂತರಾಯರ ನೇತೃತ್ವದಲ್ಲಿ 'ವಿಶ್ವವಿದ್ಯಾನಿಲಯದ ಅಧ್ಯಾಪಕರ ಸಂಘ' (University of Techers' Association), ಅಸ್ತಿತ್ವಕ್ಕೆ ಬಂತು. ಈ ಸಂಘದ ಸದಸ್ಯರು ವರ್ಷಕ್ಕೆ ಎರಡು ಮೂರು ಸಾರಿಯಾದರೂ ಜಿಲ್ಲೆ ಅಥವಾ ತಾಲ್ಲೂಕು ಕೇಂದ್ರಗಳಲ್ಲಿ-ಕೆಲವು ವೇಳೆ ಇನ್ನೂ ಸಣ್ಣ ಊರುಗಳಲ್ಲಿ, ಬಿಡಾರ ಮಾಡಿ ಅಲ್ಲಿ ತೆರಿಗೆಗಳು, ಮದುವೆ, ಗ್ರೀಕ್ ಸಾಹಿತ್ಯ, ಇಂಗ್ಲಿಷ್ ಸಾಹಿತ್ಯ, ತತ್ವಶಾಸ್ತ್ರ, ರಕ್ತ, ಕಣ್ಣುಗಳ ರಕ್ಷಣೆ-ಇತ್ಯಾದಿ ವಿಷಯಗಳ ಮೇಲೆ ಸರಳವಾದ ಕನ್ನಡದಲ್ಲಿ ಉಪನ್ಯಾಸ ಮಾಡುತ್ತಿದ್ದರು. ಇಂಥ ವಿಷಯಗಳ ಮೇಲೆ ಪ್ರವಚನ ನಡೆಸುವುದಕ್ಕಾಗಲಿ ಬರೆಯುವುದಕ್ಕಾಗಲಿ ಕನ್ನಡವನ್ನು ಅದುವರೆಗೆ ಉಪಯೋಗಿಸಿದ್ದದ್ದು ಅಪರೂಪ; ಉಪಯೋಗಿಸಿಯೇ ಇರಲಿಲ್ಲ ಎಂದರೂ ತಡೆಯುತ್ತದೆ. ಈ ಉಪನ್ಯಾಸಗಳನ್ನು ಪುಸ್ತಕ ರೂಪದಲ್ಲಿ ತಂದು ಕೇವಲ ಎರಡಾಣೆ ಬೆಲೆಗೆ ಮಾರಿದ್ದಾಯಿತು. ಲಕ್ಷಾಂತರ ಪ್ರತಿಗಳು ಖರ್ಚಾದವು. ಈ ಕೆಲಸ ಯಶಸ್ವಿಯಾಗಿ ನಡೆದದ್ದರ ಕೀರ್ತಿ ಬಹುಮಟ್ಟಿಗೆ ಶ್ರೀ ಜಿ. ಹನುಮಂತರಾಯರಿಗೇ ಸೇರಬೇಕು. ಆದರೆ ಶ್ರೀಕಂಠಯ್ಯನವರು ತಮ್ಮ ಬರವಣಿಗೆಯಿಂದ, ಭಾಷಣಗಳಿಂದ, ರಿಜಿಸ್ಟ್ರಾರ್ ಪದವಿಯಲ್ಲಿದ್ದು ಕನ್ನಡಕ್ಕಾಗಿ ಮಾಡಿದ ಪ್ರಯತ್ನಗಳಿಂದ ಹೊಸದೊಂದು ವಾತಾವರಣವನ್ನು ಸೃಷ್ಟಿಸಿದ್ದರು. ಆ ವಾತಾವರಣವಿದ್ದದ್ದರಿಂದ ಮೇಲೆ ಹೇಳಿದ ಸಂಘದ ಕೆಲಸಕ್ಕೆ ಉತ್ಸಾಹ ಬಂತು, ಜನರ ಸಹಕಾರವೂ ಬಂತು.

೧೯೩೦ರಲ್ಲಿ ವಿಶ್ವವಿದ್ಯಾನಿಲಯವು ಶ್ರೀಕಂಠಯ್ಯನವರನ್ನು ಪ್ರಥಮ ದರ್ಜೆಯ ಪ್ರಾಧ್ಯಾಪಕ ಪಟ್ಟಕ್ಕೆ ಏರಿಸಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ವರ್ಗ ಮಾಡಿತು. ೧೯೪೨ರಲ್ಲಿ ಅವರು ವಿಶ್ವವಿದ್ಯಾನಿಲಯದಿಂದ ನಿವೃತ್ತರಾದರು. ಅದುವರೆಗೆ ಅವರು

ಸೆಂಟ್ರಲ್ ಕಾಲೇಜಿನಲ್ಲೇ ಕೆಲಸ ಮಾಡುತ್ತಿದ್ದರು. ಅಲ್ಲಿದ್ದಾಗ ಅವರು 'ಇಂಗ್ಲಿಷ್ ಸೆಮಿನಾರ್' ಎಂಬ ಸಂಸ್ಥೆಯೊಂದನ್ನು ಸ್ಥಾಪಿಸಿದರು. ಅದರ ಹೆಸರು ಹಾಗಿದ್ದರೂ ಅದರ ಕಾರ್ಯ ಕ್ಷೇತ್ರ ಇಂಗ್ಲಿಷಿಗೆ ಸೀಮಿತವಾಗಿರಲಿಲ್ಲ. ಅದರ ಆಶ್ರಯದಲ್ಲಿ ಎಲ್ಲ ಸಾಹಿತ್ಯಗಳ ಚರ್ಚೆಯೂ ನಡೆಯುತ್ತಿತ್ತು ; ಹೊಸದಾಗಿ ಬರೆದ ಕವನಗಳ, ನಾಟಕಗಳ, ವಾಚನ ನಡೆಯುತ್ತಿತ್ತು ; ಸಂಸ್ಕೃತಿಗೆ ಸಂಬಂಧಪಟ್ಟ ಎಷ್ಟೋ ವಿಷಯಗಳ ಪರಿಶೀಲನೆ ನಡೆಯುತ್ತಿತ್ತು. ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಭೌತಶಾಸ್ತ್ರ ಇತ್ಯಾದಿ ಇಲಾಖೆಗಳ ಅಧ್ಯಾಪಕರಾಗಿದ್ದವರೂ ವಿದ್ಯಾರ್ಥಿಗಳೂ ಸೆಮಿನಾರ್‌ನಿಂದ ಆಕರ್ಷಿತರಾಗಿ ಅದರ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಇದರಿಂದಾಗಿ ಕೆಲವು ಇಲಾಖೆಗಳ ಪ್ರಾಧ್ಯಾಪಕರ ಕಣ್ಣು ಕೆಂಪಗಾಯಿತಂತೆ !

ಅವರ ಬರವಣಿಗೆಯ ಕೆಲಸವೆಲ್ಲಾ ಬಹುಮಟ್ಟಿಗೆ ೧೯೨೬ ಮತ್ತು ೧೯೩೫ನೇ ವರ್ಷಗಳ ನಡುವೆ ನಡೆದದ್ದು, 'ಇಂಗ್ಲಿಷ್ ಗೀತೆಗಳು' ಭಾಷಾಂತರವಾದದ್ದು ಹಿಂದೆಯೇ ; ಅದು ಪುಸ್ತಕ ರೂಪದಲ್ಲಿ ಪ್ರಕಟವಾದದ್ದು ೧೯೨೬ರಲ್ಲಿ. 'ಗದಾ-ಯುದ್ಧ ನಾಟಕ' ಅದೇ ವರ್ಷದಲ್ಲಿ ಪ್ರಕಟವಾಯಿತು ; ಅದು ರಂಗಸ್ಥಳದಲ್ಲಿ ಪ್ರದರ್ಶಿತವಾದದ್ದು ೧೯೨೫ರಲ್ಲಿ. ಅವರ ಉತ್ಕೃತ್ತಮ ಕೃತಿಯಾದ 'ಅಶ್ವತ್ಥಾಮನ್' ನಾಟಕವನ್ನು ಪ್ರದರ್ಶಿಸಿದ್ದು ೧೯೨೯ರಲ್ಲಿ, ಪ್ರಕಟಿಸಿದ್ದು ೧೯೩೦ರಲ್ಲಿ. 'ಪಾರಸಿ-ಕರು' ನಾಟಕ ಪ್ರಕಟವಾದದ್ದು ೧೯೩೫ರಲ್ಲಿ. ಇದಾದ ಮೇಲೆ ಅವರು ಬರೆದದ್ದು 'ಕನ್ನಡ ಛಂದಸ್ಸಿನ ಚರಿತ್ರೆ' (೧೯೩೬) ಮತ್ತು 'ಕನ್ನಡ ಸಾಹಿತ್ಯದ ಚರಿತ್ರೆ' (೧೯-೪೬ರಲ್ಲಿ ಪ್ರಕಟವಾದದ್ದು)—ಇವೆರಡನ್ನೂ 'ಕನ್ನಡ ಕೈಪಿಡಿ'ಗಾಗಿ ಬರೆದರು. ಅವರಿಂದ ಸಂಪಾದಿತವಾದ 'ಕನ್ನಡ ಬಾವುಟ' ೧೯೩೮ರಲ್ಲಿ ಪ್ರಕಟವಾಯಿತು. ಆಗಿಂದಾಗ ವಿಶೇಷ ಸಂದರ್ಭಗಳಲ್ಲಿ ಅವರು ಬರೆದ ಕವನಗಳು ೧೯೪೩ರಲ್ಲೂ ಮತ್ತು ಪುನಃ ಅವರು ಕಾಲವಾದ ನಂತರ ೧೯೪೮ರಲ್ಲೂ 'ಹೊಂಗನಸುಗಳು' ಎಂಬ ಶೀರ್ಷಿಕೆಯನ್ನು ಪಡೆದು ಪ್ರಕಟವಾದವು. 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯದಲ್ಲಿ' ಅವರು ಆಗಿಂದಾಗ ಮಾಡಿದ ಭಾಷಣಗಳೂ ಬರೆದ ಮುನ್ನುಡಿ ಇತ್ಯಾದಿಗಳೂ ಸೇರಿವೆ. ಇದು ಪ್ರಕಟವಾದದ್ದು ೧೯೪೮ರಲ್ಲಿ. ಒಟ್ಟಿನಲ್ಲಿ ಅವರ ಸಾಹಿತ್ಯ ಸೃಷ್ಟಿಯ ಕೆಲಸ 'ಪಾರಸಿಕರು' ಪ್ರಕಟವಾದ ಮೇಲೆ ನಿಂತೇ ಹೋಯಿತೆಂದು ಹೇಳಬಹುದು.

ಒಂದು ದೃಷ್ಟಿಯಿಂದ ನೋಡಿದರೆ ಇದರಿಂದ ಕನ್ನಡನಾಡಿಗೆ ಬಹಳ ನಷ್ಟವಾಯಿತು. ಅವರ ಹೊರತು ಮತ್ತಾರು ಮಾಡಲಾಗದ ಕೆಲಸವೆಷ್ಟೋ ಇತ್ತು. ಷೇಕ್ಸ್‌ಪಿಯರ್‌ನ ರುದ್ರನಾಟಕಗಳನ್ನು ಕನ್ನಡಿಸುವುದಕ್ಕೆ ಬೇಕಾದ ಇಂಗ್ಲಿಷ್ ಪಾಂಡಿತ್ಯವೂ ಮತ್ತೊಬ್ಬ ಕವಿಯ ಪ್ರತಿಭೆಗೆ ಹೊಂದಿಕೊಂಡು—'ಅದೇ ಇದು' ಎನ್ನುವ ಮಟ್ಟಿಗೆ ಹೊಂದಿಕೊಂಡು—ಕೆಲಸ ಮಾಡುವ ಪ್ರತಿಭೆಯೂ ನನಗೆ ಕಂಡು ಬಂದಿರುವುದು ಅವರಲ್ಲಿ ಮಾತ್ರ. ಇದೇ ಮಾತನ್ನು ಗ್ರೀಕ್ ರುದ್ರನಾಟಕಗಳ ಭಾಷಾಂತರದ ವಿಷಯದಲ್ಲೂ ಹೇಳಬಹುದು. ಷೇಕ್ಸ್‌ಪಿಯರ್ ಎಂದರೆ ಎಣೆಯಿಲ್ಲದ

ಪ್ರೇಮ. ಆದರೂ ಅವರು ಒಂದು ದಿನ "ವಿಶ್ವವಿಶಾಲವಾದ ವ್ಯಾಪ್ತಿ, ಜೀವನವನ್ನು ನೂರು ಕಡೆಯಿಂದ ಒಳಹೊಕ್ಕು ನೋಡುವ ಶಕ್ತಿ—ಇದರಲ್ಲಿ ಷೇಕ್ಸ್‌ಪಿಯರ್‌ನೊಡನೆ ಯಾರೂ ಸ್ಪರ್ಧಿಸಲಾರರು. ಆದರೆ ಭಾರತೀಯರಾದ ನಮಗೆ ಪುರಾತನ ಗ್ರೀಕರು ಇನ್ನೂ ಹತ್ತಿರದವರು ಎನ್ನಿಸುತ್ತದೆ" ಎಂದು ಹೇಳಿದ್ದುಂಟು. ಈಸ್ಕಿಲಸ್‌ನ 'ಪ್ರೊಮಿಥ್ಯೂಸ್ ಬೌಂಡ್' (Prometheus Bound) ಮತ್ತು ಷೆಲ್ಲಿಯ 'ಪ್ರೊಮಿಥ್ಯೂಸ್ ಅನ್‌ಬೌಂಡ್' (Prometheus unbound) ಇವೆರಡು ಕೃತಿಗಳನ್ನು ಆಧಾರವಾಗಿಟ್ಟುಕೊಂಡು ಋಗ್ವೇದದ ಮಾತರಿಶ್ವನಿಗೂ ಈ ಕಥೆಗಳಿಗೂ ಸಂಬಂಧವನ್ನು ಕಲ್ಪಿಸಿ ಒಂದು ನಾಟಕವನ್ನು ಬರೆಯಬೇಕೆಂಬ ಉದ್ದೇಶ ಅವರಿಗಿತ್ತು. "ಆ ಮುದುಕನ (ಈಸ್ಕಿಲಸ್‌ನ) ಗಡ್ಡಕ್ಕೂ ಈ ಯುವಕನ (ಷೆಲ್ಲಿಯ) ಮೀಸೆಗೂ ಗಂಟು ಹಾಕಿ ಅದರ ಮೇಲೆ ನಾನು ಜೋಲಾಡಬೇಕೆಂದಿದ್ದೇನೆ" ಎಂದು ಹೇಳುತ್ತಿದ್ದರು. ಆ ಕೃತಿಗೆ 'ಮಾತರಿಶ್ವನ್' ಎಂದು ಹೆಸರನ್ನೂ ಸಿದ್ಧಮಾಡಿಟ್ಟುಕೊಂಡಿದ್ದರು. ಅದು ಸಂಪೂರ್ಣವಾಗಿ ಸ್ವತಂತ್ರ ಕೃತಿಯಾಗಬೇಕೆಂದು ಅವರ ಉದ್ದೇಶ. ಒಂದೆರಡು ದೃಶ್ಯಗಳನ್ನು ಬರೆದೂ ಇದ್ದರೆಂದು ಕೇಳಿದ್ದೇನೆ. ಆ ಕೃತಿ ಮುಂದುವರೆಯಲಿಲ್ಲ. ಷೇಕ್ಸ್‌ಪಿಯರ್‌ನನ್ನೂ ಗ್ರೀಕ್ ರುದ್ರನಾಟಕಗಳನ್ನೂ ಕನ್ನಡಕ್ಕೆ ತರಬೇಕೆಂಬ ಅವರ ಕನಸಿನಲ್ಲಿ ಎಲ್ಲೋ ಸ್ವಲ್ಪ ಭಾಗ ಮಾತ್ರ ನನಸಾಯಿತು.

ಅವರು ಸಾಹಿತ್ಯವನ್ನು ಸಂಪೂರ್ಣವಾಗಿ ಕೈಬಿಟ್ಟರೆಂದು ಹೇಳಿದರೆ ತಪ್ಪಾದೀತು. ೧೯೩೫ರಿಂದಾಚೆಗೆ ಅವರು ಹೆಚ್ಚೇನೂ ಬರೆಯಲಿಲ್ಲವೆಂಬುದು ನಿಜ. ಆದರೆ ಬೇಕಾದಷ್ಟು ಭಾಷಣ ಮಾಡಿದರು ; ಅನೇಕ ವೇಳೆ ಅವರು ಆಡಿದ ಮಾತು ಸಾಹಿತ್ಯವಾಯಿತು. ಅವರ ಭಾಷಣಗಳಲ್ಲಿ ನಾವು ಕಾಣುವ ಕನ್ನಡ ಲಲಿತವಾದದ್ದು ಸರಳವಾದದ್ದು, ಮಧುರವಾದ ಲಯವುಳ್ಳದ್ದು ; ಅವರಲ್ಲಿ ಎಷ್ಟೋ ವೇಳೆ ಆತ್ಮೀಯತೆಯೂ ಕಂಡುಬರುತ್ತಿತ್ತು. ಭಾಷಣದ ಕಲೆ ಅವರಿಗೆ ದೇವರು ಕೊಟ್ಟ ವರ. ಆ ವರವನ್ನು ಬಳಸಿಕೊಳ್ಳಲು ಬೇಕಾದಷ್ಟು ಸಂದರ್ಭಗಳು ಬರುತ್ತಿದ್ದವು—ಅಷ್ಟೊಂದು ಬರದಿದ್ದರೆ ಚೆನ್ನಾಗಿತ್ತು ಎಂದು ಅವರ ಶಿಷ್ಯರೂ ಮಿತ್ರರೂ ಎಷ್ಟೋ ಸಾರಿ ಅಂದುಕೊಂಡಿದ್ದಾರೆ. ಸುಮಾರು ಎರಡು ದಶಕಗಳ ಕಾಲ ಕನ್ನಡ ಸಾಹಿತ್ಯ ಸಾಮ್ರಾಜ್ಯಕ್ಕೆ ಅವರೇ ಅಧಿಪತಿಗಳಾಗಿದ್ದರು. ಕೀರ್ತಿ ಅವರ ಬೆನ್ನು ಹತ್ತಿ ಬಂತು ; ಅವರ ಮೇಲೆ ಗೌರವ ಪುರಸ್ಕಾರಗಳ ಮಳೆ ಕರೆಯಿತು. ೧೯೨೮ರಲ್ಲಿಯೇ ಅವರು ಕಲ್ಬುರ್ಗಿಯಲ್ಲಿ ನಡೆದ ಕರ್ನಾಟಕ ಸಾಹಿತ್ಯ ಪರಿಷತ್ತಿನ ಸಮ್ಮೇಳನದ ಅಧ್ಯಕ್ಷರಾಗಿ ಚುನಾಯಿತರಾದರು. ೧೯೩೮ರಲ್ಲಿ ಮೈಸೂರಿನ ಮಹಾರಾಜರು ಅವರಿಗೆ 'ರಾಜಸೇವಾಸಕ್ತ' ಎಂಬ ಬಿರುದು ಕೊಟ್ಟು ಗೌರವಿಸಿದರು. ಅದೇ ವರ್ಷ ಅವರು ಪರಿಷತ್ತಿನ ಉಪಾಧ್ಯಕ್ಷರಾಗಿ ಚುನಾಯಿತರಾದರು—ಆಗ ರಾಜ ಮನೆತನದ

ವರೊಬ್ಬರು ಗೌರವಾಧ್ಯಕ್ಷರಾಗಿರುತ್ತಿದ್ದರು; ಆದ್ದರಿಂದ ಪರಿಷತ್ತಿನ ನಿಜವಾದ ಮುಖ್ಯಾಧಿಕಾರಿಗಳು ಉಪಾಧ್ಯಕ್ಷರೇ.

ಅಧ್ಯಕ್ಷರಾಗಲೆಂದೋ ಯಾವುದೋ ಸಮಾರಂಭದ ಉದ್ಘಾಟಕರಾಗಲೆಂದೋ ಜನ ಅವರನ್ನು ಕಾಡುತ್ತಿದ್ದದ್ದಕ್ಕೆ ಕಾರಣ ಅವರ ಸ್ಥಾನ-ಮಾನ ಪಾಂಡಿತ್ಯಗಳು ಮಾತ್ರವಲ್ಲ, ಅವರ ಭಾಷಣವನ್ನು ಕೇಳುವುದೇ ಒಂದು ಆನಂದ. ಅವರ ಕಂಠದ ಸಂಪತ್ತನ್ನು ಶ್ರೀ ಆಲೂರು ವೆಂಕಟರಾಯರು ಶ್ರೀಕಂಠಯ್ಯನವರ ಕಂಠಶ್ರೀ ಎಂಬ ಮಾತಿನಲ್ಲಿ ಅಡಕಮಾಡಿದರು. ಭಾಷಣ ಮಾಡುವುದಕ್ಕಾಗಿಯೇ ಇವರು ಸೃಷ್ಟಿಯಾದರೇನೋ ಎನ್ನುವಂತಿತ್ತು, ಅವರು ಮಾತಾಡಲು ನಿಂತರೆ. ಅವರ ವಾಕ್ಯಗಳು ಒಮ್ಮೆ ನಿರರ್ಗಳವಾಗಿ ದೀರ್ಘವಾಗಿ ಹರಿಯುವುವು; ಮತ್ತೊಮ್ಮೆ ಯಾವುದೋ ಶಬ್ದದೊಡನೆ, ಪ್ರತಿಮೆಯೊಡನೆ, ಭಾವದೊಡನೆ, ಪ್ರಾಸದೊಡನೆ ಸರಸವಾಡಿ ಒಂದು ಕ್ಷಣ ನಿಂತಂತೆ ಮಾಡಿ ಮತ್ತೆ ಮುನ್ನುಗ್ಗುವುವು. ಪದಗಳಿಗಾಗಿ ಅವರು ಎಂದೂ ಕಾಯಬೇಕಾಗಿರಲಿಲ್ಲ; ಅವರಿಂದ ಕರೆ ಬರುವುದಕ್ಕಿಂತ ಮುಂಚೆಯೇ ಅವು ಓಡಿ ಬಂದು ನಿಂತಿರುತ್ತಿದ್ದುವೆನ್ನಬಹುದು. ಹತ್ತು ಪರ್ಯಾಯ ಪದಗಳು ಅವರ ಅನುಗ್ರಹಕ್ಕಾಗಿ ಕಾದು ನಿಂತಿರುತ್ತಿದ್ದುವು. ಕೆಲವು ವೇಳೆ ಅವರು ಅವೆಲ್ಲವನ್ನೂ ಉಪಯೋಗಿಸುತ್ತಿದ್ದುದುಂಟು. ಆದರಿಂದಾಗಿ ನಿಷ್ಕೃಷ್ಟತೆ ಕಡಿಮೆಯಾದರೂ ವಾತಾವರಣದ ಸಂಪತ್ತು ಹೆಚ್ಚುತ್ತಿತ್ತು. ಅವರ ಭಾಷಣದ ತರ್ಕ ತತ್ವಶಾಸ್ತ್ರಕ್ಕೆ ಹೊಂದುವಂಥದಲ್ಲ, ಕಾವ್ಯಕ್ಕೆ ಹೊಂದುವಂಥಾದ್ದು. ಮಧ್ಯೆ ಮಧ್ಯೆ ಭಾಷಣದ ಮುಖ್ಯ ವಿಷಯಕ್ಕೆ ಅಷ್ಟಾಗಿ ಸಂಬಂಧಪಡದ ಯಾವುದೋ ಯೋಚನೆಯ ಬೆನ್ನಟ್ಟಿ ಮಾತು ರಾಜಮಾರ್ಗವನ್ನು ಬಿಟ್ಟು ಸ್ವಲ್ಪ ಅಲೆದು ಅನಂತರ ಮತ್ತೆ ಮಾರ್ಗಕ್ಕೆ ಬಂದು ಸೇರುವುದು. ಇದರಿಂದ "ಇವರು ಭಾಷಣ ಮಾಡುತ್ತಿಲ್ಲ, ನಮ್ಮೊಡನೆ ಲೋಕಾಭಿರಾಮವಾಗಿ ಮಾತಾಡುತ್ತಿದ್ದಾರೆ" ಎನ್ನಿಸುವಂಥ ಹಿತವಾದ ಪರಿಣಾಮವಾಗುತ್ತಿತ್ತು.

ಇದರಿಂದಲೇ ಎಲ್ಲ ಸಂಘಗಳಿಗೆ, ಸಂಸ್ಥೆಗಳಿಗೆ, ಕಾಲೇಜುಗಳಿಗೆ, ಶ್ರೀಕಂಠಯ್ಯನವರನ್ನು ಬರಮಾಡಿಕೊಳ್ಳಬೇಕೆಂಬ ಉತ್ಕಟವಾದ ಆಸೆ. ಇಂಗ್ಲಿಷ್ ಸಾಹಿತ್ಯ ಪ್ರೇಮಿಗಳಿಗೆ ಅವರು ಷೇಕ್ಸ್ಪಿಯರ್‌ಮೇಲೋ ವರ್ಡ್ಸ್‌ವರ್ತ್ ಮೇಲೋ ಮಾತಾಡಿದ್ದನ್ನು ಕೇಳಬೇಕೆಂಬ ಆಸೆ; ಕನ್ನಡ ಪ್ರೇಮಿಗಳಿಗೆ ಪಂಪರನ್ನರ ಮೇಲೆ ಮಾತಾಡಿದ್ದು ಕೇಳಬೇಕೆಂಬ ಆಸೆ; ಮತ ಧರ್ಮಗಳಲ್ಲಿ ಆಸಕ್ತಿಯುಳ್ಳವರಿಗೆ ಅವರು 'ಪ್ರವಾದಿಗಳ ಪಲ್ಲವಿ' (The Burden of the Prophets) ಯ ಮೇಲೆ ಮಾತಾಡಲೆಂದು ಆಸೆ; ಕರ್ನಾಟಕದ ರಾಜಕೀಯದಲ್ಲಿ ಆಸಕ್ತಿಯುಳ್ಳವರಿಗೆ ಕರ್ನಾಟಕದ ಏಕೀಕರಣದ ವಿಷಯ ಮಾತಾಡಲೆಂದು ಆಸೆ. ಅವರ ಭಾಷಣವನ್ನು ಕೇಳುವುದಕ್ಕೆ ಸಾವಿರಾರು ಜನ ಸೇರುತ್ತಿದ್ದರು. ಕೆಲವು ವೇಳೆ ಕಾರ್ ಕೆಟ್ಟುಹೋದದುರಿಂದಲೋ ವಾಹನ ಸಿಕ್ಕದಿದ್ದುದರಿಂದಲೋ ಅವರು ಬಹಳ

ತಡವಾಗಿ ಬಂದದ್ದುಂಟು. ಅಂಥ ಸಂದರ್ಭಗಳಲ್ಲಿ ಜನ ಅವರಿಗಾಗಿ ಘಂಟೆ ಗಟ್ಟಲೆ ಕಾದಿರುತ್ತಿದ್ದರು. ಒಂದು ಬಾರಿ ಸಂಜೆ ೬ ಘಂಟೆಗೆ ಆರಂಭವಾಗಬೇಕಾಗಿದ್ದ ಭಾಷಣ ಮಧ್ಯರಾತ್ರಿ ಕಳೆದ ಮೇಲೆ ಆರಂಭವಾಯಿತಂತೆ. ಜನ ಬೇಸರವಿಲ್ಲದೆ ಕಾದೇ ಇದ್ದರು.

ಕರ್ನಾಟಕದ ಜನರು ತಮ್ಮಲ್ಲಿ ಅಷ್ಟೊಂದು ಆದರ ಗೌರವಗಳನ್ನಿಟ್ಟದ್ದದ್ದು ಅವರಿಗೆ ಸಂತೋಷದ ವಿಷಯ. ಆದರೆ ಅವರು ಕರ್ನಾಟಕದ ಮೂಲೆ ಮೂಲೆಯಲ್ಲೂ ಸುತ್ತಾಡಿದ್ದು ಕೇವಲ ಕೀರ್ತಿಯನ್ನೂ ಅಭಿಮಾನವನ್ನೂ ಗಳಿಸುವುದಕ್ಕಲ್ಲ. ಹಾಗೆ ಅವರನ್ನು ಸುತ್ತಿಸಿದ ಶಕ್ತಿಯೆಂದರೆ, ಅವರಿಗೆ ಕನ್ನಡದ ಮೇಲೆ ಕನ್ನಡ ನಾಡಿನ ಮೇಲೆ, ಕನ್ನಡ ಜನತೆಯ ಮೇಲೆ ಇದ್ದ ಪ್ರೇಮ. ರೈಲು, ಬಸ್ಸು, ಕಾರು—ವಾಹನ ಎಂಥದೆ ಆಗಿರಲಿ, ದೂರ ಎಷ್ಟೇ ಇರಲಿ, "ತಾವು ನಮ್ಮ ಊರಿಗೆ ಬರಬೇಕು, ಉಪನ್ಯಾಸ ಮಾಡಬೇಕು, ಅಧ್ಯಕ್ಷತೆ ವಹಿಸಬೇಕು" ಎಂದು ಮುಂತಾಗಿ ಬಂದ ಆಹ್ವಾನವನ್ನು ಅವರು-ಗುರುತರವಾದ ಕಾರಣವಿಲ್ಲದಿದ್ದರೆ—ನಿರಾಕರಿಸುತ್ತಿರಲಿಲ್ಲ. ಅದರಲ್ಲೂ ಮೈಸೂರು ರಾಜ್ಯದ ಹೊರಗಿದ್ದ ಕರ್ನಾಟಕದಿಂದ ಬಂದ ಆಹ್ವಾನಗಳಿಗೆ ವಿಶೇಷ ಮನ್ನಣೆ ಕೊಡುತ್ತಿದ್ದರು. ಅವರ ದೃಷ್ಟಿಯಿಂದ ಇಂಥ ಆಹ್ವಾನಗಳನ್ನು ಒಪ್ಪಿಕೊಳ್ಳುವುದು ಕರ್ತವ್ಯ. ಕರ್ನಾಟಕದ ಒಂದೊಂದು ಊರು ಅವರ ಭಾಗಕ್ಕೆ ಭೂಪಟದಲ್ಲಿ ಗುರುತಿಸಿರುವ ಸ್ಥಳ ಮಾತ್ರವಲ್ಲ; ಅದೊಂದು ಭಾವಭಂಡಾರ, ಇತಿಹಾಸ ಸಾಹಿತ್ಯಗಳ ನೆನಪನ್ನು ಉಕ್ಕಿಸುವ ಬುಗ್ಗೆ. ಬನವಾಸಿ—ಅದರ ಸೌಂದರ್ಯ ಪಂಪನ ಮನಸನ್ನು ಸೆರೆಹಿಡಿಯಿತಲ್ಲವೆ! ಬಾದಾಮಿ-ಚಾಲುಕ್ಯ ಚಕ್ರಾಧಿಪತ್ಯದ ನೆನಪು ತರುತ್ತದೆ, ಅಲ್ಲಿಯ ಶಿಲ್ಪದ ಸೊಬಗೊ! ಬೇಲೂರು, ಹಳೇಬಿಡು—ಇತಿಹಾಸದ ನೆನಪುಗಳಂತಿರಲಿ, ಅಲ್ಲಿಯ ದೇವಾಲಯಗಳಲ್ಲಿ ಶಿಲ್ಪಕಲೆ ಶಿಖರಕ್ಕೆ ಏರಿದೆ; ಹಂಪೆ—ವಿಜಯನಗರ ಚಕ್ರಾಧಿಪತ್ಯದ ವೈಭವವನ್ನು ಮಾತ್ರವಲ್ಲ, ಹರಿಹರ ರಾಘವಾಂಕರ ನೆನಪನ್ನೂ ತರುತ್ತದೆ. ಹೀಗೆಯೇ ಇನ್ನೆಷ್ಟು ಸ್ಥಳಗಳೊ! ಶ್ರೀಕಂಠಯ್ಯನವರಿಗೆ ಕರ್ನಾಟಕದಲ್ಲಿ ಪ್ರಯಾಣ ಮಾಡುವುದು ತೀರ್ಥಯಾತ್ರೆ; ಭಾಷಣ ಮಾಡುವುದೆಂದರೆ ಅರ್ಚನೆ. ಅವರ ಶಿಷ್ಯರನೇಕರಂತೆ ನಾನೂ ಎಷ್ಟೋ ಸಲ "ಇವರು ಈ ಭಾಷಣ ಮಾಡುವ ಚಟಕ್ಕೆ ಏಕೆ ಬಲಿಯಾದರು! ಸೃಷ್ಟಿಯಾದ ಘಳಿಗೆಯಲ್ಲೇ ನಾಶವಾಗುವ ಈ ಭಾಷಣ ಸೌಂದರ್ಯಕ್ಕೆ ಬದಲು ಸ್ಥಿರವಾಗಿ ನಿಲ್ಲುವ ಕಾವ್ಯ ಸೌಂದರ್ಯವನ್ನು ಸೃಷ್ಟಿಸಬಾರದಿತ್ತೆ!" ಎಂದುಕೊಂಡಿದ್ದೇನೆ. ಆದರೆ ಶ್ರೀಕಂಠಯ್ಯನವರ ಜೀವನದ ಈ ಮುಖವನ್ನು ಮತ್ತೊಂದು ದೃಷ್ಟಿಯಿಂದಲೂ ನೋಡಬಹುದು. ಮೈಸೂರು ರಾಜ್ಯಕ್ಕೂ ಕರ್ನಾಟಕದ ಇತರ ಭಾಗಗಳಿಗೂ ಸಂಪರ್ಕವೇ ಕಡಿಮೆಯಾಗಿದ್ದ ಕಾಲದಲ್ಲಿ ಶ್ರೀಕಂಠಯ್ಯನವರು ಎಲ್ಲ ಕಡೆಯಲ್ಲೂ ಸುತ್ತಾಡಿ ಎಲ್ಲ ಕಡೆಯ ಜನರೊಡನೆಯೂ ಸ್ನೇಹವನ್ನು ಬೆಳಸಿ ಎಲ್ಲರ ಗೌರವಕ್ಕೂ ಪಾತ್ರರಾದರು. ಅವರು ರಾಜ

ಕೀಯದಲ್ಲಿ ಇರಲಿಲ್ಲವಾದರೂ ಕರ್ನಾಟಕ ಒಂದಾಗಬೇಕು ಎಂಬ ಬಯಕೆಯನ್ನು ಎಲ್ಲರಲ್ಲೂ ಮೂಡಿಸುವುದಕ್ಕಾಗಿ ದುಡಿದರು. ಅವರು ಕರ್ನಾಟಕದ ಸಂಸ್ಕೃತಿಯ ಪ್ರತಿನಿಧಿಯಾದರು, ಏಕೀಕರಣವೆಂಬ ಬಯಕೆಯ ಪ್ರತೀಕವಾದರು. ಅವರು ಉಯೋಗಿಸಿದ ಸಾಧನಗಳು ಸಾಹಿತ್ಯ ಸಂಸ್ಕೃತಿಗಳಿಗೆ ಉಚಿತವಾದ ಸಾಧನಗಳು; ಆದ್ದರಿಂದ ಅವರ ಮಾತು ಹೆಚ್ಚು ಜನರ ಮನಸ್ಸನ್ನು ಮುಟ್ಟಿತು. ಈ ದೃಷ್ಟಿಯಿಂದ ನೋಡಿದರೆ ಅವರು ಬೇರೆ ಯಾವನೊಬ್ಬ ವ್ಯಕ್ತಿಗಿಂತಲೂ ಹೆಚ್ಚಾಗಿ ಏಕೀಕರಣಕ್ಕೆ ಸಿದ್ಧತೆ ನಡೆಸಿದರೆಂದು ಹೇಳಬಹುದು. ಈ ಕೆಲಸ ಸಾಹಿತ್ಯ ಸೃಷ್ಟಿಗಿಂತ ಕಡಿಮೆ ಬೆಲೆಯದೆಂದು ಹೇಳಲಾಗದು. ಆದರೂ ನನ್ನ ಮನಸ್ಸಿನಲ್ಲೇನೋ ಅವರು ನಮಗೆ ಕೊಡಬಹುದಾಗಿದ್ದ ಸಾಹಿತ್ಯವನ್ನು ಕೊಡದೆ ಬೇರೆ ಕಡೆಗೆ ತಿರುಗಿದರಲ್ಲ ಎಂಬ ಕೊರಗು ಇದ್ದೇ ಇದೆ.

ಶ್ರೀಕಂಠಯ್ಯನವರು ಪರಿಷತ್ತಿನ ಉಪಾಧ್ಯಕ್ಷರಾಗಿದ್ದದ್ದು ೧೯೩೮ ರಿಂದ ೧೯೪೨ರವರೆಗೆ. ಅವರು ಸೆಂಟ್ರಲ್ ಕಾಲೇಜಿನಲ್ಲಿ ಹೇಗೆ ದುಡಿದರೋ ಅಷ್ಟೇ ಶ್ರದ್ಧೆಯಿಂದ ಪರಿಷತ್ತಿಗಾಗಿಯೂ ದುಡಿದರು. 'ಕನ್ನಡ ನುಡಿ' ಎಂಬ ಮಾಸಪತ್ರಿಕೆಯ ಪ್ರಕಟಣೆ ಆರಂಭವಾದದ್ದಕ್ಕೆ ಅವರೇ ಕಾರಣ. ಪರಿಷತ್ತಿಗೆ ಅದರದ್ದೇ ಆದ ಅಚ್ಚುಕೂಟವಿರಬೇಕೆಂಬುದನ್ನು ಮನಗಂಡು ಅದನ್ನು ಸ್ಥಾಪಿಸುವುದಕ್ಕಾಗಿ ೧,೦೦೦ ರೂಪಾಯಿಗಳನ್ನೂ ಅನಂತರ ೫,೦೦೦ ರೂಪಾಯಿಗಳನ್ನೂ ದಾನ ಮಾಡಿದರು. 'ಕನ್ನಡ ಬಾವುಟ' ಎಂಬ ಕವನ ಸಂಕಲನವನ್ನು ಸಂಪಾದಿಸಿ ಪ್ರಕಟಿಸಿದರು. ಪರಿಷತ್ತಿನ ಪರವಾಗಿ ಪ್ರವಾಸ ಮಾಡಿದರು, ಸದಸ್ಯರನ್ನು ಸೇರಿಸಿದರು, ಉತ್ಸವಗಳನ್ನೂ ಸಮ್ಮೇಳನಗಳನ್ನೂ ನಡೆಸಿದರು.

ಹೀಗೆ ಶ್ರೀಕಂಠಯ್ಯನವರು ಬಹು ಜನರ ಗೌರವ ಆದರಗಳಿಗೆ ಪಾತ್ರರಾಗಿದ್ದರು. ತಮ್ಮ ಮನಸ್ಸಿಗೆ ಹಿತವಾದ ಕೆಲಸ ಮಾಡುತ್ತಿದ್ದರು. ಆದರೂ ಅವರ ಕೊನೆಯ ದಿನಗಳು ಅವರಿಗೆ ಸುಖಕರವಾಗಿರಲಿಲ್ಲ. ಅವರು ಯಾವ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದರೋ ಅದರ ಎಲ್ಲೆಗಳೊಳಗೆ ಅವರು ಹೆಚ್ಚು ಕಡಿಮೆ ಪ್ರವಾದಿಯ (Prophet) ಸ್ಥಾನದಲ್ಲಿದ್ದರು. ಸಾಮಾನ್ಯವಾಗಿ ಪ್ರವಾದಿಗಳು ಬದುಕಿರುವವರೆಗೆ ವಾದವಿವಾದಗಳಿಗೆ ಆಸ್ಪದ ಕೊಡುವ ವ್ಯಕ್ತಿಗಳು. ಹಳೆಯ ಕಾಲದ ಕೆಲವರು ವಿದ್ವಾಂಸರು "ಶ್ರೀಕಂಠಯ್ಯನವರು ಕನ್ನಡವನ್ನು ಸರ್ವನಾಶದ ಕಡೆಗೆ ಒಯ್ಯುತ್ತಿದ್ದಾರೆ" ಎಂದೇ ಭಾವಿಸಿದ್ದರು. ಸಂಸ್ಕೃತದ ವಿಷಯದಲ್ಲಿ ಅವರು ಆಗಾಗ ಆಡುತ್ತಿದ್ದ ಕೆಲವು ಮಾತುಗಳು ಅನೇಕರಿಗೆ ಸರಿತೋರಲಿಲ್ಲ. ಕೆಲವು ವೇಳೆ ಅವರ ಮಾತು ಕಠಿಣವಾಗಿಯೇ ಇರುತ್ತಿತ್ತೆಂದು ಒಪ್ಪಬಹುದು. ಹಳೆಯ ಸಂಪ್ರದಾಯಕ್ಕೂ ಹೊಸ ಸುಧಾರಣೆಗಳಿಗೂ ಇದ್ದ ವಿರೋಧ ಶ್ರೀಕಂಠಯ್ಯನವರಿಗೆ ಹೊಸದೇನೂ ಅಲ್ಲ. "ಅವರ ಅಭಿಪ್ರಾಯ ಅವರಿಗಿರಲಿ" ಎನ್ನುವ ಸಹನೆಯನ್ನು

ತಂದುಕೊಳ್ಳಲು ಅವರು ಪ್ರಯತ್ನಪಟ್ಟದ್ದೂ ನಿಜ—ಆ ಪ್ರಯತ್ನ ಬಹುಶಃ ಪೂರ್ಣವಾಗಿ ಫಲಿಸಲಿಲ್ಲ.

ಎರಡು ಸಂದರ್ಭಗಳಲ್ಲಿ ಅವರು ಇತರರ ಮನಸ್ಸನ್ನು ನೋಯಿಸುವ ಉದ್ದೇಶವೇನೂ ಇಲ್ಲದೆ ಮಾಡಿದ ಕೆಲಸಗಳಿಂದಾಗಿ ಅವರ ಮೇಲೆ ತೀವ್ರವಾದ ಆಕ್ಷೇಪಣೆಗಳು ಎರಗಿ ಬಂದವು. 'ಅಶ್ವತ್ಥಾಮನ್' ನಾಟಕದಲ್ಲಿ ನಾಯಕನಾದ ಅಶ್ವತ್ಥಾಮನ್ ಆತ್ಮಹತ್ಯೆ ಮಾಡಿಕೊಂಡು ಸಾಯುತ್ತಾನೆ—ಇದಕ್ಕೆ ಸಂಬಂಧಪಟ್ಟಂತೆ ದೊಡ್ಡ ಕೋಲಾಹಲ ಎದ್ದಿತು. ಇದು ಮುಂದೆ ಆ ನಾಟಕದ ವಿಮರ್ಶೆ ಮಾಡುವಾಗ ಚರ್ಚೆಗೆ ಬರುತ್ತದೆ. ಇನ್ನೊಂದು ಸಂದರ್ಭ: 'ಕರ್ನಾಟಕ ಸಾಹಿತ್ಯ ಪರಿಷತ್ತು' ಎಂಬ ಹೆಸರನ್ನು ನಿಯಾನ್ ಅಕ್ಷರಗಳಲ್ಲಿ ಪ್ರದರ್ಶಿಸುವ ಅನುಕೂಲಕ್ಕಾಗಿ ಶ್ರೀಕಂಠಯ್ಯನವರು 'ಕರ್ನಾಟಕ' ಎಂಬ ಪದದಲ್ಲಿರುವ 'ಟ' ವರ್ಗದ ಪಂಚಮಾಕ್ಷರಕ್ಕೆ ಬದಲಾಗಿ 'ತ' ವರ್ಗದ ಪಂಚಮಾಕ್ಷರವನ್ನು ಉಪಯೋಗಿಸಲು ಪ್ರಯತ್ನಿಸಿದ್ದು. ಈ ಜಗಳಗಳಲ್ಲಿ ಇಂದಿನ ಜನಕ್ಕೆ ಯಾವ ಆಸಕ್ತಿಯೂ ಇಲ್ಲ. ಅಶ್ವತ್ಥಾಮನ್‌ನ ಆತ್ಮಹತ್ಯೆಯನ್ನು ವಿರೋಧಿಸಿದ, ಮತ್ತು ಣಕಾರದ ಪರವಾಗಿ ಶರಸಂಧಾನ ಮಾಡಿದ ವೀರಸಂಪ್ರದಾಯಸ್ಥರು ಎರಡರ ವಿಷಯದಲ್ಲೂ ಉದಾಸೀನರಾಗಿದ್ದಿದ್ದರೆ ಅದರಿಂದಾಗಿ ಸಾಹಿತ್ಯ ಪ್ರಪಂಚದಲ್ಲಿ ಮಹಾಪ್ರಳಯವೇನೂ ಆಗುತ್ತಿರಲಿಲ್ಲ. ಇತ್ತ ಶ್ರೀಕಂಠಯ್ಯನವರಾದರೂ (ಅವರು ಅಶ್ವತ್ಥಾಮನ್‌ನ ಆತ್ಮಹತ್ಯೆಯನ್ನು ಬದಲಾಯಿಸಲು ಸಾಧ್ಯವಾಗುತ್ತಿರಲಿಲ್ಲ) "ಹೋಗಲಿ ಬಿಡಿ ಸ್ವಾಮಿ, ನಿಮ್ಮ 'ಣ' ಕಾರವನ್ನೇ ಇಟ್ಟುಕೊಳ್ಳೋಣ" ಎನ್ನಬಹುದಾಗಿತ್ತು. ಆದರೆ ಸಮಾಧಾನದ ಮಾರ್ಗ ಎರಡು ಕಡೆಯವರೆಗೂ ರುಚಿಸಲಿಲ್ಲ. ಭಾಷಣಗಳು, ಲೇಖನಗಳು, ವಿಡಂಬನೆಗಳು, ಒಂದಾದ ಮೇಲೊಂದು ಬಂದವು. ಚಂಡಮಾರುತ ಬೀಸಿತು, ಕಲ್ಲುಮಳೆ ಕರೆಯಿತು. (ಕಲ್ಲು ಎನ್ನುವುದು ರೂಪಕ, ಅಷ್ಟೆ!) ಕೊನೆಗೆ ಕರ್ಣಾ(ರ್ನಾ)ಟಕ ಎಂಬ ಪದವನ್ನೇ ಬಿಟ್ಟು, 'ಕನ್ನಡ ಸಾಹಿತ್ಯ ಪರಿಷತ್ತು' ಎಂದು ಪರಿಷತ್ತಿಗೆ ಹೊಸ ನಾಮಕರಣ ಮಾಡಿ ಆ ಚರ್ಚೆಗೆ ಇತಿಶ್ರೀ ಹಾಕಿದ್ದಾಯಿತು. ಈ ಪ್ರಸಂಗಗಳಿಂದಾಗಿ ಶ್ರೀಕಂಠಯ್ಯನವರ ಮನಸ್ಸಿನ ಮೇಲೆ ಗಾಯವಾಯಿತು; ಅದು ಸುಲಭವಾಗಿ ಮಾಯಲಿಲ್ಲ.

೧೯೪೨ರಲ್ಲಿ ನಡೆದ ಪರಿಷತ್ತಿನ ಸರ್ವಸದಸ್ಯರ ವಾರ್ಷಿಕಸಭೆಯಲ್ಲಿ ಭಿನ್ನಾಭಿಪ್ರಾಯಗಳು ಬೆಳಕಿಗೆ ಬಂದವು. ಶ್ರೀಕಂಠಯ್ಯನವರ ಮನಸ್ಸಿನಲ್ಲಿ "ನಾನು ಸ್ವಾರ್ಥವೇನೂ ಇಲ್ಲದೆ ಕನ್ನಡದ ಹಿತಕ್ಕಾಗಿ ಕಷ್ಟಪಟ್ಟಿದ್ದೇನೆ. ಆದರೂ ಟೀಕೆ ತಪ್ಪಲಿಲ್ಲವಲ್ಲ!" ಎಂಬ ಅಸಮಾಧಾನ. "ಸ್ವಾರ್ಥವೇನೂ ಇಲ್ಲ ಎಂದರೆ ಸಾಲದು. ಆಡಳಿತ ನಿರ್ದಿಷ್ಟ ನಿಯಮಗಳಿಗೆ ಒಳಪಟ್ಟಿರಬೇಕು, ಒಂದು ನಿರ್ದಿಷ್ಟ ಕ್ರಮದಲ್ಲಿ ನಡೆಯಬೇಕು" ಎಂದು ಕೆಲವರು ಸದಸ್ಯರ ನಿಲುವು. ಆ ವರ್ಷ ಉಪಾಧ್ಯಕ್ಷರ ಚುನಾವಣೆಯೂ ಆಗಬೇಕಾಗಿತ್ತು. ಶ್ರೀಕಂಠಯ್ಯನವರು ತಮಗೆ

ಮರು ಚುನಾವಣೆಗೆ ನಿಲ್ಲುವ ಅಪೇಕ್ಷೆಯಿಲ್ಲವೆಂದು ಹೇಳಿದರು. ಅವರ ಹೆಸರನ್ನು ಯಾರೂ ಸೂಚಿಸಲಿಲ್ಲ. ಶ್ರೀಕಂಠಯ್ಯನವರು ಹೊಸದಾಗಿ ಚುನಾಯಿತರಾದ ಅಧ್ಯಕ್ಷರಿಗೆ ಅಧಿಕಾರ ವಹಿಸಿಕೊಟ್ಟರು. ಅಂದಿನ ವಾತಾವರಣ ಯಾರಿಗೂ ಹಿತಕರವಾಗಿ ತೋರಲಿಲ್ಲ. ಶ್ರೀಕಂಠಯ್ಯನವರಂತೂ ಬಹಳ ನೊಂದುಕೊಂಡರೆಂದು ಅವರ ಬೀಳ್ಕೊಡುಗೆಯ ಮಾತಿನಿಂದ ವ್ಯಕ್ತವಾಗುತ್ತದೆ. ಅವರು ಅದೇ ವರ್ಷ ವಿಶ್ವವಿದ್ಯಾನಿಲಯದ ಕೆಲಸದಿಂದಲೂ ನಿವೃತ್ತರಾದರು.

ಸರಕಾರ ಅವರನ್ನು ಅದೇ ವರ್ಷ ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿತು. ಆ ಸ್ಥಾನದಿಂದ ಅವರು ೧೯೪೪ರಲ್ಲಿ ಬಿಡುಗಡೆ ಹೊಂದಿದರು. ಆ ವರ್ಷ ಧಾರವಾಡದ ಕೆ. ಇ. ಬೋರ್ಡ್ ಕಾಲೇಜಿನ ಪ್ರಿನ್ಸಿಪಲ್ ಆಗಿ ಬರಬೇಕೆಂದು ಅವರಿಗೆ ಕರೆ ಬಂತು. ಅವರ ಹಿತೈಷಿಗಳನೇಕರ ಇಷ್ಟಕ್ಕೆ ವಿರೋಧವಾಗಿ ಅವರು ಆ ಕೆಲಸವನ್ನು ಒಪ್ಪಿಕೊಂಡರು. ಕೆಲವು ವರ್ಷಗಳಿಂದ ಅವರ ಆರೋಗ್ಯ ಸರಿಯಾಗಿರಲಿಲ್ಲ. ರಕ್ತದ ಒತ್ತಡ ಹೆಚ್ಚುತ್ತಿತ್ತು. ಡಯಾಬೀಟಿಸ್ ರೋಗ ಬೇರೆ ಕಾಡುತ್ತಿತ್ತು. ವರ್ಷಗಟ್ಟಲೆ ಅವರು ತಮ್ಮ ಶರೀರವನ್ನು ತಡೆಯಲಾರದಷ್ಟು ಶ್ರಮಕ್ಕೆ ಈಡು ಮಾಡಿದ್ದರು. ೧೯೪೬ನೆಯ ಜನವರಿ ೫ನೆಯ ತಾರೀಖು ಅವರು ಸ್ವರ್ಗಸ್ಥರಾದರು. ಇಡೀ ಕರ್ನಾಟಕ ಶೋಕದಲ್ಲಿ ಮುಳುಗಿತು. ತಿಂಗಳುಗಟ್ಟಲೆ ಅವರ ಸೇವೆಯನ್ನು ಹೊಗಳುವ ಲೇಖನಗಳು ಪತ್ರಿಕೆಗಳಲ್ಲಿ ಬಂದವು. ಎಲ್ಲೆಲ್ಲೂ ಸಭೆಗಳು ಸೇರಿ ಸಂತಾಪವನ್ನು ಸೂಚಿಸಿದವು.

ಏಕೀಕೃತ ಕರ್ನಾಟಕವನ್ನು ನೋಡುವ ಭಾಗ್ಯ ಅವರ ಪಾಲಿಗೆ ಬರಲಿಲ್ಲ. ಸಾಹಿತ್ಯ ಕ್ಷೇತ್ರದಲ್ಲಿ ಮಾತ್ರವಲ್ಲದೆ, ಏಕೀಕರಣಕ್ಕಾಗಿಯೂ ದುಡಿದವರಲ್ಲಿ ಅತ್ಯಂತ ಪ್ರತಿಭಾಶಾಲಿ ಎಂದು ಕರ್ನಾಟಕ ಅವರನ್ನು ಗೌರವಿಸುತ್ತದೆ.

ವ್ಯಕ್ತಿ ಪರಿಸರ ಮತ್ತು ಸಮಯ

ಸುಮಾರು ೧೯೧೬ರಲ್ಲಿ ಇಬ್ಬರು ಹೈಸ್ಕೂಲು ವಿದ್ಯಾರ್ಥಿಗಳು—ಅವರ ಶಾಲೆಯ ಚರ್ಚಾಕೂಟದ (Debating Society) ಜಂಟಿ ಕಾರ್ಯದರ್ಶಿಗಳು—ಪ್ರೊ. ಬಿ. ಎಂ. ಶ್ರೀಕಂಠಯ್ಯನವರನ್ನು ಭೇಟಿಮಾಡಲೆಂದು ಅವರ ಮನೆಗೆ ಹೋದರು. ಆ ಇಬ್ಬರಲ್ಲಿ ನಾನು ಒಬ್ಬ. 'ಪ್ರಾಚೀನ ಭಾರತ ಆಧುನಿಕ ಭಾರತಕ್ಕಿಂತ ಉತ್ತಮವಾಗಿತ್ತು' ಎಂಬ ವಿಷಯದ ಮೇಲೆ ಚರ್ಚೆ ನಡೆಯುತಕ್ಕದ್ದೆಂದು ನಾವು ಏರ್ಪಾಟು ಮಾಡಿದ್ದೆವು. ಬಹಳ ಸೊಗಸಾದ ವಿಷಯವನ್ನು ಆರಿಸಿದ್ದೇವೆ ಎಂದು ನಮಗೆ ಹೆಮ್ಮೆ. ಆ ಚರ್ಚೆಗೆ ಪ್ರಸಿದ್ಧ ಪ್ರೊಫೆಸರಾದ ಬಿ. ಎಂ. ಶ್ರೀಕಂಠಯ್ಯನವರನ್ನು 'ಸ್ಪೀಕರ್' ಆಗಿ ಕರೆತಂದರೆ ಎಲ್ಲರಿಂದಲೂ ಭೇಷ್ ಎನ್ನಿಸಿಕೊಳ್ಳಬಹುದು, ಎಂದುಕೊಂಡು ನಾವು ಅವರನ್ನು ಕಾಣಲು ಹೋದೆವು. ಮನೆಯಲ್ಲಿದ್ದವರು ಯಾರೋ "ಆ ಕೊಟಡಿಯಲ್ಲಿದ್ದಾರೆ, ಹೋಗಿ" ಎಂದರು. ಶ್ರೀಕಂಠಯ್ಯನವರು ತಾವು ಓದುತ್ತಿದ್ದ ಪುಸ್ತಕವನ್ನು ಮೇಜಿನ ಮೇಲಿಟ್ಟು ನಮ್ಮ ಕಡೆಗೆ ತಿರುಗಿ "Well"? ಎಂದರು; ದನಿಯಲ್ಲಿ ಮಾರ್ದವವೇನೂ ಇರಲಿಲ್ಲ. ನಾವು ಬಂದದ್ದು ಅವರಿಗೆ ಹಿತವಾಗಲಿಲ್ಲ ಎಂಬ ಭಾವನೆಯಿಂದಾಗಿ ಮೊದಲೇ ಮುಖೇಡಿಗಳಾಗಿದ್ದ ನಮಗೆ ಬಾಯಿ ಕಟ್ಟಿಹೋಯಿತು. ಮಾತಾಡದೆ ಪೆಚ್ಚಾಗಿ ಅವರನ್ನು ನೋಡುತ್ತ ನಿಂತೆವು. ಅವರಿಗೆ ಆಗ, "ಪಾಪ, ಅರಿಯದ ಹುಡುಗರು" ಎನ್ನಿಸಿತೇನೋ, "ನನ್ನಿಂದ ಏನಾಗಬೇಕು ಹೇಳಿ" (Yes, what can I do for you?) ಎಂದರು. ಆಗಿನ ಪದ್ಧತಿಯಂತೆ ನಮ್ಮ ಸಂಭಾಷಣೆಯೆಲ್ಲ ಇಂಗ್ಲಿಷಿನಲ್ಲೇ ಸಾಗಿತು. ನಾವು ಸ್ವಲ್ಪ ಧೈರ್ಯಗೊಂಡು ಬಂದ ಉದ್ದೇಶವನ್ನು ತಿಳಿಸಿದೆವು. ಚರ್ಚೆಗೆ ನಾವು ಆರಿಸಿದ್ದ ವಿಷಯ ಕಿವಿಗೆ ಬಿದ್ದಾಗ ಅವರ ಮುಖದ ಮೇಲೆ ಒಂದು ಬಗೆಯ ನಗೆ--ಅದನ್ನು ಹುಳಿನಗೆ ಎನ್ನಬಹುದೇನೋ—ಸುಳಿದು ಹೋಯಿತು. "ಹೂಂ. ಪ್ರಾಚೀನ ಭಾರತ ಆಧುನಿಕ ಭಾರತಕ್ಕಿಂತ ಉತ್ತಮ! ಭಾರತೀಯವಾದದ್ದು ಏನೇ ಇರಲಿ ಉಳಿದುದೆಲ್ಲಕ್ಕಿಂತಲೂ ಅದು ಉತ್ತಮ. ಭಾರತದಲ್ಲಿ ಪ್ರಾಚೀನವಾದದ್ದೆಲ್ಲ ಆಧುನಿಕವಾದದ್ದಕ್ಕಿಂತ ಉತ್ತಮ ! ಸ್ವತಸ್ಸಿದ್ಧವಾದ ಮಾತು, ಅಲ್ಲವೇ? (Hmm. Ancient India is better than Modern India! All things Indian are better than all other things, and within India all things ancient are better than all things modern! A self-evident proposition, isn't it?) ಎಂದರು. ನಮಗೆ

self-evident proposition ಎಂದರೇನೋ ತಿಳಿಯದು. ಅವರು ಹೇಳಿದ್ದು ಮೆಚ್ಚಿಕೆಯ ಮಾತಲ್ಲ ಎಂದಷ್ಟು ಮಾತ್ರ ಗೊತ್ತಾಯಿತು; ನಮ್ಮ ಹುಮ್ಮಸ್ಸೆಲ್ಲಾ ಇಳಿದುಹೋಯಿತು. ನಮ್ಮ ಪೆಚ್ಚು ಮೋರೆಯನ್ನು ನೋಡಿ ಅವರ ಮನಸ್ಸು ಕರಗಿತೆಂದು ತೋರುತ್ತದೆ. ನಮ್ಮನ್ನು ಕುಳಿತುಕೊಳ್ಳಹೇಳಿ, ಮೃದುವಾದ ದನಿಯಲ್ಲಿ ನಾಲ್ಕು ಮಾತಾಡಿ, ಆ ದಿನ ತಮಗೆ ಬೇರೆ ಕೆಲಸವಿರುವುದರಿಂದ ಬರಲಾಗುವುದಿಲ್ಲ ಎಂದು ಹೇಳಿದ್ದಲ್ಲದೆ "I am sorry" ಎಂಬ ಮಾತನ್ನು ಸೇರಿಸಿ ನಮ್ಮನ್ನೂ ಕಳುಹಿಸಿಕೊಟ್ಟರು.

ನಮ್ಮ ಬೇಡಿಕೆಗೆ ಶ್ರೀಯುವರಿಂದ ಬಂದ ಪ್ರತಿಕ್ರಿಯೆ ಈ ಶತಮಾನದ ಎರಡನೆಯ ದಶಕದಲ್ಲಿ ಅವರ ಸ್ವಭಾವ ಹೇಗಿತ್ತು ಎಂಬುದನ್ನು ಸೂಚಿಸುತ್ತದೆ. ಅದಕ್ಕಾಗಿಯೇ ಇಲ್ಲಿ ಅದರ ಪ್ರಸ್ತಾಪ ಮಾಡಿದ್ದೇನೆ. 'ಶ್ರೀಕಂಠಯ್ಯನವರು ಮನುಷ್ಯರು ಮುಟ್ಟದ ಗುಬ್ಬಿ' ಎಂದು ಆಗ ಜನ ಹೇಳುತ್ತಿದ್ದದ್ದು ನೆನಪಿದೆ. ಅವರ ಸ್ವಭಾವದಲ್ಲಿ ಮೊದಲು ಕಾಣುತ್ತಿದ್ದದ್ದು ಒಂದು ತರದ ಬಿಗಿ: ಅದರಲ್ಲಿ ಹಿಡಿತ ಹೆಚ್ಚು, ಸಲಿಗೆ ಕಡಿಮೆ. ಆದರೆ ಬೇಗ ಆ ಬಿಗಿ ಸಡಿಲವಾಗಿ ಸೌಜನ್ಯ ಸಹಾನುಭೂತಿಗಳಿಗೆ ಎಡೆಮಾಡಿಕೊಡುತ್ತಿತ್ತು. ಮೇಲೆ ಕಾಣಿಸಿರುವ ಪ್ರಸಂಗ ಶ್ರೀಯುವರಲ್ಲಿ ಎದ್ದು ಕಾಣುತ್ತಿದ್ದ ಮತ್ತೊಂದು ಗುಣಕ್ಕೂ ಸೂಚಕ. ವಿಚಾರಪರರಲ್ಲದವರು, ಹಳಸಲು ಮಾತು (platitudes)ಗಳನ್ನು ಮತ್ತೆ ಮತ್ತೆ ಬಳಸುವವರು, ಭಾವೋದ್ರೇಕದಿಂದ ಮಾತಾಡುವವರು—ಇಂಥವರ ವಿಷಯದಲ್ಲಿ ಅವರಿಗೆ ಅಸಹನೆ; ಒಂದೊಂದು ವೇಳೆ ತಿರಸ್ಕಾರ ಎಂದರೂ ತಡೆಯುತ್ತಿತ್ತು. ದೇಶ, ಭಾಷೆ, ಸಾಹಿತ್ಯ, ಯಾವುದರ ವಿಷಯದಲ್ಲಾಗಲಿ ಅಂಧಶ್ರದ್ಧೆ ಅವರಿಗೆ ಒಡಿಸದು; ಏಕೆಂದರೆ "ಕೊನೆಗೆ ನಿಲ್ಲುವುದು ಅಭಿಮಾನವಲ್ಲ, ಸತ್ಯ". ದೇಶಾಭಿಮಾನ ಎಂಬ ದೊಡ್ಡ ಪದವನ್ನು ಬಳಸಿಕೊಂಡು ಮೋಹಕ್ಕೆ ತುತ್ತಾಗಬಾರದು, ಅಸತ್ಯವನ್ನು ಅಪ್ಪಿಕೊಳ್ಳಬಾರದು. ಯಾವ ಅಭಿಪ್ರಾಯವಾಗಲಿ, ಅದು ಮನಸ್ಸಿಗೆ ಎಷ್ಟೇ ಹಿತವಾಗಿರಲಿ, "ಇದು ನಿಜವೆ?" ಎಂದು ಪರೀಕ್ಷಿಸದೆ ಒಪ್ಪಬಾರದು. ಭಾರತ ನಮ್ಮ ದೇಶ, ನಮಗೆ ಪ್ರಿಯವಾದ ದೇಶ. ಆದರೆ ಪ್ರಾಚೀನ ಭಾರತವಾಗಲಿ ಇಂದಿನ ಭಾರತವಾಗಲಿ, ಅದನ್ನು ಪೊರೆ ಕಳೆದ ಕಣ್ಣಿನಿಂದ ನೋಡಬೇಕು. ಇದು ಅವರ ಸ್ವಭಾವ.

ಇದನ್ನು ಅರ್ಥಮಾಡಿಕೊಳ್ಳಬೇಕಾದರೆ ಆಗಿನ ಕಾಲದ—ಅಂದರೆ ಈ ಶತಮಾನದ ಆದಿಭಾಗದ-ಮಾನಸಿಕ ವಾತಾವರಣ ಹೇಗಿತ್ತು ಎಂಬುದನ್ನು ಮೊದಲು ತಿಳಿದುಕೊಳ್ಳಬೇಕು. ಆಗ ನಮ್ಮ ರಾಷ್ಟ್ರಜೀವನದ ಮೇಲೆ ಪ್ರಭಾವ ಬೀರಿದ ಅಂಶಗಳಲ್ಲಿ ಎಲ್ಲಕ್ಕಿಂತ ಮುಖ್ಯವಾದುದೆಂದರೆ, ಬ್ರಿಟಿಷರು ನಮ್ಮನ್ನು ಆಳುತ್ತಿದ್ದರೆಂಬುದು. ನಮ್ಮ ಮತಧರ್ಮ, ಭಾವಜೀವನ, ಬುದ್ಧಿಜೀವನ, ಸಮಾಜಜೀವನ, ಎಲ್ಲದರ ಮೇಲೂ ಒಳ್ಳೆಯದಕ್ಕೋ ಕೆಟ್ಟದ್ದಕ್ಕೋ ಅದು ಪ್ರಭಾವ

ಬೀರಿತು. ಆಗ ನಮ್ಮ ಜೀವನದಲ್ಲಿ ಕಾಣುತ್ತಿದ್ದ ಅನೇಕ ವಿರೋಧಾಭಾಸಗಳಿಗೆ ಅದೇ ಮೂಲ. ನಮ್ಮ ಚರ್ಚಾಕೂಟ "ಪ್ರಾಚೀನ ಭಾರತ ಆಧುನಿಕ ಭಾರತಕ್ಕಿಂತ ಉತ್ತಮ" ಎಂಬ ವಿಷಯವನ್ನು ಚರ್ಚಿಸಿದ್ದಕ್ಕೆ ಅದೇ ಕಾರಣ; ಆ ಮನೋಭಾವವನ್ನು ಶ್ರೀಕಂಠಯ್ಯನವರು ಮೂದಲಿಸಿದ್ದಕ್ಕೂ ಅದೇ ಕಾರಣ. ಪ್ರಾಚೀನ ಭಾರತ ಮೇರು ಸಮಾನವಾದ ಔನ್ನತ್ಯಕ್ಕೆ ಏರಿತ್ತು ಎಂಬ ಮಾತು ನಾವು ನಮ್ಮ ಓದಿಯರಿಂದ ಕೇಳಿದ್ದು. ಆ ನಂಬಿಕೆ ಅವರ ಮನಸ್ಸಿನ ನೆಮ್ಮದಿಗೆ ಅವಶ್ಯಕವಾಗಿತ್ತು. ನಾವು ಆಂಗ್ಲರ ಗುಲಾಮರು; ಅವರ ನಡತೆ ನಮಗೆ ಕ್ಷಣ ಕ್ಷಣಕ್ಕೂ ಅದರ ನೆನಪು ಕೊಡುತ್ತಿತ್ತು. ನಮ್ಮ ವಿಷಯದಲ್ಲೇ ನಮಗೆ ತುಚ್ಛಭಾವನೆ ಬಂದಿತ್ತು, ಅದು ಮನಸ್ಸನ್ನು ಕೊರೆಯುತ್ತಿತ್ತು. ಆ ನೋವನ್ನು ತಪ್ಪಿಸಿಕೊಳ್ಳುವುದಕ್ಕೆ ನಾವು ಮನಸ್ಸಿಗೆ ಹಚ್ಚಿದ ಲೇಪ—ಪ್ರಾಚೀನ ಭಾರತದ ಅಗ್ಗಳಿಕೆ. "ಇಂದಿನ ಸ್ಥಿತಿಯನ್ನು ಹೊಗಳುವುದು ಅಸಾಧ್ಯ; ಹಿಂದಿನ ಸ್ಥಿತಿಯನ್ನಾದರೂ ಹೊಗಳಿಕೊಂಡು ಮನಸ್ಸಿಗೆ ಸಮಾಧಾನ ತಂದುಕೊಳ್ಳೋಣ"—ಇದು ನಮ್ಮ ಸುಪ್ತಮನಸ್ಸಿನಲ್ಲಿದ್ದ ಭಾವನೆ. ನಮ್ಮ 'ದೀನ ನಾನು' ಮನೋಭಾವದಿಂದ ಪರಸ್ಪರ ವಿರೋಧವಾದ ಎರಡು ಪರಿಣಾಮಗಳುಂಟಾದುವು. ಅನೇಕ ವೇಳೆ ಅವೆರಡೂ ಒಬ್ಬನಲ್ಲೇ ಕಂಡುಬರುತ್ತಿದ್ದವು. ಒಂದು: ನಮ್ಮ ಸಂಸ್ಕೃತಿ ಸಂಪ್ರದಾಯಗಳನ್ನು ಉತ್ಪ್ರೇಕ್ಷೆ ಮಾಡಿ ಶಿಖರಕ್ಕೇರಿಸುವುದು; ಇನ್ನೊಂದು: ಆಂಗ್ಲರ ಸಂಸ್ಕೃತಿಯನ್ನೂ ಹಾಗೆಯೇ ಉತ್ಪ್ರೇಕ್ಷೆ ಮಾಡುವುದು. ಆಂಗ್ಲರ ವಿಷಯದಲ್ಲಿ ನಮಗೆ ಒಂದು ಕಡೆ ದ್ವೇಷ, ಮತ್ತೊಂದು ಕಡೆ ಅಸೂಯೆ ಬೆರೆತ ಮೆಚ್ಚಿಕೆ. ಇವೆರಡಕ್ಕೂ ನಿಷ್ಕೃಷ್ಟವಾದ ತಿಳಿವಳಿಕೆಯ ಆಧಾರವಿಲ್ಲ.

ಇವೆರಡರಲ್ಲಿ ಮೊದಲನೆಯ ಭಾವನೆಯನ್ನು ಶ್ರೀಕಂಠಯ್ಯನವರು ದೂರ ಇಟ್ಟರು, ತಳ್ಳಿಹಾಕಲಿಲ್ಲ; "ಅದು ಅಲ್ಲಿರಲಿ, ವಿಚಾರ ಮಾಡಿ ನೋಡೋಣ. ಆಮೇಲೆ ಬೇಕಾದರೆ ಭಟ್ಟಂಗಿ ಪಾತ್ರವನ್ನು ವಹಿಸೋಣ" ಎಂದುಕೊಂಡರು. ಎರಡನೆಯ ಭಾವನೆ—ಆಂಗ್ಲ ವಿಷಯದಲ್ಲಿ ಮೆಚ್ಚಿಕೆ—ಇದ್ದಿತಾದರೂ ಆಂಗ್ಲರು ಎಂದ ಮಾತ್ರಕ್ಕೆ ಅವರೆಲ್ಲ ದಿಗ್ದಂತಿಗಳು ಎನ್ನುವ ಹುಚ್ಚಿಗೆ ಹೋಗಲಿಲ್ಲ. ಯಾವ ಸಾಮರ್ಥ್ಯವೂ ಇಲ್ಲದೆ, ಕೇವಲ ಆಡಳಿತಗಾರರ ಜನಾಂಗಕ್ಕೆ ಸೇರಿದವರು ಎಂಬೊಂದೇ ಕಾರಣದಿಂದ ಉನ್ನತ ಪದವಿಗೇರಿದ ಆಂಗ್ಲರನ್ನು ಅವರು ಕಂಡಿದ್ದರು. ಅವರೊಡನೆ ತಮ್ಮನ್ನು ಹೋಲಿಸಿಕೊಂಡು "ನನ್ನ ಕೈಗಳೆರಡನ್ನೂ ಯಾರಾದರು ಕಟ್ಟಿಹಾಕಿದರೂ ಈ ಜನರೊಡನೆ ಸೆಣಸಿ ಗೆಲ್ಲಬಲ್ಲೆ" ಎಂಬ ಧೈರ್ಯ ಅವರಿಗಿತ್ತು. ಆದರೆ ಸಾಹಿತ್ಯ, ಕಲೆ, ತತ್ವಶಾಸ್ತ್ರ ಮುಂತಾದ ಹಲವು ಕ್ಷೇತ್ರಗಳಲ್ಲಿ ಪಾಶ್ಚಾತ್ಯರ ಸಾಧನೆ ಎಷ್ಟು ಅದ್ಭುತವಾದದ್ದು ಎಂಬುದನ್ನು ಅವರು ತಿಳಿದಿದ್ದರು, ಮನಸಾರ ಮೆಚ್ಚಿದ್ದರು. ಆಂಗ್ಲ ಸಾಹಿತ್ಯ-ಸಂಸ್ಕೃತಿಗಳ ವಿಷಯದಲ್ಲಿ ಅವರಿಗಿದ್ದ ಪ್ರೇಮ, ಅಧ್ಯಯನದ ಮತ್ತು ವಿಚಾರದ ಪರಿಣಾಮವಾಗಿ ಬಂದದ್ದು.

ಈ ಪ್ರೇಮದ ಭರದಲ್ಲಿ ಅವರು ಕೆಲವು ವೇಳೆ ಆಡುತ್ತಿದ್ದ ಮಾತನ್ನು ಕೇಳಿದವರಿಗೆ "ಇವರಿಗೆ ಭಾರತದ ವಿಷಯದಲ್ಲೂ ಭಾರತೀಯ ಸಾಹಿತ್ಯ-ಸಂಸ್ಕೃತಿಗಳ ವಿಷಯದಲ್ಲೂ ಅಷ್ಟೇನೂ ಗೌರವವಿಲ್ಲ. ಇಂಗ್ಲೆಂಡ್, ಅಲ್ಲಿಯ ಸಂಸ್ಥೆಗಳು, ಅಲ್ಲಿಯ ಸಾಹಿತ್ಯ, ಇವುಗಳ ಮೇಲಿನ ವ್ಯಾಮೋಹ ಹೆಚ್ಚಿ ಇವರ ಮನಸ್ಸಿನಲ್ಲಿ ಭಾರತಕ್ಕೆ ಸ್ಥಾನ ಸಾಲದೆ ಹೋಗಿದೆ" ಎನ್ನಿಸುವಂತಿತ್ತು. ಇದು ತಪ್ಪು ಅಭಿಪ್ರಾಯ; ಆದರೆ ಇದನ್ನು ಸರಿಪಡಿಸುವುದಕ್ಕೆ ಅವರು ಹೆಚ್ಚು ಗಮನ ಕೊಡಲಿಲ್ಲ. ವಾಸ್ತವವಾಗಿ ಪ್ರಾಚೀನ ಭಾರತದಲ್ಲಿ—ನೆನ್ನೆ ಮೊನ್ನೆಯ ಭಾರತದಲ್ಲಲ್ಲ—ಹೆಮ್ಮೆಪಡುವಂಥ ವಿಷಯಗಳು ಹೇರಳವಾಗಿದ್ದುವೆಂದು ಅವರು ಬಲ್ಲರು. ಆದರೆ ಯಾವುದನ್ನು ಯಾತಕ್ಕಾಗಿ ಹೊಗಳಬೇಕೋ ಅದನ್ನು ಬಿಟ್ಟು ಕೇವಲ ಸಾಧಾರಣ ಮಟ್ಟದ ವಸ್ತುವನ್ನು ಒಪ್ಪಲಾಗದ ಕಾರಣಗಳಿಗಾಗಿ ಹೊಗಳುವುದನ್ನು ಕೇಳಿದಾಗ ಅವರಿಗೆ ಜಿಗುಪ್ಸೆಯಾಗುತ್ತಿತ್ತು, ಆ ಜಿಗುಪ್ಸೆ ಮಾತಿನಲ್ಲಿ ಹೊರಹೊಮ್ಮುತ್ತಲೂ ಇತ್ತು. ಒಂದು ಬಾರಿ ಮೈಸೂರು ವಿಶ್ವವಿದ್ಯಾನಿಲಯದ ಮತ್ತೊಬ್ಬ ವಿದ್ವಾಂಸರು "ನಮ್ಮ ದೇಶದಲ್ಲಿ ಕಾಳಿದಾಸ ಹುಟ್ಟಿದ; ವಾಲ್ಮೀಕಿ ಹುಟ್ಟಿದ; ಇದೇನೋ ಹೆಮ್ಮೆಪಡಬೇಕಾದ ವಿಷಯ. ಆದರೆ ಅವರ ಮೇಲೆ ವ್ಯಾಖ್ಯಾನ ಮಾಡಿರುವವರೂ ಹುಟ್ಟಿದರು. ಅದಕ್ಕೇನು ಹೇಳೋಣ!" ಎಂದರಂತೆ. ಶ್ರೀಕಂಠಯ್ಯನವರಲ್ಲಿ ಈ ಮನೋಭಾವ ಅನೇಕ ವೇಳೆ ಕಾಣಬರುತ್ತಿತ್ತು. ಆಗಿನ ಕಾಲದಲ್ಲಿ ಬಹು ಜನರಿಗೆ ಭಾರತದ ಹಿರಿಮೆ ಅವರು ಬಲ್ಲ ವಿಷಯವಲ್ಲ; ಅದನ್ನು ನಂಬಿದರೆ ಅವರ ಮನಸ್ಸಿಗೆ ಹಿತವಾಗುತ್ತಿತ್ತು, ಅಷ್ಟೆ. ಸಂಪ್ರದಾಯಾನುಸಾರವಾಗಿ ಸಂಸ್ಕೃತ ಸಾಹಿತ್ಯವನ್ನೂ ಉಪನಿಷತ್ತು, ಭಗವದ್ಗೀತೆ ಇತ್ಯಾದಿಗಳನ್ನೂ ಓದಿದ ಪಂಡಿತರೇನೋ ಇದ್ದರು. ಆದರೆ ಅಂಥವರಿಗೆ ಭಾರತ ಇತರ ಕ್ಷೇತ್ರಗಳಲ್ಲಿ ಏನು ಸಾಧಿಸಿತ್ತು ಎಂಬುದರ ಕಲ್ಪನೆ ಅಷ್ಟಾಗಿ ಇರಲಿಲ್ಲ. ದಶಮಾಂಶ ಪದ್ಧತಿಯನ್ನು ಕಂಡುಹಿಡಿದವರು ಭಾರತೀಯರು ಎಂಬುದನ್ನು ಅಂಥವರು ಸಾಮಾನ್ಯವಾಗಿ ಅರಿಯರು. ಅದಲ್ಲದೆ ಸಾ[illegible]ನ ಇತ್ಯಾದಿಗಳ ಅಧ್ಯಯನದಲ್ಲೂ ಅವರಿಗೆ ವಿಮರ್ಶೆಯ ದೃಷ್ಟಿ ಕಡಿಮೆ. ಇತರ ದೇಶಗಳ ಸಾಹಿತ್ಯ ತತ್ವಶಾಸ್ತ್ರ ಇತ್ಯಾದಿಗಳೊಡನೆ ತಮ್ಮದನ್ನು ಹೋಲಿಸಿ, ನೋಡುವ ಅಭ್ಯಾಸವಿಲ್ಲ; ಅವಕ್ಕೆ ಬೇಕಾದ ವಿಶಾಲ ಪಾಂಡಿತ್ಯವೂ ಇಲ್ಲ. ಇಂಥವರ ಮೇಲೆ ಪಾಶ್ಚಾತ್ಯ ಸಂಸ್ಕೃತಿ ಹಠಾತ್ತಾಗಿ ದಾಳಿಯಿಟ್ಟಿತು. ಅದು ಯೌವನಸಹಜವಾದ [illegible]ಳ್ಳ ದಿಟ್ಟ ಆಕ್ರಮಣಶೀಲ ಸಂಸ್ಕೃತಿ; ಹೋದಕಡೆಯಲ್ಲೆಲ್ಲಾ ಜಯರೇಖೆಯನ್ನು ಪಡೆದದ್ದು. ನಮ್ಮವರು ಅದನ್ನು ಕಡೆಗಣಿಸುವಂತಿಲ್ಲ; ಸ್ವಾಗತಿಸುವಂತೆಯೂ ಇಲ್ಲ. "ಇದು ನಮ್ಮನ್ನು ಸಂಪೂರ್ಣವಾಗಿ ದಾಸ್ಯಕ್ಕೆ ಎಳೆಯಬಹುದು" ಎಂಬ ಶಂಕೆ ನಮ್ಮನ್ನು ಬಾಧಿಸುತ್ತಿತ್ತು; ಅದಕ್ಕೆ ಕಾರಣವೂ ಇತ್ತು.

ಶ್ರೀಕಂಠಯ್ಯನವರು ಕಾಲೇಜಿಗೆ ಸೇರುವ ವೇಳೆಗಾಗಲೇ ಹೊಸ ಬಗೆಯ ವಿದ್ವಾಂಸರ ತಂಡವೊಂದು ಬೆಳೆದು ಮಾನ್ಯತೆ ಪಡೆದಿತ್ತು. ಈ ಜನರು ಆಕ್ಸ್‌ಫರ್ಡ್

ಕೇಂಬ್ರಿಜ್ ಮೊದಲಾದ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಪಡೆದವರು. ನಮ್ಮ ಸಂಸ್ಕೃತಿ ದುಸ್ಥಿತಿಗೆ ಇಳಿದಿದೆ, ಆಂಗ್ಲರು ನಮ್ಮನ್ನು ಕಡೆಗಣಿಸಿ ನಮ್ಮೆದುರಿಗೆ ಮೆರೆಯುವಂತಾಗಿದೆ, ಎಂಬ ಭಾವನೆ ಅವರನ್ನೂ ಕಾಡುತ್ತಿತ್ತು. ಆದರೆ ಅವರ ಅಸಹನೆ "ನಾವು ಯಾರಿಗೇನು ಕಡಿಮೆ!" ಎಂದು ಉಚ್ಚಸ್ವರದಲ್ಲಿ ಕೂಗಾಡಿ ಅಷ್ಟರಲ್ಲೇ ತೃಪ್ತಿಪಡಲಿಲ್ಲ. ಭಾರತ ತನ್ನ ಆತ್ಮಗೌರವಕ್ಕೆ ಭದ್ರವಾದ ತಳಹದಿಯನ್ನು ಹುಡುಕಬೇಕಾಗಿತ್ತು. ಅದು ಸಿಕ್ಕಿದರೆ ಪ್ರಾಚೀನ ಭಾರತದ ಸಾಧನೆಗಳಲ್ಲಿ ಸಿಕ್ಕಬೇಕು. ಆದ್ದರಿಂದ ಈ ವಿದ್ವಾಂಸರು ನಮ್ಮ ಪ್ರಾಚೀನ ಸಂಸ್ಕೃತಿಯ ಮತ್ತು ಸಾಹಿತ್ಯದ ಅಧ್ಯಯನಕ್ಕೆ ತೊಡಗಿದರು. ಅವರು ದೇಶಾಭಿಮಾನದಲ್ಲಿ ಯಾರಿಗೂ ಕಡಿಮೆಯಲ್ಲ; ಆದರೆ 'ಇದು ನಮ್ಮದು' ಎಂಬ ವ್ಯಾಮೋಹವನ್ನು ಒತ್ತಟ್ಟಿಗಿಟ್ಟು ನಿಷ್ಪಕ್ಷಪಾತ ದೃಷ್ಟಿಯಿಂದ ಸತ್ಯವನ್ನು ಹುಡುಕ ಹೊರಟರು. "ನಮ್ಮಲ್ಲಿ ಕುಂದು ಕೊರತೆಗಳಿದ್ದರೆ, ಅಪಕೀರ್ತಿ ತರುವಂಥಾದ್ದು ಏನಾದರೂ ಇದ್ದರೆ, ಅದನ್ನು ಧೈರ್ಯದಿಂದ ದಿಟ್ಟಿಸಿ ನೋಡೋಣ, ತಪ್ಪನ್ನು ತಿದ್ದಿಕೊಂಡು ಮುಂದಿನ ಅಭ್ಯುದಯಕ್ಕೆ ತಳಹದಿ ಹಾಕೋಣ"—ಇದು ಈ ಹೊಸ ವಿದ್ವಾಂಸರ ಧ್ಯೇಯ. ಇತರ ಸಂಸ್ಕೃತಿಗಳ ಪರಿಚಯ, ಇತಿಹಾಸದ ಪರಿಜ್ಞಾನ, ಹೊಸದಾಗಿ ಪಡೆದುಕೊಂಡ (ಅಥವಾ ಸುಪ್ತವಾಗಿದ್ದು ಮತ್ತೆ ಜಾಗ್ರತಸ್ಥಿತಿಗೆ ಬಂದ) ವಿಮರ್ಶನ ಶಕ್ತಿ—ಇವೆಲ್ಲದರಿಂದ ಸಂಸ್ಕಾರ ಪಡೆದು ವಿಶಾಲವಾದದ್ದು, ಅವರ ದೃಷ್ಟಿ. ಅವರು ಹಳೆಯದನ್ನು ಕಡೆಗಣಿಸುವವರೂ ಅಲ್ಲ, ಕಣ್ಣು ಮುಚ್ಚಿಕೊಂಡು ಅದಕ್ಕೆ ಸಾಷ್ಟಾಂಗ ಹಾಕುವವರೂ ಅಲ್ಲ; ಹೊಸದನ್ನು ಸ್ವಾಗತಿಸಲು ಹೆದರುವವರಲ್ಲ, ಅದಕ್ಕೆ ದಾಸರಾಗುವವರೂ ಅಲ್ಲ.

ಶ್ರೀಕಂಠಯ್ಯನವರು ಈ ಗುಂಪಿಗೆ ಸೇರಿದವರು. ಅವರ ಆಸಕ್ತಿಯಿದ್ದದ್ದು ಭವಿಷ್ಯದಲ್ಲಿ, ಹೊಸ ಜೀವನವನ್ನು ರೂಪಿಸುವುದರಲ್ಲಿ. ಆದರೆ ಮುಂದಿನದು ಹಿಂದಿನವರ ಆಧಾರದ ಮೇಲೆ ಬೆಳೆಯಬೇಕಷ್ಟೆ. ಹಿಂದಿನಿಂದ ಬಂದದ್ದನ್ನು ಅಧ್ಯಯನಮಾಡಿ, ವಿಮರ್ಶಿಸಿ, ಅದಕ್ಕೆ ಕಟ್ಟಬೇಕಾದ ಬೆಲೆಯನ್ನು ಕಟ್ಟದಿದ್ದರೆ, ಅದರಿಂದ ಕಲಿಯಬೇಕಾದ ಪಾಠವನ್ನು ಕಲಿಯದಿದ್ದರೆ, ಭವಿಷ್ಯವನ್ನು ಸಮರ್ಪಕವಾಗಿ ರೂಪಿಸಲಾಗುವುದಿಲ್ಲ. ಆದ್ದರಿಂದ ಶ್ರೀಕಂಠಯ್ಯನವರು ಸಂಸ್ಕೃತಕ್ಕೂ ಸ್ವಲ್ಪ ಗಮನ ಕೊಟ್ಟರು, ಆದರೆ ಅಗ್ರಸ್ಥಾನ ಕೊಟ್ಟದ್ದು ಕನ್ನಡಕ್ಕೆ. ಅವರು ಒಂದೊಂದು ವೇಳೆ ಸಂಸ್ಕೃತದ ವಿಷಯದಲ್ಲಿ ಗೌರವವಿಲ್ಲದವರಂತೆ ಮಾತನಾಡುತ್ತಿದ್ದರೆಂದು ಒಪ್ಪಬೇಕು. ಆದರೆ ಈ ಶತಮಾನದ ಮೊದಲ ಎರಡು ದಶಕಗಳಲ್ಲಿ ಪಂಡಿತರಾದವರು ಬಹುಮಂದಿ ಕನ್ನಡಕ್ಕೆ ಗೌರವ ಕೊಡುವುದು ಹಾಗಿರಲಿ, ಅದನ್ನು ಲೆಕ್ಕಕ್ಕೇ ತೆಗೆದುಕೊಳ್ಳುತ್ತಿರಲಿಲ್ಲ. ಕನ್ನಡ ಕಲಿಸುವುದಕ್ಕೆ ಸಂಸ್ಕೃತ ಪಂಡಿತರನ್ನು ನೇಮಿಸುವುದು ಸಾಮಾನ್ಯವಾಗಿತ್ತು. ಕನ್ನಡ ಪಾಮರರ ಭಾಷೆ ಎಂಬ ಭಾವನೆ ಅನೇಕರಿಗೆ ಇತ್ತೆಂದು ತೋರುತ್ತದೆ. ಕನ್ನಡ ಲಿಪಿಯನ್ನು ಬಲ್ಲ ಕೆಲವರೂ ಕೂಡ ಬಂಧು

ಗಳಿಗೆ ಕಾಗದ ಬರೆಯುವಾಗ ಕನ್ನಡ ಭಾಷೆಯಲ್ಲೇ ಬರೆದರೂ ದೇವನಾಗರಿ ಲಿಪಿಯನ್ನು ಬಳಸುತ್ತಿದ್ದುದುಂಟು. ಮನೆಯಲ್ಲಿ ಬಹಳ ಪವಿತ್ರವಾದ, ಮತಧರ್ಮಗಳಿಗೆ ಸಂಬಂಧಪಟ್ಟ, ಕೆಲಸಗಳು ನಡೆಯುತ್ತಿರುವಾಗ ಯಜಮಾನರಾದವರು ಕನ್ನಡಕ್ಕೆ ಬದಲಾಗಿ ಸಂಸ್ಕೃತದಲ್ಲೇ ಮಾತನಾಡಬೇಕು ಎಂಬ ವಿಚಿತ್ರ ಅಭಿಪ್ರಾಯವೂ ಕೂಡ ಕೆಲವರಲ್ಲಿ—ಸಾಮಾನ್ಯವಾಗಿ ಅಲ್ಲ—ಇತ್ತು. ನನ್ನ ಪರಿಚಿತರೊಬ್ಬರು ಶ್ರಾದ್ಧದ ಊಟಕ್ಕೆ ಕುಳಿತಾಗ ಕನ್ನಡವನ್ನು ಬಳಸುತ್ತಿರಲಿಲ್ಲವಂತೆ. 'ಬಲವಂತ ಮಾಡಿ ಬಡಿಸಬೇಡಿ' ಎನ್ನುವುದಕ್ಕೆ ಬದಲಾಗಿ 'ಬಲವಂತಂ ಮಾಕುರು, ಎನ್ನುತ್ತಿದ್ದರಂತೆ! ಇದರಿಂದ ಅವರ ಸಂಸ್ಕೃತ ಜ್ಞಾನ ಯಾವ ಮಟ್ಟದ್ದು ಎಂಬುದನ್ನೂ ನಾವು ಊಹಿಸಬಹುದು! ಶ್ರೀಕಂಠಯ್ಯನವರು ಕೆಲವು ವೇಳೆ ಸಂಸ್ಕೃತದ ವಿಷಯದಲ್ಲಿ ಲಘುವಾಗಿ ಮಾತನಾಡಿದ್ದು ಮೇಲೆ ಹೇಳಿದ ಭಾವನೆಗೆ ಪ್ರತಿಕ್ರಿಯೆ. ಅವರ ಸಂಸ್ಕೃತಪ್ರೇಮ ಕಡಿಮೆ ಎನ್ನುವುದಕ್ಕೆ ಬದಲು ಕನ್ನಡ ಪ್ರೇಮ ಹೆಚ್ಚು ಎಂದುಕೊಳ್ಳೋಣ.

೧೯೧೧ರಲ್ಲಿ ಅವರು "ಕನ್ನಡ ಮಾತು ತಲೆಯೆತ್ತುವ ಬಗೆ" ಎಂಬ ವಿಷಯವಾಗಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಭಾಷಣ ಮಾಡಿದರಷ್ಟೆ. ಅದರಲ್ಲಿ ಅವರು ಈ ಭಾಷೆಗಳ ಸಮಸ್ಯೆಯನ್ನು ಆಶ್ಚರ್ಯವೆನಿಸುವಷ್ಟು ನಿಷ್ಪಕ್ಷಪಾತ ದೃಷ್ಟಿಯಿಂದ ಪರಿಶೀಲಿಸಿದ್ದಾರೆ. ತಮ್ಮ ಭಾಷಣಕ್ಕೆ ಅವರು ಕೊಟ್ಟ ಶೀರ್ಷಿಕೆ ಅರ್ಥಪೂರ್ಣವಾದದ್ದು—ಕನ್ನಡ ತಲೆಯೆತ್ತುವುದು ಆಗ ಕಷ್ಟದ ಕೆಲಸವೇ! ತನ್ನ ಸ್ವಂತ ರಾಜ್ಯದಲ್ಲೇ ಅದಕ್ಕೆ ದೊರೆತಿದ್ದದ್ದು ಬಡಬಂಧುವಿನ ಸ್ಥಾನ. ಒಂದು ಕಡೆ ಸಂಸ್ಕೃತ, ಮತ್ತೊಂದು ಕಡೆ ಇಂಗ್ಲಿಷು—ಇವೆರಡರ ಅಬ್ಬರ ಆಡಂಬರಗಳಲ್ಲಿ ಕನ್ನಡದ ಸೊಲ್ಲು ಹೇಗೆ ಕಿವಿಗೆ ಬಿದ್ದೀತು! ಸಂಸ್ಕೃತ ದೇವಭಾಷೆ, ನಮ್ಮ ಮತಗ್ರಂಥಗಳೆಲ್ಲ ಇರುವುದು ಅದರಲ್ಲಿ, ನಮ್ಮ ಪುರಾತನ ಸಂಸ್ಕೃತಿಯೇನಿದ್ದರೂ ನಮಗೆ ಕರಗತವಾಗಬೇಕಾದರೆ ಅದರ ಮೂಲಕ. ಸಂಪ್ರದಾಯಸ್ಥರನೇಕರ ದೃಷ್ಟಿಯಲ್ಲಿ, ಅದನ್ನು ತಿಳಿದರೆ ಎಲ್ಲವನ್ನೂ ತಿಳಿದಂತೆ.

ಇತ್ತ ಇಂಗ್ಲಿಷ್ ಇಡೀ ಭಾರತಕ್ಕೆ ರಾಜಭಾಷೆ, ನಮ್ಮನ್ನು ಆಳುತ್ತಿದ್ದವರ ಭಾಷೆ. ಸ್ಕೂಲು ಕಾಲೇಜುಗಳಲ್ಲಿ ಅದೇ ಶಿಕ್ಷಣ ಮಾಧ್ಯಮ. ಇಂಗ್ಲಿಷ್ ಬಲ್ಲವನು ಎಂದುಕೊಳ್ಳುವುದು ಹೆಮ್ಮೆಯ ವಿಷಯ. ತೀರ ಕೆಳಗಿನ ಮಟ್ಟದಲ್ಲಿ ಹೊರತು ಉಳಿದೆಲ್ಲ ಮಟ್ಟಗಳಲ್ಲೂ ಸರ್ಕಾರಿ ಕೆಲಸಕ್ಕೆ ಸೇರಬೇಕೆನ್ನುವವನಿಗೆ ಇಂಗ್ಲಿಷ್ ಭಾಷೆಯ ಪರಿಚಯ ಅವಶ್ಯಕವಾಗಿತ್ತು. ತಕ್ಕಮಟ್ಟಿಗೆ ಓದಿದವರೆಲ್ಲ ಪರಸ್ಪರ ಮಾತಾಡುವಾಗ ಇಂಗ್ಲಿಷನ್ನೋ ಅಥವಾ ಕನ್ನಡ-ಇಂಗ್ಲಿಷ್‌ಗಳ ವಿಚಿತ್ರ ಬೆರಕೆಯನ್ನೋ ಬಳಸುವುದು ಸಾಮಾನ್ಯವಾಗಿತ್ತು. ಈ ಅಭ್ಯಾಸವನ್ನು ಕೈಲಾಸಂ ಲೇವಡಿ ಮಾಡತೊಡಗಿ ಅರ್ಧ ಶತಮಾನ ಕಳೆದಿದೆಯಾದರೂ ಅದು ಇನ್ನೂ ಉಳಿದಿದೆ. ಕನ್ನಡನಾಡಿನಲ್ಲಿ ಕನ್ನಡವನ್ನು ಮೂಲೆಗೊತ್ತಿ ಇಂಗ್ಲಿಷ್ ಇಂಥ

ಪ್ರಾಮುಖ್ಯವನ್ನು ಗಳಿಸಿದ್ದು ತೀರ ವಿಚಿತ್ರ, ಅಸ್ವಾಭಾವಿಕ, ಎಂಬುದು ಬಹು ಜನರಿಗೆ ಮಂದಟ್ಟಾಗಿರಲಿಲ್ಲ. ಶ್ರೀಕಂಠಯ್ಯನವರು ಕನ್ನಡ ಚಳುವಳಿಯ ನೇತಾರರು, ನವಯುಗದ ಪ್ರವರ್ತಕರು, ಎಂದು ಹೆಸರು ಗಳಿಸಿ ಸ್ವಲ್ಪ ಕಾಲವಾದ ಮೇಲೆ ಮಹಾರಾಜಾ ಕಾಲೇಜಿನ ಪ್ರಾಧ್ಯಾಪಕರೊಬ್ಬರು (ಅವರು ಕನ್ನಡಿಗರಲ್ಲ) ನನ್ನನ್ನು ಕೇಳಿದರು. "What is all this fuss your Srikantayya is making about Kannada? Anything in it?" "ಇದೇನು ನಿಮ್ಮ ಶ್ರೀಕಂಠಯ್ಯಯ್ಯನವರು ಕನ್ನಡ ಕನ್ನಡ ಅಂತ ಗಲಭೆ (fuss)ಮಾಡುತ್ತಿರುವುದು? ಅದರಲ್ಲೇನಾದರೂ ವಿಶೇಷವುಂಟೊ?" ಎಂದು. ಅವರಿಗೆ ಅದು ನಿಜವಾಗಿಯೂ ಅರ್ಥವಾಗದ ಸಮಸ್ಯೆ. ಈ ಕನ್ನಡವನ್ನು ಕಟ್ಟಿಕೊಂಡದ್ದರಿಂದ ಯಾರಿಗೆ ತಾನೆ ಏನು ಪ್ರಯೋಜನ!

ಇದು ಶ್ರೀಕಂಠಯ್ಯನವರು ಕನ್ನಡ ಬಾವುಟವನ್ನು ಹಿಡಿದು ಹೊರಟಾಗ ಇದ್ದ ಪರಿಸ್ಥಿತಿ. ಕೆಲವು ದೇಶಗಳಲ್ಲಿ ವರ್ಷಕ್ಕೊಂದು ಸಲವಾದರೂ State of the Nation (ದೇಶ ಈಗ ಇರುವ ಸ್ಥಿತಿ) ಎಂಬ ವರದಿಯನ್ನು ಒಪ್ಪಿಸುವ ಪದ್ಧತಿಯಿದೆ. ಶ್ರೀಕಂಠಯ್ಯನವರೇನಾದರೂ ಕನ್ನಡದ ಸ್ಥಿತಿಯ ವರದಿಯನ್ನು ಒಪ್ಪಿಸಿದ್ದರೆ ಅದು ಬಹುಶಃ ಹೀಗಿರುತ್ತಿತ್ತು. "ಕನ್ನಡದ ಉದ್ಧಾರದ ಮಾತು ಬಂದರೆ ನಮ್ಮಲ್ಲಿ ಬಹಳ ಜನ ಹೀಗೆ ವಾದಿಸುತ್ತಾರೆ: 'ಕನ್ನಡ ನಮ್ಮ ಮಾತೃಭಾಷೆ, ನಿಜ. ಆದರೆ ಆ ವಿಷಯದಲ್ಲಿ ಸಲ್ಲದ ಭಾವೋದ್ರೇಕಕ್ಕೆ ಎಡೆಗೊಡಬಾರದು. ನಮ್ಮ ತಾಯಿಯರು ನಮಗೆ ಎಷ್ಟು ಕಲಿಸಿದರೋ ಅಷ್ಟು ಕನ್ನಡ ಸಾಕು. ನಮ್ಮ ಮನಸ್ಸಿನ ಬೆಳವಣಿಗೆಗೆ, ಆತ್ಮೋದ್ಧಾರಕ್ಕೆ, ಬೇಕಾದ್ದನ್ನೆಲ್ಲ ಇಂಗ್ಲಿಷೂ ಸಂಸ್ಕೃತವೂ ಒದಗಿಸಬಲ್ಲವು; ಕನ್ನಡ ಒದಗಿಸಲಾರದು. ಮೊದಲಿಂದಲೂ ಕನ್ನಡ ಸಂಸ್ಕೃತದ ಅವಲಂಬನೆಯಿಂದಲೇ ಬದುಕುತ್ತ ಬಂದಿದೆ. ಇದು ನಮಗೆಲ್ಲ ತಿಳಿದ ವಿಷಯವೇ ತಾನೆ! ಇವೊತ್ತು ನಮ್ಮ ಜೀವನಕ್ಕೆ ಬೇಕಾದದ್ದನ್ನೆಲ್ಲ ಸಂಸ್ಕೃತವೂ ಕೂಡ ಒದಗಿಸಲಾರದು. ನಮ್ಮ ಬೆಳವಣಿಗೆಗೆ ಪಾಶ್ಚಾತ್ಯ ಸಂಸ್ಕೃತಿ ಅತ್ಯವಶ್ಯಕ; ಇಂಗ್ಲಿಷ್ ಇಲ್ಲದಿದ್ದರೆ ಅದು ನಮಗೆ ಸಿಕ್ಕಲಾರದು. ನೀವೇ ಯೋಚನೆ ಮಾಡಿ ನೋಡಿ: ಇಂದಿನ ಬದುಕು ಹಿಂದಿನವರಂತೆ ಸರಳವಲ್ಲ. ಅದಕ್ಕೆ ನೂರೆಂಟು ಮುಖ. ಕನ್ನಡ–ಸಂಸ್ಕೃತಗಳು ಶತಮಾನಗಳ ಹಿಂದೆ ಇದ್ದಂತೆಯೇ ಈಗಲೂ ಇವೆ; ಹೀನಸ್ಥಿತಿಗೆ ಇಳಿದಿವೆಯೆಂದರೂ ತಡೆಯುತ್ತದೆ. ಅವುಗಳಿಂದ ಇಂದಿನ ಜೀವನಕ್ಕೆ ಏನು ಪುಷ್ಟಿ ದೊರೆತೀತು? ದಿನಪತ್ರಿಕೆ ಮಾಸಪತ್ರಿಕೆಗಳು; ಸಮಾಜಶಾಸ್ತ್ರ ಭೌತಶಾಸ್ತ್ರ ತತ್ವಶಾಸ್ತ್ರ ಇತ್ಯಾದಿಗಳು

---

* ಈ ಸಾರಾಂಶಕ್ಕೆ ಶ್ರೀಕಂಠಯ್ಯನವರ 'ಕನ್ನಡ ಮಾತು ತಲೆಯೆತ್ತುವ ಬಗೆ' ಎಂಬ ಭಾಷಣವೂ ಮತ್ತು ಆಗಿಂದಾಗ ಅವರು ಇತರ ಕಡೆಗಳಲ್ಲಿ ಆಡಿದ ಮಾತುಗಳೂ ಆಧಾರ. ಅಲ್ಲಲ್ಲೇ ಶ್ರೀಕಂಠಯ್ಯನವರ ಮಾತನ್ನೇ ಉಪಯೋಗಿಸಿದ್ದೇನೆ.

ಲಘುಮನಸ್ಸಿನಿಂದ ಚಿಮ್ಮುವ ಹಾಸ್ಯ, ರುದ್ರ ನಾಟಕಗಳ ಅದ್ಭುತವಾದ ಭಾವ ಸಂಪತ್ತು; ಹತ್ತಾರು ಸಾಹಿತ್ಯ ರೂಪಗಳು; ಕಾದಂಬರಿ, ಲಲಿತಪ್ರಬಂಧ, ವಿಡಂಬನ ಸಾಹಿತ್ಯ, ಸಣ್ಣಕಥೆ, ಗೀತೆ, ವೈನೋದಿಕ, ಗಂಭೀರನಾಟಕ, ರುದ್ರನಾಟಕ, ವಿಚಾರ ಸಾಹಿತ್ಯ—ಈ ಅತುಲೈಶ್ವರ್ಯ ಕನ್ನಡದಲ್ಲಿ ಸಿಕ್ಕುತ್ತದೆಯೆ? ನಮ್ಮ ಸಾಹಿತ್ಯ ಇಷ್ಟೊಂದು ಕ್ಷೇತ್ರಗಳಲ್ಲಿ ವ್ಯವಸಾಯ ಮಾಡಲಿಲ್ಲ. ನಮ್ಮ ಇಂದಿನ ಸಮಸ್ಯೆಯನ್ನು ವಾಸ್ತವಿಕ ದೃಷ್ಟಿಯಿಂದ ಪರಿಶೀಲಿಸೋಣ: ಇಂಗ್ಲಿಷ್ ೧೫೦ ವರ್ಷಗಳ ಹಿಂದಿನಿಂದ ನಮ್ಮ ಜೀವನದೊಡನೆ ಬೆಳೆದು ಬಂದಿದೆ. ಅದನ್ನೇ ನಮ್ಮದಾಗಿ ಮಾಡಿಕೊಳ್ಳೋಣ. ನಮಗೂ ಭಾರತಕ್ಕೂ, ನಮಗೂ ವಿಶಾಲ ಪ್ರಪಂಚಕ್ಕೂ ಸಂಬಂಧ ಕಲ್ಪಿಸುವ ಭಾಷೆಯೊಂದು ಬೇಕಷ್ಟೆ. ಇಂಗ್ಲಿಷ್ ಆ ಅವಶ್ಯಕತೆಯನ್ನೂ ಪೂರೈಸುತ್ತದೆ.''

"ಇವರೆಲ್ಲಾ ದೇಶಾಭಿಮಾನ-ಭಾಷಾಭಿಮಾನಗಳಿಲ್ಲದ ಜನ'' ಎಂದು ಶ್ರೀಕಂಠಯ್ಯನವರು ಅವರ ವಾದವನ್ನು ಕಡೆಗಣಿಸಲಿಲ್ಲ. ''ಅವರು ಹೇಳುವುದು ಬಹುಮಟ್ಟಿಗೆ ನಿಜ'' ಎಂದು ಒಪ್ಪಿಕೊಂಡು, ''ಇಂಗ್ಲಿಷ್ ಏನು ಕೊಡಬಲ್ಲದು ಎಂಬುದನ್ನು ನೋಡಿದೆವು; ಕನ್ನಡ ಏನು ಕೊಡಬಲ್ಲದು, ನೋಡೋಣ'' ಎಂದು ಪರೀಕ್ಷಿಸಹೊರಟರು. ಪರೀಕ್ಷೆ ನಿರ್ದಾಕ್ಷಿಣ್ಯವಾಗಿ ನಡೆಯಿತು. ಒಂದೊಂದು ವೇಳೆ ಕನ್ನಡದ ವಿಷಯದಲ್ಲಿ ಅವರ ವಿರೋಧಿಗಳಿಗಿಂತ ಇವರೇ ಹೆಚ್ಚು ನಿರ್ದಯರಾಗಿಲ್ಲವೆ ಎಂಬ ಸಂದೇಹ ಬರುವಂತಿತ್ತು, ಅವರ ದೃಷ್ಟಿ. ಅವರಿಗೆ ಸ್ವಲ್ಪ ವಯಸ್ಸಾದ ಮೇಲೆ, ಕನ್ನಡಕ್ಕಾಗಿ ಮಾಡಿದ ವ್ಯವಸಾಯ ಫಲ ಕೊಡಲಾರಂಭಿಸಿದ ಮೇಲೆ, ಕೆಲವು ವೇಳೆ ಅವರು ಕನ್ನಡ ಸಾಹಿತ್ಯಕ್ಕೆ ಸಲ್ಲಬೇಕಾದ್ದಕ್ಕಿಂತ ಹೆಚ್ಚು ಹೊಗಳಿಕೆಯನ್ನು ಕೊಟ್ಟಿದ್ದುಂಟು. ಆದರೆ ಆಗಿನ ಪರಿಸ್ಥಿತಿ ಬೇರೆ, ಆಗ ಬೇಕಾಗಿದ್ದ ಔಷಧಿಯೂ ಬೇರೆ. ಜಡರಾಗಿ ಬಿದ್ದಿರುವವರನ್ನು ಎಚ್ಚರಿಸಲು ಚಾವಟಿ ಬೇಕು! ಉತ್ಸಾಹದಿಂದ ಕೆಲಸ ಮಾಡಲಾರಂಭಿಸಿದವರಿಗೆ ಉತ್ತೇಜಕವಾದ ಪ್ರಶಂಸೆ ಬೇಕು. ಕನ್ನಡದ ವಿಷಯದಲ್ಲಿ ಅವರು ಹೇಳಿದ್ದು ಇದು: ರಾಮಾಯಣ ಮಹಾಭಾರತಗಳಂಥ ಮಹಾ ಕಾವ್ಯಗಳ ಕಾಲ ಎಂದೋ ಕಳೆದುಹೋಯಿತು. ಇನ್ನೂ ಅವುಗಳಿಂದ ಸಾಹಿತ್ಯ ಸಾಮಗ್ರಿಯನ್ನು ತಂದುಕೊಳ್ಳುವುದು ಮಾತ್ರ ನಡೆಯುತ್ತಲೇ ಇದೆ. ''ಪಂಪ-ನಾರಣಪ್ಪರು ಮಹಾಭಾರತದ ಕಥೆಯನ್ನೇ ಬಳಸಿಕೊಂಡರೂ ಅವರ ದೃಷ್ಟಿ ಬೇರೆ, ಅವರದ್ದು ಸ್ವತಂತ್ರ ಪ್ರತಿಭೆ'' ಎನ್ನಬಹುದು. ಆದರೂ ಮತ್ತೆ ಮತ್ತೆ ಅದೇ ವಿಷಯವನ್ನು ಕುರಿತು ಬರೆದರೆ ಆ ಚರ್ವಿತಚರ್ವಣ ಬೇಸರ ತರುತ್ತದೆ—ಪುರಾಣೇತಿಹಾಸಗಳಿಂದ ಕಾವ್ಯವಸ್ತುವನ್ನು ಎರವು ತರುವವರೆಲ್ಲರೂ ಪಂಪ-ನಾರಣಪ್ಪರಂತೆ ಪ್ರತಿಭಾಶಾಲಿಗಳಲ್ಲವಷ್ಟೆ! ಅವರಿಗೆ ತಮ್ಮದೇ ಆದ ಜೀವನ ದರ್ಶನವಿಲ್ಲ. ಪ್ರಾಸ, ಶ್ಲೇಷೆ, ಕುಕವಿನಿಂದೆ, ಸತ್ಕವಿ ಪ್ರಶಂಸೆ (ಎಂದರೆ ಆತ್ಮ ಪ್ರಶಂಸೆ!), ಅಷ್ಟಾದಶ ವರ್ಣನೆಗಳು (ಎಲ್ಲ ಕೃತಕ—ಇವೆಲ್ಲ

ಕಟ್ಟರೆಯಾಗುವಷ್ಟು ಸಿಕ್ಕುತ್ತವೆ. ''ಸಂಸಾರವನ್ನು ತೊರೆದ ಸನ್ಯಾಸಿಯ ಕಥೆ ಯಾದರೂ ಸರಿಯೆ, ಒಂದು ರಾತ್ರಿ ಬೆಳದಿಂಗಳಿನಲ್ಲಿ ಅಲೆತ, ಹಿಂದಿನ ದಿನ ನೀರಿನಲ್ಲಿ ಆಟ, ಎಂದರೆ ಎರಡು ಆಶ್ವಾಸ ಮಲಗಿಹೋಯಿತು ಆ ಕಡೆ''* ಇದೆಲ್ಲ ಸಿಕ್ಕುತ್ತದೆ; ಆದರೆ ದಿವ್ಯದರ್ಶನವೆಲ್ಲಿ? ಉಜ್ವಲವಾದ ವಾಕ್ ಶಕ್ತಿಯೆಲ್ಲಿ? ಇವು ಪಂಡಿತರಿಗಾಗಿ ಪಂಡಿತರು ಏರ್ಪಡಿಸಿದ ಪಾಂಡಿತ್ಯ ಪ್ರದರ್ಶನ; ಮಾನವನಿಗಾಗಿ ಕವಿಗಳು ಸೃಷ್ಟಿಸಿದ ಕಾವ್ಯಗಳಲ್ಲ. ಕೆಲವು ವೇಳೆಯಂತೂ ಅವರ ಬರವಣಿಗೆ ಕನ್ನಡ ಎಂದು ಸಹ ಹೇಳಲಾಗುವುದಿಲ್ಲ. "ಇದೇನು ಕನ್ನಡವೋ ನೀವೇ ನೋಡಿ–

'ವಿಲುಠತ್ ಘಂಟಾಪಟಿಷ್ಠ ಧ್ವನಿಬಧಿರಿತದಿಙ್ಮಂಡಲಂ ಕರ್ಣತಾಳಾ ನಿಲ
ಲೋಲದ್ವೀಚಿಮಾಲಾಂಬರಸರಿದುದಕಂ ಪುಷ್ಕರೋಚ್ಚಾಟನವ್ಯಾ ಕುಲಿತ
ಬ್ರಹ್ಮಾಸನಾಂಭೋರುಹಪತಿ ವಿತತಾಯೋಗ ರತ್ನಪ್ರಭಾ ಪಿಂಗಲಿತ
ಸ್ವರ್ಗಾಂತರಾಳಂ ಬಂದುದಿಂದ್ರದ್ವಿಪೇಂದ್ರಂ'

ಈ ಕನ್ನಡವನ್ನು ನೋಡಿ–

"ಮಹಾರಾಜ ದುರ್ಯೋಧನನು ನಿಮ್ಮಿಂದ ಈ ಸ್ಥಳದಲ್ಲಿ ನೋಡಲ್ಪಟ್ಟನೆ?"-
"ದುರ್ಯೋಧನನ ತೊಡೆಗಳೆಂಬ ಸ್ತಂಭಗಳನ್ನು ಮುರಿಯತಕ್ಕದ್ದರಲ್ಲಿ ನಿಶ್ಚೈಸನ
ಲ್ಪಟ್ಟ ವಿಜಯವುಳ್ಳ ಭೀಮಸೇನನು"*

ಹಳಗನ್ನಡದ, ನಡುಗನ್ನಡದ ಮತ್ತು ವರ್ತಮಾನಕಾಲದ ಸಾಹಿತ್ಯವನ್ನು ಬೆರಳಿಟ್ಟು ತೋರಿಸಿ ಹೆಮ್ಮೆಯಿಂದ 'ಇದು ಸಾಲದೆ!' ಎನ್ನುವ ಜನರಿಗೆ ಶ್ರೀಯವರ ಉತ್ತರ:† "ಸಾಲದು; ಕ್ಷಮಿಸಬೇಕು; ಸಾಲದು....ತಾರತಮ್ಯ ಜ್ಞಾನವುಳ್ಳವರು ಯಾರು ತಾನೇ ಕೀಳನ್ನು ಮೇಲೆಂದೂ ಸಾಮಾನ್ಯವಾದದ್ದನ್ನು ಉತ್ಕೃಷ್ಟವೆಂದೂ ಕಳಂಕಮಿಶ್ರವಾದದ್ದನ್ನು ಪರಿಶುದ್ಧವೆಂದೂ ಅರ್ಧಪಕ್ವವಾದ ಕಲಾಚಾತುರ್ಯವನ್ನು ಪೂರ್ಣ ಸಂಸ್ಕೃತ ಕಲೆಯ ಪರಮಪದವೆಂದೂ ಹೇಳಲಾದೀತು?" ಕನ್ನಡ ಸಾಹಿತ್ಯದ ದೋಷಗಳನ್ನು ಹೀಗೆ ಎತ್ತಿ ತೋರಿಸಿದ್ದರಿಂದ ಹೊರಪಡುವುದೇನು? ನಾವು ಕನ್ನಡವನ್ನು ಕೈಬಿಡಬೇಕೆಂದಲ್ಲ; ಅಪಕ್ವವಾದದ್ದರಿಂದಲೇ ತೃಪ್ತಿ ಪಡೆದು ಅಲಸರಾಗಿರಬಾರದು ಎಂಬ ಎಚ್ಚರಿಕೆ. "ಅಸಂತೋಷಃ ಶ್ರೀಯೋ ಮೂಲಃ"— ಕನ್ನಡದಲ್ಲಿರುವ ದೋಷಗಳು "ಇದನ್ನು ಬೇಗ ಸರಿಪಡಿಸಬೇಕು" ಎಂಬ ಆತುರವನ್ನು ನಮ್ಮಲ್ಲಿ ಕುದುರಿಸಬೇಕು. ಕೆಲವು ವೇಳೆ ಶ್ರೀಯವರು ತಾವು ಉದ್ದೇಶ

---

* ಇದು ಶ್ರೀಯವರ ಸ್ವಂತ ಮಾತು–'ಕನ್ನಡ ಮಾತು ತಲೆಯೆತ್ತುವ ಬಗೆ' (1948) ಪುಟ II

* ಶ್ರೀಕಂಠಯ್ಯನವರೇ ಕೊಟ್ಟ ಉದಾಹರಣೆಗಳು, 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ' (1948), ಪುಟ 13

† ಅದೇ: ಪುಟ 39

ಪೂರ್ವಕವಾಗಿ ಕನ್ನಡ ವಿಷಯದಲ್ಲಿ ಆಡಿದ ಮಾತಿನ ಕಹಿಯನ್ನು ಮರೆಸಲೆಂಬಂತೆ ಪಂಪನಿಂದ ಅಥವಾ ರನ್ನನಿಂದ ಸುಂದರವಾದ ಪದ್ಯಗಳನ್ನು ಉದಾಹರಿಸುತ್ತಿದ್ದರು. ಆ ಔನ್ನತ್ಯವನ್ನು ಮತ್ತೆ ಪಡೆಯಬೇಕು, ಇನ್ನೂ ಮೇಲಕ್ಕೇರಬೇಕು, ಎಂದು ಬೋಧಿಸುತ್ತಿದ್ದರು. ಧಾರವಾಡದ ಭಾಷಣದಲ್ಲಿ ಕನ್ನಡದ ಉದ್ಧಾರಕ್ಕಾಗಿ ಅವರು ತಯಾರು ಮಾಡಿದ ಯೋಜನೆಯೂ ಸೇರಿದೆ.

ಅವರು ಮೇಲೆ ಹೇಳಿದ ಭಾಷಣವನ್ನು ಮಾಡಿದ್ದು ೧೯೧೧ರಲ್ಲಿ ಅಲ್ಲಿಂದೀಚೆಗೆ ೬೭ ವರ್ಷಗಳು ಕಳೆದಿವೆ. ಇಂದು ನಾವು ಹಿಂದಿರುಗಿ ನೋಡಿದರೆ ಅವರು ಹೇಳಿದ್ದು ಅಷ್ಟು ಕ್ರಾಂತಿಕಾರಕವಾಗಿ ಕಾಣದಿರಬಹುದೇನೋ–ನನಗೇನೋ ಅವರು ಹೇಳಿದ ಎಚ್ಚರಿಕೆಯ ಮಾತು, ಬಳಸಿದ ಪರಿಭಾಷೆ, ಹಾಕಿಕೊಟ್ಟ ಯೋಜನೆ, ಇವು ಇಂದೂ ಉಪಯುಕ್ತವಾದುವೆಂದು ತೋರುತ್ತದೆ. ಆದರೆ ಇಂದು ನಮಗೆ ಸಾಮಾನ್ಯವೆಂದು ತೋರುವ ಮಾತು ಅಂದಿನವರನೇಕರಲ್ಲಿ ತೀವ್ರವಾದ ವಿರೋಧವನ್ನು ಕೆರಳಿಸಿದವು. ಕನ್ನಡದಲ್ಲಿ ಹುಳುತಿಂದುಹೋಗದೆ ಉಳಿದಿರುವ ಗ್ರಂಥಗಳನ್ನೆಲ್ಲ ಸಂಪಾದಿಸಿ ಅಚ್ಚು ಹಾಕಬೇಕು—ಇದೇನೋ ಸರಿಯೆ, ಒಪ್ಪತಕ್ಕ ಮಾತು. ಆದರೆ ಹಳೆಯ ಸಾಹಿತ್ಯವನ್ನು ಸ್ವಚ್ಛ ದೃಷ್ಟಿಯಿಂದ ವಿಮರ್ಶಿಸಬೇಕು, ಜಳ್ಳನ್ನೂ ಕಾಳನ್ನೂ ಬೇರ್ಪಡಿಸಬೇಕು ಎಂದಾಗ ವಾದವಿವಾದಗಳು ಹುಟ್ಟಿದವು. ಆಧುನಿಕರಿಗೆ ಜಳ್ಳಾಗಿ ಕಂಡದ್ದು ಸಂಪ್ರದಾಯಸ್ಥರಲ್ಲಿ ಕೆಲವರಿಗಾದರೂ ಕಾಳಾಗಿ ಕಂಡಿತು. ಕನ್ನಡ ಭಾಷೆಯ ಚರಿತ್ರೆಯನ್ನೂ ಸಾಹಿತ್ಯದ ಚರಿತ್ರೆಯನ್ನೂ ಸಿದ್ಧಪಡಿಸಬೇಕೆಂದು ಶ್ರೀಯವರ ಸಲಹೆ. ಇದು ಒಪ್ಪಿಗೆ ಪಡೆಯುವುದು ಕಷ್ಟವಾಗಲಿಲ್ಲ. ಆದರೆ ಶ್ರೀಯವರು ಅಲ್ಲಿಂದ ಮುಂದೆ ಹೋಗಿ ''ಈ ಚರಿತ್ರೆಯನ್ನು ರಚಿಸುವವರೂ ಬೋಧಿಸುವವರೂ ಇಂಗ್ಲಿಷ್ ತಿಳಿದವರಾಗಬೇಕು, ಇಂಗ್ಲಿಷಿನ ವಿಮರ್ಶನ ಪದ್ಧತಿಯ ಸಹಾಯವನ್ನು ಪಡೆಯಬೇಕು'' ಎಂದದ್ದು ಹಲಬರಿಗೆ ರುಚಿಸಲಿಲ್ಲ. ಸಂಸ್ಕೃತವನ್ನು ತಿಳಿದಿದ್ದರೆ ಸಾಕು, ಅವರು ಕನ್ನಡವನ್ನು ಬೋಧಿಸಬಹುದು, ಎಂದು ಅವರಲ್ಲಿ ಕೆಲವರಾದರೂ ಹೇಳುತ್ತಿದ್ದ ಕಾಲ. ಅದು. ಕನ್ನಡವನ್ನೂ ಕಲಿಯಬೇಡವೇ, ಎಂದು ಕೇಳಿದ್ದರೆ, "ಆಗಲಿ, ಬಿಡಿ. ಅದನ್ನೂ ಕಲಿಯಲಿ, ಆಕ್ಷೇಪಣೆಯಿಲ್ಲ" ಎನ್ನುತ್ತಿದ್ದರೇನೊ. ಆದರೆ ಕನ್ನಡವನ್ನು ಬೋಧಿಸುವುದಕ್ಕೆ ಇಂಗ್ಲಿಷನ್ನು ಕಲಿಯಬೇಕೆಂದರೆ! ಶ್ರೀಯವರು 'ಸಾಹಿತ್ಯದ ಭಾಷೆ ಜನ ಸಾಮಾನ್ಯ ಆಡುವ ಮಾತಿಗೆ ತೀರ ದೂರವಿರಬಾರದು' ಎಂದಾಗ ; ಆದಿಪ್ರಾಸವನ್ನು ಕಡೆಗಣಿಸಿದಾಗ ; ಛಂದಸ್ಸಿನ ವಿಷಯದಲ್ಲಿ ಕವಿಗೆ ಹೆಚ್ಚು ಸ್ವಾತಂತ್ರ್ಯವಿರಬೇಕೆಂದು ವಾದಿಸಿದಾಗ ; ಮಾನವನ ದಿನದಿನದ ಜೀವನ ಸಾಹಿತ್ಯಕ್ಕೆ ಒಳ್ಳೆಯ ಸಾಮಗ್ರಿಯನ್ನು ಒದಗಿಸಬಲ್ಲದು ಎಂದಾಗ—ಸಂಪ್ರದಾಯಸ್ಥರಿಗೆ ''ಇವೆಲ್ಲ ಕ್ರಾಂತಿಕಾರಕ ಬದಲಾವಣೆಗಳು, ಇವರ ಮಾತು ಕೇಳಿದರೆ ಸಾಹಿತ್ಯ ಹಾಳಾಗುತ್ತದೆ" ಎನ್ನಿಸಿತು. ಶ್ರೀಕಂಠಯ್ಯನವರು ಕೆಲವು ವೇಳೆ ಅವರನ್ನು ತಾಳ್ಮೆಗೆಡಿಸಿ ರೇಗಿಸುವಂಥ ಮಾತುಗಳನ್ನು ಬಳಸು

ತ್ತಿದ್ದರೆಂದು ಒಪ್ಪಬೇಕು. ಅತ್ತ ಸಂಪ್ರದಾಯಸ್ಥರು ತಮ್ಮ ವಾದ ಗೆಲ್ಲುವುದು ಸಾಧ್ಯವಲ್ಲ ಎಂಬ ಭಾವನೆ ಬಂದಿದ್ದರಿಂದಾಗಿ ತಾವೂ ಹದ ಮೀರಿದ ಭಾಷೆಯನ್ನು ಬಳಸಿದರು. ಒಂದು ಸಾರಿ ಜಿಲ್ಲಾ ಕೇಂದ್ರವೊಂದರಲ್ಲಿ ವಿಶ್ವವಿದ್ಯಾಲಯದ ಅಧ್ಯಾಪಕರು ಒಂದು ವಾರ ನಿಂತು ಪ್ರತಿದಿನವೂ ಉಪನ್ಯಾಸಗಳನ್ನು ನಡೆಸುವ ಏರ್ಪಾಟು ಮಾಡಿದ್ದರು. ಎರಡನೆಯ ದಿನ—ನನ್ನ ನೆನಪಿರುವ ಮಟ್ಟಿಗೆ—ಶ್ರೀಕಂಠಯ್ಯನವರ ಶಿಷ್ಯರೊಬ್ಬರು ಕನ್ನಡ ಸಾಹಿತ್ಯದ ನವೋದಯದ ವಿಷಯವನ್ನು ಕುರಿತು ಭಾಷಣ ಮಾಡಿದರು. ಅಂದಿನ ಶ್ರೋತೃಗಳಲ್ಲೊಬ್ಬರು—ಅವರು ಮೈಸೂರು ಸರ್ಕಾರದಲ್ಲಿ ದೊಡ್ಡ ಹುದ್ದೆಯಲ್ಲಿದ್ದವರು, ವಿಶ್ವವಿದ್ಯಾಲಯದ ಡಿಗ್ರಿ ಪಡೆದವರು–ಭಾಷಣ ಮುಗಿದ ಮೇಲೆ ತಮ್ಮ ಮಿತ್ರರೊಂದಿಗೆ ಹೇಳಿದರು: 'ಕಸಪೊರಕೆ ಮೇಲೆ ಕವನ ಕಟ್ಟುತಾರಂತೆ! ಪಡುವಲ ನಾಡ ಪಾದರದ ಮಕ್ಕಳಿವರ್' ಎಂದು!

ಈ ಹಳೆಯದು–ಹೊಸದರ ಜಗಳದಲ್ಲಿ ಅಂತಿಮಜಯ ಹೊಸದಕ್ಕೆ ಎಂಬುದರಲ್ಲಿ ಸಂದೇಹವೇನೂ ಇರಲಿಲ್ಲ. ಯುವಕರೆಲ್ಲ ಶ್ರೀಕಂಠಯ್ಯನವರನ್ನು ಹಿಂಬಾಲಿಸಿದರು. ಅಲ್ಲದೆ ಅವರು ಕರ್ನಾಟಕದ ಏಕೀಕರಣಕ್ಕೆ ಬೆಂಬಲ ಕೊಡುವರೆಂದು ಎಲ್ಲರಿಗೂ ತಿಳಿದಿತ್ತು—ಆ ಕಾಲದಲ್ಲಿ, ಏಕೀಕರಣದ ವಿಷಯದಲ್ಲಿ ಅಷ್ಟಾಗಿ ಭಿನ್ನಾಭಿಪ್ರಾಯವಿರಲಿಲ್ಲ. ಇದರಿಂದಾಗಿ ಶ್ರೀಕಂಠಯ್ಯನವರ ಪಕ್ಷಕ್ಕೆ ಮತ್ತಷ್ಟು ಬಲ ಬಂತು. ಅವರು ಏಕೀಕರಣಕ್ಕೆ ಬೆಂಬಲ ಕೊಟ್ಟದ್ದು ರಾಜಕೀಯ ಪಂದು (political stunt) ಎನ್ನಲಾಗದು. ಕನ್ನಡ ಭಾಷೆಯ ಮತ್ತು ಸಾಹಿತ್ಯದ ಅಭಿವೃದ್ಧಿಗೂ ಏಕೀಕರಣಕ್ಕೂ ನಿಕಟ ಸಂಬಂಧವಿತ್ತು. ರಾಜಕೀಯ ಕಾರಣಗಳಿಂದಾಗಿ ಕನ್ನಡ ನಾಡು ಚುಪ್ಪಾ ಚೂರಾಗಿ ಒಡೆದು ಒಂದೊಂದು ಭಾಗ ಒಬ್ಬೊಬ್ಬರ ಆಡಳಿತಕ್ಕೆ ಒಳಪಟ್ಟಿತ್ತು. ಮುಖ್ಯ ಭಾಗ—ಒಂಬತ್ತು ಜಿಲ್ಲೆಗಳನ್ನೊಳಗೊಂಡದ್ದು—ಮೈಸೂರು ಮಹಾರಾಜರ ಆಡಳಿತದಲ್ಲಿತ್ತು, ಉಳಿದವುಗಳಲ್ಲಿ ಕೆಲವು ನೇರವಾಗಿ ಬ್ರಿಟಿಷರ ಅಧೀನದಲ್ಲಿದ್ದವು, ಇನ್ನು ಕೆಲವು ಹೈದರಾಬಾದಿನ ನಿಜಾಮರ ಮತ್ತು ಇತರ ರಾಜರ ಕೈಕೆಳಗಿದ್ದವು. ಉತ್ತರ ಕರ್ನಾಟಕದ ಮೇಲೆ ಮರಾಠಿಯವರ ಪ್ರಭಾವ ಹೆಚ್ಚಿ, ಕೆಲವು ವೇಳೆ ಅವರ ಮಾತು ಮೈಸೂರಿನ ಕನ್ನಡಿಗರಿಗೆ ಅರ್ಥವಾಗುವುದು ಕಷ್ಟವಾಗುತ್ತಿತ್ತು. ಮೈಸೂರನ್ನು ಬಿಟ್ಟು ಉಳಿದ ಕರ್ನಾಟಕದಲ್ಲಿ ಕೆಲವು ಕಡೆ ಕನ್ನಡ ಶಾಲೆಗಳೇ ಇರಲಿಲ್ಲ. ಮೈಸೂರಿನಲ್ಲಿ ಕೂಡ ಆಗ ವಿಶ್ವವಿದ್ಯಾಲಯವಿರಲಿಲ್ಲ; ಶಿಕ್ಷಣವ್ಯವಸ್ಥೆಯು ಮದರಾಸು ವಿಶ್ವವಿದ್ಯಾಲಯದ ವ್ಯವಸ್ಥೆಗೆ ಹೊಂದಿಕೊಂಡಿತ್ತು. ಮೈಸೂರು ತನ್ನದೇ ಆದ ವಿಶ್ವವಿದ್ಯಾಲಯವನ್ನು ಪಡೆದ ಮೇಲೂ ಆ ಕನ್ನಡ ನಾಡಿನ ವಿಶ್ವವಿದ್ಯಾಲಯದಲ್ಲಿ ಕನ್ನಡಕ್ಕೆ ಪ್ರಾಧ್ಯಾಪಕ ಸ್ಥಾನವೇ ಇರಲಿಲ್ಲ; ಅದಕ್ಕಾಗಿ ಒಂದೂವರೆ ದಶಕ ಕಾಯಬೇಕಾಯಿತು. ಇಂಥ ಪರಿಸ್ಥಿತಿಯಲ್ಲಿ, "ಇಡೀ ಕರ್ನಾಟಕದಲ್ಲಿ ಕನ್ನಡ ರಾಜ್ಯಭಾಷೆಯಾಗಬೇಕು, ಶಿಕ್ಷಣ ಮಾಧ್ಯಮವಾಗಬೇಕು"

ಎಂಬ ಧ್ಯೇಯಕ್ಕಾಗಿ ಎಲ್ಲರೂ ಒಟ್ಟುಗೂಡಿ ಕೆಲಸ ಮಾಡುವುದು ಹೇಗೆ? ಕರ್ನಾಟಕದ ಎಲ್ಲ ಭಾಗಗಳಿಗೂ ನೇತಾರರಾಗುವವರು ಯಾರು?

ಕನ್ನಡದ ಉದ್ಧಾರಕ್ಕಾಗಿ ಎರಡು ಸಂಸ್ಥೆಗಳು ಏರ್ಪಟ್ಟಿದ್ದವು. ಮೊದಲನೆಯದು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ. ಶ್ರೀಕಂಠಯ್ಯನವರು ೧೯೧೧ರಲ್ಲಿ 'ಕನ್ನಡ ಮಾತು ತಲೆಯೆತ್ತುವ ಬಗೆ' ಎಂಬ ಉಪನ್ಯಾಸವನ್ನು ಕೊಟ್ಟಿದ್ದು ಅದರ ಆಶ್ರಯದಲ್ಲಿ. ಅನಂತರ ಹುಟ್ಟಿದ್ದು—ಈಗ 'ಕನ್ನಡ ಸಾಹಿತ್ಯ ಪರಿಷತ್ತು' ಎಂಬ ಹೆಸರುಳ್ಳ, ಮೊದಲು 'ಕರ್ಣಾಟಕ ಸಾಹಿತ್ಯ ಪರಿಷತ್ತು' ಎಂಬ ಹೆಸರಿದ್ದ ಸಂಸ್ಥೆ. ಭಾರತದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟವು ಪ್ರಾಂತಾಭಿಮಾನ ಭಾಷಾಭಿಮಾನಗಳಿಗೂ ಉತ್ತೇಜನ ಕೊಟ್ಟಿತು. ಇದರಿಂದ ಸಂಪೂರ್ಣವಾಗಿ ಸತ್ಪರಿಣಾಮವಾಯಿತೆಂದು ಹೇಳಲಾಗುವುದಿಲ್ಲವಾದರೂ ಕನ್ನಡ ಚಳವಳಿಗೆ ಇದರಿಂದ ಬೆಂಬಲ ದೊರಕಿತೆಂಬುದು ನಿಜ. ನಾಲ್ಕಕ್ಷರ ಬಲ್ಲವರೆಲ್ಲರೂ ವೇದಿಕೆಯ ಮೇಲೆ ಮಾತ್ರವಲ್ಲ, ಮನೆಯಲ್ಲೂ ಕೂಡ ಆಂಗ್ಲ ಭಾಷೆಯನ್ನೋ ಅಥವಾ 'ಆಂಗ್ಲನ್ನಡ'ವನ್ನೋ ಬಳಸುತ್ತಿದ್ದ ಕಾಲದಲ್ಲಿ ಯಾರಾದರೂ ಕನ್ನಡದಲ್ಲೇ ಮಾತಾಡ ಹೊರಟರೆಂದರೆ ಅವರಿಗೆ ನಮ್ಮ ಕೃತಜ್ಞತೆ ಸಲ್ಲಬೇಕು. ಮುದವೀಡು ಕೃಷ್ಣರಾಯರಂಥವರು ಜನ ಸಾಮಾನ್ಯರ ಮನಮುಟ್ಟುವಂತೆ ರಾಜಕೀಯ ಸಮಸ್ಯೆಗಳನ್ನು ತಿಳಿಸಬೇಕಾದರೆ ಕನ್ನಡದಲ್ಲಿ ಮಾತಾಡುವುದು ಅವಶ್ಯಕವೆಂದು ಮನಗಂಡರು; ಎಷ್ಟು ಪರಿಣಾಮಕಾರಿಯಾಗಿ ಮಾತಾಡಬಹುದೆಂಬುದನ್ನು ತೋರಿಸಿಕೊಟ್ಟರು. ಆದರೆ ರಾಜಕಾರಣಿಗಳಿಂದ ಸಾಧ್ಯವಲ್ಲದ ಕೆಲಸವೂ ಇತ್ತಷ್ಟೆ. ಒಟ್ಟಿನಲ್ಲಿ ರಾಜಕೀಯ, ಸಾಹಿತ್ಯ, ಸಂಸ್ಕೃತಿ–ಇವೆಲ್ಲ ಕ್ಷೇತ್ರಗಳಲ್ಲೂ ಉದ್ಬುದ್ಧವಾಗಿದ್ದ ಶಕ್ತಿಗಳನ್ನು ಒಂದು ಹದದಲ್ಲಿ ಬೆರಸಿ ಒಮ್ಮುಖವಾಗಿ ಕೆಲಸಮಾಡುವಂತೆ ಹುರಿದುಂಬಿಸಬಲ್ಲ, ಕರ್ಣಾಟಕದ ಎಲ್ಲ ಭಾಗಗಳಲ್ಲೂ ಮೆಚ್ಚಿಕೆಯನ್ನೂ ವಿಶ್ವಾಸವನ್ನೂ ಗಳಿಸಿದ್ದ, ನೇತಾರರೊಬ್ಬರು ಮುಂದೆ ಬರಲು ಕಾಲ ಪಕ್ವವಾಗಿತ್ತು. ಶ್ರೀಕಂಠಯ್ಯನವರಲ್ಲಿ ನಮಗೆ ಅಂಥ ನಾಯಕರು ದೊರೆತರು.

ಅವರು ಹಲವಾರು ರಂಗಗಳಲ್ಲಿ ಹೋರಾಡಬೇಕಾಯಿತು. ಒಂದು ಕಡೆ ಸಂಸ್ಕೃತದ ಪರವಾಗಿ ನಿಂತವರು; ಮತ್ತೊಂದು ಕಡೆ ಸಂಪ್ರದಾಯಸ್ಥ ವೀರ ಕನ್ನಡಿಗರು; ಇನ್ನೊಂದು ಕಡೆ ಆಂಗ್ಲಭಾಷಾ ಪ್ರೇಮಿಗಳು; ಕೊನೆಯದಾಗಿ ಸ್ವಲ್ಪಮಟ್ಟಿಗೆ ರಾಜಕಾರಣಿಗಳು ಕೂಡ—ಶ್ರೀಕಂಠಯ್ಯನವರು ರಾಜಕಾರಣಿಗಳಲ್ಲವಾದರೂ ಕರ್ಣಾಟಕದ ರಾಜಕೀಯಕ್ಕೂ ಅವರಿಗೂ ಸಂಬಂಧವಿಲ್ಲವೆನ್ನುವಂತಿಲ್ಲ. ಆಗಿನದು ಮೊದಲೇ ಬಹಳ ವಿಚಿತ್ರವಾದ ಮತ್ತು ಜಟಿಲವಾದ ಪರಿಸ್ಥಿತಿ; ಅದನ್ನು ಮತ್ತಷ್ಟು ಜಟಿಲ ಮಾಡಿದ ಅಂಶವೆಂದರೆ—ಶ್ರೀಕಂಠಯ್ಯನವರು ಏಕಕಾಲದಲ್ಲಿ ಪಕ್ಷ ಪ್ರತಿಪಕ್ಷಗಳೆರಡರಲ್ಲೂ ಇದ್ದರೆಂಬುದು! ಇದನ್ನು ನೆನಪಿನಲ್ಲಿಡಬೇಕು, ಅವರ ನಿಲುವಿನಲ್ಲಿ ಆಗಾಗ ಕಂಡುಬರುತ್ತಿದ್ದ ವಿರೋಧಾಭಾಸಗಳನ್ನು ಅರ್ಥಮಾಡಿಕೊಳ್ಳ

ಬೇಕಾದರೆ ಅವರಿಗೆ ಸಂಸ್ಕೃತ ಬೇಕು, ಆದರೆ ಕನ್ನಡವನ್ನು ಮೂಲೆಗೆ ತಳ್ಳುವಷ್ಟು ಸಂಸ್ಕೃತ ಬೇಡ; ಹಳೆಯ ಕನ್ನಡ ಸಾಹಿತ್ಯದಲ್ಲಿ ಉತ್ತಮವಾದದ್ದನ್ನೆಲ್ಲ ಅವರೂ ಮೆಚ್ಚಿಕೊಂಡಿದ್ದರು, ಆದರೂ ಸಂಪ್ರದಾಯಸ್ಥರನ್ನು ಅನಿವಾರ್ಯವಾಗಿ ಎದುರಿಸ ಬೇಕಾಯಿತು. ಅವರ ಇಂಗ್ಲಿಷ್ ಪ್ರೇಮವಂತೂ ಎಲ್ಲರಿಗೂ ತಿಳಿದ ವಿಷಯ. ಆದರೂ ಅವರು ಒಂದು ಕಡೆ ಇಂಗ್ಲಿಷ್ ಇರುವಾಗ ಕನ್ನಡವೇಕೆ ಎನ್ನುವವರ ಮೇಲೂ ಇನ್ನೊಂದು ಕಡೆ "ಇವರು ಕನ್ನಡಕ್ಕೆ ಇಂಗ್ಲಿಷ್ ಸಂಪ್ರದಾಯಗಳನ್ನು ತಂದು ಹಾಕಿ ವರ್ಣಸಂಕರ ಮಾಡುತ್ತಿದ್ದಾರೆ" ಎನ್ನುವವರ ಮೇಲೂ ಕತ್ತಿ ಕಟ್ಟಿ ನಿಲ್ಲಬೇಕಾಯಿತು. ಅವರ ನಿಜವಾದ ನಿಲುವನ್ನು ಅವರ ಮಾತಿನ ತೀವ್ರತೆ ಅನೇಕ ವೇಳೆ ಮರಸುತ್ತಿತ್ತು. ಅವರಿಗೆ ನಿಜವಾಗಿಯೂ ಪ್ರಿಯವಾಗಿದ್ದ ಮಧ್ಯ ಮಾರ್ಗ ವನ್ನು ಈಗ ಉದಾಹರಿಸಲಿರುವ ವಾಕ್ಯಗಳು ಸೂಚಿಸುತ್ತವೆ. "ಸಂಸ್ಕೃತದಲ್ಲಿ ಶಕ್ತಿ ಯನ್ನು ತೋರಿಸಬೇಕಾದರೆ ಸಂಸ್ಕೃತದವರ ಮೇಲೆ ತೋರಿಸಬಹುದಲ್ಲ! ಬಡಪಾಯಿ ಗಳಾದ ನಮ್ಮ ಮೇಲೆ ತೋರಿಸಿದರೆ ಹೇಗೆ? ಶುದ್ಧ ಕನ್ನಡದಲ್ಲಿ ಸಂಸ್ಕೃತವನ್ನು ಬೆರೆಸಬಹುದೆ?" ಎಂಬ ಅರ್ಥ ಬರುವ ಕವಿ ಕಾವ್ಯವೊಂದನ್ನು ಉದಾಹರಿಸಿ ಅನಂ ತರ ತಮ್ಮ ಅಭಿಪ್ರಾಯವನ್ನು ಹೀಗೆ ಮಂಡಿಸಿದ್ದಾರೆ: "ಆಂಡಯ್ಯನೆಂಬುವನು 'ಕಬ್ಬಿಗರ ಕಾವ' ಎಂಬ ಸಂಪೂರ್ಣವಾದ ಒಂದು ಗ್ರಂಥವನ್ನೇ ಸಂಸ್ಕೃತ ಸಂಪರ್ಕ ವಿಲ್ಲದೆ ಬರೆಯಲು ಹೊರಟಿದ್ದಾನೆ. ಯಾವ ಭಾಷೆಯ ವಿಷಯದಲ್ಲಿಯೇ ಆಗಲಿ ಇಷ್ಟೇಸು ಪ್ರತಿಜ್ಞೆ ತೊಟ್ಟು ಹೊರಡಬೇಕಾದುದಿಲ್ಲವೆಂದು ಕಾಣುತ್ತದೆ. ಇತರ ಭಾಷೆಗಳ ಸಂಪರ್ಕವೇ ಇಲ್ಲದೆ ಬರೆಯುತ್ತೇನೆ ಎನ್ನುವ ವೀರ ಪಂಥವೂ ಬೇಡ, ಅವನ್ನೇ ಅತಿಯಾಗಿ ಬೆರೆಸಿ ಕನ್ನಡ ಭಾಷೆಯನ್ನು ಕೊಚ್ಚಿಸುವ ಪರಭಾಷಾ ವ್ಯಾಮೋಹವೂ ಬೇಡ. ಯಾವುದಕ್ಕೂ ಒಂದು ಹದ್ದು ಇದೆ; ಆ ಹದ್ದು ಮೀರಿ ದರೆ ಅದು ಶಕ್ತಿಯುಳ್ಳ, ಪುಷ್ಟಿಯುಳ್ಳ ಭಾಷೆಯಾಗುವುದಿಲ್ಲ. ಬೊಜ್ಜು ಬಲವಲ್ಲ."*

ಶ್ರೀಕಂಠಯ್ಯನವರ ಆಂಗ್ಲ ಭಾಷಾ ಪ್ರೇಮದ ವಿಷಯವಾಗಿ ಹಿಂದೆ ಹೇಳಿರು ವುದಕ್ಕೆ ಇನ್ನೂ ಒಂದೆರಡು ಮಾತು ಸೇರಿಸುವುದು ಅವಶ್ಯಕ. ಇಂಗ್ಲಿಷ್ ಸಾಹಿ ತ್ಯದ ಮೇಲೆ ಅವರಿಗಿದ್ದ ಪ್ರೇಮವಂತೂ ಸರಿಯೆ. ಅವರು ಇಂಗ್ಲೆಂಡನ್ನು ಭಾರತ ಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದರೆ? ಈ ಎರಡು ದೇಶಗಳಿಗೂ ಸಂಪರ್ಕ ಏರ್ಪಟ್ಟದ್ದ ರಿಂದ ಭಾರತಕ್ಕೆ ಬಹಳ ಒಳ್ಳೆಯದಾಯಿತೆಂದು ಅವರು ನಂಬಿದ್ದರೆಂಬುದು ನಿಜ. ರಾಜಾರಾಮ ಮೋಹನರಾಯ್ ಅವರ ಕಾಲದಿಂದ ಇಂದಿನವರೆಗೆ ಎಷ್ಟೋ ಜನ— ಉಜ್ವಲ ದೇಶಾಭಿಮಾನವುಳ್ಳವರು—ಹಾಗೆಯೇ ನಂಬಿದ್ದಾರೆ. ನಮಗೆ ಒಳ್ಳೆಯ ದನ್ನು ಮಾಡಬೇಕೆಂಬ ಉದ್ದೇಶ ಬ್ರಿಟಿಷರಿಗೆ ಇತ್ತೋ ಇಲ್ಲವೋ ಅದು ಬೇರೆ

---

* 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ' (೧೯೪೮), ಕಾವ್ಯಾಲಯ, ಮೈಸೂರು, ಪುಟ ೭೮

ಮಾತು; ಒಳ್ಳೆಯದು ಆಗಿರುವುದೇನೋ ನಿಜವೆಂದು ಬಹುಶಃ ನಾವೆಲ್ಲರೂ ಒಪ್ಪು ತ್ತೇವೆ. ಶ್ರೀಕಂಠಯ್ಯನವರು ಭಾರತದ ಸ್ವಾತಂತ್ರ್ಯ ಚಳವಳಿಯ ವಿಷಯದಲ್ಲಿ ಅಷ್ಟೇನೂ ಆಸಕ್ತಿ-ಉತ್ಸಾಹಗಳನ್ನು ತೋರಿಸಲಿಲ್ಲವೆಂಬುದೂ ನಿಜ. ಅವರು ಸರ್ಕಾರದ ಅಧಿಕಾರದಲ್ಲಿದ್ದವರು. ಬ್ರಿಟಿಷರಿಗೆ ವಿರುದ್ಧವೆನ್ನಬಹುದಾದ ಯಾವ ಮಾತನ್ನೂ ಅವರು ಆಡುವಂತಿರಲಿಲ್ಲ. ಒಂದು ವೇಳೆ ರಾಜಕೀಯಕ್ಕೆ ಕೈ ಹಾಕಿದ್ದರೂ ಅವರು ತಿಲಕರ, ಗಾಂಧಿಯವರ ಗುಂಪಿನಲ್ಲಿರಲಿಲ್ಲ; ಗೋಖಲೆ, ಶ್ರೀನಿವಾಸ ಶಾಸ್ತ್ರಿಗಳು ಮೊದಲಾದ—ಆಗ ಮಂದಗಾಮಿಗಳೆಂದು ಹೆಸರು ಪಡೆದಿದ್ದವರ—ಸಂಗಡಿಗರಾಗಿರುತ್ತಿದ್ದರು; ಅದು 'ರೆ' ರಾಜ್ಯದ ಮಾತು. ವಾಸ್ತವವಾಗಿ ಶ್ರೀಕಂಠಯ್ಯನವರು ತಮ್ಮ ಕೆಲಸ ಕಾರ್ಯಗಳೇನಿದ್ದರೂ ಕರ್ಣಾಟಕದ ಎಲ್ಲೆಗಳೊಳಗೇ ನಡೆಯಬೇಕೆಂದು ತೀರ್ಮಾನಿಸಿಕೊಂಡಿದ್ದರು; ವಿಶಾಲ ಭಾರತದ ಗೋಜಿಗೆ ಅವರು ಹೋಗಲಿಲ್ಲ. ಅದರಲ್ಲಿ ಮೆಚ್ಚಬಹುದಾದ ನಮ್ರತೆಯೂ ಇತ್ತೆಂದು ತೋರುತ್ತದೆ. ಅವರೇ ಹೇಳುತ್ತಿದ್ದಂತೆ—ದಿಲ್ಲಿ ನಮಗೆ ಬಹು ದೂರ. ನಮ್ಮ ಹಳ್ಳಿಯ ಯೋಗಕ್ಷೇಮವನ್ನು ನಾವು ನೋಡಿಕೊಂಡರೆ ಸಾಕು. ಆಗಿನ ವಾತಾವರಣದಲ್ಲಿ ಇಂಗ್ಲೆಂಡಿನ ಮೇಲಿನ ಕೋಪ ಹತ್ತಿ ಉರಿಯುತ್ತಿತ್ತು. ಅಂಥ ಕಾಲದಲ್ಲಿ ಶ್ರೀಕಂಠಯ್ಯನವರು ಆ ದೇಶದ ವಿಷಯದಲ್ಲಿ ತಮಗಿದ್ದ ಒಲವನ್ನು ಅಷ್ಟು ಒತ್ತಿ ಹೇಳದಿದ್ದರೆ ಚೆನ್ನಾಗಿತ್ತು ಎನ್ನಬಹುದು. ಈ ಸಂಬಂಧವಾಗಿ ಹರಡಿದ ಕಥೆಯೊಂದನ್ನು ನಾನು ನಾಲ್ಕಾರು ಜನರಿಂದ ಕೇಳಿದ್ದೇನೆ; "ನಾನು ಸತ್ತಮೇಲೆ ನನ್ನ ಹೃದಯವನ್ನು ತೆರೆದು ನೋಡಿದರೆ, ಅದರ ಮೇಲೆ 'ಇಂಗ್ಲೆಂಡ್' ('ಇಂಗ್ಲೆಂಡ್' ಅಲ್ಲ, 'ಷೇಕ್ಸ್‌ಪಿಯರ್' ಎಂದು ಹೇಳಿದ್ದರೂ ಹೇಳಿರಬಹುದು ಎಂದು ನನ್ನ ಅಭಿಪ್ರಾಯ. ಅವರಿಗೆ ಷೇಕ್ಸ್‌ಪಿಯರ್ ಅಚ್ಚುಮೆಚ್ಚು, ವರ್ಡ್ಸ್‌ವರ್ತ್ ಅಚ್ಚುಮೆಚ್ಚು; ಆದ್ದರಿಂದ ಅಂಥ ಕವಿಗಳಿಗೆ ಜನ್ಮ ಕೊಟ್ಟ ದೇಶವೂ ಪ್ರಿಯವಾಯಿತು. ಆ ಪ್ರೇಮ ಭಾರತದ ಮೇಲಿನ ಪ್ರೇಮವನ್ನು ಹಿಂದೂಡಿತೆಂದು ಹೇಳಲಾಗುವುದಿಲ್ಲ. ನನ್ನ ಸ್ವಂತ ನಂಬಿಕೆ ಇದು: ಅವರ ಹೃದಯದ ಮೇಲೆ ಬರವಣಿಗೆಯೇನಾದರೂ ಇದ್ದಿದ್ದರೆ, ಅದು 'ಇಂಗ್ಲೆಂಡ್' ಅಲ್ಲ, 'ಷೇಕ್ಸ್ ಪಿಯರೂ' ಅಲ್ಲ, 'ಕನ್ನಡ.'

ಶ್ರೀಕಂಠಯ್ಯನವರು ಪ್ರಥಮತಃ ರಾಜಕಾರಣಿಗಳಲ್ಲದಿದ್ದರೂ ಅವರಲ್ಲಿ ರಾಜಕೀಯ ಎಳೆಯೂ ಒಂದಿತ್ತೆಂದು ಹಿಂದೆಯೇ ಸೂಚಿಸಿದೆನಷ್ಟೆ. ಆ ಎಳೆ ಕರ್ಣಾಟಕದ ಏಕೀಕರಣದ ವಿಷಯದಲ್ಲಿ ಅವರಿಗಿದ್ದ ಉತ್ಸಾಹ. ಈ ಏಕೀಕರಣವು ಮತ್ತೊಂದು ಭಾರಿ ಸಮಸ್ಯೆಯು, ಅಂದರೆ ಭಾರತದ ಸ್ವಾತಂತ್ರ್ಯದ ಭಾಗ ಮಾತ್ರ. ಬ್ರಿಟಿಷರು ತಮ್ಮ ಆಳಿಕೆಯಲ್ಲಿದ್ದ ಕರ್ಣಾಟಕದ ಭಾಗಗಳನ್ನು ತಾಂಬೂಲ-ದಕ್ಷಿಣೆ ಸಹಿತ ತಟ್ಟೆಯಲ್ಲಿಟ್ಟು ಮೈಸೂರು ಮಹಾರಾಜರಿಗೆ ಕೊಡುತ್ತಾರೆಂಬ ನಿರೀಕ್ಷೆ ಯಾರಿಗೂ ಇರಲಿಲ್ಲ—ಅದಕ್ಕೆ ಹೋರಾಟ ಬೇಕು. ಒಂದು ವೇಳೆ ಬ್ರಿಟಿಷರು ಕೊಟ್ಟರೂ ನಿಜಾಮರಂಥ ಅರಸರ ಕೈಕೆಳಗಿದ್ದ ಭಾಗಗಳು ಹಾಗೇ ಉಳಿದುಕೊಳ್ಳು

ತ್ತವೆ. ಈ ದೊಡ್ಡ ಸಮಸ್ಯೆಯನ್ನು ಬಿಡಿಸುವ ಕೆಲಸ ಕಾಂಗ್ರೆಸ್ಸಿಗೂ ಮಹಾತ್ಮ ಗಾಂಧಿಯವರಿಗೂ ಸೇರಿದ್ದು. ಆದರೆ ಸ್ವಾತಂತ್ರ್ಯ ಬರುವ ತನಕ ಏಕೀಕರಣವಿಲ್ಲ ಎಂದುಕೊಂಡು ನಾವು ಕೈಕಟ್ಟಿಕೊಂಡು ಕೂರಬಾರದು, ಚಳವಳಿ ನಡೆಸಬೇಕು; ನಡೆಸದಿದ್ದರೆ ಸ್ವಾತಂತ್ರ್ಯ ಬಂದರೂ ಏಕೀಕರಣ ಬರದಿರಬಹುದು. ಶ್ರೀಕಂಠಯ್ಯ ನವರ ಮಾತಿನಲ್ಲೇ ಹೇಳಬಹುದಾದರೆ, "ಮಗು ಅತ್ತರೆ ತಾನೆ, ತಾಯಿಗೆ ಅದರ ಹಸಿವು ಗೊತ್ತಾಗುತ್ತದೆ?" ಆದ್ದರಿಂದ ಕರ್ಣಾಟಕದ ಜನತೆ ಎಚ್ಚರಗೊಳ್ಳುವಂತೆ ಪ್ರಚಾರ ನಡೆಸಬೇಕು. ವಾಸ್ತವವಾಗಿ ಇದು ರಾಜಕಾರಣಿಗಳ ಕೆಲಸ. ಆದರೆ ಅಂದಿನ ಪರಿಸ್ಥಿತಿಯಲ್ಲಿ ಶ್ರೀಕಂಠಯ್ಯನವರಿಗೆ ರಾಜಕಾರಣಿಗಳಿಗಿಲ್ಲದ ಅನುಕೂಲ ವೊಂದಿತ್ತು. ಅರಸರ ಕೈಕೆಳಗಿದ್ದ ಕರ್ಣಾಟಕದಲ್ಲಿ ರಾಜಕಾರಣಿಗಳಿಗೆ ಸ್ವಾಗತವಿರ ಲಿಲ್ಲ; ಆ ಅರಸರಿಗೆ ಏಕೀಕರಣ ಬೇಕಿಲ್ಲದಿದ್ದದ್ದು ಸ್ವಾಭಾವಿಕ ತಾನೆ. ಶ್ರೀಕಂಠಯ್ಯ ನವರೂ ಏಕೀಕರಣಕ್ಕೆ ಬೆಂಬಲ ಕೊಟ್ಟರು; ಆದರೆ ಎಚ್ಚರಿಕೆಯಿಂದ. "ಕರ್ಣಾ ಟಕವನ್ನು ಮತ್ತೆ ಒಂದು ಪ್ರಾಂತವನ್ನಾಗಿ ಮಾಡಬೇಕು ಎನ್ನುವ ಚಳವಳಿ ಪ್ರಾರಂಭವಾಗಿ ಸಾರ್ವಭೌಮ ಸರ್ಕಾರದವರೆಗು ಕೂಡ ಆಗಲೇ ಮುಟ್ಟಿ, ಅವರು ಕೂಡ ಹೀಗೆ ಮಾಡುವುದೇ ನ್ಯಾಯ....ಎಂಬ ತತ್ವವನ್ನು ಒಪ್ಪಿರುತ್ತಾರೆ"* "ಬ್ರಿಟಿಷ್ ಮತ್ತು ಸಂಸ್ಥಾನ ಕರ್ಣಾಟಕಗಳನ್ನು ಮೈಸೂರು ಆಡಳಿತಕ್ಕೆ ಸೇರಿಸಿ, ಮೈಸೂರು ಶ್ರೀಮನ್ಮಹಾರಾಜರವರನ್ನು ಕನ್ನಡ ನಾಡಿಗೆಲ್ಲಾ ಗವರ್ನರನ್ನಾಗಿ ಮಾಡಬೇಕೆಂಬುದು ಅವರ (ಕೌಜಲಗಿ ಶ್ರೀನಿವಾಸರಾಯರ) ಮೊದಲನೆ ಕನಸು"*– ಹೀಗೆ ಅವರು ಆಗಿಂದಾಗ ಮಾತಾಡಿದರೂ ಒಟ್ಟನಲ್ಲಿ "ಇವರು ರಾಜಕಾರಣಿಗಳಲ್ಲ, ಇದರಿಂದ ಅಪಾಯವಿಲ್ಲ. ಪಾಪ, ಸಾಹಿತ್ಯ– ಸಂಸ್ಕೃತಿ ಅಂತ ಏನೋ ಹೇಳಿಕೊಳ್ಳು ತ್ತಾರೆ" ಎಂಬ ಭಾವನೆ—ಅವರು ದೊಡ್ಡ ವಿದ್ವಾಂಸರು ಎಂಬ ಗೌರವದ ಜೊತೆಗೆ– ಆಳರಸರಿಗೆ ಇತ್ತು. ಅವರು ಎತ್ತಿ ಹಿಡಿದ ಬಾವುಟ ಏಕೀಕರಣದ್ದಲ್ಲ, ಕನ್ನಡ ಭಾಷೆಯದು, ಕನ್ನಡ ಸಾಹಿತ್ಯದ್ದು. "ಕರ್ಣಾಟಕದ ಬೇರೆ ಬೇರೆ ಪ್ರಾಂತಗಳು ಬೇರೆ ಬೇರೆ ರೀತಿಗಳಲ್ಲಿ ಬೇರೆ ಬೇರೆ ಶಕ್ತಿಗಳೊಡನೆ ಕೆಲಸ ಮಾಡುತ್ತಿದ್ದರೂ ಎಲ್ಲರ ಧ್ಯೇಯವೂ ಆಸೆಯೂ ಗುರಿಯೂ ಒಂದೇ ಆಗಿರುತ್ತವೆ: ಕನ್ನಡ ಸಾಹಿತ್ಯ ಶ್ರೇಷ್ಠವಾಗಬೇಕೆನ್ನುವುದು; ಕನ್ನಡಿಗರು ಗಣ್ಯತೆಯಲ್ಲಿ ಯಾರಿಗೂ ಹಿಂದಾಗಬಾರ ದೆನ್ನುವುದು"†—ಇಂಥ ಮಾತು ಎಲ್ಲರೂ ಒಪ್ಪಬಹುದಾದದ್ದು. ಪರಿಷತ್ತು ಕನ್ನಡ ಸಂಸ್ಕೃತಿಯ ಐಕ್ಯದ ಪ್ರತೀಕ, ಅದಕ್ಕೆ ಎಲ್ಲರೂ ಬೆಂಬಲ ಕೊಡಿ, ಎಂದು ಅವರು ಬೇಡಿದರೆ ಆಳರಸರು ಹೆದರಬೇಕಿಲ್ಲವಷ್ಟೆ. ಹೀಗಾದ್ದರಿಂದ ಅವರ ಪ್ರಚಾರಕಾರ್ಯ

* ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ ಭಾಗ (೧೯೪೪), ಪುಟ ೬೪

* ಅದೇ. ಪುಟ ೧೨೧

‡ ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ, ಭಾಗ ೧(೧೯೪೪), ಪುಟ ೫೭

ರಾಜಕಾರಣಗಳದ್ದಕ್ಕಿಂತ ಸುಗಮವಾಗಿ ನಡೆಯಿತು. ಸಂಸ್ಕೃತಿಯ ಐಕ್ಯತೆಯ ಜೊತೆಗೆ ರಾಜಕೀಯ ಐಕ್ಯದ ಪರವಾದ ಪ್ರಚಾರ ಸೂಕ್ಷ್ಮವಾಗಿ 'ಧ್ವನಿತ'ವಾಯಿತು ಪರಿಣಾಮಕಾರಿಯೂ ಆಯಿತು.

ವಾಸ್ತವವಾಗಿ ಅಖಿಲ ಕರ್ಣಾಟಕದ ಏಕೀಕರಣವಾಗಬೇಕೆಂಬ ಉತ್ಸಾಹ ಮೈಸೂರಿನಲ್ಲಿದ್ದುದಕ್ಕಿಂತ ಇತರ ಕಡೆಗಳಲ್ಲಿ ಹೆಚ್ಚಾಗಿಯೇ ಇತ್ತು; ಪ್ರಚಾರವೂ ಜೋರಾಗಿತ್ತು. ಆದರೆ ಅಲ್ಲಿಯ ಜನರಿಗೆ ಮೈಸೂರಿನ ಮಹಾರಾಜರ 'ಕೃಪಾಛತ್ರ'ದ ಆಶ್ರಯ ಬೇಕಾಗಿರಲಿಲ್ಲ. ಅವರಿಗೆ ಬೇಕಾದ್ದುದ್ದು ಪ್ರಜಾಪ್ರಭುತ್ವ. ಈ ವಿಷಯ ನಲ್ಲಿ ಅವರಿಗೂ ಶ್ರೀಕಂಠಯ್ಯನವರಿಗೂ ಹೊಂದಿಕೆ ಬರಲಿಲ್ಲ. ಶ್ರೀಕಂಠಯ್ಯನವರ ಸ್ವಭಾವದಲ್ಲಿ ಹಳೆಯ ಕಾಲದ ಫ್ಯೂಡಲ್ (Feudal) ಎಳೆಯೊಂದು ಬಲವಾಗಿಯೇ ಇತ್ತು. ಅದು ಅವರ ವಿದ್ಯಾರ್ಥಿಗಳಲ್ಲನೇಕರಿಗೂ ಹಿತವೆನಿಸಲಿಲ್ಲ. ಆದರೂ ಒಟ್ಟಿ ನಲ್ಲಿ ಎಲ್ಲರಿಗೂ ಶ್ರೀಕಂಠಯ್ಯನವರಲ್ಲಿದ್ದ ಗೌರವಕ್ಕೆ ಅದರಿಂದೇನೂ ಕುಂದು ಬರ ಲಿಲ್ಲ. "ಅವರ ಅಭಿಪ್ರಾಯವನ್ನು ಅವರು ಹೇಳಲಿ. ಏಕೀಕರಣ ಇನ್ನೂ ದೂರದ ಕನಸು ತಾನೆ! ಸಮಯ ಬಂದಾಗ ನೋಡಿಕೊಳ್ಳೋಣ" ಎಂದುಕೊಂಡು ಜನ ಅವರ ವಿಷಯದಲ್ಲಿ ಉಗ್ರ ವಿರೋಧವನ್ನೇನೂ ತೋರಿಸಲಿಲ್ಲ. ಪರಿಷತ್ತಿನ ಸ್ಥಾಪನೆ ಯಿಂದಾಗಿ, ಶ್ರೀಕಂಠಯ್ಯನವರ ಪ್ರವಾಸ-ಪ್ರಚಾರಗಳಿಂದಾಗಿ ಕರ್ಣಾಟಕದ ಇತರ ಭಾಗಗಳ ಜನರೂ ಮೈಸೂರಿನವರೂ ಒಟ್ಟಿಗೆ ಸೇರುವುದು, ಸ್ನೇಹ ಬೆಳಸುವುದು, ಅಭಿಪ್ರಾಯ ವಿನಿಮಯ ಮಾಡಿಕೊಳ್ಳುವುದು—ಇವೆಲ್ಲ ಹೆಚ್ಚಾದುವು. ಇದು ಎಲ್ಲ ರಿಗೂ ತೃಪ್ತಿಕರವಾದ ವಿಷಯ.

ಶ್ರೀಕಂಠಯ್ಯನವರ ಮಾತು ಬಂದಾಗ ಅವರ ಶಿಷ್ಯರಿಗೆಲ್ಲ ಮೊಟ್ಟಮೊದಲು ನೆನಪಿಗೆ ಬರುವುದು ಅವರು ತರಗತಿಯಲ್ಲಿ ಪಾಠ ಹೇಳುತ್ತಿದ್ದ ರೀತಿ. ಅದರ ವಿಷಯ ಒಂದೆರಡು ಮಾತು ಬರೆದು, ಈ ಅಧ್ಯಾಯವನ್ನು ಮುಗಿಸಬಹುದು. ಅವರು ಅಧ್ಯಾಪಕರಾದ ಮೊದಲ ಹತ್ತು-ಹನ್ನೆರಡು ವರ್ಷ ಅವರ ವಿದ್ಯಾರ್ಥಿಗಳಿಗೆ "ಇವರು ಸಾಮಾನ್ಯವಾಗಿ ತಮ್ಮದೇ ಆದ 'ದಂತದ ಗೋಪುರ' (Ivory Tower) ದಲ್ಲಿ ವಾಸ ಮಾಡುವವರು; ಅತ್ಯವಶ್ಯಕವಾದ ಸಂದರ್ಭಗಳಲ್ಲಿ ಹೊರತು ಅಲ್ಲಿಂದ ಹೊರಗೆ ಬರುವವರಲ್ಲ" ಎಂಬ ಭಾವನೆ ಬಂದಂತಿತ್ತು. ೧೯೨೬-೨೭ ರಿಂದಾಚೆಗೆ ಅವರ ಶಿಷ್ಯರಾಗಿದ್ದವರಿಗೆ, ಮುಖ್ಯವಾಗಿ ಅವರು ಕನ್ನಡದ ಗೌರವ ಪ್ರಾಧ್ಯಾಪಕರಾಗಿದ್ದಾಗ ಕನ್ನಡ ಎಂ. ಎ. ತರಗತಿಯಲ್ಲಿದ್ದವರಿಗೆ, ಮತ್ತು ಅವ ರೊಡನೆ ಉಪನ್ಯಾಸ ಶಿಬಿರಗಳಲ್ಲಿದವರಿಗೆ ಮೇಲೆ ಹೇಳಿದ ಭಾವನೆ ಅಷ್ಟಾಗಿ ಬರ ಲಿಲ್ಲ. ಪಾಠ ಹೇಳುವಾಗ ಅವರು ಪ್ರವಚನ ಮಾಡುತ್ತಿದ್ದ ಕವನದಲ್ಲೋ ನಾಟಕ ದಲ್ಲೋ ಲೀನರಾಗುತ್ತಿದ್ದರು. ಕೆಲವು ವೇಳೆ ವಿದ್ಯಾರ್ಥಿಗಳನ್ನು ಮರೆತರೋ ಎನ್ನಿ ಸುವಂತಾಗುತ್ತಿತ್ತು, ಅವರ ತನ್ಮಯತೆಯನ್ನು ನೋಡಿ. ನಾನು ಮೊದಲನೆಯ ಬಿ. ಎ. ತರಗತಿಯಲ್ಲಿದ್ದಾಗ ಅವರು ಷೇಕ್ಸ್ಪಿಯರ್‌ನ 'ರಿಚರ್ಡ್ II' (Richard II)

ನಾಟಕವನ್ನು ಬೋಧಿಸುತ್ತಿದ್ದರು. ಅದರಲ್ಲಿ ಜಾನ್ ಆಫ್ ಗಾಂಟ್ (John of Gaunt) ಇಂಗ್ಲೆಂಡಿನ ಸೌಂದರ್ಯವನ್ನೂ ಘನತೆಯನ್ನೂ ಬಣ್ಣಿಸುವ ಭಾಗವನ್ನು ಓದುತ್ತ ಓದುತ್ತ ಅವರು ತಾವು ಎಲ್ಲಿದ್ದರೆಂಬುದನ್ನು ಮರೆತಂತೆ ತೋರಿತು. ವಿದ್ಯಾರ್ಥಿಗಳ ಕಡೆಗೂ ನೋಡದೆ, ಪುಸ್ತಕವನ್ನೂ ನೋಡದೆ (ಆ ಭಾಗ ಅವರಿಗೆ ಬಾಯಿಗೇ ಬರುತ್ತಿತ್ತು) ಒಂದು ಬಗೆಯ ಅಂತರ್ದೃಷ್ಟಿಯುಳ್ಳವರಾಗಿ ಅದನ್ನು ಪಠಿಸಿದರು. ಅದು ಮುಗಿದ ಮೇಲೆ ಸ್ವಲ್ಪ ನಕ್ಕು "I try to be detached but he sweeps me off my feet" ಎಂದರು. ಅವರು ಪಾಠ ಹೇಳುವುದೆಂದರೆ ಅಧ್ಯಯನ ಪ್ರವಚನಗಳು ಮಾತ್ರವಲ್ಲ ; ಅವರ ಭಾಗಕ್ಕೆ ಪಾಠದ ವಿಷಯ ಏರೋಪ್ಲೇನಿಗೆ ಟಾರ್ ಮ್ಯಾಕ್ ಇದ್ದಂತೆ : ವಿಶಾಲವಾದ ಆಲೋಚನಾ ಪ್ರಪಂಚಕ್ಕೂ ಭಾವ ಪ್ರಪಂಚಕ್ಕೂ ಹಾರಿ ಹೋಗಲು ಅದೊಂದು ಸಾಧನ. ಯಾವುದಾದರೊಂದು ಸುಂದರವಾದ ಪ್ರತಿಮೆಯೋ ವಿಚಾರಪ್ರಚೋದಕವಾದ ಪದಪುಂಜವೋ ಬಂದರೆ ಸರಿ, ಗಮನ ಸ್ವಲ್ಪ ಬೇರೆ ಕಡೆಗೆ ತಿರುಗುವುದು—ರಾಜಮಾರ್ಗದಲ್ಲಿ ಹೋಗುತ್ತಿರುವವನು ಹಠಾತ್ತಾಗಿ ಪುಷ್ಪಿತವಾದ ಉದ್ಯಾನವನವನ್ನು ಕಂಡರೆ ಅತ್ತ ತಿರುಗುವಂತೆ. ಅನಂತರ ಉಜ್ವಲವಾದ ವಿಚಾರಧಾರೆ—ಅದಕ್ಕೂ ಪ್ರವಚನ ಮಾಡುತ್ತಿದ್ದ ವಿಷಯಕ್ಕೂ ಸಂಬಂಧ ಬಹಳ ನವಿರಾದರೂ ಆಗಬಹುದು. "ವಿಷಯವನ್ನು ಬಿಟ್ಟು ದೂರ ಹೋದರಲ್ಲವೆ" ಎನ್ನಬಹುದು. ಆದರೆ ಹಾಗೆ ಹೋದದ್ದು ಎಷ್ಟು ಫಲಪ್ರದವಾಗುತ್ತಿತ್ತು!

ಕೆಲವು ವೇಳೆ ಮೇಲೆ ಹೇಳಿದಂತೆ ಆದರೂ ಸಾಮಾನ್ಯವಾಗಿ ಅವರ ಉತ್ಸಾಹವೆಲ್ಲ ಅವರು ಬೋಧಿಸುತ್ತಿದ್ದ ಕಾವ್ಯಕ್ಕಾಗಿಯೇ ವಿನಿಯೋಗವಾಗುತ್ತಿತ್ತು. "The spirit that dwells in the light of setting suns", "The young lambs bound as to the tabor's sound", ಇಂಥ ಪಂಕ್ತಿಗಳು ಯಾವುದೋ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವ ಅಥವಾ ವಿಷಯವೊಂದನ್ನು ಹೇಳುವ ಪದಪುಂಜಗಳಾಗಿ ಉಳಿಯುತ್ತಿರಲಿಲ್ಲ, ಗಾನವಾಗಿ ಪರಿಣಮಿಸುತ್ತಿದ್ದವು. ಒಂದೊಂದು ಭಾವವೂ ಒಂದು ಆಧ್ಯಾತ್ಮಿಕ ಅನುಭವವಾಗಿ ಪರಿಣಮಿಸುತ್ತಿತ್ತು. ಅವರು ಪ್ರವಚನ ಮಾಡುತ್ತಿದ್ದಾಗ ಆಗಿಂದಾಗ ಕಣ್ಣು ಮುಚ್ಚಿಕೊಳ್ಳುತ್ತಿದ್ದುದುಂಟು. ಅದರಿಂದಾಗಿ "ಇವರು ಆ ಅನುಭವವನ್ನು ನಮಗೆ ತಿಳಿಸುವುದಕ್ಕಿಂತ ಹೆಚ್ಚಾಗಿ ತಾವೇ ಬಾಳುತ್ತಿದ್ದಾರೆ"ಎನ್ನಿಸುತ್ತಿತ್ತು. ನಾನು ಎಂ. ಎ. ತರಗತಿಯಲ್ಲಿದ್ದಾಗ ಒಂದು ದಿನ ಅವರು ಮ್ಯಾಥ್ಯು ಆರ್ನಾಲ್ಡನ ಪುಸ್ತಕವೊಂದನ್ನು ಪಾಠ ಹೇಳುತ್ತಿದ್ದರು. ಅದರಲ್ಲಿ ದಾಂತೆಯ ಪಂಕ್ತಿಯೊಂದು ಉದಾಹೃತವಾಗಿತ್ತು: "In His will is our peace." ಶ್ರೀಕಂಠಯ್ಯನವರು ಅದನ್ನು ಒಂದು ಸಾರಿ ಓದಿ, ಕ್ಷಣಕಾಲ ಮೌನವಾಗಿದ್ದು, ಕಣ್ಣು ಮುಚ್ಚಿ "In His will is our peace" ಎಂದು ಎರಡುಸಾರಿ ಹೇಳಿಕೊಂಡರು. ದಾಂತೆಯ

ವಾಕ್ಯದ ಅಮೃತವನ್ನು ಅವರು ತಮ್ಮ ಆತ್ಮಕ್ಕೆ ಲೇಪಿಸಿಕೊಳ್ಳುತ್ತಿದ್ದರು, ಸಂದೇಹ ವಿಲ್ಲ. ಇನ್ನೊಂದು ದಿನ—ನಾನು ಬಿ. ಎ. ತರಗತಿಯಲ್ಲಿದ್ದಾಗ—ವರ್ಡ್ಸ್‌ವರ್ತನ "The still sad music of humanity" ಪ್ರವಚನ ವಿಷಯವಾಗಿತ್ತು. ಆ ಪಾಠಕ್ಕೆ ಗೊತ್ತಾಗಿದ್ದ ಕಾಲ ಮುಗಿದಿತ್ತು, ಘಂಟೆ ಹೊಡೆದಾಗಿತ್ತು. ನಮಗೆ ಯಾರಿಗೂ ಅದರ ಪರಿಜ್ಞಾನವೇ ಇರಲಿಲ್ಲ. ಶ್ರೀಕಂಠಯ್ಯನವರು ಮಾತನ್ನು ಮುಗಿಸಿ ಅರ್ಧ ನಿಮಿಷ ಸುಮ್ಮನೆ ನಿಂತಿದ್ದರು. 'ಪಿರಿಯಡ್' ಮುಗಿದಾಗ ಸಾಮಾನ್ಯವಾಗಿ ಕೇಳಿಬರುವ ಶಬ್ದ, ಕುರ್ಚಿ ಎಳೆಯುವ ಶಬ್ದ—ಇಂಥದೇನೂ ಇಲ್ಲದೆ ಕೊಠಡಿಯಲ್ಲಿ ಸಂಪೂರ್ಣ ಮೌನವಿತ್ತು. ನಾವೆಲ್ಲ ಅವರ ಉಪನ್ಯಾಸದ ಸಮ್ಮೋಹನಾಸ್ತ್ರಕ್ಕೆ ಸಿಕ್ಕಿಬಿದ್ದಿದ್ದೆವು; ಅವರೂ ಹಾಗೆಯೇ ಸಿಕ್ಕಿಬಿದ್ದಿದ್ದರು. ಅದಾಗಿ ಎಷ್ಟೋ ವರ್ಷಗಳು ಕಳೆದು ನಾನು ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದಾಗ ಯಾವುದೋ ಸಂದರ್ಭದಲ್ಲಿ ಅವರೊಡನೆ ಮಾತಾಡುತ್ತಿದ್ದಾಗ ಅಂದಿನ ಮೌನ ವನ್ನು ನೆನಪಿಗೆ ತಂದೆ. ಅವರು "ಹೌದು, ಹಾಗೆ ಒಂದೆರಡು ಸಲ ಆದದ್ದು ನೆನಪಿದೆ. ಅಂಥ ಮೌನಕ್ಕೆ ನನ್ನ ಕೃತಜ್ಞತೆ ಸಲ್ಲುತ್ತದೆ (One is grateful for such silences) ಎಂದರು.

ಕೃತಿಗಳು

೧. ಇಂಗ್ಲಿಷ್ ಗೀತೆಗಳು

ಇಂಗ್ಲಿಷ್ ಸಾಹಿತ್ಯದಲ್ಲೂ ಪುರಾತನ ಗ್ರೀಕ್ ಸಾಹಿತ್ಯದಲ್ಲೂ ಅತ್ಯುತ್ತಮ ವಾದ ಕೃತಿಗಳನ್ನು ಕನ್ನಡಕ್ಕೆ ತರಬೇಕೆಂಬ ಆಸೆ ಶ್ರೀಕಂಠಯ್ಯನವರಿಗೆ ಮೊದಲಿ ನಿಂದಲೂ ಇದ್ದದ್ದುಷ್ಟೆ. ಅದಕ್ಕೆ ಪೂರ್ವ ಸಿದ್ಧತೆಯಾಗಿ ಕೆಲವು ಸಣ್ಣ ಸಣ್ಣ ಪ್ರಯೋಗಗಳನ್ನು ನಡೆಸಿ ನೋಡಬೇಕೆಂದು ಅವರು ಇಂಗ್ಲಿಷ್ ಗೀತೆಗಳ ಅನು ವಾದಕ್ಕೆ ತೊಡಗಿರಬಹುದು. ಅವರು ಮದರಾಸಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಕೂಡ ಅವರ ಮನಸ್ಸು ಆ ಕಡೆಗೆ ಹರಿದಿತ್ತು. ಈಗ 'ಇಂಗ್ಲಿಷ್ ಗೀತೆಗಳು' ನಲ್ಲಿ ಸೇರಿರುವ ಕವನಗಳಲ್ಲಿ ಮೂರು ೧೯೧೯ರಲ್ಲಿ 'ವಿದ್ಯಾದಾಯಿನಿ' ಮಾಸ ಪತ್ರಿಕೆಯಲ್ಲಿ ಪ್ರಕಟವಾದುವು. ಅವುಗಳ ಅನುವಾದ ಕೆಲವು ವರ್ಷಗಳ ಹಿಂದೆಯೇ ಆಗಿತ್ತೆಂದು ಶ್ರೀಕಂಠಯ್ಯನವರೇ ಹೇಳಿದ್ದಾರೆ. ೧೯೨೧ರಲ್ಲಿ ಹನ್ನೆರಡು ಕವನಗಳು ಪ್ರಕಟ ವಾದವು ; ೧೯೨೪ರಲ್ಲಿ ಇನ್ನೂ ಇಪ್ಪತ್ನಾಲ್ಕು; ಎಲ್ಲ ಕವನಗಳನ್ನೂ ಸೇರಿಸಿ ಇಂದಿನ ಶೀರ್ಷಿಕೆಯನ್ನು ಕೊಟ್ಟು ಪುಸ್ತಕರೂಪದಲ್ಲಿ ಪ್ರಕಟಿಸಿದ್ದು ೧೯೨೬ರಲ್ಲಿ. ಈ ಕೆಲಸ ವನ್ನು ಮಾಡಿದ ಕೀರ್ತಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘಕ್ಕೆ ಸಲ್ಲುತ್ತದೆ. ೧೯೨೧ರಲ್ಲಿ ಜಲ್ಲಿ ಕಾಗದದ ರಟ್ಟು ಹಾಕಿ ಪ್ರಕಟಿಸಿದ್ದ ಕವನಗಳನ್ನು ಸ್ಕೂಲು-ಕಾಲೇಜುಗಳ ಸಂಬಂಧವುಳ್ಳ ಎಷ್ಟೋ ಜನ—ಅವರಲ್ಲಿ ನಾನೂ ಒಬ್ಬ— ಓದಿ ಆನಂದಪಟ್ಟಿದ್ದರು. ಶ್ರೀಕಂಠಯ್ಯನವರ ಬಾಲ್ಯ ಸ್ನೇಹಿತರೂ ಆಗ ಮಹಾ ರಾಜರ ಕಾಲೇಜಿನ ಪ್ರಿನ್ಸಿಪಾಲರೂ ಆಗಿದ್ದ ಎನ್. ಎಸ್. ಸುಬ್ಬರಾಯರು ಅವುಗಳ ನ್ನೆಲ್ಲ ಸೇರಿಸಿ ಚಿನ್ನದ ಗಿಲ್ಟ್ ತಲೆಬರಹ ಹಾಕಿಸಿ ಬೈಂಡ್ ಮಾಡಿಸಿಟ್ಟುಕೊಂಡಿದ್ದ ರೆಂದು ಡಾ|| ಡಿ. ವಿ. ಗುಂಡಪ್ಪನವರು ಹೇಳಿದ್ದಾರೆ.

ಈ ಶತಮಾನದ ಮೂರನೆಯ ದಶಕದಲ್ಲಿ ವಿದ್ಯಾವಂತರಾದ ಕನ್ನಡಿಗರಿಗೆ ರೋಮಾಂಚಕಾರಕವಾದ ಎರಡು ಅನುಭವಗಳು ದೊರೆತವು. ಒಂದು ಶ್ರೀಕಂಠಯ್ಯ ನವರ ಇಂಗ್ಲಿಷ್ ಗೀತೆಗಳನ್ನು ಓದುವ, ಮತ್ತೊಂದು ಮಾಸ್ತಿ ವೆಂಕಟೇಶಯ್ಯಂಗಾ ರ್ಯರ ಸಣ್ಣ ಕಥೆಗಳನ್ನು ಓದುವ ಸುಯೋಗ. ಈ ಪದ್ಯಗದ್ಯಗಳೆರಡರಲ್ಲೂ ಹೊಚ್ಚ ಹೊಸದಾದ ಕನ್ನಡ; ಅದರ ಸರಳತೆ, ಲಾಲಿತ್ಯ, ಮಾಧುರ್ಯ, ''ನಮ್ಮ ಅನು ಭವವನ್ನೇ ಇವರು ಹೇಳುತ್ತಿದ್ದಾರೆ'' ಎನ್ನಿಸುವಂಥ ಆತ್ಮೀಯತೆ—ಇವು ಕೊಟ್ಟ

ಆನಂದ ಅಷ್ಟಿಷ್ಟಲ್ಲ. ನನಗಿಂತ ಹಿರಿಯರೂ ಸಾಹಿತ್ಯದಲ್ಲಿ ಉತ್ಕೃಷ್ಟವಾದ ಅಭಿರುಚಿಯುಳ್ಳವರೂ ಬಹುಶ್ರುತರೂ ಆದ ಮಿತ್ರರೊಬ್ಬರು ಒಂದು ದಿನ "ಬಿಡಯ್ಯ, ನಿಮ್ಮ ಕನ್ನಡ ಸಾಹಿತ್ಯದಲ್ಲಿ ಏನಿದೆ,'ಎಲ್ಲ ರಾಯ ಕೇಳೆಂದ' ಸಾಹಿತ್ಯ!" ಎಂದರು. ಹಿಂದಿನ ಕಾಲದಲ್ಲಿ ವೀರ ಕಥೆಗಳನ್ನು ಚಾರಣರು ತಮ್ಮ ಪ್ರಭುವಿನೆದುರಿಗೆ ಹಾಡುತ್ತಿದ್ದರಷ್ಟೆ. ಆ ಚಂಚಲ ಮನಸ್ಸಿನ ಪ್ರಭುವನ್ನು ಎಚ್ಚರಿಸಲು 'ರಾಯ ಕೇಳೆಂದ' ಜಾತಿಯ ಮಾತುಗಳು ಬಂದುವೇನೋ. ನನ್ನ ಮಿತ್ರರು ಅಂದು ಯಾವುದೋ ಆಡಂಬರದ 'ಮಹಾಕಾವ್ಯ'ವನ್ನು ಓದಿ ಬೇಸರಗೊಂಡಿದ್ದರೆಂದು ಕಾಣುತ್ತದೆ. ಅವರು ಕನ್ನಡ ಸಾಹಿತ್ಯವನ್ನು ಚೆನ್ನಾಗಿ ಓದಿದವರು, ಅದರಲ್ಲಿ ಮಿತಿಯಿಲ್ಲದ ಅಭಿಮಾನವುಳ್ಳವರು. ತಾವು ಹೇಳಿದ ಮಾತು ಅತಿವ್ಯಾಪ್ತಿಯದೆಂದು ಅವರು ಚೆನ್ನಾಗಿ ಬಲ್ಲರು. ಆದರೂ ಕೆಲವು ಕಾಲದಿಂದ ಪ್ರಗತಿ ಇಲ್ಲದೆ ಕನ್ನಡ ಸಾಹಿತ್ಯ ನಿಂತ ಕಡೆ ನಿಂತಿತ್ತು, ಜೀವನಾನುಭವಕ್ಕೆ ರೂಪ ಕೊಡುವ ಬದಲು ಅನುಕರಣೆ, ಆಡಂಬರಗಳಿಗೆ ತುತ್ತಾಗಿತ್ತು ಎಂದು ಒಪ್ಪಬೇಕು. 'ಇಂಗ್ಲಿಷ್ ಗೀತೆಗಳು' ಪ್ರಕಟವಾದ ಕೂಡಲೇ ಕನ್ನಡ ಕಾವ್ಯ ಪ್ರಪಂಚದ ವಾತಾವರಣ ಹಠಾತ್ತಾಗಿ ಬದಲಾಯಿಸಿತು.

ಕೋಲ್‌ರಿಜ್ ಕವಿಯ The Ancient Mariner ಎಂಬ ಕವನದಲ್ಲಿ ಈ ಪದ್ಯ ಬರುತ್ತದೆ.

The fair breeze blew, the white foam flew,
  The furrow followed free.
We were the first that ever burst
  Into that silent sea.

ಈ ಪಂಕ್ತಿಗಳಲ್ಲಿರುವ ಬೀಸುನಡಗೆ, ಒಳಪ್ರಾಸದ ಮತ್ತು ಅಕ್ಷರ ಪ್ರಾಸದ ಸೌಂದರ್ಯ, ಭಾಷೆಯ ಸರಳತೆ ಇವು ಮನಸ್ಸನ್ನು ಸೆಳೆಯುತ್ತವೆಯಷ್ಟೆ. ಅಗ್ಗದ ಅಲಂಕಾರಗಳನ್ನೂ ತಿಣಿಕಿ ತಿಣಿಕಿ ಸಾಧಿಸಿದ ಚಮತ್ಕಾರಗಳನ್ನೂ ವಾಗಾಡಂಬರವನ್ನೂ ಮೆರೆಸುವ ಅನುಕರಣ ಮಹಾಕಾವ್ಯಗಳನ್ನು ಓದಿ ಜಡತೆಗೆ ಬಲಿಬಿದ್ದವರಿಗೆ ಇಂಗ್ಲಿಷ್ ಗೀತೆಗಳನ್ನೋದಿದಾಗ ಮೇಲೆ ಉದಾಹರಿಸಿರುವ ಕವನ ನೆನಪಿಗೆ ಬಂತು. 'ಇಂಗ್ಲಿಷ್ ಗೀತೆಗಳು' ಪ್ರಕಟವಾದ ಕೂಡಲೆ ಹಿತವಾದ ಗಾಳಿ ಬೀಸಿತು; ಸಮುದ್ರದ ತೆರೆಗಳ ತುದಿಯಲ್ಲಿ ನೀರಿನ ಮಣಿಗಳು ಉಕ್ಕಿ ಹೊಳೆಯುವಂತೆ ನಮ್ಮ ಸಾಹಿತ್ಯ ಸಾಗರದಲ್ಲೂ ಅಲೆಗಳೆದ್ದು ಕಾವ್ಯರತ್ನಗಳು ಹೊಳೆಯುತ್ತ ಕಾಣಿಸಿಕೊಂಡವು.

ಆದರೆ ನಮ್ಮ ಸಾಹಿತ್ಯದ 'ಮೌನ ಸಾಗರ'(ಮೇಲಿನ ಕವನದ silent sea) ಅಷ್ಟೇನೂ ಮೌನವಾಗಿರಲಿಲ್ಲ. ಆ ಸಾಗರಕ್ಕೆ ನುಗ್ಗಿ ಬಂದವರಲ್ಲಿ, ಧೈರ್ಯವಾಗಿ ಅದರಲ್ಲಿ ಯಾತ್ರೆ ಹೊರಟವರಲ್ಲಿ, ಶ್ರೀಕಂಠಯ್ಯನವರು ಮೊದಲಿಗರೆನ್ನಬಹುದಾ

ದರೂ ಅವರಿಗಿಂತ ಹಿಂದೆ ಕೆಲವರು ಆ ಕಡಲಿನ ಬಳಿಗೆ ಬಂದು ಅದರ ಅಲೆಗಳೊಡನೆ ಚಕ್ಕಂದವಾಡಿದ್ದರು. ನಮ್ಮ ಶಾಲೆಗಳಲ್ಲಿ ಆಗಲೂ ಇಂಗ್ಲಿಷ್ ಪ್ರಥಮ ಭಾಷೆ; ಪ್ರೌಢ ಶಾಲೆಗಳಲ್ಲಿ ಅದೇ ಶಿಕ್ಷಣ ಮಾಧ್ಯಮ. ಆದ್ದರಿಂದ ಶಾಲೆಗೆ ಬಂದವರೆಲ್ಲರಿಗೂ ಇಂಗ್ಲಿಷ್ ಕವನಗಳ ಪರಿಚಯ ಆಗಿಯೇ ಆಗುತ್ತಿತ್ತು. ಅವುಗಳನ್ನು ಅನುವಾದಿಸಬೇಕೆಂದು ಕೆಲವರು ಹೊರಟದ್ದು ಆಶ್ಚರ್ಯವೇನಲ್ಲ—ಹೊರಡದಿದ್ದರೆ ಆಶ್ಚರ್ಯವಾಗುತ್ತಿತ್ತು. ಶ್ರೀಕಂಠಯ್ಯನವರು ಜನ್ಮವೆತ್ತಿದ್ದಕ್ಕಿಂತ ಮುಂಚೆಯೇ ಷೇಕ್ಸ್ಪಿಯರನ ನಾಟಕಗಳ ಅನುವಾದಗಳು ಬರಲಾರಂಭಿಸಿದ್ದವು. ಅವರು ಬಿ. ಎ. ಡಿಗ್ರಿ ಪಡೆದದ್ದಕ್ಕಿಂತ ಮೊದಲೇ ರೋಮಿಯೋ ಮತ್ತು ಜೂಲಿಯಟ್ (Romeo and Juliet) ಒಥೆಲೋ(Othello), ಕಿಂಗ್ ಲಿಯರ್ (King Lear) ಮ್ಯಾಕ್‌ಬೆತ್ (Macbeth) ನಾಟಕಗಳು ಭಾಷಾಂತರವಾಗಿ, ಕೆಲವು ರಂಗಸ್ಥಳಕ್ಕೂ ಬಂದು ಜನಪ್ರಿಯವಾಗಿದ್ದವು. ರೊಮ್ಯಾಂಟಿಕ್ ಯುಗದ (Romantic period) ಕವಿಗಳೂ ಕನ್ನಡಿಗರ ಮನಸ್ಸನ್ನು ಸೆಳೆದಿದ್ದರು. ಈ ಶತಮಾನದ ಮೊದಲನೆಯ ದಶಕದ ಪಠ್ಯ ಪುಸ್ತಕಗಳಲ್ಲಿ ಮಿಸೆಸ್ ಹೆಮನ್ಸ್‌ರ 'ದಿ ಬೆಟರ್ ಲ್ಯಾಂಡ್' (The Better Land), ವರ್ಡ್ಸ್‌ವರ್ತ್‌ನ 'ಟು ದಿ ಕು ಕೂ'(To the Cuckoo) ಮುಂತಾದ ಕೆಲವು ಪದ್ಯಗಳ ಅನುವಾದಗಳಿದುವು. ಅವನ್ನು ಬರೆದವರು ಪದ್ಯಗದ್ಯಗಳೆರಡರ ಮೇಲೂ ಸ್ವಾಮ್ಯ ಪಡೆದಿದ್ದ ಎಸ್. ಜಿ. ನರಸಿಂಹಾಚಾರ್ಯರು ಎಂದು ಕೇಳಿದ್ದೇನೆ. ಶ್ರೀಕಂಠಯ್ಯನವರಿಗೆ ಈ ಅನುವಾದಗಳ ಪರಿಚಯವಿದ್ದಿರಬೇಕು.

ಇಂಗ್ಲಿಷ್ ಗೀತೆಗಳನ್ನು ಕನ್ನಡಕ್ಕೆ ತರಲು ಮೊದಮೊದಲು ಪ್ರಯೋಗಗಳನ್ನು ನಡೆಸಿದವರಲ್ಲಿ ಎಚ್.ನಾರಾಯಣರಾಯರೂ ಒಬ್ಬರು. ಅವರ ಅನುವಾದಗಳು ಅಚಿಂತಿತವಾಗಿ ಮಾಡಿದ ಪ್ರಯತ್ನಗಳಲ್ಲ. ಕನ್ನಡ ಸಾಹಿತ್ಯ ಪ್ರಗತಿ ಯಾವ ಮಾರ್ಗದಲ್ಲಿ ಸಾಗಬೇಕು ಎಂಬುದನ್ನು ಕುರಿತು ಅವರು ಯೋಚಿಸಿದ್ದರು ; ವಸ್ತು, ಛಂದಸ್ಸು, ಶೈಲಿ ಇವುಗಳೆಲ್ಲೆಲ್ಲ ಬದಲಾವಣೆ ಅವಶ್ಯಕವೆಂದು ಮನಗಂಡಿದ್ದರು. ತಮ್ಮ 'ಆಂಗ್ಲ ಕವಿತಾಸಾರ'ದ ಮೊದಲ ನುಡಿಯಲ್ಲಿ ಅವರು ಹೀಗೆ ಹೇಳಿದ್ದಾರೆ:* "ಪದ್ಯಗಳಲ್ಲಿ ಕೆಲವು ಪ್ರಸಿದ್ಧ ಕೃತಿಗಳನ್ನು ಅನುವಾದಿಸಿ ಹಾಕಿದೆ. ಯುಕ್ತವಾಗಿ

---

* ಹ. ನಾರಾಯಣರಾಯರ ಪುಸ್ತಕವನ್ನು ನಾನು ನೋಡಿಲ್ಲ. ಅದರ ವಿಷಯುವಾಗಿಯೂ ಗೋವಿಂದ ಪೈಯವರ ವಿಷಯುವಾಗಿಯೂ ಇಲ್ಲಿ ಬರೆದಿರುವುದಕ್ಕೆಲ್ಲ ನಾನು ತೀ. ನಂ. ಶ್ರೀಕಂಠಯ್ಯನವರು. ೧೯೫೩ ರಲ್ಲಿ ಅಚ್ಚಾದ 'ಇಂಗ್ಲಿಷ್ ಗೀತೆಗಳು'ಗೆ ಬರೆದಿರುವ ಮುನ್ನುಡಿಗೆ ಋಣಿ. ಇಲ್ಲಿ ಉದಾಹರಿಸಿರುವ ನಾರಾಯಣರಾಯರ ವಾಕ್ಯಗಳನ್ನು ನಾನು ಆ ಮುನ್ನುಡಿಯಿಂದಲೇ ತೆಗೆದುಕೊಂಡಿದ್ದೇನೆ.

ಕಂಡಂತೆ ಅಲ್ಲಲ್ಲಿ ಕೆಲವು ಅಂಶಗಳನ್ನು ಲೋಪಿಸಿ, ಇನ್ನು ಕೆಲವನ್ನು ಬದಲಿಸಿದೆ. ಕನ್ನಡದ ಛಂದಸ್ಸಿನಲ್ಲಿ ಪೂರ್ವಿಕರು ಆಗಾಗ್ಗೆ ನೂತನ ರೀತಿಗಳನ್ನು ಹುಟ್ಟಿಸಿದರು. ಈಗಲೂ ಹೊಸ ಮಾರ್ಗಗಳನ್ನೇಕೆ ತೆರೆಯಬಾರದೆಂದು ಸರಳ ಕಾವ್ಯ ಪ್ರಿಯರು ಕೇಳುತ್ತಾರೆ. ಈ ಪದ್ಯಗಳಲ್ಲಿ ಪ್ರಾಸವನ್ನು ತೊರೆಯದಿದ್ದರೂ ಪೂರ್ವ ಕವಿಗಳ ನಿಯಮಗಳನ್ನು ಸೂಕ್ಷ್ಮವಾಗಿ ಅನುಸರಿಸಿಲ್ಲ."

ನಾರಾಯಣರಾಯರು ಇಂಗ್ಲಿಷ್ ಸಾಹಿತ್ಯದಿಂದ ಸ್ಫೂರ್ತಿ ಪಡೆದು, ಹೊಸ ದಾರಿಯನ್ನು ಉದ್ದೇಶಪೂರ್ವಕವಾಗಿ ಹಿಡಿದಿದ್ದಾರೆಂಬುದು ಮೇಲೆ ಉದಾಹರಿಸಿದ ವಾಕ್ಯಗಳಿಂದ ಸ್ಪಷ್ಟವಾಗುತ್ತದೆ. ೧೯೧೧ರಲ್ಲೇ 'ಪ್ರಾಸವನೀಗಲೆ ತೊರೆದು ಬಿಡುವುದೆ ನಿಶ್ಚಯಂ' ಎಂದು ತೀರ್ಮಾನಿಸಿದ ಮಂ.ಗೋವಿಂದ ಪೈಯವರನ್ನೂ ನಾರಾಯಣರಾಯರ ಜೊತೆಗೆ ಸ್ಮರಿಸಬೇಕು. ಅಂದ ಮೇಲೆ ಶ್ರೀಕಂಠಯ್ಯನವರು ಅನುವಾದ ಮಾಡಿದ್ದಕ್ಕಿಂತ ಮುಂಚೆಯೂ ಹಳೆಯ ಸಾಹಿತ್ಯದ ವಿಷಯದಲ್ಲಿ ಅತೃಪ್ತಿ ಹುಟ್ಟಿತ್ತು: ಹೊಸ ಪ್ರಭಾವ ಕಾಣಿಸಿಕೊಂಡಿತ್ತು. ಆದರೆ ಈ ಹಿಂದಿನವರಲ್ಲಿ ಸಂದೇಹ ಶಂಕೆಗಳು ಕಾಣುತ್ತವೆ. ಹೊಸ ಮಾರ್ಗ ಇಂಥದೇ ಎಂಬುದನ್ನು ನಿಶ್ಚಸ್ಪಷ್ಟವಾಗಿ ತೀರ್ಮಾನಿಸಿ ತಮ್ಮ ಮನಸ್ಸಿನಲ್ಲಿದ್ದ ಹೊಸ ಧ್ಯೇಯಗಳನ್ನು ಯಾವ ಶಂಕೆಯೂ ಇಲ್ಲದೆ ಮೊದಲಿನಿಂದ ಕೊನೆಯವರೆಗೂ ಅನುಷ್ಠಾನಕ್ಕೆ ತಂದವರೆಂದರೆ ಶ್ರೀಕಂಠಯ್ಯನವರು. ಅವರ ಪುಸ್ತಕದ ಪ್ರಭಾವವನ್ನು ಇಂಗ್ಲಿಷ್ ಸಾಹಿತ್ಯದ ಮೇಲೆ Lyrical Ballads ಬೀರಿದ ಪ್ರಭಾವಕ್ಕೆ ಅನೇಕ ಬಾರಿ ಹೋಲಿಸಲಾಗಿದೆ. ಕನ್ನಡದಲ್ಲಿ ರೊಮ್ಯಾಂಟಿಕ್ ದಂಗೆ,ಕನ್ನಡ ಸಾಹಿತ್ಯದ ನವೋದಯ, ಯಾವುದೋ ಒಂದು ದಿನ ಬೆಳಗ್ಗೆ ಪ್ರಾರಂಭವಾಯಿತು ಎಂದು ಹೇಳುವುದು ಸರಿಯಲ್ಲ. ಆದರೆ ಅಂಥ ಒಂದು ದಿನವನ್ನು ಗೊತ್ತುಮಾಡಿ ಹೇಳಲೇಬೇಕು" ಎಂದರೆ 'ಇಂಗ್ಲಿಷ್ ಗೀತೆಗಳು' ಪ್ರಕಟವಾದ ದಿನ ಎಂದು ಉತ್ತರ ಕೊಡಬಹುದು. ಆ ದಿನದಿಂದ ಶ್ರೀಕಂಠಯ್ಯನವರು ಹೊಸ ಚಳವಳಿಯ ನಾಯಕರಾದರು.

ಈ ಪುಸ್ತಕದಲ್ಲಿ ಅರವತ್ತು ಕವನಗಳಿವೆ. ಷೆಲ್ಲಿಯಿಂದ ಒಂಬತ್ತು; ವರ್ಡ್ಸ್‌ವರ್ತ್‌ನಿಂದ ಐದು; ಸ್ಕಾಟ್, ಟೆನಿಸನ್ ಮತ್ತು ಬ್ರೌನಿಂಗ್‌ರಿಂದ ಮೂರು ಮೂರು; ಷೇಕ್‌ಸ್ಪಿಯರ್, ಸೌದಿ ಮತ್ತು ಬೈರನ್‌ನಿಂದ ಎರಡೆರಡು, ಉಳಿದುವು ಇತರ ಕವಿಗಳಿಂದ. ಇಂಗ್ಲಿಷ್ ಸಾಹಿತ್ಯದ ಪರಿಚಯವುಳ್ಳವರು ಯಾರಾದರೂ ಇಲ್ಲಿ ಆರಿಸಿರುವ ಕವನಗಳ ಶೀರ್ಷಿಕೆಗಳ ಮೇಲೆ ಕಣ್ಣಾಡಿಸಿದರೆ ಸ್ವಲ್ಪ ಆಶ್ಚರ್ಯವಾದೀತು. ಶ್ರೀಕಂಠಯ್ಯನವರು 'ಇಂಗ್ಲೆಂಡ ನಾವಿಕರು, (Ye Mariners of England) 'ಇಂಗ್ಲೆಂಡ್' (What have I done for you, England, My England), 'ಆಳೌ ಬ್ರಿಟಾನಿಯಾ' (Rule, Britannia), 'ರಾಯಲ್ ಜಾರ್ಜ್ ಮುಳುಗಿ ಹೋದದ್ದು' (The Loss of the Royal George)—ಈ ಕವನಗಳನ್ನೇಕೆ ಆಯ್ದುಕೊಂಡರು? 'ಹೋದ ಕೆಂಪೆನ್‌ಫೆಲ್ಟ'ನಿಗಾಗಿ ಕನ್ನಡಿ

ಗರು ಕಣ್ಣೀರು ಸುರಿಸಿಯಾರೆ? The Solitary Reaper La Belle Dame Sans Merci, The West Wind—ಇಂಥ ಪ್ರಸಿದ್ಧ ಕವನಗಳನ್ನೇಕೆ ಬಿಟ್ಟರು? ವರ್ಡ್ಸ್‌ವರ್ತ್‌ನ ಲೂಸಿ ಪದ್ಯಗಳು (The Lucy poems) ಅವರಿಗೆ ಪ್ರಿಯವಾದುವೆಂದು ನಾವೆಲ್ಲ ಬಲ್ಲೆವು. ಅವನ್ನೇಕೆ ಬಿಟ್ಟರು?

ತಮ್ಮ ಅರಿಕೆಯಲ್ಲಿ ಅವರೇ ಈ ಪ್ರಶ್ನೆಗೆ ಒಂದು ಉತ್ತರವನ್ನು ಕೊಟ್ಟಿದ್ದಾರೆ. "ಇಲ್ಲಿ ಕೊಟ್ಟಿರುವ ಕವನಗಳೆಲ್ಲಾ ಇಂಗ್ಲಿಷ್ ಕಾವ್ಯಮಾಲೆಯ ನಾಯಕರತ್ನಗಳೆಂದು ಆದುಕೊಂಡುವಲ್ಲ. ಉತ್ತಮರಾದ ಕವಿಗಳೂ ಇಲ್ಲಿ ಎಲ್ಲರೂ ಇಲ್ಲ. ಆಗಾಗ್ಗೆ ಓದುತ್ತಿರುವಾಗ ನನ್ನ ಮನಸ್ಸಿಗೊಪ್ಪಿ, ನನ್ನ ಕೈ ಮೀರಿದುವಾಗಿ ಕಂಡು ಬಂದ ಗೀತೆಗಳಿವು. ಇಂಗ್ಲಿಷ್ ಕವಿಗಳು ಶೃಂಗಾರರಸವನ್ನು ಹೇಗೆ ಗಂಭೀರವಾಗಿಯೂ ಸೂಕ್ಷ್ಮವಾಗಿಯೂ ಸ್ವಾಭಾವಿಕವಾಗಿಯೂ ತೋರಿಸುವರೆಂಬುದನ್ನು ತಿಳಿಸುವುದಕ್ಕಾಗಿ ಆ ಬಗೆಯ ಗೀತೆಗಳು ಕೊಂಚ ಹೆಚ್ಚಾಗಿ ಬಂದಿವೆ."'ಇಂಗ್ಲೆಂಡ್' ನಂಥ ಕವನಗಳನ್ನು ಆಯ್ದುಕೊಂಡದ್ದಕ್ಕೆ ಅವರಿಗೆ ಆ ದೇಶದ ಮೇಲಿದ್ದ ಪ್ರೇಮ-ಅದನ್ನು ಅವರೇನೂ ಬಚ್ಚಿಡಲಿಲ್ಲ—ಕಾರಣವೆನ್ನಬಹುದು. ಆ ಕವನಗಳಲ್ಲಿ ಎದ್ದು ಕಾಣುವ ದೇಶಪ್ರೇಮ,ದೇಶಭಕ್ತಿಗಳು ನಮ್ಮಲ್ಲೂ ಹೆಚ್ಚು ಬೆಳೆಯುವಂತೆ ಪ್ರೇರಣೆ ಬರಲಿ ಎಂಬ ಉದ್ದೇಶವೂ ಇದ್ದಿರಬಹುದು. "ನನ್ನ ಕೈ ಮೀರದುವಾಗಿ ಕಂಡು ಬಂದ ಗೀತೆಗಳಿವು" ಎಂಬ ಮಾತಿನಲ್ಲಿರುವ ನಮ್ರತೆಯನ್ನು ಕಂಡ ಮೇಲೆ ನಾವು ಅವರ ಆಯ್ಕೆಯ ವಿಷಯದಲ್ಲಿ ಪ್ರಶ್ನೆ ಹಾಕುವುದು ಉಚಿತವಲ್ಲ. ಕೆಲವು ವರ್ಷಗಳು ಕಳೆದ ಮೇಲೆ ಇನ್ನೂ ಹೆಚ್ಚು ಕವನಗಳು, ಇನ್ನೂ ಉತ್ತಮವಾದ ಕವನಗಳು ಅವರಿಗೆ 'ಕೈಮೀರದುವಾಗಿ' ಕಂಡು ಬರುತ್ತಿದ್ದವೋ ಏನೊ ಎಂದು ನನಗೆ ಕೆಲವು ವೇಳೆ ಅನ್ನಿಸಿದೆ. ಆದರೆ ೧೯೩೦ ರಿಂದಾಚೆಗೆ ಅವರು ಹೆಚ್ಚು ಕಾಲವನ್ನು ಬರವಣಿಗೆಗಾಗಿ ಉಪಯೋಗಿಸಿಕೊಂಡಿದ್ದರೆ—ನಮ್ಮ ದುರ್ದೈವ, ಅವರು ಹಾಗೆ ಮಾಡಲಿಲ್ಲ—ಬಹುಶಃ ಅವರ ಮನಸ್ಸು ಗೀತೆಗಳನ್ನು ಬಿಟ್ಟು ಷೇಕ್‌ಸ್ಪಿಯರ್‌ನ ಮತ್ತು ಈಸ್ಕಿಲಸ್‌ನ ನಾಟಕಗಳ ಕಡೆಗೆ ತಿರುಗುತ್ತಿತ್ತು.

ಇಲ್ಲಿರುವ ಅನುವಾದಗಳೆಲ್ಲವೂ ಉನ್ನತಮಟ್ಟದವೆಂದು ಹೇಳಲಾಗುವುದಿಲ್ಲ; ಹಾಗಿಲ್ಲದಿರುವುದು ಅಸ್ವಾಭಾವಿಕವೂ ಅಲ್ಲ. ಕೆಲವು ಭಾಷಾಂತರಗಳು ಕಲೆಯ ಶಿಖರವನ್ನು ಮುಟ್ಟಿವೆ. "ಭಾಷಾಂತರ ಮಾಡುವಾಗ ಏನು ಕೈತಪ್ಪಿಸಿಕೊಂಡು ಮರೆಯಾಗುತ್ತದೆಯೋ ಅದೇ ಕಾವ್ಯಗುಣ"ಎಂದು ಕೆಲವರು ಹೇಳುವುದುಂಟು; ಇಲ್ಲಿಯ ಒಂದೆರಡು ಅನುವಾದಗಳನ್ನು ನೋಡಿದಾಗ ಈ ಮಾತನ್ನು ತಿರುಗು ಮುರುಗು ಮಾಡಿ "ಭಾಷಾಂತರ ಮಾಡುವಾಗ ಯಾವುದು ಬಂದು ಸೇರಿಕೊಳ್ಳುತ್ತದೆಯೋ ಅದೇ ಕಾವ್ಯಗುಣ" ಎಂದು ಹೇಳುವಂತಾಗುತ್ತದೆ-ಸ್ವಲ್ಪ ಉತ್ಪ್ರೇಕ್ಷೆಗೆ ಮನಸೋತರೆ.

ವರ್ಡ್ಸ್‌ವರ್ತ್‌ನ 'ಹೊಳೆಕರೆ'(Written in March) ಅವರ ಪ್ರಥಮ ಪ್ರಯತ್ನವಂತೆ. ಅದು ಮೂಲವನ್ನು ಪೂರ್ತಿ ಅನುಸರಿಸಿಲ್ಲ. ಅದರ ಛಂದಸ್ಸು ಹೊಸದಲ್ಲ. ಆದರೂ ಅದರ ಪದಗಳ ಮತ್ತು ಶೈಲಿಯ ಸೌಂದರ್ಯವೂ ಭಾವ ಪ್ರಚೋದನ ಶಕ್ತಿಯೂ ನಮ್ಮ ಮನಸ್ಸನ್ನು ಸೆಳೆಯುತ್ತವೆ. ಕರ್ಣಾಟಕದ ಜನರಿಗೆ ಅತ್ಯಂತ ಪ್ರಿಯವಾಗಿರುವ ಅನುವಾದಗಳೆಂದರೆ ನ್ಯೂಮನ್‌ನ Lead Kindly Light (ಕರುಣಾಳು ಬಾ ಬೆಳಕೆ)ಮತ್ತು ಥಾಮಸ್ ಹುಡ್‌ನ The Bridge of Sighs (ದುಃಖ ಸೇತು). 'ದುಃಖ ಸೇತು'ವನ್ನಂತೂ ಲೆಕ್ಕವಿಲ್ಲದಷ್ಟು ಜನ ವೇದಿಕೆಗಳ ಮೇಲಿಂದ ಪಠಿಸಿ ಜನರಿಗೆ ಆನಂದ ಕೊಟ್ಟಿದ್ದಾರೆ. ಅದರಲ್ಲಿ ಶ್ರೀಕಂಠಯ್ಯನವರು ಸ್ವತಃ ಸೇರಿಸಿದ ನಾಲ್ಕು ಪಂಕ್ತಿಗಳ ಔಚಿತ್ಯದ ವಿಷಯದಲ್ಲಿ ಭಿನ್ನಾಭಿಪ್ರಾಯವಿರುವುದು ಸಾಧ್ಯ. ಆದರೂ ಒಟ್ಟಿನಲ್ಲಿ ಅದು ಬಹು ಸೊಗಸಾದ ಕವನವೆಂದು ನಿಸ್ಸಂದೇಹವಾಗಿ ಹೇಳಬಹುದು. ಪದಸೌಂದರ್ಯ, ಲಯ, ಯೋಚನಾಪರತೆ,ಕರುಣೆಯ ಅಭಿವ್ಯಕ್ತಿ—ಇವೆಲ್ಲದರಲ್ಲೂ ಅದು ಮೂಲವನ್ನು ಮೀರಿಸಿದೆ.

ಅದರಂತೆಯೇ ಉತ್ತಮವಾದ ಇತರ ಸಾಧನೆಗಳೆಂದರೆ: ವರ್ಡ್ಸ್‌ವರ್ತ್‌ನ 'ಮುದ್ದಿನ ಕುರಿಮರಿ' (The Pet Lamb) ಮತ್ತು 'ಜೋಳಕನ್ನೆಯರು' (The Seven Sisters), 'ಮುದಿಯ ರಾಮಗೌಡ (ಲೇಡಿ ಲಿಂಡ್‌ಸೆಯ, Auld Robin Gray); 'ಕನಕಾಂಗಿ' (ಕೋಲ್ ರಿಜ್‌ನ Love); ಸ್ವಲ್ಪ ಬೇರೆ ತರದ, ಆದರೆ ಚೆನ್ನಾಗಿ ಬಂದಿರುವ 'ಕಾಳಗದ ಪದ' (ಸ್ಕಾಟ್‌ನ Gathering Song). ನನಗೆ ಅತ್ಯಂತ ಪ್ರಿಯವಾದುವೆಂದರೆ 'ಜೋಳ ಕನ್ನೆಯರು', 'ಕನಕಾಂಗಿ' ಮತ್ತು ಕುಂದುಕೊರತೆಗಳ ಸೊಂಕೇ ಇಲ್ಲದ, ಪೂರ್ಣ ಸೌಂದರ್ಯದಿಂದ ಮೆರೆಯುವ ಪುಟ್ಟ ರತ್ನ—'ಬಿಂಕದ ಸಿಂಗಾರಿ'(ಸ್ಕಾಟ್‌ನ Proud Maisie in the Wood). ಈ ಕೊನೆಯ ಕವನದಲ್ಲಿ ಅನವಶ್ಯಕವಾದ ಅಥವಾ ಕೇವಲ ಅಲಂಕಾರಕ್ಕಾಗಿ ಬಂದ ಒಂದು ಪದವೂ ಇಲ್ಲ; ಮೂಲದ ಮಿತಿ, ಬಿಗಿ ಶಕ್ತಿ ಕುಂದಿಲ್ಲ—ಹೆಚ್ಚಿದೆ; ಅದು ಪರರಾಷ್ಟ್ರದಿಂದ ತಂದಂತೆ ತೋರುವುದಿಲ್ಲ, ಅದರ ರುಚಿ ಭಾರತಕ್ಕೆ ಸಹಜವಾದದ್ದು.

ಷೆಲ್ಲಿಯ ಕವನಗಳ ಅನುವಾದದಲ್ಲಿ ಸಾಮಾನ್ಯವಾಗಿ ಕೊರತೆ ಕಾಣುತ್ತದೆ. ಒಂದೆರಡು ಬರ್ನ್ಸ್‌ನ ಕವನಗಳು ಚೆನ್ನಾಗಿವೆ. ಒಟ್ಟಿನಲ್ಲಿ ಭಾಷಾಂತರ ಕಲೆ ಸೊಗಸಾಗಿ ಸಿದ್ಧಿಸಿರುವುದರಿಂದ ಕೆಟ್ಟಿರುವುದಕ್ಕೆ ಅನುವಾದಗಳಿಗೆ ನಾವು ಅಷ್ಟಾಗಿ ಗಮನ ಕೊಡಬೇಕಾಗಿಲ್ಲ; ಕೊಟ್ಟರೆ, 'ನಾವು ಇದರಿಂದ ಕಲಿಯಬಹುದಾದ ಪಾಠವೇನು?' ಎಂಬ ದೃಷ್ಟಿಯಿಂದ ಕೊಡಬೇಕು. ತಾವು ಎಲ್ಲೆಲ್ಲಿ ಸೋತರೆಂಬುದನ್ನು ಶ್ರೀಕಂಠಯ್ಯ

ನವರು ಚೆನ್ನಾಗಿ ತಿಳಿದಿದ್ದರು. ಆ ಕವನಗಳನ್ನು ಇಲ್ಲಿ ಉಳಿಸಿಕೊಂಡಿರುವುದಕ್ಕೆ ಕಾರಣ 'ಇಂಥ ಪ್ರಯೋಗಗಳಿಂದ ಕಲಿಯಬಹುದಾದ ಪಾಠವಿದೆ' ಎಂಬುದು.

'ಇಂಗ್ಲಿಷ್ ಗೀತೆಗಳು' ತನ್ನ ಸ್ವಂತ ಉತ್ಕೃಷ್ಟತೆಯಿಂದಾಗಿ, ಬಹುಶಃ ಅದಕ್ಕಿಂತ ಹೆಚ್ಚಾಗಿ ಐತಿಹಾಸಿಕ ಕಾರಣಗಳಿಂದಾಗಿ, ನಮ್ಮ ಸಾಹಿತ್ಯದಲ್ಲಿ ಒಂದು ಮೈಲಿಗಲ್ಲು ಎನ್ನಿಸಿಕೊಂಡು ಸ್ಥಿರವಾಗಿ ನಿಲ್ಲುತ್ತದೆ. ಅದು ಪ್ರಕಟವಾಗಿ ರಾತ್ರಿ ಕಳೆದು ಬೆಳಗಾಯಿತು ಎನ್ನುವುದರೊಳಗೆ ಕರ್ಣಾಟಕದ ಎಲ್ಲ ಕಡೆಗಳಿಂದಲೂ ಕಾವ್ಯಗಾನ ಕೇಳಿ ಬರಲಾರಂಭಿಸಿತು. ಕವಿಗಳು ಅದುವರೆಗೆ ಕಾಣದಿದ್ದ ಹೊಸದೊಂದು ಪ್ರಪಂಚವೇ ಅವರ ಕಣ್ಣ ಮುಂದೆ ತೆರೆದಂತಾಯಿತು. ಮಂಜಾಗಿದ್ದ ಕಣ್ಣುಗಳೂ ಮಂದವಾಗಿದ್ದ ಕಿವಿಗಳೂ ಹಠಾತ್ತಾಗಿ ಹೊಸ ಚೈತನ್ಯ ಪಡೆದುಕೊಂಡವು. ಮಾವಿನ ಚಿಗುರು, ಕೋಗಿಲೆಯ ಹಾಡು, ಕರಿ ಮೋಡದ ಹಿನ್ನೆಲೆಯ ಮೇಲೆ ಚಿತ್ರಿತವಾಗುವ ಮಳೆ ಬಿಲ್ಲು, ಹೊಲ ಗದ್ದೆಗಳ ಧಾನ್ಯ ಶ್ರೀಯ ಮೇಲೆ ಮೃದುವಾಗಿ ಬೀಸಿ ಪುಲಕವೆಬ್ಬಿಸುವ ಗಾಳಿ—ಇವೆಲ್ಲ ಮಿತಿಯರಿಯದೆ ಔಚಿತ್ಯವರಿಯದೆ ಎರವು ತಂದು ಕಾವ್ಯದ ಮೇಲೆ ಹೇರಿದ ಒಡವೆಯಾಗಿರುವುದನ್ನು ಬಿಟ್ಟು ಕಣ್ಣು ಕಿವಿಗಳ ನಿಜವಾದ ಅನುಭವವಾದವು. ಹೊಲದಲ್ಲಿ ಬೆವರು ಸುರಿಸುತ್ತ ದುಡಿಯುವ ರೈತ; ಬಟ್ಟಲುಗಣ್ಣು ಬಿಟ್ಟುಕೊಂಡು ಪಟಾಕಿ ಹೂ ಬಾಣಗಳನ್ನು ಹಾರಿಸಿ ನಲಿಯುವ ಮಗು; ಅಂಗಳವಲ್ಲಿಯ ಹೀರೆಯ ಹೂವು; ಅರೆಕ್ಷಣ ಮನಸ್ಸಿನಲ್ಲಿ ಸುಳಿದು ಮಾಯವಾದ ಹರ್ಷ ಅಥವಾ ದುಗುಡ; ನಾವೇ ಅರಿಯದ, ನಾಮರೂಪಗಳಿಲ್ಲದ ಮಾತಿಗೆ ಸಿಕ್ಕದ, ಯಾವುದೋ ಬಯಕೆ; ನಕ್ಷತ್ರವನ್ನು ಹಿಡಿಯಲು ಕೈಚಾಚಿ ಹಾರುವ ಮಹತ್ವಾಕಾಂಕ್ಷೆ—ಯಾವುದು ಬೇಕಾದರೂ ಕಾವ್ಯಕ್ಕೆ ವಿಷಯವಾಗಬಹುದು ಎಂಬ ರಹಸ್ಯ ಇದ್ದಕ್ಕಿದ್ದ ಹಾಗೆಯೇ ಬಯಲಾಯಿತು. ಸರಳವಾದ ನಮ್ಮ ದಿನದಿನದ ಮಾತುಗಳಿಂದಲೇ ಆಯ್ದ ಪದಗಳೂ ಪ್ರತಿಮೆಗಳೂ ಕಾವ್ಯಕ್ಕೆ ಸೌಂದರ್ಯ ಕೊಡಬಲ್ಲವು, ಕವಿಯಾಗಬೇಕಾದರೆ ಪಂಡಿತನೂ ಆಗಬೇಕಾದ್ದು ಅನಿವಾರ್ಯವಲ್ಲ ಎಂಬುದನ್ನು ಎಲ್ಲರೂ ಮನಗಂಡರು.

ಯಾವ ಸಾಹಿತ್ಯದಲ್ಲಾಗಲಿ ಭಾವಗೀತೆಯ (lyric) ಮನೋಧರ್ಮ ಕಂಡುಬರದಿರುವುದು ಸಾಧ್ಯವಲ್ಲ. ಆದರೆ ನಮ್ಮ ಸಾಹಿತ್ಯದಲ್ಲಿ ಅದು ಚಂಪೂ ಕಾವ್ಯಗಳ ಅಥವಾ ಬೇರೆ ತರದ ದೀರ್ಘ ಕಾವ್ಯಗಳ ನಡುವೆ ಅಲ್ಲಲ್ಲಿ ಸೇರಿಕೊಂಡು ಇಣುಕಿ ನೋಡುತ್ತದೆಯೇ ಹೊರತು, ತಾನೇ ಸ್ವತಂತ್ರವಾಗಿ ನಿಂತಿಲ್ಲ. ಸಂಸ್ಕೃತದಲ್ಲಿ ಭಾವಗೀತೆಯು ಮುಕ್ತಕ ಎಂಬ ರೂಪದಲ್ಲಿ ದೊರೆಯುತ್ತದೆ. ಅಲ್ಲಿಯೂ ಕೂಡ ಷೆಲ್ಲಿಯ Skylark ಗೆ, ಕೀಟ್ಸ್‌ನ Nightingale ಗೆ, ವರ್ಡ್ಸ್‌ವರ್ತ್‌ನ Ode on the Intimations of Immortality ಗೆ ಹೋಲಿಸಬಹುದಾದ, ನಾಲ್ಕಾರು

ಪದ್ಯಗಳು ಸೇರಿ ಒಂದು ಭಾವಬದ್ಧವಾದ ಕವನವಾಗುವಂಥ ಭಾವಗೀತೆಗಳು ಇಲ್ಲವೆಂದು ತೋರುತ್ತದೆ. 'ಇಂಗ್ಲಿಷ್ ಗೀತೆಗಳು' ಪ್ರಕಟವಾದ ಮೇಲೆ ಭಾವಗೀತೆಯು ಇತರ ಕಾವ್ಯರೂಪಗಳ ಬಡ ಬಂಧುವಾಗಿರುವುದನ್ನು ಬಿಟ್ಟು ತನ್ನದೇ ಆದ ರಾಜ್ಯವನ್ನು ಸ್ಥಾಪಿಸಿಕೊಂಡಿದೆ. ಇಂದು ನಮ್ಮಲ್ಲಿರುವ ಭಾವಗೀತಾ ಸಂಪತ್ತನ್ನು ನೆನೆದರೆ ನಾವು ಯಾರೆದುರಿಗೆ ಬೇಕಾದರೂ ಹೆಮ್ಮೆಯಿಂದ ಭುಜ ತಟ್ಟಿಕೊಳ್ಳಬಹುದು ಎನ್ನಿಸುತ್ತದೆ.

ಭಾವಗೀತೆಗಳು ಹೀಗೆ ವಿಪುಲವಾಗಿ ಬರಬೇಕಾದರೆ ಕವಿಗೆ ಛಂದಸ್ಸಿನ ವಿಷಯದಲ್ಲಿ ಸ್ವಾತಂತ್ರ್ಯವಿರಬೇಕು. ಪುರಾತನ ಗ್ರೀಕರು ಪ್ರಾಕ್ರಸ್ಟೀಸ್ ಎಂಬುವನೊಬ್ಬನ ಕಥೆ ಹೇಳುತ್ತಿದ್ದರು. ಅವನ ಮನೆಗೆ ಯಾರಾದರೂ ಅತಿಥಿಗಳು ಬಂದರೆ ಅವರನ್ನು ಒಂದು ಹಾಸಿಗೆಯ ಮೇಲೆ ಮಲಗಿಸುತ್ತಿದ್ದ. ಹಾಸಿಗೆ ಅತಿಥಿಗಿಂತ ಉದ್ದವಾಗಿದ್ದರೆ, ಅದರ ಉದ್ದಕ್ಕೆ ಸರಿಹೋಗುವಂತೆ ಅವನ ಕಾಲುಗಳನ್ನೂ ತಲೆಯನ್ನೂ ಭಯಂಕರ ಬಲ ಪ್ರಯೋಗದಿಂದ ಎಳೆಯುತ್ತಿದ್ದ; ಹಾಸಿಗೆ ಚಿಕ್ಕದಾಗಿದ್ದರೆ ಅದರ ಅಳತೆಗೆ ಸರಿಯಾಗಿ ಅತಿಥಿಯ ತಲೆಯನ್ನೋ ಕಾಲುಗಳನ್ನೋ ಕತ್ತರಿಸಿಬಿಡುತ್ತಿದ್ದ. ಹೇಗಾದರೂ ಅತಿಥಿಗೆ ಸಾವು ಸಿದ್ಧ. ಅತಿಯ ಅಳತೆಗೆ ಸರಿಯಾದ ಹಾಸಿಗೆಯನ್ನು ಕೊಡಬೇಕೆಂಬ ವಿಚಾರವೇ ಇಲ್ಲ. ಸಂಕೋಚನ ವಿಕಸನ ಸೌಲಭ್ಯಗಳಿಲ್ಲದಿದ್ದರೆ ಛಂದಸ್ಸು ಕಾವ್ಯಕ್ಕೆ ಪ್ರಾಕ್ರಸ್ಟೀಸ್‌ನ ಹಾಸಿಗೆಯಾಗಿ ಪರಿಣಮಿಸಬಹುದು. ಕವಿ ತನ್ನ ಮನಸ್ಸಿನ ಭಾವಗಳನ್ನೂ ಯೋಚನೆಗಳನ್ನೂ ಅದರೊಳಕ್ಕೆ ಹೇಗೋ ಗಿಡಿಯಬೇಕಾಗುತ್ತದೆ. ಶ್ರೀಕಂಠಯ್ಯನವರು ಛಂದಸ್ಸಿನ ವಿಷಯದಲ್ಲಿ ಸ್ವಾತಂತ್ರ್ಯವನ್ನು ವಹಿಸಿದರು, ತಮಗೆ ಸೂಕ್ತ ತೋರಿದಂತೆ ಹೊಸ ಛಂದಸ್ಸುಗಳನ್ನು ನಿರ್ಮಿಸಿಕೊಂಡರು. ಛಂದಸ್ಸು ಭಾವಾಭಿವ್ಯಕ್ತಿಗೆ ತಡೆಯಾಗುವ ಬದಲು ಅದಕ್ಕೊಂದು ಸಾಧನವಾಯಿತು. ಕವಿಯ ಅವಶ್ಯಕತೆಗೆ ತಕ್ಕಂತೆ ಅದು ಬಾಗುತ್ತಿತ್ತು, ಬಳುಕುತ್ತಿತ್ತು, ಹಿಗ್ಗುತ್ತಿತ್ತು, ಕನ್ನಡ ಕವಿಗೆ ಶ್ರೀಕಂಠಯ್ಯನವರಿಂದ ಬಂದ ಬಲು ದೊಡ್ಡ ಕೊಡುಗೆಯೆಂದರೆ ಛಂದಸ್ಸಿನ ಸ್ವಾತಂತ್ರ್ಯ, ಹೊಸ ಛಂದಸ್ಸುಗಳನ್ನು ನಿರ್ಮಿಸುವ ವಿಧಾನ.

ನವೋದಯ ಸಾಹಿತ್ಯಕ್ಕೆ ಮತಧರ್ಮಗಳು ನಿಷಿದ್ಧವಲ್ಲವಾದರೂ ಅದು ಬಹುಮಟ್ಟಿಗೆ ಲೌಕಿಕ ಸಾಹಿತ್ಯ. ಮೊದಮೊದಲು ಬಂದ ಕವನಗಳು ಪ್ರಕೃತಿ ಸೌಂದರ್ಯಕ್ಕೂ ಸಾಮಾನ್ಯಮಾನವನ ಸುಖದುಃಖಗಳಿಗೂ ಅಭಿವ್ಯಕ್ತಿ ಕೊಟ್ಟವು. ಕ್ಷೀಣ ಸ್ಥಿತಿಗೆ ಬಂದಿದ್ದ ವೀರಕಾವ್ಯಗಳ, ರಾಮಾಯಣ ಮಹಾಭಾರತಗಳ ಖಣಖಣ ಧ್ವನಿಗೆ ಬದಲಾಗಿ ಕೋಗಿಲೆ-ಕಾಜಾಣಗಳ ಗಾನ ಕೇಳಿಬಂತು. ಕೆಲವರು ಮಹಾಕಾವ್ಯಗಳ ಕಾಲ ಆಗಿಹೋಯಿತು ಎಂದು ಸಹ ಹೇಳಲಾರಂಭಿಸಿದ್ದರು.

ಆದರೆ ಕ್ರಮೇಣ, ಯುವಕವಿಗಳು ಸಾಹಿತ್ಯ ಕ್ಷೇತ್ರವನ್ನು ವಿಸ್ತರಿಸಿದರು. ಸಾಹಿತ್ಯ ಸಮುದ್ರ ಮಥನದಿಂದ ಉದ್ಭವಿಸಿದ ಹೊಸ ಅಮೃತದಿಂದ ಪುಷ್ಟಿಗೊಂಡು ಮಹಾಕಾವ್ಯವೂ ಸುಮಾರು ಎರಡು ದಶಕಗಳಾದ ಮೇಲೆ ಹೊಸ ವೈಭವದಿಂದ ಹೊಸದೊಂದು ದರ್ಶನಕ್ಕೆ ಅಭಿವ್ಯಕ್ತಿ ಕೊಡಲು ಮೂಡಿಬಂತು—ಶ್ರೀ ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ರೂಪದಲ್ಲಿ.

ಕನ್ನಡ ಸಾಹಿತ್ಯಕ್ಕೆ ಕ್ರಾಂತಿಯೇನೂ ಹೊಸದಲ್ಲ. ಇಂಥ ಕ್ರಾಂತಿಗಳಲ್ಲಿ ಅತ್ಯಂತ ಫಲಪ್ರದವಾದ ಕ್ರಾಂತಿಯನ್ನು ಆರಂಭಿಸಿದ ಕೀರ್ತಿ 'ಇಂಗ್ಲಿಷ್ ಗೀತೆಗಳು' ಗೆ ಸಲ್ಲುತ್ತದೆ.

೨. ಗದಾಯುದ್ಧ ನಾಟಕಂ

ಐದಂಕದ ಈ ನಾಟಕವನ್ನು ಮೊದಲ ಬಾರಿ ಪ್ರದರ್ಶಿಸಿದ್ದು ೧೯೨೫ರಲ್ಲಿ; ಅದು ಪುಸ್ತಕ ರೂಪದಲ್ಲಿ ಪ್ರಕಟವಾದದ್ದು ೧೯೨೬ರಲ್ಲಿ. ಇದು ರನ್ನನ 'ಸಾಹಸ ಭೀಮ ವಿಜಯ'ದ ಆಧಾರದ ಮೇಲೆ ರಚಿಸಿದ್ದು; ಅಥವಾ ಹಾಗೆನ್ನುವುದಕ್ಕಿಂತ ಇದು ರನ್ನನ ಕೃತಿಯಿಂದ ಬೇರ್ಪಡಿಸಿ ತೆಗೆದ ಒಂದು ಭಾಗ ಎನ್ನುವುದು ಹೆಚ್ಚು ಉಚಿತವಾದೀತು. ಅದೂ ನಿಷ್ಕೃಷ್ಟವಾದ ಮಾತಲ್ಲ ಎನ್ನುವುದು ಮುಂದೆ ಸ್ಪಷ್ಟ ವಾಗುತ್ತದೆ. ರನ್ನನ ಕೃತಿಯು ಚಂಪೂ ಕಾವ್ಯ. ಅದರ ವಸ್ತು ಮೊದಲು ಮಹಾ ಭಾರತದಿಂದ ಬಂದದ್ದು. ರನ್ನ ನೇರವಾಗಿ ಮತ್ತು ಮುಖ್ಯವಾಗಿ ಋಣಿಯಾಗಿರು ವುದು ಪಂಪನ 'ವಿಕ್ರಮಾರ್ಜುನ ವಿಜಯ' (ಪಂಪಭಾರತ)ಕ್ಕೆ. ಶ್ರೀಕಂಠಯ್ಯನ ವರು ರನ್ನನ ಕೃತಿಯಲ್ಲಿ ಒಳ್ಳೆಯ ನಾಟಕವೊಂದು ಅಡಗಿಕೊಂಡಿದೆಯೆಂಬುದನ್ನು ಮನಗಂಡು ಅದನ್ನು ಬಿಡಿಸಿ ಸ್ವಾತಂತ್ರ್ಯ ಕೊಟ್ಟರು. ಈ ನಾಟಕದ ಶೈಲಿಗೂ ಕಾವ್ಯಗುಣಕ್ಕೂ ಸಲ್ಲಬೇಕಾದ ಕೀರ್ತಿಯೆಲ್ಲ ರನ್ನನಿಗೇ ಸೇರಬೇಕು. ಕೇವಲ ಗಾತ್ರದ ದೃಷ್ಟಿಯಿಂದ ನೋಡಿದರೆ ಈ ನಾಟಕದಲ್ಲಿ ಕಾವ್ಯದ ಪ್ರಮಾಣ ಸ್ವಲ್ಪ ಕಡಿಮೆ ಎಂದರೂ ಎನ್ನಬಹುದು. ಏಕೆಂದರೆ ನಾಟಕ ಚಂಪುವಿಗಿಂತ ಬಿಗಿಯಾದ ಕೃತಿ; ಆ ಬಿಗಿಗೆ ಭಂಗಬರಲೆಂದು ಶ್ರೀಕಂಠಯ್ಯನವರು ಅನಿವಾರ್ಯವಾಗಿ ಕೆಲವು ಉತ್ತಮ ವಾದ ಪದ್ಯಗಳನ್ನು ಬಿಡಬೇಕಾಯಿತು.

ಶ್ರೀಕಂಠಯ್ಯನವರು ರನ್ನನಿಂದ ಆಯ್ದುಕೊಂಡ ಭಾಗಕ್ಕೆ ನಾಟಕ ರೂಪ ವನ್ನು ಕೊಟ್ಟರು; ಕೆಲವು ಪದ್ಯಗಳನ್ನು ಹಿಂದೆ ಹಾಕಿದರು, ಮತ್ತೆ ಕೆಲವನ್ನು ಮುಂದೆ ಹಾಕಿದರು; ಆಯ್ದ ಭಾಗಗಳಲ್ಲಿ ಅಲ್ಲಲ್ಲಿ ಒಂದು ಭಾಗಕ್ಕೂ ಮತ್ತೊಂ ದಕ್ಕೂ ಕೊಂಡಿ ಅವಶ್ಯಕವೆಂದು ಕಂಡುಬಂದಾಗ ಒಂದೆರಡು ವಾಕ್ಯಗಳನ್ನು ಸೇರಿಸಿ ದರು. "ಒಟ್ಟಿನಲ್ಲಿ ರನ್ನನ ಚಂಪುವಿನಿಂದ ಖಂಡಗಳನ್ನೆತ್ತಿ, ಅಂಕಗಳಾಗಿ ವಿಂಗಡಿಸಿ ದರು. ಅದಕ್ಕಿಂತ ಹೆಚ್ಚಿನದೇನನ್ನಾದರೂ—ರನ್ನ ಮಾಡದೆ ಇದ್ದುದನ್ನು—ಮಾಡಿ ದರೆ ?"ಎಂಬ ಪ್ರಶ್ನೆ ಬರಬಹುದು. ವಿಮರ್ಶಕ ಈ ಪ್ರಶ್ನೆಯನ್ನು ಕೇಳಲೇ ಬೇಕಾ ಗುತ್ತದೆ. ಆದರೆ ಸೂಕ್ಷ್ಮವಾಗಿ ಪರಿಶೀಲಿಸಿದಾಗ "ಹೆಚ್ಚಿನದನ್ನು ಮಾಡಿದ್ದಾರೆ" ಎಂದೇ ಉತ್ತರ ಕೊಡಬೇಕಾಗುತ್ತದೆ. ಕೆಲವು ಅಂಶಗಳನ್ನು ಆಯ್ದುಕೊಳ್ಳುವುದು, ಮತ್ತೆ ಕೆಲವನ್ನು ಬಿಡುವುದು; ಮಾತಿನಲ್ಲಿ ಸ್ವಲ್ಪ ಬದಲಾವಣೆ ಮಾಡುವುದು; ಒಂದು ಪಾತ್ರದ ಮಾತನ್ನು ಮತ್ತೊಂದಕ್ಕೆ ಕೊಡುವುದು, ಸ್ವಂತವಾದ ವಾಕ್ಯ ಗಳನ್ನು (ಅವು ಒಂದೆರಡು ಮಾತ್ರವಾದರೂ ಸರಿಯೆ) ಸೇರಿಸುವುದು—ಇಂಥ

ಸಣ್ಣ ಬದಲಾವಣೆಗಳಿಂದ ನಾಟಕ ನಮ್ಮ ಮೇಲೆ ಒತ್ತುವ ಮುದ್ರೆ ಬೇರೆಯಾಗಬಹುದು. ಆದ್ದರಿಂದ ಈ ನಾಟಕಕ್ಕೆ ಅದರದ್ದೇ ಆದ ವ್ಯಕ್ತಿತ್ವವಿದೆಯೆಂದುಕೊಂಡೇ ಅದನ್ನು ಪರಿಶೀಲಿಸುವುದು ಉತ್ತಮ.

'ಗದಾಯುದ್ಧ ನಾಟಕ'ದ ಕ್ರಿಯೆ (action) ಗೂ ರನ್ನನ ಚಂಪುವಿನದ್ದಕ್ಕೂ ವ್ಯತ್ಯಾಸವೇನೂ ಇಲ್ಲ ; ಘಟನೆಗಳ ಅನುಕ್ರಮವೂ ಅಲ್ಲಿದ್ದಂತೆಯೇ ಇಲ್ಲೂ ಇದೆ. ಕೌರವ-ಪಾಂಡವರ ಯುದ್ಧದ ಫಲಿತಾಂಶ ಅನಿಶ್ಚಿತ ಸ್ಥಿತಿಯಲ್ಲೇನೂ ಇಲ್ಲ ; ಕೌರವರ ಕಡೆ ಅಪ್ರತಿಮ ವೀರರೆನ್ನಿಸಿಕೊಂಡು ಸೇನಾಧಿಪತಿಗಳಾಗಿ ಅಭಿಷಿಕ್ತರಾಗಿದ್ದವರೆಲ್ಲ—ದ್ರೋಣ, ಕರ್ಣ, ಶಲ್ಯ ಎಲ್ಲರೂ ಸತ್ತುಹೋಗಿದ್ದಾರೆ. ಅವರೆಲ್ಲರಿಗಿಂತ ಹಿರಿಯನಾಗಿ ಅಜೇಯನೆಂದು ಖ್ಯಾತಿ ಪಡೆದಿದ್ದ ಭೀಷ್ಮ ಮಾತ್ರ ತನ್ನ ಶಸ್ತ್ರಗಳನ್ನು ತ್ಯಜಿಸಿ ಶರತಲ್ಪದ ಮೇಲೆ ಮಲಗಿ ಸಾಯುವ ಕಾಲವನ್ನು ಎದುರು ನೋಡುತ್ತಿದ್ದಾನೆ. ಧೃತರಾಷ್ಟ್ರನ ನೂರು ಮಕ್ಕಳಲ್ಲಿ ಉಳಿದಿರುವವನು ದುರ್ಯೋಧನನೊಬ್ಬನೇ. ಅವನ ಬೆಂಬಲಕ್ಕೆ ಇನ್ನೂ ಉಳಿದಿರುವ ವೀರ (ಈ ನಾಟಕದ ಮಟ್ಟಿಗೆ ಹೇಳುವುದಾದರೆ) ಅಶ್ವತ್ಥಾಮ ಮಾತ್ರ. ಪಾಂಡವರು ಜಯವನ್ನೇನೋ ಪಡೆದಿದ್ದಾರೆ. ಆದರೆ ಅವರ ರಾಣಿ ದ್ರೌಪದಿಯ ಮನಸ್ಸಿಗೆ ಇನ್ನೂ ನೆಮ್ಮದಿಯಿಲ್ಲ. ನಾಟಕ ಆರಂಭವಾಗುವಾಗ ಅವಳ ಮನಸ್ಸನ್ನು ಒಂದು ಸಂದೇಹ ಬಾಧಿಸುತ್ತಿದೆ. ಧರ್ಮರಾಜ ಶಾಂತಿಪ್ರಿಯ, ಕ್ಷಮಾಶೀಲ. ಇತ್ತ ಭೀಮನು ವಿಧೇಯನಾದ ತಮ್ಮ ಅಣ್ಣನ ಮಾತನ್ನು ಮನ್ನಿಸಲು ಅವನೆಲ್ಲಿ ದುರ್ಯೋಧನನ ಸೇಡು ತೀರಿಸಿಕೊಳ್ಳದೆ ಅವನನ್ನು ಹೋಗಗೊಡುತಾನೋ ಎಂಬ ಸಂದೇಹ. ದುರ್ಯೋಧನ ತನಗೆ ತೊಡೆ ತೋರಿಸಿದ್ದನ್ನು ಅವಳು ಮರೆತಿಲ್ಲ. ಕೃಷ್ಣನೂ ಅವಳ ಜೊತೆಗೆ ದನಿಗೂಡಿಸಿ ಭೀಮನನ್ನು ಹುರಿದುಂಬಿಸುತ್ತಾನೆ. ದುರ್ಯೋಧನನ ತೊಡೆಯನ್ನು ಮುರಿದು ಕೊಲ್ಲುವುದಾಗಿ ಭೀಮ ಮತ್ತೆ ಪ್ರತಿಜ್ಞೆ ಮಾಡುತ್ತಾನೆ. ಆ ದಿನ ಸೂರ್ಯ ಮುಳುಗುವ ಮುನ್ನ ಕೌರವನನ್ನು ಕೊಲ್ಲದಿದ್ದರೆ ಅವನು ಅಜೇಯನಾಗುತ್ತಾನೆಂಬ ಕಲ್ಪನೆಯಿದೆ.

೨ನೇ ಅಂಕ : ದುರ್ಯೋಧನನ ಮನಸ್ಸಿನಲ್ಲಿ ಕಹಿ ತುಂಬಿದೆ. ತನ್ನ ಉಪ್ಪು ತಿಂದ ದ್ರೋಣನೂ ಅಶ್ವತ್ಥಾಮನೂ 'ಜೋಳದ ಪಾಳಿ'ಯನ್ನೂ ನೆನೆಯದೆ ಕರ್ತವ್ಯ ವಿಮುಖರಾದರು, ತನ್ನ ನೆರವಿಗೆ ಬರಲಿಲ್ಲ, ಎಂದು ಅವರನ್ನು ನಿಂದಿಸುತ್ತಾನೆ. ಸಂಜಯನು ಬುದ್ಧಿ ಹೇಳಿ ಪಾಂಡವರ ವಿಷಯದಲ್ಲಿ ಮೆಚ್ಚಿಗೆಯ ಮಾತಾಡಿದ್ದೇ ತಡ—ಪಾಂಡವರ ಮೇಲೆ, ಎಲ್ಲಕ್ಕಿಂತ ಹೆಚ್ಚಾಗಿ ಭೀಮನ ಮತ್ತು ಕೃಷ್ಣನ ಮೇಲೆ ಅವನಿಗಿದ್ದ ಕ್ರೋಧ ಕಟ್ಟೆಯೊಡೆದು ಹೊರನುಗ್ಗುತ್ತದೆ. ತಾನು ಹಿಂದೆ ಅವರಿಗೆ ಮಾಡಿದ ಅವಮಾನವನ್ನೆಲ್ಲ ಒಂದು ಬಗೆಯ ಹೆಮ್ಮೆಯಿಂದ ನೆನೆಯುತ್ತಾನೆ ; ಅದನ್ನೆಲ್ಲ ತಾಳ್ಮೆಯಿಂದ ಸಹಿಸಿದ ಪಾಂಡವರು ಅವನ ದೃಷ್ಟಿಯಲ್ಲಿ ಹೇಡಿಗಳು. ಅವ

ನನ್ನ ಶಾಂತಿಗೆ ಒಪ್ಪಿಸಲು ಧೃತರಾಷ್ಟ್ರ-ಗಾಂಧಾರಿಯರು (ಅವರೂ ಯುದ್ಧಭೂಮಿಗೆ ಬರುತ್ತಾರೆ) ಮಾಡಿದ ಪ್ರಯತ್ನವೂ ವಿಫಲವಾಯಿತು. ಯಾವ ಪ್ರಯತ್ನವನ್ನಾಗಲಿ ಮಾಡುವ ಮುನ್ನ ಭೀಷ್ಮನ ಸಲಹೆಯನ್ನು ಪಡೆಯಲು ಮಾತ್ರ ದುರ್ಯೋಧನ ಒಪ್ಪುತ್ತಾನೆ.

೩ನೇ ಅಂಕ: ದುರ್ಯೋಧನನು ಭೀಷ್ಮನನ್ನು ನೋಡಲು ಹೋಗುತ್ತಿರುವಾಗ ದಾರಿಯಲ್ಲಿ ಮೂರು ಮರುಳುಗಳು ಅವನನ್ನು ತಡೆದು ಮೂದಲಿಸಿ, ಅವನ ಪಾಪಕೃತಗಳ ನೆನಪು ಕೊಟ್ಟು ಅವನ ಜೀವನ ಅಂದು ಸೂರ್ಯಾಸ್ತದ ವೇಳೆಗೆ ಮುಗಿಯುತ್ತದೆಂದು ಸೂಚಿಸುತ್ತಾರೆ. ದುಶ್ಶಾಸನನ ಮತ್ತು ಕರ್ಣನ ಮೃತದೇಹಗಳನ್ನು ಕಂಡಾಗ ಅವನ ದುಃಖ ಸೊಗಸಾದ ಕಾವ್ಯರೂಪದಲ್ಲಿ ಹೊರಹೊಮ್ಮುತ್ತದೆ. ಅಭಿಮನ್ಯುವಿನ ಶವವನ್ನು ಕಂಡಾಗ ದುರ್ಯೋಧನ ಮುಕ್ತಕಂಠನಾಗಿ ಅವನ ಶೌರ್ಯವನ್ನು ಹೊಗಳುತ್ತಾನೆ. ಭೀಷ್ಮನನ್ನು ಕಂಡಾಗ ಆತನೂ "ಸಂಧಾನ ಮಾಡಿಕೊ" ಎಂದು ಹೇಳುತ್ತಾನಾದರೂ ಕೌರವ ಅದಕ್ಕೆ ಒಪ್ಪುವುದಿಲ್ಲವೆಂದು ತಿಳಿದಿದ್ದರಿಂದ ಆ ಮಾತನ್ನು ಒತ್ತಿಹೇಳುವುದಿಲ್ಲ. "ನಾಳೆಯವರೆಗೂ ವೈಶಂಪಾಯನ ಸರಸ್ಸಿನಲ್ಲಿ ಅಡಗಿಕೊಂಡಿರು" ಎಂದು ಮಾತ್ರ ಹೇಳುತ್ತಾನೆ.

೪ನೇ ಮತ್ತು ೫ನೇ ಅಂಕ: ನಾಲ್ಕನೆಯ ಅಂಕ ಬಹು ಚಿಕ್ಕದಾದ್ದರಿಂದ ಇವೆರಡು ಅಂಕಗಳ ಸಾರಾಂಶವನ್ನೂ ಒಟ್ಟಿಗೆ ಕೊಡಬಹುದು. ಭೀಮ, ಕೃಷ್ಣ ಮತ್ತು ಧರ್ಮರಾಜರು ಕೌರವನನ್ನು ಹುಡುಕಿಕೊಂಡು ಬರುತ್ತಾರೆ; ಹೆಜ್ಜೆಯ ಗುರುತಿನಿಂದ(ಹೆಜ್ಜೆ ಕೊಳದಿಂದ ಹೊರಬಂದು ಮುಂದಕ್ಕೆ ಹೋಗುವಂತೆ ಕಂಡರೂ ಅದರಿಂದ ಮೋಸಹೋಗದೆ) ಅವನು ಕೊಳದಲ್ಲಿ ಅಡಗಿಕೊಂಡಿದ್ದುದನ್ನು ಪತ್ತೆ ಮಾಡುತ್ತಾರೆ. ಭೀಮನ ಮೂದಲಿಕೆಯ ಮಾತನ್ನು ಕೇಳಿ ಕೆರಳಿ ದುರ್ಯೋಧನನು ನೀರಿನಿಂದ ಹೊರಗೆ ಬರುತ್ತಾನೆ. ಅನಂತರ ಗದಾಯುದ್ಧ. ಒಂದುಸಾರಿ ಭೀಮನು ಬಿದ್ದಾಗ ಬಿದ್ದವನನ್ನು ಹೊಡೆಯಬಾರದೆಂಬ ಧರ್ಮಬುದ್ಧಿಯಿಂದ ಕೌರವನು ತನ್ನ ಗದೆಯಿಂದ ಗಾಳಿ ಬೀಸಿ ಅವನನ್ನು ಎಚ್ಚರಿಸುತ್ತಾನೆ. ಮತ್ತೆ ಯುದ್ಧ ಆರಂಭವಾದಾಗ ಕೃಷ್ಣನು ಭೀಮನಿಗೆ ಊರುಭಂಗದ ಪ್ರತಿಜ್ಞೆಯ ನೆನಪು ಕೊಡುತ್ತಾನೆ. ದುರ್ಯೋಧನ "ಪ್ರತಿಜ್ಞೆ ಭಂಗವಾಯಿತು" ಎನ್ನುತ್ತ ತೊಡೆತಟ್ಟಿದಾಗ ಭೀಮ ತೊಡೆಗೆ ಒಡೆದು ಅವನನ್ನು ಬೀಳಿಸುತ್ತಾನೆ; ಕಿರೀಟ ಧರಿಸಿದ ಅವನ ತಲೆಯನ್ನು ಒದೆಯುತ್ತಾನೆ—ಅದರಿಂದ ಧರ್ಮರಾಜನ ಮನಸ್ಸು ನೋಯುತ್ತದೆ. ಅನಂತರ ವೇಣೀ ಸಂಹಾರ; ದ್ರೌಪದಿ ಹೂವು ಮುಡಿಯುತ್ತಾಳೆ. ಧರ್ಮರಾಜನಿಗೆ ಮಾತ್ರ ಭ್ರಾತೃಹತ್ಯ ಮಾಡಿದ ಭೀಮನ ತಲೆಯಮೇಲಾಡುವ ಸೇಡುಮಾರಿಯರ ಘೋರ ಮೂರ್ತಿಗಳು ಕಾಣುತ್ತವೆ. ಪಾಂಡವರು ಶಿವನನ್ನು ಅರ್ಚಿಸಿ ಆ ಮಾರಿಯರ ಕೋಟಲೆಯನ್ನು ತಪ್ಪಿಸಿಕೊಳ್ಳಲು ನೀಲಾಚಲಕ್ಕೆ ಹೋಗುತ್ತಾರೆ.

ಇದಾದ ಮೇಲೆ ಬರುವ ಪ್ರಸಂಗವನ್ನು ಬಿಟ್ಟಿದ್ದರೆ ಚೆನ್ನಾಗಿತ್ತು. ಅಶ್ವತ್ಥಾಮ ಬಂದು ತನ್ನ ಪ್ರಭುವನ್ನು ತೊರೆದು ಹೋಗುತ್ತಿರುವ ಕೌರವ ರಾಜ್ಯಲಕ್ಷ್ಮಿಯನ್ನು ಮತ್ತೆ ದುರ್ಯೋಧನನ ಬಳಿಗೆ ಎಳೆತಂದು 'ಅವನಿಗೆ ಚಾಮರ ಬೀಸುತ್ತಿರು'ಎಂದು ಆಜ್ಞೆ ಮಾಡುತ್ತಾನೆ. (ಮತ್ತೆ ರಾಜ್ಯವನ್ನು ಪಡೆಯುವ ಸಂಭವ ಏನೇನೂ ಇಲ್ಲವೆಂದು ಬಲ್ಲ ಮತ್ತು ಸಾವಿನ ನಿರೀಕ್ಷೆಯಲ್ಲಿದ್ದ ದುರ್ಯೋಧನನಿಗೆ ಈ ಚಾಮರ ಸೇವೆ ನಡೆದದ್ದರಿಂದ ಸಂತೋಷವಾಗುವುದಾದರೆ ಆಗಲಿ, ನಾವೇಕೆ ಬೇಡವೆನ್ನೋಣ !) ಅನಂತರ ದುರ್ಯೋಧನನ ಕೊನೆಯ ಆಸೆಯನ್ನು ಸಲ್ಲಿಸಲು ಪಾಂಡವರ ತಲೆಗಳನ್ನು, ಮುಖ್ಯವಾಗಿ ಭೀಮನ ತಲೆಯನ್ನು ತರುತ್ತೇನೆಂದು ಭರವಸೆ ಕೊಟ್ಟು ಹೋಗುತ್ತಾನೆ; ನಾಲ್ಕು ಸಾಲಿನ ಪದ್ಯವೊಂದನ್ನು ಲಕ್ಷ್ಮಿ ಹೇಳಿ ಮುಗಿಸುವುದರೊಳಗಾಗಿ ಹಿಂದಿರುಗಿ ಬಂದು "ಪಾಂಡವರೈವರ ತಲೆಗಳು" ಎಂದು ಕೌರವನ ಕಾಲಮೇಲೆ ತಲೆಗಳನ್ನು ಹಾಕುತ್ತಾನೆ.ಆದರೆ ಅವು ದ್ರೌಪದಿಯ ಮಕ್ಕಳ ತಲೆಗಳು ! ದುರ್ಯೋಧನನು "ಇದೆಲ್ಲ ಹರಿಯ ಮಾಯೆ. ದೈವದ ಮುಂದೆ ನಾವಲ್ಲ" ಎಂದು ಮನಗಾಣುತ್ತಾನೆ. ಅತ್ತ ಸೂರ್ಯಾಸ್ತವಾಗುತ್ತಿದ್ದಾಗ ಇತ್ತ ಕುರುಕುಲಾರ್ಕನ ಅಸ್ತವೂ ಆಗುತ್ತದೆ.

ರನ್ನನ ಕಾವ್ಯದಲ್ಲೇ ನಾಟಕದ ಲಕ್ಷಣಗಳು ಎದ್ದು ಕಾಣುತ್ತವೆ. ಕಾವ್ಯದ ವಸ್ತು ರುದ್ರ ನಾಟಕಕ್ಕೆ ಹೇಳಿ ಮಾಡಿಸಿದಂತಿದೆ. ಮಹಾಕಾವ್ಯದ ವೀರರ ಪ್ರಚಂಡ—ರಾಕ್ಷಸ ಸಹಜವಾದ ಎಂದರೂ ಎನ್ನಬಹುದು—ಕೋಪತಾಪಗಳು ; ಸಾರ್ವಭೌಮ ಪದವಿಗೆ ತಕ್ಕ ಭೋಗವನ್ನು ಅನುಭವಿಸಿ ದರ್ಪದಿಂದಿದ್ದವನ ಸೋಲು, ಸಂಕಟ, ಸಾವು ; ಸರ್ವನಾಶಕ್ಕೆ ಕಾರಣವಾಗುವ ಒಂದು ದೋಷ ; ವಿಧಿಯ ಲೀಲೆ—ರುದ್ರನಾಟಕಕ್ಕೆ ಒಪ್ಪುವ ಈ ಅಂಶಗಳೆಲ್ಲವನ್ನೂ ರನ್ನನ ಕಾವ್ಯದಲ್ಲಿ ಕಾಣಬಹುದು. ರನ್ನನಿಗೂ ಅವೆಲ್ಲ ಹಿಂದಿನಿಂದ ಬಂದ ಆಸ್ತಿ. ರನ್ನನಲ್ಲಿ ಸಿಕ್ಕಿದ ವಸ್ತು ಉತ್ತಮವಾದ 'ಕ್ಲಾಸಿಕಲ್' (classical) ಮಾದರಿಯ ರುದ್ರ ನಾಟಕದ ರೂಪವನ್ನು ತಳೆಯಬಲ್ಲುದೆಂದು ಶ್ರೀಕಂಠಯ್ಯನವರು ಮನಗಂಡರು. ಈ ನಾಟಕದಲ್ಲಿ ಕ್ರಿಯೆ ಆರಂಭವಾಗುವುದೂ ಕೊನೆಗಾಣುವುದೂ ಒಂದೇ ದಿನದ ಅವಧಿಯಲ್ಲಿ. ಮೊದಲಿಂದ ಕೊನೆಯವರೆಗೂ ಯುದ್ಧರಂಗವೊಂದೇ ಕ್ರಿಯೆ ನಡೆಯುವ ಸ್ಥಾನ. ಅಶ್ವತ್ಥಾಮನ ಪ್ರಸಂಗವನ್ನು ಬಿಟ್ಟಿದ್ದರೆ, ಈ ಕಾಲೈಕ್ಯ, ಸ್ಥಾನೈಕ್ಯಗಳ ಜೊತೆಗೆ ಕ್ರಿಯೆಯ ಐಕ್ಯವೂ ಇರುತ್ತಿತ್ತು. ಕಾವ್ಯದಲ್ಲಿ ಕಂಡುಬರುವ ಹೆಚ್ಚಿನ ಕಥನ ವರ್ಣನೆ ಇತ್ಯಾದಿಗಳ ಆಚ್ಛಾದನವನ್ನು ತೆಗೆದರೆ ನಾಟಕದ ರೂಪರೇಷೆಗಳು ತಾನಾಗಿಯೇ ಗೋಚರವಾಗುವಂತಿತ್ತು.

ಆದರೆ ಬರೆಯ ತೊಡಗಿದ ಕೂಡಲೆ ಶ್ರೀಕಂಠಯ್ಯನವರನ್ನು ಒಂದು ಸಮಸ್ಯೆ ಕಾಡಿರಬೇಕು. ಈ ರುದ್ರನಾಟಕಕ್ಕೆ ನಾಯಕ ಯಾರು ? ಈ ಪ್ರಶ್ನೆ ನಾಟಕದಲ್ಲಿ ಕಡೆಗಣಿಸುವಂಥದಲ್ಲ. ರನ್ನನಿಗೆ ಇದು ಸಮಸ್ಯೆಯೇ ಅಲ್ಲ. ಅವನ ಕಾವ್ಯದಲ್ಲಿ

ಚಕ್ರವರ್ತಿಯಾದ ಇರಿವ ಬೆಡಂಗ ಸತ್ಯಾಶ್ರಯನೇ ಸಾಹಸಭೀಮ. ತನ್ನ ಆಶ್ರಯದಾತನೂ ಭೀಮನೂ ಅಭಿನ್ನರು ಎಂದ ಮೇಲೆ ಮತ್ತೊಬ್ಬನನ್ನು ನಾಯಕ ಪಟ್ಟಕ್ಕೆ ಏರಿಸುವುದು ಅಸಾಧ್ಯವಷ್ಟೆ. ಅದಕ್ಕಾಗಿಯೇ ಆ ಕವಿ ಮಹಾಭಾರತದ ಕಥೆಯನ್ನು ಅನುಸರಿಸದೆ, ಧರ್ಮರಾಜನ ಬಾಯಿಂದ ತನಗೆ ಸಿಂಹಾಸನ ಬೇಡವೆಂದು ಹೇಳಿಸಿ, ಭೀಮನಿಗೆ ಪಟ್ಟಾಭಿಷೇಕವನ್ನೂ ಸಹ ಮಾಡಿಸಿಬಿಡುತ್ತಾನೆ. ಆದರೆ ಕಾವ್ಯವನ್ನು ನಾಟಕವಾಗಿ ಪರಿವರ್ತಿಸಿದಾಗ ದುರ್ಯೋಧನನೇ ನಾಯಕನಾಗಬೇಕು ಎಂದು ತೋರಿದರೆ ಆಶ್ಚರ್ಯವಲ್ಲ. ರಂಗಸ್ಥಳದ ಮೇಲೆ ಬಹಳ ಹೆಚ್ಚು ಹೊತ್ತು ನಮ್ಮ ಮುಂದಿರುವವನು ದುರ್ಯೋಧನ. ಇದೊಂದೇ ಆದರೆ ಅಷ್ಟು ಮುಖ್ಯವಲ್ಲ ಎನ್ನುವುದು ಸಾಧ್ಯ. ಸೋಲಿಗೆ, ಸಂಕಟಕ್ಕೆ, ಸಾವಿಗೆ ಕಾರಣವಾಗುವ ದೋಷ (the tragic flaw) ಇರುವುದು ದುರ್ಯೋಧನನಲ್ಲಿ. ಮಹೋನ್ನತವಾದ ಪದವಿಯಿಂದ ಕೆಳಕ್ಕೆ ಉರುಳುವವನೂ ಅವನೇ. ರುದ್ರನಾಟಕ ನಮ್ಮಲ್ಲಿ ಕರುಣೆ, ಭಯಗಳೆರಡನ್ನೂ ಕೆರಳಿಸುತ್ತದೆಂದು ಅರಿಸ್ಟಾಟಲ್ ಹೇಳುತ್ತಾನೆ. ಇಲ್ಲಿ ಕರುಣೆ—ಜೊತೆಗೆ ಭಯವಿಲ್ಲದಿದ್ದರೂ—ಸಲ್ಲುವುದು ದುರ್ಯೋಧನನಿಗೆ. 'ಪ್ರತಿಕೂಲ ದೈವನಾಗಿರುವವನು, ಅಂದರೆ ನಿಷ್ಠುರ ವಿಧಿಯ ಹೊಡೆತಕ್ಕೆ ಬಲಿಯಾಗುವವನು, ಅವನೇ. ಇಷ್ಟು ಮಾತ್ರವಲ್ಲದೆ, ಅವನು ಮಾಡಿದ ಕರ್ಮಕ್ಕೂ ಅವನಿಗೆ ಒದಗಿದ ವಿಪತ್ತಿಗೂ ಕಾರ್ಯಕಾರಣ ಸಂಬಂಧವೂ ಇದೆ. ಆದ್ದರಿಂದ ನಾಯಕಪಟ್ಟ ನ್ಯಾಯವಾಗಿ ಸಲ್ಲಬೇಕಾದ್ದು ಅವನಿಗೆ. ಆದರೆ ಅದು ಸಲ್ಲಬೇಕಾದರೆ ಅವನಲ್ಲಿ ಅತಿ ಮುಖ್ಯವಾದ ಬೇರೊಂದು ಗುಣ ಇದೆಯೇ ಎಂದು ನೋಡಬೇಕು.

ಮೊದಲು ಅವನು 'ಪ್ರತಿಕೂಲ ದೈವ' ಎಂಬ ಮಾತಿಗೆ ಸ್ವಲ್ಪ ಗಮನ ಕೊಡೋಣ. ನಿಜವಾಗಿ ನೋಡಿದರೆ ಅವನ ಶತ್ರು ಅವನೇ; ವಿಧಿಯಲ್ಲ, ದೈವವಲ್ಲ. ಅವನು ತೊಡೆ ಮುರಿದು ಸಾಯಬೇಕೆನ್ನುವುದು ಮೊದಲೇ ನಿಶ್ಚಯವಾಗಿದೆ, ನಿಜ; ಹಾಗಾಗಲೆಂದು ಮೈತ್ರೇಯರು ಅವನಿಗೆ ಶಾಪ ಕೊಟ್ಟಿದ್ದಾರೆ. ಆದ್ದರಿಂದ ವಿಧಿ ಅವನ ವಿಷಯದಲ್ಲಿ ಕ್ರೂರವಾಗಿದೆ ಎಂಬ ಭಾವನೆ ಬರುತ್ತದೆ. ಆದರೆ ನಿಜವಾಗಿ ಆ ಶಾಪ ಮೈತ್ರೇಯರು ಕೊಟ್ಟದ್ದು ಎನ್ನುವುದಕ್ಕಿಂತ ದುರ್‍ಯೋಧನನೇ ಬೇಡಿ ಪಡೆದದ್ದು ಎನ್ನಬಹುದು. ಅವರೆದುರಿಗೆ ಅವನು ತನ್ನ ದುಷ್ಕೃತ್ಯವನ್ನು ಹಿಗ್ಗಿನಿಂದ ನೆನೆಯುತ್ತ ತೊಡೆ ತಟ್ಟಿದ–ಅವರು ಆ ತೊಡೆಯೇ ಮುರಿಯಲೆಂದು ಶಾಪ ಕೊಟ್ಟರು! ಅವನ ವಿಪತ್ತಿಗೆ ನಿಜವಾದ ಕಾರಣ ಅವನ ಸ್ವಭಾವ. ಆ ಸ್ವಭಾವವನ್ನು ಅವನಿಗೆ ಕೊಟ್ಟದ್ದು ದೈವ ಎಂಬ ಅರ್ಥದಲ್ಲಿ ಮಾತ್ರ ಅವನು 'ಪ್ರತಿಕೂಲ ದೈವ'.

ರುದ್ರನಾಯಕನಲ್ಲಿ ಇರಬೇಕಾದ ಔನ್ನತ್ಯ ಅವನಲ್ಲಿದೆಯೆ? ಅವನು 'ಕುರುಕುಲ ಚಕ್ರವರ್ತಿ' 'ಸಕಲಧರಿತ್ರೀಕಾಂತ'ಆಗಿರುವುದರಿಂದ ಒಂದು ಬಗೆಯ ಔನ್ನತ್ಯ ಬರುತ್ತದೆಯೆಂದು ಒಪ್ಪೋಣ. ಆ ಬಗೆಯ ಔನ್ನತ್ಯವನ್ನು ಭೀಷ್ಮನೇ ಬಣ್ಣಿಸುತ್ತಾನೆ.

ಧವಳಗಜೇಂದ್ರಮುಂ ಧವಳಚಾಮರಮುಂ ಧವಳಾತಪತ್ರಮುಂ
ಧವಳ ವಿಲೋಚನೋತ್ಪಲವಧೂಜನಮುಂ ಬೆರಸಪ್ಪದಿಕ್ತಟಂ
ಧವಳಿಸೆ ಕೀರ್ತಿಯಿಂ ಧವಳಮಂಗಳಗೇಯದಿನೊಪ್ಪಿ ಬರ್ಪ ಕೌ
ರವ ಧವಳಂಗೆ ದೇಸಿಗನೆ ಬರ್ಪವೊಲೊರ್ವನೆ ಬರ್ಪುದಾದುದೇ. (೩,೯೭)

ಪಟ್ಟದಾನೆ, ಚಾಮರ, ಧವಳಛತ್ರ-ಇಂಥ ಚಕ್ರವರ್ತಿತ್ವದ ಲಾಂಛನಗಳು ಒಂದು ತರದ ದೊಡ್ಡಸ್ತಿಕೆಯನ್ನು, ವೈಭವವನ್ನು ಕೊಡುತ್ತವೆಂಬುದು ನಿಜ; ಇವನ್ನೆಲ್ಲ ಅನುಭವಿಸಿದವನು ದುಃಸ್ಥಿತಿಗೆ ಇಳಿದರೆ ಅವನ ವಿಷಯದಲ್ಲಿ ಮರುಕ ಹುಟ್ಟುತ್ತದೆಯೆಂಬುದೂ ನಿಜ. ಆದರೆ ಅದೆಲ್ಲ ಒಂದು ಸ್ಥಾನಕ್ಕೆ ಅಂಟಿಕೊಂಡ ವೈಭವ, ಹೊರಗಿನಿಂದ ಬಂದವು. ಸ್ಥಾನಪಲ್ಲಟವಾದರೆ ಆ ವೈಭವವೂ ಮಾಯ ವಾಗುತ್ತದೆ. ಈ ವೈಭವ ಮಾತ್ರ ಇದ್ದರೆ ರುದ್ರನಾಯಕನಾಗಲು ಅರ್ಹತೆ ಬರುವು ದಿಲ್ಲ. ಜೊತೆಗೆ ಯಾವುದೋ ಅಂತಸ್ಸತ್ವವಿರಬೇಕು. ರುದ್ರನಾಯಕ ಸದ್ಗುಣಿ ಯಾಗಬೇಕೆಂಬ ನಿಯಮವಿಲ್ಲ; ಅವನು ಸದ್ಗುಣದ ಅಭಾವವಿದ್ದದ್ದರಿಂದಲೂ—ದುರ್ಯೋಧನನಲ್ಲಿ ಈ ಅಭಾವಕ್ಕೇನೂ ಕೊರತೆಯಿಲ್ಲ—ನಾಯಕನಾಗಲಾರ. ಅವ ನಲ್ಲಿ ಉನ್ನತ ಮಟ್ಟದ ಸತ್ವ ಏನೋ ಒಂದು, ಅದು ಒಳ್ಳೆಯದೋ ಕೆಟ್ಟದೋ, ಇರಬೇಕು. ಅದು ಅವನನ್ನು ಸಾಮಾನ್ಯ ಮನುಷ್ಯನ ಮಟ್ಟಕ್ಕಿಂತ ಎಷ್ಟೋ ಪಟ್ಟು ಮೇಲಕ್ಕೆ ಏರಿಸಬೇಕು; ಅದಮ್ಯವಾದ ಶಕ್ತಿಯಿಂದ ಉದ್ದಿಷ್ಟವಾದ ಗುರಿಯ ಕಡೆಗೆ ನಾಟಕದ ಕ್ರಿಯೆಯನ್ನು ನಿಂತು ನಡೆಸಬೇಕು. ಭೀಷ್ಮ, ಕರ್ಣ, ಭೀಮ, ರಾಮ, ರಾವಣ ಇಂಥ ವ್ಯಕ್ತಿಗಳಲ್ಲಿ ಈ ಬಗೆಯ ಸತ್ವವನ್ನು ಕಾಣಬಹುದು. ಕಾರ್ಯ ವೊಂದಕ್ಕೆ ಹುರಿದುಂಬಿಸುವಂಥ ತೀವ್ರವಾದ ವೈರವಿದ್ದರೆ ಅದು ಕೂಡ ಅವನನ್ನು ಔನ್ನತ್ಯಕ್ಕೆ ಏರಿಸಬಲ್ಲದು. ಈ ನಾಟಕದ ದುರ್ಯೋಧನನಲ್ಲಿ ಅಂಥ ಉದಾತ್ತತೆ ಸತ್ವ ಏನಾದರೂ ಇದೆಯೆ? ಅವನು ನಿಶ್ಚಿತವಾದ ಗುರಿಯನ್ನಿಟ್ಟುಕೊಂಡು ಅದರ ಕಡೆಗೆ ವೀರ್ಯವತ್ತಾದ ನಡಗೆಯಿಂದ ಸಾಗುತ್ತಾನೆಯೆ?

ಅವನಲ್ಲಿರುವ ಒಂದು ಗುಣ ಬಹಳ ಮೆಚ್ಚಿಕೆಯನ್ನು ಪಡೆದಿದೆ—ಪಾಂಡವರಿಗೆ ರಾಜ್ಯವನ್ನು ಕೊಟ್ಟು ಅವರೊಡನೆ ಸಂಧಿ ಮಾಡಿಕೊಳ್ಳುವುದಿಲ್ಲ ಎಂಬ ದೃಢ ನಿಶ್ಚಯ. ಇದು ದುರ್ಯೋಧನನ ಪ್ರಸಿದ್ಧವಾದ ಛಲ. ತಾನು ಸತ್ತರೂ ಸರಿಯೆ, ಅವನು ಆ ನಿಲುವನ್ನು ಬಿಡಲೊಲ್ಲ. ಈ ಗುಣ ಅವನಲ್ಲಿ ಇರಬೇಕಾದದ್ದೆ; ಅದು ಅವನ ಸ್ವಭಾವಕ್ಕೆ ಸಹಜವಾದದ್ದು. ಅದಿಲ್ಲದಂತೆ ಅವನನ್ನು ಚಿತ್ರಿಸಿದ್ದರೆ ಅವನ ಪಾತ್ರ ಚಿತ್ರಣದಲ್ಲಿ ಅದೊಂದು ದೋಷವಾಗುತ್ತಿತ್ತು. ಆದರೆ ಈಗ ನಮ್ಮ ಮುಂದಿ ರುವ ಪ್ರಶ್ನೆ, "ಆ ಛಲ ಅವನ ಸ್ವಭಾವಕ್ಕೆ ಸಹಜವೆ, ಅಲ್ಲವೆ" ಎಂಬು ದಲ್ಲ; "ಅದಕ್ಕೆ ಪ್ರಚಂಡ ಕಾರ್ಯಶಕ್ತಿ ಇದೆಯೆ?" ಎಂಬುದು. ಇಲ್ಲಿ ಎರಡನೆಯ ಮತ್ತು ಮೂರನೆಯ ರಂಗಗಳು ಇಡೀ ನಾಟಕದ ಅರ್ಧಕ್ಕಿಂತ ಹೆಚ್ಚು ಭಾಗವನ್ನು

ಆಕ್ರಮಿಸಿವೆ. ಇವೆರಡು ರಂಗಗಳಲ್ಲೂ ದುರ್ಯೋಧನ ರಂಗಸ್ಥಳದಲ್ಲೇ ಇರುತ್ತಾನೆ
ಈ ದೀರ್ಘಕಾಲದಲ್ಲಿ ಅವನು ಮಾಡಿದ್ದೇನು? ಕಾರ್ಯೋನ್ಮುಖತೆಯನ್ನು ಸೂಚಿ
ಸುವ ಒಂದೆರಡು ಮಾತುಗಳು ಬರುತ್ತವೆ. “ಪೊಳ್ತು ಕಳೆವುದು! ನಡೆ, ಭೀಮನ
ತೋರು” ; ಮತ್ತು “ಸಾಧಿಸುವೆಂ ಫಲ್ಗುಣನಿಂ, ಸಾಧಿಸುವೆಂ ಪವನಸುತನ
ಬಸಿರಿಂ, ಹಾ ಕರ್ಣಾ! ದುಶ್ಶಾಸನ ! ತೆಗೆವೆಂ....”ಉಳಿದುದೆಲ್ಲ ಮಾತು, ಮಾತು
ಕೆಚ್ಚಿನ ಮಾತೂ ಅಲ್ಲ! ಗೋಳು, ಕರ್ಣನ ದುಶ್ಶಾಸನರಿಗಾಗಿ ಶೋಕ, ಆತ್ಮಾನು
ಕಂಪ, ದ್ರೋಣಾಶ್ವತ್ಥಾಮರನ್ನು ಹಳಿಯುವುದು,ಪಾಂಡವರಿಗೆ ಮಾಡಿದ ಅನ್ಯಾಯ
ಅವಮಾನಗಳನ್ನು ಹೆಮ್ಮೆಯಿಂದ ನೆನೆಯುವುದು, ಪಾಂಡವರ ಮತ್ತು ಕೃಷ್ಣನ
ಅವಹೇಳನ—ಕಾರ್ಯತತ್ಪರತೆಯೇನಿದ್ದರೂ ಇವುಗಳಲ್ಲಿ ಮುಳುಗಿಹೋಗಿದೆ. “ನೆಲ
ಕಿರಿವೆನೆಂದು ಬಗೆದಿರೆ? ಚಲಕಿರಿವೆಂ” ಎಂದವನಲ್ಲಿ ಇರಿಯ ಹೊರಡುವ
ಆತುರವೇನೂ ಕಾಣುವುದಿಲ್ಲ. ಶ್ರೀಕಂಠಯ್ಯನವರು (‘ಕನ್ನಡ ಕೈಪಿಡಿ ಸಂಪುಟ
೨,೫ನೇಭಾಗ, ಕನ್ನಡ ಸಾಹಿತ್ಯ ಚರಿತ್ರೆ’ (೧೯೪೭)ಯ ೫೯ನೇ ಪುಟದಲ್ಲಿ ಹೀಗೆ
ಹೇಳಿದ್ದಾರೆ: “ಸಾಹಸಭೀಮ ವಿಜಯದಲ್ಲಿ ಎಲ್ಲಕ್ಕೂ ಆಶ್ಚರ್ಯಕರವಾದ ವಿಶೇಷ
ವೆಂದರೆ, ದುರ್ಯೋಧನ ಪಾತ್ರದಲ್ಲಿ ರನ್ನನ ಸಹಾನುಭೂತಿ: ನೀತಿ ದೃಷ್ಟಿಯಿಂದಲ್ಲ,
ಕರುಣದೃಷ್ಟಿಯಿಂದ” ಈ ಮಾತು ‘ಗದಾಯುದ್ಧ’ ನಾಟಕದ ವಿಷಯದಲ್ಲೂ ಸಲ್ಲು
ತ್ತದೆ. ಶ್ರೀಕಂಠಯ್ಯನವರು ದುರ್ಯೋಧನನ ವಿಷಯದಲ್ಲಿ ರನ್ನ ಏನು ಮಾಡಿ
ದ್ದನೋ ಅದನ್ನು ಹಾಗೆಯೇ ಇಟ್ಟುಕೊಂಡಿದ್ದಾರೆ; ಅಲ್ಲಿಗಿಂತ ಹೆಚ್ಚಾಗಿ ದುರ್ಯೋ
ಧನನ್ನು ಮೇಲಕ್ಕೇರಿಸಿಲ್ಲ. ಇಲ್ಲೂ ಅವನಿಗೆ ಸಲ್ಲುವುದು ಕರುಣೆಯೇ ಹೊರತು
ಭಯಾಶ್ಚರ್ಯಗಳು ಬೆರೆತ ಗೌರವವಲ್ಲ. ಒಂದು ಕಡೆಯಂತೂ “ಅಭಿಮಾನಧನ,
ಛಲದಂಕಮಲ್ಲ” ಎಂಬ ಮಾತು ಹೊಗಳಿಕೆಯೆ ಎಂಬ ಸಂದೇಹ ಕೂಡ ಬರಬಹು
ದೇನೋ !ಇದನ್ನು ಖಚಿತವಾಗಿ ಹೇಳಲಾರೆ. ಆ ಬಿರುದುಗಳಾದಮೇಲೆ ಬರುವ
ಮಾತುಗಳನ್ನು ಗಮನಿಸಿ :

“ಸಂಜಯಂ—ಅಭಿಮಾನಧನ, ಛಲದಂಕಮಲ್ಲ, ಆರುಮಂ ನಿರಾಕರಿಸು
ವಯ್. ಶ್ರೀಕೃಷ್ಣಂ ಮಹಾವಿಷ್ಣು”

ಶ್ರೀಕಂಠಯ್ಯನವರು ದುರ್ಯೋಧನನಿಗೆ ಹೆಚ್ಚು ದಯೆ ತೋರಿಸಿದ್ದರೆ, ಅದು
ಆತನಿಗೆ ನಾಟಕದಲ್ಲಿ ಇತರರಿಗಿಂತ ಹೆಚ್ಚು ಸ್ಥಳ ಕೊಟ್ಟಿರುವುದರಲ್ಲಿ ಮಾತ್ರ.

ದುರ್ಯೋಧನನಿಗೆ ಕರುಣೆಯನ್ನು ಹೇಗೆ ದೊರಕಿಸಿಕೊಟ್ಟಿದ್ದಾರೆ ಎಂಬುದಕ್ಕೆ
ಸ್ವಲ್ಪ ಗಮನ ಕೊಡಬಹುದು. ರಾಜವೈಭವ ಮಾತ್ರ ಇದ್ದರೆ ಅದರಿಂದ ರುದ್ರ
ನಾಯಕನಿಗೆ ಘನತೆ ಬರಲಾರದೆಂದು ಕಂಡೆವಷ್ಟೆ. ಆದರೂ ಆ ವೈಭವದಿಂದ
ದಿಕ್ಕೆಟ್ಟ ಪರದೇಶಿಯ ಸ್ಥಿತಿಗೆ ಇಳಿದನೆಂದರೆ, ಅಂಥವನಿಗೆ ನಮ್ಮ ಕರುಣೆ ಸ್ವಲ್ಪ
ಸಲ್ಲುತ್ತದೆ. ಇದನ್ನು ನಾವು ಗಣನೆಗೆ ತಂದುಕೊಳ್ಳಬೇಕು. ಇದಲ್ಲದೆ ದುರ್ಯೋ
ಧನನಲ್ಲಿ ಮೆಚ್ಚಬಹುದಾದ ಕೆಲವು ಗುಣಗಳೂ ಇವೆ. ದುಶ್ಶಾಸನನ ಮತ್ತು ಕರ್ಣನ

ಮೇಲೆ ಅವನಿಗಿದ್ದ ಪ್ರೇಮ ಗಾಢವಾದದ್ದು, ಅವ್ಯಾಜವಾದದ್ದು. ಈ ಮೂವರದ್ದು ಆಸುರೀ ಭ್ರಾತೃತ್ವ ಎಂದರೂ ಅದು ಭ್ರಾತೃತ್ವವೇನೋ ಹೌದು. ಕೌರವನು ಅವರಿಬ್ಬರಿಗಾಗಿ ಪಡುವ ಶೋಕ ಹೃದಯಸ್ಪರ್ಶಿಯಾದದ್ದು; ಉತ್ತಮವಾದ ಕಾವ್ಯಕ್ಕೆ ಪ್ರೇರಕವಾಗುವ ಶಕ್ತಿಯುಳ್ಳದ್ದು. ತನ್ನ ಶತ್ರುವಾದ ಅಭಿಮನ್ಯುವಿನ ಶವವನ್ನು ಕಂಡಾಗ ಕೌರವನಲ್ಲಿ ಔದಾರ್ಯ ಉಕ್ಕಿಬರುತ್ತದೆ. ಎರಡನೆಯ ಅಂಕದಲ್ಲಿ, ದ್ರೋಣಾಶ್ವತ್ಥಾಮರನ್ನು ಹಳಿದನಾದರೂ ಅವನಿಗೆ ಅವರಿಬ್ಬರಲ್ಲೂ ಅಪಾರವಾದ ಗೌರವವುಂಟು. ಅವನು ಆಡುವ "ಇದೆಲ್ಲಂ ಕೃಷ್ಣನ ಮಾಯೆ! ಹರಿ ಹರಿ! ಪೋಗು. ಇದರ್ಕೆ ಪ್ರಾಯಶ್ಚಿತ್ತಮಂ ಮಾಡು. ದೈವದ ಮುಂದೆ ನಾವೆಲ್ತು" ಎಂಬ ಮಾತಿನಲ್ಲಿ ಅಶ್ವತ್ಥಾಮನ ಅಕೃತ್ಯಕ್ಕಾಗಿ ಪಶ್ಚಾತ್ತಾಪವಿದೆ, ಗಾಂಭೀರ್ಯ ವಿರಕ್ತಿಗಳಿವೆ.

ಒಂದು ದೃಷ್ಟಿಯಲ್ಲಿ ಇವೆಲ್ಲಕ್ಕಿಂತ ಮುಖ್ಯವಾದ, ಪ್ರೇಕ್ಷಕ ವೃಂದದ ಮೇಲೆ ಬಹಳ ಪರಿಣಾಮವುಂಟಾಗಬಹುದಾದ ಅಂಶವೂ ಒಂದಿದೆ: ಗದಾಯುದ್ಧ ನಡೆಯುತ್ತಿರುವಾಗ ಕೌರವನು ತನ್ನ ಪರಮ ಶತ್ರುವಾದ ಭೀಮನಿಗೆ ತೋರಿಸಿದ ಔದಾರ್ಯ, ಮತ್ತು ಆ ಸಂದರ್ಭದಲ್ಲಿ ಅವನಲ್ಲಿರುವಂತೆ ತೋರುವ ಧರ್ಮಶ್ರದ್ಧೆ. ಭೀಮ ಬಿದ್ದಾಗ ಕೌರವ "ಇದು ಧರ್ಮಯುದ್ಧಂ; ಪೊಯ್ಯೆಂ ಬಿಳ್ದನಂ. ಇರಿಂ, ಎಳ್ಚರಿಸುವೆಂ ಗದೆಯ ಗಾಳಿಯಿಂ" ಎನ್ನುತ್ತಾನೆ. ಈ ಔದಾರ್ಯ ಪ್ರದರ್ಶನವಾಗಿ ಅರ್ಧನಿಮಿಷ ಕಳೆಯುವುದರೊಳಗೆ ಭೀಮ ದುರ್ಯೋಧನನ ತೊಡೆ ಮುರಿಯುತ್ತಾನೆ. ಕೌರವನ ನಡತೆಗೂ ಭೀಮನದಕ್ಕೂ ಅದೆಷ್ಟು ಅಂತರ! ನಿಸ್ಸಂದೇಹವಾಗಿ ಕೌರವನ ನಡತೆ ಘನವಾದದ್ದು, ಉದಾತ್ತವಾದದ್ದು—ಅದು ನಿಜವಾದರೆ! ಆದರೆ ಆ ಪ್ರಸಂಗ ರನ್ನನೂ ಶ್ರೀಕಂಠಯ್ಯನವರೂ ಹೇಳುವಂತೆ ನಡೆಯಿತೆಂದು ಒಪ್ಪುವುದು ಕಷ್ಟ. ದುರ್ಯೋಧನನಿಗೆ ಕರ್ಣ-ದುಶ್ಶಾಸನರ ಮೇಲೆ ಗಾಢವಾದ ಪ್ರೇಮವಿತ್ತೆಂದು ನಂಬಬಹುದು; ಅವನು ಅಭಿಮನ್ಯುವನ್ನು ನಿಜವಾಗಿಯೂ ಔದಾರ್ಯದಿಂದ ಹೊಗಳಿ ಕೈಮುಗಿದನೆಂದೂ ನಂಬಬಹುದು. ಆದರೆ ಭೀಮನ ವಿಷಯದಲ್ಲಿ ಮೇಲೆ ಹೇಳಿದಂತೆ ನಡೆದುಕೊಂಡನೆಂದು ನಂಬುವುದು ಸಾಧ್ಯವಲ್ಲ. ಭೀಮನನ್ನು ವಿಷವಿಕ್ಕಿ ಕೊಲ್ಲಲು ಪ್ರಯತ್ನಿಸಿದವನು; ಪಾಂಡವರಿಗಾಗಿ ಲಾಕ್ಷಾಗೃಹವನ್ನು ನಿರ್ಮಿಸಿ, ಅವರು ನಿದ್ರಿಸುತ್ತಿರುವಾಗ ಮನೆಗೆ ಬೆಂಕಿಹಚ್ಚಿ ಅವರನ್ನು ಸುಟ್ಟು ಬೂದಿಮಾಡಲು ಪ್ರಯತ್ನಿಸಿದವನು; ದ್ರೌಪದಿಯನ್ನು ಸಭೆಗೆ ಎಳೆತರಿಸಿ, ದುಶ್ಶಾಸನ ಅವಳ ಸೀರೆಯನ್ನು ಎಳೆದುಹಾಕುತ್ತಿದ್ದಾಗ ಹಿಗ್ಗಿನಿಂದ ನೋಡುತ್ತಿದ್ದು ಅವಳಿಗೆ ತನ್ನ ತೊಡೆಯನ್ನು ತೋರಿಸಿದವನು—ಇದೇ ದುರ್ಯೋಧನ ತಾನೆ! ಅದನ್ನೆಲ್ಲಾ ಅವನು ಮಾಡಿದ್ದು ಯಾವುದೋ ಕೋಪದ ಘಳಿಗೆಯೊಂದರಲ್ಲಲ್ಲ. ಕೋಪಕ್ಕೆ ಕಾರಣವಿಲ್ಲದಿದ್ದಾಗಲೂ ಅವನ ನಡತೆ ಅಂಥದೇ; ಅದೇ ಅವನಿಗೆ ಸ್ವಾಭಾವಿಕವಾದದ್ದು. ಗದಾಯುದ್ಧದ ಸಂದರ್ಭದಲ್ಲಿ ಭೀಮನ ಮೇಲಿನ ರೋಷ ಎಂದಿಗಿಂತಲೂ ಹೆಚ್ಚಾ

ಗಿದ್ದಿರಬೇಕು. ಸಾಮಾನ್ಯ ಕಾಲದಲ್ಲೇ ಅಧರ್ಮದಿಂದ ನಡೆದು ಅದರಲ್ಲಿ ಹಿಗ್ಗುವ ಮನುಷ್ಯ, ಕೋಪತಾಪಗಳು ಮೇರೆಮೀರಿರುವ, ಅಳಿವು ಉಳಿವುಗಳನ್ನು ನಿರ್ಧರಿಸುವ ಈ ಸಂದರ್ಭದಲ್ಲಿ ಔದಾರ್ಯದಿಂದ ನಡೆದುಕೊಂಡವನೆಂದರೆ ನಂಬುವುದು ಹೇಗೆ? ಭೀಮ ಬೀಳುವುದಕ್ಕೆ ಕೆಲವೇ ಸೆಕೆಂಡುಗಳು ಮುಂಚೆ ಅವನು 'ದುಶ್ಶಾಸನರಕ್ತಮಂ ಪೀರ್ದ ಪಿಶಾಚ' ಎಂಬುದನ್ನು ನೆನೆದಿದ್ದಾನೆ—ಆ ಘಳಿಗೆಯಲ್ಲಿ ಧರ್ಮಶ್ರದ್ಧೆ ಹಠಾತ್ತಾಗಿ ಅಂತರಿಕ್ಷದಿಂದ ಇಳಿದು ಬಂದು ಅವನಲ್ಲಿ ನೆಲಸಿತೆ?

ದುರ್ಯೋಧನನ ಪರವಾಗಿ ನನ್ನ ಮಿತ್ರರೊಬ್ಬರು ಒಂದು ವಾದವನ್ನು ಹೂಡಿದ ನೆನಪಿದೆ: ದುರ್ಯೋಧನನ ಅಪರಾಧಗಳೆಲ್ಲ ಎಷ್ಟೋ ವರ್ಷಗಳ ಹಿಂದೆ, ವ್ಯಾಸರ ಮಹಾಭಾರತ ಪ್ರಪಂಚದಲ್ಲಿ ನಡೆದುವು. ಆ ಅಪರಾಧಗಳಿಗೂ ಗದಾಯುದ್ಧಕ್ಕೂ ನಡುವೆ ಹದಿಮೂರು ವರ್ಷಗಳಿಗಿಂತ ಹೆಚ್ಚಿನ ಅಂತರವಿದೆ. ಅಲ್ಲದೆ, ಈಗ ನಮ್ಮ ಗಮನದಲ್ಲಿರುವ ದುರ್ಯೋಧನ ವ್ಯಾಸರ ದುರ್ಯೋಧನನಲ್ಲ, ರನ್ನನ ಮತ್ತು ಶ್ರೀಕಂಠಯ್ಯನವರ ದುರ್ಯೋಧನ—ಅವರು ಬೇರೆ ಬೇರೆ ವ್ಯಕ್ತಿಗಳು. ಮೊದಲನೆಯವನಲ್ಲಿಲ್ಲದಿದ್ದ ಔದಾರ್ಯ ಎರಡನೆಯವನಲ್ಲೇಕೆ ಇರಬಾರದು?

ಈ ವಾದದಲ್ಲಿ ಅಡಗಿರುವ ತತ್ವ ಬೆಲೆಯುಳ್ಳದ್ದು, ಒಪ್ಪಬೇಕಾದದ್ದು, ಎಂಬುದನ್ನು ಕಾಣಿಸುವ ಉದ್ದೇಶದಿಂದ ಇಲ್ಲಿ ಅದರ ಪ್ರಸ್ತಾವ ಮಾಡಿದ್ದೇನೆ. ಒಂದೇ ಕಥೆಯನ್ನು ವಸ್ತುವಾಗಿಟ್ಟುಕೊಂಡು ನಾಲ್ಕು ಜನ ಕಾವ್ಯ ಬರೆಯಬಹುದು. ಪಾತ್ರಗಳ ಹೆಸರುಗಳು ಒಂದೇ ಆಗಿರಬಹುದು; ಆದರೆ ಅವರ ವ್ಯಕ್ತಿತ್ವ ಬೇರೆಯಾಗುತ್ತದೆ. ವ್ಯಾಸರ ದುರ್ಯೋಧನನ ವಿಷಯದಲ್ಲಿ ಹೇಳಬಹುದಾದ ಮಾತು ರನ್ನನ ದುರ್ಯೋಧನನ ವಿಷಯದಲ್ಲಿ ಸಲ್ಲದಿರುವುದು ಸಾಧ್ಯ; ಆದರೆ ಪ್ರಕೃತ ಸಂದರ್ಭದಲ್ಲಿ,ದುರ್ಯೋಧನನ ವಿಷಯದಲ್ಲಿ ಮೇಲೆ ಹೇಳಿರುವ ಮಾತು ರನ್ನ–ಶ್ರೀಕಂಠಯ್ಯನವರ ದುರ್ಯೋಧನನ ವಿಷಯದಲ್ಲೂ ಸಲ್ಲುತ್ತದೆ. ಏಕೆಂದರೆ ಅವನ ದುಷ್ಕೃತ್ಯಗಳು ಹದಿಮೂರು ವರ್ಷಗಳು ಕಳೆದಿದ್ದರೂ ಮಸಕಾಗಿಲ್ಲ. ಅವು ವ್ಯಾಸರ ಮಹಾಭಾರತದಿಂದ ರನ್ನನ ಕಾವ್ಯಕ್ಕೂ ಅಲ್ಲಿಂದ ಈ ನಾಟಕಕ್ಕೂ ಪ್ರಯಾಣಮಾಡಿ ಬಂದಿವೆ. ಅವುಗಳ ಮೊನೆ ಮುರಿದಿಲ್ಲ. ಎಲ್ಲರ ಮನಸ್ಸಿನಲ್ಲೂ ಅವು ಜೀವಂತವಾಗಿವೆ. ದ್ರೌಪದಿ, ಕೃಷ್ಣ, ಮರುಳುಗಳು—ಎಲ್ಲರೂ ದುರ್ಯೋಧನನ ಪಾತಕಗಳ ಮಾತನ್ನೆತ್ತಿ ಆಡುತ್ತಿದ್ದಾರೆ. ಭೀಮನ ಮನಸ್ಸಿನಲ್ಲಂತೂ ಅವುಗಳ ನೆನಪು ಜ್ವಲಿಸುತ್ತಿದೆ—ಅದರ ಮಾತುಮುಂದೆ ಬರುತ್ತದೆ. ಗದಾಯುದ್ಧ ನಡೆಯುತ್ತಿರುವಾಗಲೇ ಅವನು "ಇದು ಲಾಕ್ಷಾಗೇಹದಾಹಕ್ಕೆ" "ಕೃತ್ರಿಮವಿಷಾನ್ನಕ್ಕೆ; ಜೂದಿಂಗೆ" "ಪಾಂಚಾಲೀ (ಪ್ರಪಂಚಕ್ಕೆ" ಎಂದು ಎತ್ತಿ ಆಡುತ್ತಲೇ ಗದೆಯ ಪೆಟ್ಟು ಕೊಡುತ್ತಾನೆ.

ಒಂದು ವೇಳೆ ಪಾಂಡವರ ಕಡೆಯವರೆಲ್ಲರೂ ಅವನ ಪಾತಕಗಳನ್ನು ಮರೆಯುವಂತಿದ್ದರೂ ಕೌರವನೇ ಅವರಿಗೆ ಅವುಗಳ ನೆನಪು ಕೊಡುತ್ತಾನೆ. ಅವನು

ಆ ನೆನಪುಗಳನ್ನು ನಾಲಿಗೆಯ ಮೇಲೆ ಹೊರಳಿಸಿ ಹೊರಳಿಸಿ ಸವಿಯುವಂತೆ ತೋರು ತ್ತದೆ!

> ಸಭೆಯೊಳ್ ತಮ್ಮರ ಪಕ್ಕದೆನ್ನನುಜನಾ ಪಾಂಚಾಲಿಯಂ ಪಂಚವ
> ಲ್ಲಭೆಯಂ ಮೋದೆಯುಮಲ್ಲಿ ಮಿಳ್ಮಿಳನೆ ನೋಡುತ್ತಿರ್ದ ಬಲ್ಲಾಳ್ಗಳಿ
> ಲ್ಲಿ ಭರಂಗೆಯ್ದಪರೀ ಪರಾಕ್ರಮುಮೀ ಪೆರ್ಮಾತುಮೀ ಗಂಡುಮೀ
> ಸುಭಟಾಲಾಪಮುಮೆಲ್ಲಮಾ ನೃಪಸುತರ್ಗಂದೆಲ್ಲಿ ಪೊಕ್ಕಿರ್ದುದೋ.

"ಪಂಚವಲ್ಲಭೆ" "ಮಿಳ್ಮಿಳನೆ ನೋಡುತ್ತಿರ್ದ ಬಲ್ಲಾಳ್ಗಳು"—ಈ ಮಾತು ಗಳಲ್ಲಿ ಅದೆಷ್ಟು ತಿರಸ್ಕಾರವನ್ನು ತುಂಬಿದ್ದಾನೊ! ರನ್ನನ ಶೈಲಿಯನ್ನು ನಾವು ಸವಿಯುವಂತೆ ಅವನು ತನ್ನ ನೆನಪುಗಳನ್ನು ಸವಿಯುತ್ತಿದ್ದಾನೆ. ಮೇಲೆ ಉದಾಹರಿಸಿದ ಮಾತು ಸಂಜಯನಿಗೆ ಹೇಳಿದ್ದು. ಗದಾಯುದ್ಧ ಆರಂಭವಾಗುವುದಕ್ಕೆ ಒಂದೆರಡು ನಿಮಿಷ ಮುಂಚೆ ಅವನು ಭೀಮನನ್ನು ಮೂದಲಿಸುವ ಮಾತು ಇದು: "ಎಲ್ಲಿ ರ್ದುದೊ ಈ ಗಂಡಗರ್ವಂ ಕೃಷ್ಣೆಯ ನೆಳೆದಾಡಿದಂದು, ಷಂಡ!" ದುರ್ಯೋಧನನ ಕೇಡಿಗತನವನ್ನು ಕಾಣಬೇಕಾದರೆ ಹದಿಮೂರು ವರ್ಷ ಹಿಂದಕ್ಕೆ ಪ್ರಯಾಣ ಮಾಡಬೇಕಾಗಿಲ್ಲ; ಅದು ಭೂತಕಾಲದಲ್ಲಿ ಹೇಗಿತ್ತೋ ವರ್ತಮಾನ ಕಾಲದಲ್ಲೂ ಹಾಗೆಯೇ ಇದೆ.

ಕೇಡಿಗನಲ್ಲೂ ಒಂದೊಂದು ಸಮಯದಲ್ಲಿ ಘನತೆ ಕಾಣಿಸಬಹುದಲ್ಲವೆ ಎನ್ನಬಹುದು, ಅದು ನಿಜ. ಆದರೆ ದುರ್ಯೋಧನನಲ್ಲಿ ಅದು 'ಸಂಭವವಲ್ಲದ ಸಾಧ್ಯ'—ಅಂಥದನ್ನು ಕಲೆಯಲ್ಲಿ ತರುವುದು ಒಳ್ಳೆಯದಲ್ಲ. ಅದು ಸಂಭವವೂ ಹೌದು ಎಂದು ನಾವು ನಂಬಬೇಕಾದರೆ ಕವಿ ಸ್ವಲ್ಪ ಪೂರ್ವಸಿದ್ಧತೆ ಮಾಡಿರಬೇಕು. ದುರ್ಯೋಧನನನ್ನು ಇಲ್ಲೂ ರನ್ನನ ಕಾವ್ಯದಲ್ಲೂ ಚಿತ್ರಿಸಿರುವ ರೀತಿಯನ್ನು ನೋಡಿದರೆ "ಇವನಲ್ಲಿ ಅಂಥ ಔದಾರ್ಯವಿರಲಾರದು" ಎನ್ನಿಸುತ್ತದೆ. ಔದಾರ್ಯವಿರುವುದು ರನ್ನನಲ್ಲಿ, ಶ್ರೀಕಂಠಯ್ಯನವರಲ್ಲಿ. ಮಾನವನ ಸ್ವಭಾವ ಜಟಿಲವಾದದ್ದು, ಪರಸ್ಪರ ವಿರೋಧವುಳ್ಳ ಗುಣಗಳು ಅವನಲ್ಲಿ ನೆಲೆಸಿರುತ್ತವೆ. ಆದ್ದರಿಂದ ದುರ್ಯೋಧನನನ್ನು 'ಬರಿಯ ಕೇಡಿಗತನದ ಮುದ್ದೆ' ಎನ್ನುವಂತೆ ಚಿತ್ರಿಸಬಾರದು. ಇದನ್ನು ನಮ್ಮ ಕವಿಯೂ ಬಲ್ಲ, ನಾಟಕಕಾರರೂ ಬಲ್ಲರು. ರನ್ನನು ಕೌರವನ ಒಳ್ಳೆಯ ಗುಣಗಳನ್ನು ಕಾಣಿಸಲು ಹೊರಟಾಗ ಒಂದು ಹೆಜ್ಜೆ ಮುಂದೆ ಹೋಗಿ, ನ್ಯಾಯದ ಮಿತಿ ಮೀರಿ ಔದಾರ್ಯವನ್ನು ತಲಪಿದ. ಶ್ರೀಕಂಠಯ್ಯನವರು ಅದನ್ನು ಅನುಮೋದಿಸಿದರು.

ಇದೆಲ್ಲ ಸರಿಯೆಂದಮೇಲೂ ದುರ್ಯೋಧನನನ್ನು ಚಿತ್ರಿಸಿರುವ ರೀತಿ "ಇವನಿಗಾಗಿ ನಿಮ್ಮ ಕರುಣೆಯನ್ನು ತನ್ನಿ" ಎನ್ನುವಂತಿದೆ. ನಾವು ಅದನ್ನು ಸಲ್ಲಿಸಿಯೂ

ಸಲ್ಲಿಸುತ್ತೇವೆ. 'ಇವನು ತನ್ನ ಮೃತ್ಯುವಿಗೆ ತಾನೇ ಆಹ್ವಾನ ಕೊಟ್ಟ!' ಎಂದು ನೀತಿಯ ಉಚ್ಚಾಸನದ ಮೇಲೆ ಕುಳಿತು ಚುಚ್ಚುಮಾತು ಹೇಳಿದ್ದರಿಂದ ಯಾರಿಗೇನು ಬಂದ ಹಾಗಾಯಿತು! ನಾವು ನ್ಯಾಯಾಧೀಶರಿಗಿಂತ ಹೆಚ್ಚಾಗಿ ಮಾನವರು. ಕೇಡಿಗ ಅನುಭವಿಸುವ ಸಂಕಟವೂ ಸಂಕಟವೇ. ಅಲ್ಲದೆ, ದುರ್ಯೋಧನನಲ್ಲಿ ಕವಿಯೊಬ್ಬ ಹುದುಗಿಕೊಂಡಿದ್ದಾನೆ. ಕರ್ಣ-ದುಶ್ಶಾಸನರನ್ನು ಕುರಿತ ಶೋಕಗೀತೆ ಹಾಡುವವನು ಆ ಕವಿ. ಆ ಗೀತೆ ನಮ್ಮ ಅನುಕಂಪವನ್ನು ಹೊರ ಹೊಮ್ಮಿಸುತ್ತವೆ. ಇದರ ಪ್ರಸ್ತಾವ ಹಿಂದೆಯೇ ಬಂದಿದೆ. ಅಂತೆಯೇ ದುರ್ಯೋಧನನ ದುಸ್ಸಹವಾದ ಒಂಟಿತನವೂ ಹೃದಯಸ್ಪರ್ಶಿಯಾಗಿದೆ:

ಎನಗೆ ಮನಮಿಂದು ಶೂನ್ಯಂ
ಮನೆ ಶೂನ್ಯಂ ಬೀಡು ಶೂನ್ಯಮಾದುದು ಸಕಲಾ
ವನಿ ಶೂನ್ಯಮಾಯ್ತು, ದುಶ್ಶಾಸನನಿಲ್ಲದೆ
ಕರ್ಣನಿಲ್ಲದಾನೆಂತಿರ್ಪೆಂ?

ಅವನು ಬೆಳೆದದ್ದೂ ಬದುಕನ್ನು ಬದುಕಿದ್ದೂ ದುಶ್ಶಾಸನ-ಶಕುನಿ-ಕರ್ಣರಂಥವರ ಪ್ರಪಂಚದಲ್ಲಿ. ಅದರ ವಾತಾವರಣದಲ್ಲಿ ಪಾಂಡವ ದ್ವೇಷವೂ ಅವರ ಸಂಕಟವನ್ನು ನೋಡಿ ಆನಂದಪಡುವ ಮನೋವೃತ್ತಿಯೂ ತುಂಬಿದ್ದವು. ಈಗ ಆ ಪ್ರಪಂಚ ನಾಶವಾಯಿತು; ತನ್ನವರೆಲ್ಲ ಸತ್ತಿದ್ದಾರೆ, ಪಾಂಡವರು ಅವರನ್ನು ಕೊಂದು ಕೂಗುತ್ತಿದ್ದಾರೆ. ವಿಶ್ವದಲ್ಲಿ ಅವನು ಒಂಟಿ. ಈ ನಾಟಕದಲ್ಲಿ ದುರ್ಯೋಧನನಿಗೆ ನಮ್ಮ ಮರುಕ ಸಲ್ಲುತ್ತದೆ. ಆದರೆ "ಇವನು ಎಂಥ ಮಹೋನ್ನತನಾದ ವ್ಯಕ್ತಿ" ಎನ್ನಿಸುವ ಆಶ್ಚರ್ಯ, ಗೌರವಗಳು ನಮ್ಮಲ್ಲಿ ಉದ್ಭವಿಸುವುದಿಲ್ಲ. ಆದ್ದರಿಂದಲೇ ಅವನಿಗೆ ರುದ್ರನಾಯಕ ಪಟ್ಟ ಸಲ್ಲದು.

ರನ್ನನ ದುರ್ಯೋಧನನಲ್ಲಿದ್ದ ಕೇಡಿಗತನವೆಲ್ಲ ಇಲ್ಲಿಯ ದುರ್ಯೋಧನನಲ್ಲೂ ಉಳಿದಿದೆ ಎನ್ನುವುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳುವುದು ಅವಶ್ಯಕ. ಏಕೆಂದರೆ ನಮ್ಮ ಮನಸ್ಸಿನಲ್ಲಿ ದುರ್ಯೋಧನನ ಘನತೆ ಹೆಚ್ಚಿದಂತೆಲ್ಲ ಭೀಮನ ಘನತೆ ಇಳಿಯುತ್ತದೆ. ಗದಾಯುದ್ಧದ ಸಂದರ್ಭದಲ್ಲಂತೂ ಈ ಮಾತು ಹೆಚ್ಚು ನಿಜ— "ಇಂಥ ಒಳ್ಳೆಯವನನ್ನು ಭೀಮ ಧರ್ಮಮಾರ್ಗವನ್ನು ಬಿಟ್ಟು ಕೊಂದನಲ್ಲ! ಎಂದು ಅವನನ್ನು ಹಳಿಯುವಂತಾಗುತ್ತದೆ. ಭೀಮನಿಗೆ ಈ ಬಗೆಯ ಅನ್ಯಾಯ ಆಗಿದೆ. ಶ್ರೀಕಂಠಯ್ಯನವರು ತಮ್ಮ 'ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ (ಕನ್ನಡ ಕೈಪಿಡಿ ಸಂಪುಟ ೨, (೧೯೪೭) ಪು. ೫೫) ರನ್ನನಿಗೆ ಈ ಹೊಗಳಿಕೆಯನ್ನು ಸಲ್ಲಿಸಿದ್ದಾರೆ."ಅವನು ಭೀಮನನ್ನು ಇಳಿಸಿಲ್ಲ; ಆದರೆ ದುರ್ಯೋಧನನನ್ನು ಏರಿಸಿರುವನು."

ದುರ್ಯೋಧನನನ್ನು ಏರಿಸಿರುವ ವಿಷಯವನ್ನು ಆಗಲೇ ಚರ್ಚಿಸಿದ್ದಾಗಿದೆ. "ಭೀಮ ನನ್ನು ಇಳಿಸಿಲ್ಲ" ಎಂಬ ಮಾತನ್ನು ಸ್ವಲ್ಪ ವಿನಾಯಿತಿ ಇಟ್ಟುಕೊಂಡು ಒಪ್ಪಬಹುದು. ಭೀಮನನ್ನು ಇಳಿಸುವ ಉದ್ದೇಶ ರನ್ನನಿಗೆ ಇರಲಿಲ್ಲ—ಭೀಮನನ್ನು ಇಳಿಸಿದರೆ ಇರಿವ ಬೆಡಂಗ ಸತ್ಯಾಶ್ರಯನನ್ನು ಇಳಿಸಿದಂತೆ ತಾನೆ! ಆದರೆ ಅವನ ಓದುಗರು ಭೀಮ ದುರ್ಯೋಧನರನ್ನು ಹೋಲಿಸಿ "ಭೀಮ ಬಿದ್ದಾಗ ದುರ್ಯೋಧನ ಗಾಳಿ ಹಾಕಿ ಅವನನ್ನು ಉಪಚರಿಸಿದ; ಭೀಮನಾದರೋ ಧರ್ಮವಿರುದ್ಧವಾಗಿ ಅವನ ತೊಡೆ ಯನ್ನು ಮುರಿದ; ಎಂದುಕೊಳ್ಳುವುದು ಅನಿವಾರ್ಯ. ಈ ನಾಟಕದಲ್ಲಿ ಭೀಮ ಸ್ವಲ್ಪ ಇಳಿದಿದ್ದಾನೆ. ನಾಲ್ಕನೆಯ ರಂಗದಲ್ಲಿ ಧರ್ಮರಾಜನು "ಭೀಮ, ಈ ಮುಸಕಂ ಮುಸಕಲ್ ತಗದು" ಎಂದಾಗ ಭೀಮನ ಬಾಯಿಂದ "ಓಹೊ! ಧರ್ಮ ಶ್ರವಣಂ!" ಎಂಬ ತಿರಸ್ಕಾರದ ಮಾತನ್ನು ಆಡಿಸಬೇಕಾಗಿರಲಿಲ್ಲ. ಮಹಾಭಾರ ತದ ಭೀಮನಲ್ಲಿ ಸದ್ಗುಣಗಳಿವೆ; ಆದರೂ ಅವನು ಶೀಘ್ರ ಕೋಪಿ; ಧರ್ಮರಾಜನ ಧರ್ಮಶ್ರದ್ಧೆಯ ವಿಷಯದಲ್ಲಿ ಆಗಾಗ ಅಸಹನೆಯುಳ್ಳವನು! ದುಶ್ಯಾಸನನ ರಕ್ತ ವನ್ನು ಹೀರಿದವನು; ತೊಡೆ ಮುರಿದುಬಿದ್ದ ಕೌರವನನ್ನು ಒದೆದವನು. ಈ ಗುಣ ಗಳು ರನ್ನನ ಕಾವ್ಯಕ್ಕೂ ಈ ನಾಟಕಕ್ಕೂ ಇಳಿದು ಬಂದಿವೆ.

ಶ್ರೀಕಂಠಯ್ಯನವರಿಗೆ ಭೀಮನ ವಿಷಯದಲ್ಲಿ ಮೆಚ್ಚಿಕೆಯೇನೂ ಇಲ್ಲ. ಆದರೂ ಗದಾಯುದ್ಧದ ದೃಶ್ಯ ಏಕೊ ಸರಿಬರಲಿಲ್ಲ, ತೂಕ ತಪ್ಪಿದೆ, ಎಂಬ ಅತೃಪ್ತಿ ಅವರ ಮನಸಿನಲ್ಲಿದ್ದಿರಬೇಕು. ಆ ದೃಶ್ಯ ಅಷ್ಟೊಂದು ಮೊಟಕಾದು ದಕ್ಕೆ ಬಹುಶಃ ಅದೇ ಕಾರಣ. ವಾಸ್ತವವಾಗಿ ಭೀಮನು ದುರ್ಯೋಧನನ ತೊಡೆಗೆ ಹೊಡೆದದ್ದು ಅಧರ್ಮವೇ; ಬಿದ್ದ ಶತ್ರುವನ್ನು ಒದೆದದ್ದೂ ಅಧರ್ಮವೇ. ಆದರೆ ನಾವು ಮಹಾಕಾವ್ಯಗಳಲ್ಲಿ ಬರುವ ಪಾತ್ರಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಒಂದೆರಡು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಆ ಪಾತ್ರಗಳನ್ನು ಎರಕ ಹೊಯಿದಿರುವುದು ಬೃಹತ್ಪ್ರಮಾಣದ ಅಚ್ಚಿನಲ್ಲಿ. ಅವರ ಮಾತುಕಥೆ, ಅವರ ಕಾರ್ಯ, ಅವರ ರಾಗ ದ್ವೇಷಾದಿಗಳು—ಎಲ್ಲ ಅತಿಮಾನವ ಪ್ರಮಾಣದವು. ಅವರಲ್ಲಿ ಜ್ವಲಿ ಸುವ ಕೋಪ-ತಾಪಗಳು ನಮ್ಮಂಥವರನ್ನು ಸುಟ್ಟು ಬೂದಿಮಾಡಿಯಾವು. ನಮ್ಮ ಮಾನವಂಡದಿಂದ ಅವರನ್ನು ಅಳೆಯಲಾಗದು. ಭೀಮನ ಪಾತ್ರವನ್ನು ಪರಿ ಶೀಲಿಸುವಾಗ ನಾವು ವಿಶೇಷಾಂಶವೊಂದನ್ನೂ ಗಮನಿಸಬೇಕು. ಅವನಿಗೆ ಕೌರವ ಮಾಡಿದ ಮತ್ತು ಮಾಡಿಸಿದ ಅವಮಾನ—ಅದು ಪಾಂಡವರೆಲ್ಲರಿಗೂ ಆದ ಅವ ಮಾನ; ಭೀಮನು ಪಾಂಡವರ ಪ್ರತಿನಿಧಿ—ಎಂಥ ಸಾತ್ವಿಕನನ್ನಾದರೂ ಕೆರಳಿಸಿ ರೊಚ್ಚಿಗೆ, ಹುಚ್ಚಿಗೆ ಎಬ್ಬಿಸುವಂಥಾದ್ದು. ಕೌರವನ ಅಪ್ಪಣೆಯಂತೆ ದ್ರೌಪದಿ ಯನ್ನು ತುಂಬಿದ ಸಭೆಗೆ ಜುಟ್ಟು ಹಿಡಿದು ಎಳೆತಂದರು; ದುರ್ಯೋಧನ ಅವ ಳಿಗೆ ತನ್ನ ತೊಡೆಯನ್ನು ತೋರಿಸಿದ; ದುಶ್ಯಾಸನ ಅವಳ ಸೀರೆಯನ್ನು ಎಳೆದ- ಅವಳು ಅಷ್ಟು ಜನರೆದುರಿಗೂ ಬೆತ್ತಲೆ ನಿಲ್ಲುವಂತಾಗದಿದ್ದರೆ, ಅದು ದುಶ್ಯಾಸನನ

ಅಥವಾ ದುರ್ಯೋಧನನ ದಯೆಯಿಂದೇನಲ್ಲ! ಇದೆಲ್ಲ ನಡೆಯುತ್ತಿದ್ದಾಗ ಭೀಷ್ಮ ದ್ರೋಣರಂಥ ಹಿರಿಯರು, ಜ್ಞಾನಿಗಳು ಕೂಡ ಆ ದುಷ್ಟರ ಕೈಯನ್ನು ತಡೆಯ ಲಿಲ್ಲ—ಭೀಷ್ಮರು ಧರ್ಮಸೂಕ್ಷ್ಮದ ವಿಷಯ ಭಾಷಣ ಮಾಡಿದರು, ಅಷ್ಟೆ ಅವರ ನಡತೆ ಸ್ವಾಭಾವಿಕವೊ, ಅಥವಾ ಭೀಮ ಆಮೇಲೆ ಮಾಡಿದ ಪ್ರತೀಕಾ ಸ್ವಾಭಾವಿಕವೊ? ಧರ್ಮರಾಜನಿಗೇನೊ ಅಂಥ ಸಂದರ್ಭದಲ್ಲಿ ಕೂಡ ಆತ್ಮಸ ಯಮ ಸಾಧ್ಯವಾಯಿತು. ಅದಕ್ಕಾಗಿ ಆತನಿಗೆ ಗೌರವ ಸಲ್ಲಿಸೋಣ. ಆದ ಧರ್ಮರಾಜನಾಗದೆ ಇದ್ದುದಕ್ಕಾಗಿ ಭೀಮನನ್ನು ನಿಂದಿಸುವುದು ಸರಿಯಲ್ಲ ಭೀಮನೂ ಮಾನವ—ಮಹಾಕಾವ್ಯದ ಮಟ್ಟದ ಮಾನವ; ಮಾನವ ಸಹಜವಾ ಕೋಪತಾಪಗಳೂ ಅವನಲ್ಲಿ ಮಹಾಕಾವ್ಯದ ಮಟ್ಟಕ್ಕೆ ಏರುತ್ತವೆ. ಭೀಮನ ಪಾಲಿಗೆ ಕೌರವವಧೆಯೊಂದು ಯಜ್ಞ. ದುರ್ಯೋಧನ—"ಆ ನೀಚನಾ ದ್ರೋಹನಾ ಚಂಚಳನಾ ಚಂಡಾಲನಾಪಾತಕನ್—ಯಜ್ಞಪಶು. ಅಷ್ಟೊಂದು ದುಷ್ಕೃತ್ಯ ಗಳನ್ನು ಮಾಡಿದ ಮತ್ತು ಮಾಡಿಸಿದ ಕೌರವನಿಗೇ ಸಹಾನುಭೂತಿಯನ್ನು ಕೊಡಬಹುದಾದರೆ ಭೀಮನಿಗೆ—'ದುಶ್ಶಾಸನರಕ್ತಮಂ ಪೀರ್ದ ಪಿಶಾಚಕ್ಕೆ' ಕೂಡ- ಕೊಡಬಾರದೆ!

ಆ ದುಷ್ಕೃತ್ಯಗಳು ಎಲ್ಲರ ಮನಸ್ಸಿನಲ್ಲೂ ಜೀವಂತವಾಗಿವೆಯೆಂಬುದನ್ನು ಆಗಲೇ ಕಂಡೆವಷ್ಟೆ. ಭೀಮನು ಕೊನೆಯ ಏಟನ್ನು ಹೊಡೆಯುವುದಕ್ಕೆ ಒಂದೇ ಸೆಕೆಂಡು ಮುಂಚೆ ದುರ್ಯೋಧನ ತನ್ನ ತೊಡೆ ತಟ್ಟಿದ. ಕೃಷ್ಣ—ಈ ನಾಟಕದಲ್ಲಿ ಅವನ ಪಾತ್ರ ಅಷ್ಟೇನೂ ಉದಾತ್ತವಾದದ್ದಲ್ಲ—ಊರುಭಂಗ ಪ್ರತಿಜ್ಞೆಯ ನೆನಪು ಕೊಟ್ಟ. ಒಂದು ವೇಳೆ ಅವನು ಕೊಡದೆ ಇದ್ದಿದ್ದರೂ ದುರ್ಯೋಧನನು ತೊಡೆ ತಟ್ಟಿದ್ದೇ ಭೀಮನಿಗೆ ನೆನಪು ತರುತ್ತಿತ್ತು. ಊರುಭಂಗವು ಅವನ ಅಪರಾಧಕ್ಕೆ ತಕ್ಕ ಶಿಕ್ಷೆ ಎಂಬ ಭಾವನೆ ನಮ್ಮ ಮನಸ್ಸಿಗೆ ಬರುತ್ತದೆ. ಪೆಟ್ಟು ತಿಂದದ್ದು ದುರ್ಯೋಧನನು ಮೈತ್ರೇಯರ ಎದುರಿಗೆ ತಟ್ಟಿದ ತೊಡೆ, ಭೀಮನೆದುರಿಗೆ ತಟ್ಟಿದ ತೊಡೆ, ದ್ರೌಪದಿಗೆ ತೋರಿಸಿದ ತೊಡೆ.

ಮೇಲೆ ಹೂಡಿರುವ ವಾದದ ಉದ್ದೇಶ "ಭೀಮನನ್ನು ಆದರ್ಶಪುರುಷನೆಂದು ಪರಿಗಣಿಸಬೇಕು" ಎಂದು ಸಮರ್ಥಿಸುವುದಲ್ಲ. ಭೀಮನಲ್ಲೂ ಆರ್ಯತನ ಹಿಂದೆ ಬಿದ್ದು ಆಸುರೀ ಮನೋವೃತ್ತಿ ತಾತ್ಕಾಲಿಕವಾಗಿ ಪ್ರಬಲಿಸಿದೆ.

ಆನುಂ ವಿಧೇಯನಲ್ಲಂ
ನೀನುಂ ಗುರುವಲ್ಲಮಿಂದಿನೊಂದೆವಸದೊಳ್

ಅದೊಂದು ದಿನ ಭೀಮನು ಧರ್ಮರಾಜನ ಆದರ್ಶವನ್ನು ಒಪ್ಪುವುದಿಲ್ಲ. ಅಂದಿನ ಯುದ್ಧದಲ್ಲಿ ಭೀಮ—ದುರ್ಯೋಧನರಿಬ್ಬರಿಗೂ ಯಾವ ಪಟ್ಟೊ ನಿಷಿದ್ಧ

ವಲ್ಲ. ದುರ್ಯೋಧನ ನಿಷೇಧವೊಂದಕ್ಕೆ ಬೆಲೆ ಕೊಟ್ಟನೆಂದಿರುವುದು ಕವಿ ಅವನಿಗೆ ತೋರಿಸಿದ ದಯೆ.

ಇಲ್ಲಿಯ ಭೀಮ ರನ್ನನ ಕಾವ್ಯದಲ್ಲಿ ತಾನಿದ್ದ ಮಟ್ಟದಿಂದ ಸ್ವಲ್ಪ ಕೆಳಗಿಳಿದಿದ್ದಾನೆ. ಆದರೂ ನಾಯಕ ಪಟ್ಟವನ್ನು ಯಾರಿಗೆ ಕಟ್ಟಬೇಕೆಂದು ಹುಡುಕಿಕೊಂಡು ಹೊರಟರೆ ಭೀಮನ ಅರ್ಹತೆಗೇ ಹೆಚ್ಚು ಬೆಲೆ ಕೊಡಬೇಕಾಗುತ್ತದೆ. ಭೀಮ–ದುರ್ಯೋಧನರ ನಡುವೆ ತಕ್ಕಡಿ ತೂಗಬೇಕಾದ ರೀತಿಯಲ್ಲಿ ತೂಗಿದ್ದರೆ ಇದು ಮತ್ತಷ್ಟು ಸ್ಪಷ್ಟವಾಗುತ್ತಿತ್ತು. ನಾಟಕ ಆರಂಭವಾಗುವುದು ದ್ರೌಪದಿಯ ಅವಮಾನಕ್ಕಾಗಿ ಸೇಡು ತೀರಿಸಿಕೊಳ್ಳಬೇಕೆಂಬ ಉದ್ದೇಶದಿಂದ ; ತೀರಿಸಿಕೊಳ್ಳುತ್ತೇನೆಂದು ಶಪಥ ತೊಟ್ಟವನೂ ದೃಢ ನಿಶ್ಚಯದಿಂದ ಅದನ್ನು ನಡೆಸಿದವನೂ ಭೀಮ. ಇದು ಇಂಗ್ಲೆಂಡ್‌ನ ಎಲಿಸಬೆತ್ ಕಾಲದ ಹಳೆಯ ಸೇಡು ನಾಟಕ (Revenge plays) ಗಳ ವರ್ಗಕ್ಕೆ ಸೇರಬಹುದಾದ ಕೃತಿ—ಕಲೆಗಿಂತ ಕಥಾವಸ್ತುವಿಗೆ ಹೆಚ್ಚು ಗಮನ ಕೊಟ್ಟರೆ. ಇಲ್ಲಿಯ ಕಲೆ ಆ ನಾಟಕಗಳದ್ದರಂತೆ ಒರಟಲ್ಲ ! "ಆಯ್ತು ವೇಣೀ ಸಂಹಾರಂ. ಸ್ಮರಸಂಜೀವನೆ ಕೃಷ್ಣೆ ಪೂ ಮುಡಿದಳ್" ಅದಾಗಿ ಒಂದೆರಡು ನಿಮಿಷಗಳಲ್ಲೇ ಕೃಷ್ಣ "ಇಂದು ನಿಮಗಾದಳ್ ಕೌರವನ ಲಕ್ಷ್ಮಿ" ಎನ್ನುತ್ತಾನೆ. ನ್ಯಾಯವಾಗಿ ಆಗ ನಾವೂ "ಆಯ್ತು ನಾಟಕಂ" ಎಂದುಕೊಳ್ಳಬೇಕು. ಅನಂತರ ಬರುವ ಲಕ್ಷ್ಮಿಗೂ ಅಶ್ವತ್ಥಾಮನಿಗೂ ಈ ನಾಟಕದ ರಂಗಸ್ಥಳಗಳಲ್ಲಿ ಕೆಲಸವೇನೂ ಇಲ್ಲ. ಅವರು ಕಲೆಯ ಅಪ್ಪಣೆ--ಆಹ್ವಾನಗಳಿಲ್ಲದೆ ಬಾಗಿಲನ್ನು ಒಡೆದು ಒಳಕ್ಕೆ ನುಗ್ಗಿಬಂದ ಜನ. ಅವರು ಪಾತ್ರವಹಿಸುವ ಪ್ರಸಂಗ ನಡೆಯದೆ ನಾಟಕವು ಮೇಲೆ ಸೂಚಿಸಿದಂತೆಯೇ ಮುಗಿದಿದ್ದರೂ ಅದು ರುದ್ರನಾಟಕವಾಗಿಯೇ ಉಳಿಯುತ್ತಿತ್ತು. ಭೀಮನೇನೋ ದ್ರೌಪದಿಗೆ ಹೂ ಮುಡಿಸಿ "ಅಹೋ, ಶೃಂಗಾರಂ, ವಿಭ್ರಮಂ, ಬೆಡಂಗು, ಬಿಂಕಂ !" ಎಂದು ಉಗ್ಗಡಿಸಬಹುದು ; ಅವನ ಅವನ ಕಣ್ಣಿಗೆ "ಕಾಳಿಕೆ ಪಿಂಗಿದ ಪೊನ್ನಂತೀ ಕಾಂತೆ" ತೊಳಗುವುದು ಕಾಣಬಹುದು. ನಮ್ಮ ಕಣ್ಣಿಗೆ ತನ್ನವರು ಎನ್ನಬಹುದಾದವರೊಬ್ಬರೂ ಇಲ್ಲದೆ ಮಾನಭಂಗ-ಊರುಭಂಗಗಳನ್ನು ಅನುಭವಿಸಿ ಸಾಯುತ್ತ ಬಿದ್ದಿರುವ ದುರ್ಯೋಧನನೂ ಕಾಣುತ್ತಾನೆ. ಧರ್ಮರಾಜನಿಗೆ ಕಂಡ "ಭೀಮನ ತಲೆಯ ಮೇಲಾಡುವ 'ಘೋರಮೂರ್ತಿ'ಗಳು ನಮಗೂ ಕಾಣುತ್ತಾರೆ. ಇವೆರಡು ದೃಶ್ಯಗಳೂ ನಮ್ಮ ಮೇಲೆ ಪರಿಣಾಮವುಂಟುಮಾಡಲು ಅವಕಾಶಕೊಡಬಹುದಾಗಿತ್ತು. ಆ ಘೋರ ಮೂರ್ತಿಗಳನ್ನು ಶ್ರೀಕಂಠಯ್ಯನವರು ಪ್ರಾಚೀನ ಗ್ರೀಸಿನಿಂದ ಕರೆತಂದಿದ್ದಾರೆ. ನಾಟಕವನ್ನು ಅಲ್ಲಿಗೇ ಮುಗಿಸಿದ್ದರೆ ಅವರ ದೂರ ಪ್ರಯಾಣದ ಶ್ರಮವೂ ಹೆಚ್ಚು ಸಾರ್ಥಕವಾಗುತ್ತಿತ್ತು!

೩ ಅಶ್ವತ್ಥಾಮನ್

ಪುರಾತನ ಗ್ರೀಕರ ನಾಟಕ ಕಾಲೇಜಿನಲ್ಲಿ ಓದುತ್ತಿದ್ದಾಗ ನಮಗೆ ಪಠ್ಯ ವಿಷಯವಾಗಿ ಮಾತ್ರ ಪರಿಚಿತವಾಗಿತ್ತು. ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಓದಿದ ಕೆಲವರು ಪ್ರೊ. ಜೆ. ಸಿ. ರಾಲೋ ಅವರಿಂದ 'ಆಗಮೆಮ್ನನ್' (Agamemnon) ನಾಟಕದ ವಾಚನವನ್ನು ಕೇಳಿ ಬ್ರಹ್ಮಾನಂದವನ್ನು ಅನುಭವಿಸಿದ್ದೆವು. ಆದರೆ ಆ ಕಾಲೇಜಿನ ನಾಟಕ ಸಂಘ ಷೇಕ್ಸ್‌ಪಿಯರ್, ಮೋಲಿಯೇರ್ ಮೊದಲಾದವರ ನಾಟಕಗಳನ್ನು ಆಡಿತ್ತಾದರೂ ಗ್ರೀಕ್ ನಾಟಕಗಳನ್ನು ಆಡಿದಂತೆ ನನಗಂತೂ ನೆನಪಿಲ್ಲ. ಗ್ರೀಕ್ ನಾಟಕ ಮೊಟ್ಟಮೊದಲು ಕನ್ನಡ ರಂಗಸ್ಥಳಕ್ಕೆ ಬಂದದ್ದು ಶ್ರೀಕಂಠಯ್ಯನವರ 'ಅಶ್ವತ್ಥಾಮನ್' ನಾಟಕವನ್ನು ಆಡಿದಾಗ, ೧೯೨೯ರಲ್ಲಿ. ಅದನ್ನು ಬರೆದದ್ದೂ ಅದೇ ವರ್ಷದಲ್ಲಿ. ಗ್ರೀಕ್ ನಾಟಕದ ಪರಿಚಯವಿಲ್ಲದವರು ಈ ನಾಟಕವನ್ನು ಓದಿದರೆ ಅಥವಾ ನೋಡಿದರೆ, ಅದು ಭಾರತೀಯ ವಸ್ತುವನ್ನು ಕುರಿತು ಬರೆದ ನಾಟಕ, ಎಂದೇ ಸ್ವಾಗತಿಸುತ್ತಾರೆ. ಅದು ಪಾಶ್ಚಾತ್ಯ ಸಾಹಿತ್ಯದಿಂದ ಪ್ರೇರಿತವಾದದ್ದು ಎಂಬ ಸಂದೇಹವೇ ಬರುವಂತಿಲ್ಲ. ಆದರೆ ಅದರ ರಚನಾ ವಿಧಾನ ಸ್ವಲ್ಪ ವಿಚಿತ್ರವಾಗಿ ಕಾಣಬಹುದು ಏಕೆಂದರೆ ಅದರಲ್ಲಿರುವ 'ಮೇಳ'ವನ್ನು ನಾವು ಇಲ್ಲಿಯ ನಾಟಕಗಳಲ್ಲಿ ಕಂಡಿಲ್ಲ. ನಾಟಕಾಭಿನಯ ಪ್ರದರ್ಶನಗಳನ್ನು ವೃತ್ತಿಯಾಗಿಟ್ಟುಕೊಂಡಿರುವವರ ಮೇಲೆ 'ಅಶ್ವತ್ಥಾಮನ್' ನೇರವಾದ ಪರಿಣಾಮವನ್ನೇನೂ ಉಂಟುಮಾಡಿದಂತೆ ಕಾಣುವುದಿಲ್ಲ. ಆದರೆ ವಿಶ್ವವಿದ್ಯಾಲಯಗಳ ಆವರಣದಲ್ಲೂ ಶಿಷ್ಟವರ್ಗದವರಲ್ಲೂ ಅದು ಬಹಳ ಆದರದ ಸ್ವಾಗತ ಪಡೆದಿದೆ; ಇಂಥ ಕಡೆಗಳಲ್ಲಿ ಅದರ ಪರಿಣಾಮ—ಪ್ರತ್ಯಕ್ಷ-ಮತ್ತು ಅಪ್ರತ್ಯಕ್ಷ-ಅಪಾರವಾದದ್ದು. ಆದರಿಂದಾಗಿ ಸೂಕ್ಷ್ಮವಾದ ವಿಮರ್ಶೆಯಷ್ಟು ಬೆಳೆಯಿತು; ಅಷ್ಟು ಸೂಕ್ಷ್ಮವಲ್ಲದ ಚರ್ಚೆಯೂ ಬೇಕಾದಷ್ಟು ಬೆಳೆಯಿತು. ಅದರ ವಿಷಯ ಮುಂದೆ ಬರುತ್ತದೆ.

ಪಾಶ್ಚಾತ್ಯ ನಾಟಕವೊಂದನ್ನು ಕನ್ನಡಕ್ಕೆ ತರಬೇಕು ಎಂಬುದು ಮಾತ್ರ ಶ್ರೀಕಂಠಯ್ಯನವರ ಉದ್ದೇಶವಾಗಿದ್ದರೆ ಅವರು ಷೇಕ್ಸ್‌ಪಿಯರ್-ನಾಟಕವೊಂದನ್ನು ಆರಿಸಿಕೊಳ್ಳುತ್ತಿದ್ದರೇನೊ. ಆದರೆ ಅವರ ಉದ್ದೇಶ: ಪಾಶ್ಚಾತ್ಯ ನಾಟಕವೊಂದರಿಂದ ಪ್ರಭಾವಿತವಾದರೂ ಸ್ವತಂತ್ರ, ಭಾರತೀಯ ಎನ್ನಬಹುದಾದ ನಾಟಕವನ್ನು ರಚಿಸುವುದು. ಅದು ಯಾವುದೋ ಬೇರೊಂದು ಪ್ರಪಂಚದಿಂದ ಶ್ರಮಪಟ್ಟು ತಂದ ಸೌಗಂಧಿಕಾ ಪುಷ್ಪವಾಗಬಾರದು—ಅದರ ಸುಗಂಧ, ಅದರ

ಸೌಂದರ್ಯ ಎಷ್ಟೇ ಇರಲಿ. ವಿಶ್ವವ್ಯಾಪಕವಾದ ಪರಿಜ್ಞಾನ ಗ್ರೀಕ್ ನಾಟಕಕಾರರಿಗಿಂತ ಷೇಕ್‌ಸ್ಪಿಯರ್‌ನಲ್ಲಿ ಹೆಚ್ಚು. ಆದರೂ ಪುರಾತನ ಗ್ರೀಕರು ಷೇಕ್‌ಸ್ಪಿಯರ್‌ಗಿಂತ ಕೆಲವು ವಿಧಗಳಲ್ಲಿ ನಮಗೆ ಹತ್ತಿರವಿದ್ದಾರೆ ಎನ್ನಿಸುತ್ತದೆ. ಇದನ್ನು ಶ್ರೀಕಂಠಯ್ಯನವರು ಬಲ್ಲರು. ಅವರು 'ಏಜಾಕ್ಸ್'* ನಾಟಕವನ್ನು ಆಯ್ದುಕೊಂಡದ್ದಕ್ಕೆ ಕಾರಣ ಇದು: ಮಹಾಭಾರತದ ಸೌಪ್ತಿಕಪರ್ವದಲ್ಲಿ ಅಶ್ವತ್ಥಾಮನು ಧರ್ಮವಿರುದ್ಧವಾಗಿ ಪಾಂಚಾಲರನ್ನೂ ಉಪಪಾಂಡವರನ್ನೂ ಕೊಲ್ಲುತ್ತಾನೆ; ಸೋಫೊಕ್ಲೀಸ್‌ನ ನಾಟಕದಲ್ಲಿ ಏಜಾಕ್ಸ್ ಮೂಕಪ್ರಾಣಿಗಳನ್ನು ಕೊಲ್ಲುತ್ತಾನೆ. ಇವೆರಡು ಪ್ರಸಂಗಗಳಿಗೂ ಇರುವ ಸಾಮ್ಯ ಹೆಚ್ಚಿನದೇನಲ್ಲ. ಆದರೂ ಸೌಪ್ತಿಕಪರ್ವವು 'ಏಜಾಕ್ಸ್'ನೊಡನೆ ತಮ್ಮ ನಾಟಕಕ್ಕೆ ಅವಳಿ ಮೂಲವಾಗಬಹುದೆಂದೂ ಸ್ವಾಭಾವಿಕತೆಗೆ ಕುಂದು ತರದಂತೆ ಎರಡು ಕಡೆಯಿಂದ ಬಂದ ವಸ್ತುಗಳನ್ನೂ ಬೆಸೆಯಬಹುದೆಂದೂ ಶ್ರೀಕಂಠಯ್ಯನವರು ಕಂಡುಕೊಂಡರು.

ಅವರು ಗ್ರೀಕ್ ನಾಟಕವನ್ನು ಬಹಳ ಹಿಂದೆಯೇ ಅಧ್ಯಯನ ಮಾಡಿದ್ದರು. ಈಗ ತಮ್ಮ ನಾಟಕವನ್ನು ಬರೆಯುವುದಕ್ಕೆ ಮುಂಚೆ ಮಹಾಭಾರತದ 'ವಾತಾವರಣದಲ್ಲಿ ತಮ್ಮ ಮನಸ್ಸನ್ನು ಹರಿಯಬಿಟ್ಟರು. ಡಾ|| ಡಿ. ವಿ. ಗುಂಡಪ್ಪನವರೂ ಶ್ರೀಕಂಠಯ್ಯವನರೂ ಒಟ್ಟಿಗೆ ಕುಳಿತು ದ್ರೋಣ, ಕರ್ಣ, ಶಲ್ಯ ಮತ್ತು ಸೌಪ್ತಿಕ ಪರ್ವತಗಳನ್ನು ಓದಿದರಂತೆ. ತಾವು ಭಾರತವನ್ನು ಓದುವುದು, ಶ್ರೀಕಂಠಯ್ಯನವರು ತಮಗೆ ಅವಶ್ಯಕವೆಂದು ತೋರಿದ ಅಂಶಗಳನ್ನು ಟಿಪ್ಪಣಿ ಮಾಡಿಕೊಳ್ಳುವುದು, ಹೀಗೆ ಅಧ್ಯಯನ ನಡೆಯಿತೆಂದು ಡಾ|| ಡಿ. ವಿ. ಗುಂಡಪ್ಪನವರು ತಮ್ಮ 'ಸಾಹಿತ್ಯೋಪಾಸಕರು'ಎಂಬ ಪುಸ್ತಕದಲ್ಲಿ ತಿಳಿಸಿದ್ದಾರೆ.

ಎರಡು ಮೂಲಗಳಿಂದ ಬಂದ ಕಥೆಗಳಲ್ಲೂ ಅನೇಕ ಬದಲಾವಣೆಗಳನ್ನು ಮಾಡಿಕೊಳ್ಳುವುದು ಅವಶ್ಯಕವೆಂದು ಶ್ರೀಕಂಠಯ್ಯನವರಿಗೆ ಬೇಗಲೇ ಸ್ಪಷ್ಟವಾಯಿತು. ಒಂದು ರೀತಿಯಲ್ಲಿ ನೋಡಿದರೆ, ಅವರು 'ಏಜಾಕ್ಸ್' ನಾಟಕವನ್ನು ದೃಶ್ಯವಾದ ಮೇಲೆ ದೃಶ್ಯ, ಭಾಷಣವಾದ ಮೇಲೆ ಭಾಷಣ—ಹೀಗೆ ಕ್ರಮವಾಗಿ ಅನುಸರಿಸಿದ್ದಾರೆ ಎನ್ನಿಸುತ್ತದೆ. ನಾಟಕವನ್ನು ಬೇರೆ ಬೇರೆ ಭಾಗಗಳಾಗಿ ವಿಂಗಡಿಸುವ ಮೇಳದ (Chorus) ಮಾತುಗಳು ಅಲ್ಲಿಯಂತೆಯೇ ಇಲ್ಲೂ ಬರುತ್ತವೆ. ಗ್ರೀಕ್ ನಾಟಕದ ಬಾಹ್ಯ ಲಕ್ಷಣಗಳು, ರಚನಾಕ್ರಮ—ಕೋರಸ್, ಮೂರು ಐಕ್ಯಗಳು, ಪಾತ್ರಗಳ ಸಂಖ್ಯೆ ಹೆಚ್ಚಿಲ್ಲದಿರುವುದು) ಇಲ್ಲಿ 'ಏಜಾಕ್ಸ್'ನಲ್ಲಿರುವುದಕ್ಕಿಂತ

---

* ಈ ನಾಟಕದ ನಾಯಕನ ಹೆಸರನ್ನು ಇಂಗ್ಲಿಷ್‌ನಲ್ಲಿ Aias, Ajax ಎಂದು ಎರಡು ತರದಲ್ಲಿ ಬರೆಯುವುದುಂಟು. ನಾನು ಶ್ರೀಕಂಠಯ್ಯನವರನ್ನು ಅನುಸರಿಸಿ ಏಜಾಕ್ಸ್ ಎಂಬ ರೂಪವನ್ನೇ ಬಳಸಿದ್ದೇನೆ.

ಒಂದು ಪಾತ್ರ ಕಡಿಮೆ)—ಇವೆಲ್ಲ ಅಲ್ಲಿರುವಂತೆ ಇಲ್ಲಿಯೂ ಇವೆ. ಇದೆಲ್ಲವನ್ನೂ ನೋಡಿದರೆ, "ಇದು 'ಏಜಾಕ್ಸ್'ನ ಭಾಷಾಂತರ ಮಾತ್ರ; ಬಣ್ಣವನ್ನು ಸ್ವಲ್ಪ ಬದಲಾಯಿಸಿದ್ದಾರೆ ಅಷ್ಟೆ"ಎಂದುಕೊಳ್ಳುವುದು ಸಾಧ್ಯ.

ಹಾಗೆಂದುಕೊಂಡರೆ ತಪ್ಪಾಗುತ್ತದೆ. ಈ ನಾಟಕಕ್ಕೂ ಅದರ ಮೂಲಗಳಿಗೂ ಎಷ್ಟೋ ವ್ಯತ್ಯಾಸಗಳಿವೆ; ಅವು ಅರ್ಥಪೂರ್ಣವಾದ ವ್ಯತ್ಯಾಸಗಳೂ ಹೌದು. ಕೆಲವು ಸಣ್ಣ ಅಂಶಗಳನ್ನು ಬಿಟ್ಟರೆ ಅಥವಾ ಸೇರಿಸಿದರೆ ಸಾಕು, ಒಂದೆರಡು ಮಾತುಗಳನ್ನು ಬದಲಾಯಿಸಿದರೆ ಸಾಕು, ನಾಟಕದ ಒಟ್ಟು ಅರ್ಥ ಬದಲಾಗಬಹುದು ಎಂಬುದನ್ನು ಹಿಂದಿನ ಅಧ್ಯಾಯದಲ್ಲಿ ಕಂಡಿದ್ದೇವೆ. ಇಲ್ಲಿ ಅಂಥ ಬದಲಾವಣೆಗಳಲ್ಲದೆ ಅದಕ್ಕಿಂತ ಮುಖ್ಯವಾದವೂ ಇವೆ. 'ಏಜಾಕ್ಸ್'ನ, ಸೌಪ್ತಿಕ ಪರ್ವದ ಮತ್ತು ಈ ನಾಟಕದ ಕಥಾಸಾರಾಂಶಗಳನ್ನು ಪರಿಶೀಲಿಸಿದರೆ, ಇದು ತನ್ನದೇ ಆದ ವಿಶಿಷ್ಟ ಗುಣಗಳುಳ್ಳ ಸ್ವತಂತ್ರ ಕೃತಿ ಎಂಬುದು ಸ್ಪಷ್ಟವಾಗುತ್ತದೆ.

'ಏಜಾಕ್ಸ್' ನಾಟಕದ ಕಥೆ ಹೀಗಿದೆ: ಗ್ರೀಕ್ ವೀರರಲ್ಲಿ ಅಕಿಲೀಸ್ ಒಬ್ಬನನ್ನು ಬಿಟ್ಟರೆ ಉಳಿದವರೆಲ್ಲರಿಗಿಂತ ಏಜಾಕ್ಸ್ ಪರಾಕ್ರಮಶಾಲಿ ಎಂದು ಹೆಸರುಗೊಂಡವನು. ಅಕಿಲೀಸ್ ಸತ್ತಮೇಲೆ ಅವನ ತನುತ್ರಾಣ(armour)ವನ್ನು ಯಾರಿಗೆ ಕೊಡಬೇಕೆಂಬ ಪ್ರಶ್ನೆ ಬಂತು. ಅದು ತನಗೇ ಸಲ್ಲತಕ್ಕದ್ದೆಂದು ಏಜಾಕ್ಸ್‌ನ ಭಾವನೆ. ಆದರೆ ಅದನ್ನು ಒಡಿಸ್ಯೂಸ್‌ಗೆ ಕೊಟ್ಟುಬಿಟ್ಟರು. ಆ ತೀರ್ಮಾನಕ್ಕೆ ಕಾರಣರಾದ ನಾಯಕರನ್ನೂ ಒಡಿಸ್ಯೂಸ್‌ನನ್ನೂ ನಾಶಮಾಡಬೇಕೆಂದು ಏಜಾಕ್ಸ್ ನಿಶ್ಚಯಿಸಿಕೊಂಡ. ಆದರೆ ಪಲ್ಲಸ್ ಅಥೀನೆ (ದೇವತೆ) ಅವನಿಗೆ ಬುದ್ಧಿ ಭ್ರಮೆಯುಂಟಾಗುವಂತೆ ಮಾಡಿದಳು. ಹುಚ್ಚಿನಲ್ಲಿ ಅವನು ಪಾಳಯದಲ್ಲಿದ್ದ ಕುರಿಗಳು ಮುಂತಾದ ಪ್ರಾಣಿಗಳನ್ನು (ಅವು ತನ್ನ ಶತ್ರುಗಳಾದ ಆರ್ಗೈವ್ ನಾಯಕರು ಎಂದು ಭ್ರಮಿಸಿ) ಕೊಂದುಹಾಕಿದ. ಹುಚ್ಚು ಇಳಿದ ಮೇಲೆ ತಾನು ಮಾಡಿದ ಕೆಲಸ ಎಷ್ಟು ಹೇಯವಾದದ್ದು ಎಂಬುದರ ಅರಿವಾಯಿತು. ಇದು ತಿಳಿದ ಕೂಡಲೆ "ನಾನು ಗ್ರೀಕ್ ವೀರರೆಲ್ಲರ ತಿರಸ್ಕಾರಕ್ಕೂ ಪಾತ್ರನಾಗಿದ್ದೇನೆ. ಅಥೀನೆಯೂ ನನ್ನ ಮೇಲೆ ರೋಷಗೊಂಡಿದ್ದಾಳೆ. ಆ ರೋಷ ಇಳಿಯುವಂಥಲ್ಲ" ಎಂದುಕೊಂಡು ಏಜಾಕ್ಸ್ ಆತ್ಮಹತ್ಯೆ ಮಾಡಿಕೊಳ್ಳುವ ನಿರ್ಧಾರಕ್ಕೆ ಬಂದ. ನಿಜವಾಗಿ ಅಥೀನೆಯ ಕೋಪ ಆ ದಿನ ಕಳೆದ ಮೇಲೆ ಇಳಿದುಹೋಗುತ್ತಿತ್ತು. ಏಜಾಕ್ಸ್‌ನ ಮಲತಮ್ಮ ಟ್ಯೂಸರ್‌ಗೆ ಭವಿಷ್ಯದರ್ಶಿಯಾದ ಕಾಲ್ಕಾಸ್‌ನಿಂದ ನಡೆದ ಸಂಗತಿಯೆಲ್ಲ ತಿಳಿಯಿತು. ಅವನು ಟೆಕ್‌ಮೆಸ (ಏಜಾಕ್ಸ್‌ನ ದಾಸಿ ಮತ್ತು ಪ್ರೇಯಸಿ)ಳಿಗೂ ಏಜಾಕ್ಸ್‌ನನ್ನು ಹಿಂಬಾಲಿಸಿ ಬಂದಿದ್ದ ಸಾಲಮಿಸ್‌ನ ನಾವಿಕರಿಗೂ (ಈ ನಾವಿಕರೇ ಇಲ್ಲಿಯ 'ಕೋರಸ್') "ನಾನು ಬರುವವರೆಗೂ ಏಜಾಕ್ಸ್‌ನ ಮೇಲೆ ಬಹಳ ಎಚ್ಚರಿಕೆಯಿಂದ ಕಾವಲಿಟ್ಟಿರಿ" ಎಂದು ಹೇಳಿ ಕಳುಹಿಸಿದ. ಆದರೆ ಆ ವೇಳೆಗಾಗಲೇ

ಏಜಾಕ್ಸ್ ಅವರ ಕಣ್ಣು ತಪ್ಪಿಸಿ ಹೊರಟು ಹೋಗಿ ಆತ್ಮಹತ್ಯೆ ಮಾಡಿಕೊಂಡಿದ್ದ ಗ್ರೀಕ್ ನಾಯಕರಾದ ಆಗಮೆಮ್ನನ್‌ನ ಮತ್ತು ಮಿನಿಲೇಯಸ್‌ನ ದೃಷ್ಟಿಯಲ್ಲಿ ಏಜಾಕ್ಸ್ ದೇಶದ್ರೋಹಿ. ಅವನ ದೇಹಕ್ಕೆ ಸಂಸ್ಕಾರ ಮಾಡಕೂಡದೆಂದೂ ಗಿಡುಗ ಹದ್ದುಗಳಿಗೆ ಆಹಾರವಾಗಲೆಂದು ಅದನ್ನು ಹೊರಹಾಕಬೇಕೆಂದೂ ಅವರು ವಾದಿಸಿದರು. ಆದರೆ ಟ್ಯೂಸರ್‌ನೂ ಉದಾರಮನಸ್ಕನಾದ ಒಡಿಸ್ಯೂಸ್‌ನೂ ಹಾಗೆ ಮಾಡಕೂಡದೆಂದು ಪಟ್ಟುಹಿಡಿದರು. ಮಹಾ ಪರಾಕ್ರಮಶಾಲಿಯಾದವನಿಗೆ ತಕ್ಕಂತೆ ವಿಧಿಪೂರ್ವಕವಾಗಿ ಏಜಾಕ್ಸ್‌ಗೆ ಉತ್ತರಕ್ರಿಯೆ ನಡೆಯಿತು.

ಇನ್ನು ಸೌಪ್ತಿಕಪರ್ವದ ಕಥೆ : ಗದಾಯುದ್ಧವಾದ ಮೇಲೆ ತೊಡೆ ಮುರಿದು ತನ್ನ ರಕ್ತದಲ್ಲೇ ನೆನೆದು ಸಾವನ್ನು ಎದುರು ನೋಡುತ್ತ ದುರ್ಯೋಧನ ರಣರಂಗದಲ್ಲಿ ಬಿದ್ದಿದ್ದಾನೆ. ಅವನು ಇನ್ನೂ ಬದುಕಿರುವಾಗಲೇ ತೋಳ, ನರಿ ಮೊದಲಾದ ಮೃಗಗಳು ಅವನ ಹತ್ತಿರ ಸುಳಿದಾಡುತ್ತಿವೆ. ಈ ದೃಶ್ಯವನ್ನು ನೋಡಿ ಅಶ್ವತ್ಥಾಮನಿಗೆ ಬಹು ಸಂಕಟವಾಯಿತು. ದುರ್ಯೋಧನ ಬಿದ್ದದ್ದು ಧರ್ಮಕ್ಕೆ ವಿರುದ್ಧವಾಗಿ ಭೀಮ ಅವನ ತೊಡೆಗೆ ಹೊಡೆದದ್ದರಿಂದ. ಆ ದಿನವೇ ಪಾಂಚಾಲರನ್ನು ಕೊಂದು ತನ್ನ ಪ್ರಭುವಿನ ಸಾವಿಗೆ ಸೇಡು ತೀರಿಸಿಕೊಳ್ಳುವುದಾಗಿ ಅವನು ಪ್ರತಿಜ್ಞೆ ಮಾಡುತ್ತಾನೆ. ದುರ್ಯೋಧನ ಅವನನ್ನು ಸೇನಾಪತಿಯಾಗಿ ನೇಮಿಸುತ್ತಾನೆ. ಕೃಪ ಕೃತವರ್ಮರೊಡನೆ ಅವನು ಧೃಷ್ಟದ್ಯುಮ್ನನ ಬೀದಿಗೆ ಹೋಗಿ ನಿರಾಯುಧರಾದ ಮತ್ತು ಇನ್ನೂ ಅರೆನಿದ್ದೆಯಲ್ಲಿದ್ದ ಪಾಂಚಾಲರನ್ನೂ ಉಪಪಾಂಡವರನ್ನೂ ಕೊಲ್ಲುತ್ತಾನೆ. ಪಾಂಡವರಿಗೂ ಕೃಷ್ಣನಿಗೂ ಇದು ತಿಳಿದಾಗ ಅವರು ಅಶ್ವತ್ಥಾಮನ ಬೆನ್ನಟ್ಟಿ ಹೋಗುತ್ತಾರೆ. ಅಶ್ವತ್ಥಾಮನು ಅವರ ಮೇಲೆ ಭಯಂಕರವಾದ ದಿವ್ಯಾಸ್ತ್ರವನ್ನು ಬಿಡುತ್ತಾನೆ. ಅದೂ ಅರ್ಜುನನು ಬಿಟ್ಟ ಪ್ರತ್ಯಸ್ತ್ರವೂ ಲೋಕವನ್ನೇ ಸುಟ್ಟುಬಿಡುವಂತಾಯಿತು. ವ್ಯಾಸನಾರದರ ಬೇಡಿಕೆಯಂತೆ ಅರ್ಜುನ ತನ್ನ ಅಸ್ತ್ರವನ್ನು ಹಿಂದಕ್ಕೆ ತೆಗೆದುಕೊಂಡ. ಅಶ್ವತ್ಥಾಮನು ತೆಗೆದುಕೊಳ್ಳಲಿಲ್ಲ. ಆದರೆ ಕೃಷ್ಣನ ಕರುಣೆಯಿಂದಾಗಿ ಉತ್ತರೆಯ ಗರ್ಭ ಅದಕ್ಕೆ ಬಲಿಯಾಗದೆ ಉಳಿದುಕೊಂಡಿತು. ಕೃಷ್ಣ 'ನೀನು ಮೂರುಸಾವಿರ ವರ್ಷಕಾಲ ಮನುಷ್ಯರ ಸಹವಾಸವಿಲ್ಲದೆ ನಿರ್ಜನ ಪ್ರದೇಶದಲ್ಲಿ ಅಲೆಯುತ್ತಿರು' ಎಂದು ಅಶ್ವತ್ಥಾಮನನ್ನು ಶಪಿಸಿದ. ಅವನ ತಲೆಯಲ್ಲಿದ್ದ ಮಣಿಯನ್ನು ತೆಗೆದುಕೊಂಡು ಪಾಂಡವರು ಹಿಂದಿರುಗಿದರು.

ಇನ್ನು ಶ್ರೀಕಂಠಯ್ಯನವರ ನಾಟಕದ ಕಡೆಗೆ ತಿರುಗೋಣ. ಇದರಲ್ಲಿ ಬರುವ ಪಾತ್ರಗಳ ಹೆಸರನ್ನೂ ಮತ್ತು (ಕಂಸದಲ್ಲಿ) ಮೂಲನಾಟಕದಲ್ಲಿ ಅವುಗಳಿಗೆ ಸಂವಾದಿಯಾಗಿರುವ ಪಾತ್ರಗಳ ಹೆಸರನ್ನೂ ಇಲ್ಲಿ ಕೊಟ್ಟಿದೆ: ಅಶ್ವತ್ಥಾಮ (ಏಜಾಕ್ಸ್)ನೇ ನಾಟಕದ ನಾಯಕ. ಅವನೂ ಅವನ ತಂದೆಯೂ ಕರ್ಣಾಟಕದ

ಬನವಾಸಿಯಿಂದ ಉತ್ತರಕ್ಕೆ ವಲಸೆ ಹೋಗಿ ಕೌರವನ ಆಶ್ರಯ ಪಡೆದರೆಂ
ಕಲ್ಪನೆ. ಅಶ್ವತ್ಥಾಮನ ಜೊತೆಯಲ್ಲಿ ಏಕಲವ್ಯನೂ (ಟ್ಯೂಸರ್) ಕೆಲವ
ಬೇಡರೂ ಬನವಾಸಿಯಿಂದ ಬಂದಿದ್ದಾರೆ. ಆ ಬೇಡರೇ ಈ ನಾಟಕದಲ್ಲಿ ಮೇಳ
ವರು. (ಮೂಲ ನಾಟಕದ ಮೇಳದವರು ಸಾಲಮಿಸ್‌ನಿಂದ ಬಂದ ನಾವಿಕರು
ಮಹಾಭಾರತದ ಅಶ್ವತ್ಥಾಮ ಬ್ರಹ್ಮಚಾರಿ. ಆದರೆ ಇಲ್ಲಿಯ ಅಶ್ವತ್ಥಾಮನ
ರುದ್ರಶಕ್ತಿ (ಯೂರಿಸಾಕೀಸ್) ಎಂಬ ಮಗನಿದ್ದಾನೆ. ಅಶ್ವತ್ಥಾಮನ ಹೆಂಡತಿಯ
ಹೆಸರು ನಾಟಕದಲ್ಲಿ ಬರುವುದಿಲ್ಲ. ಭಾರ್ಗವಿ (ಟೆಕ್‌ಮೆಸ—ಇವಳು ಏಜಾಕ್ಸ
ದಾಸಿ, ಪ್ರೇಯಸಿ) ಇಲ್ಲಿ ಅಶ್ವತ್ಥಾಮನ ಅಜ್ಜಿ; ಅವನು ಮಗುವಾಗಿದ್ದಾ
ನಿಂದಲೂ ಅವನನ್ನು ಬೆಳಸಿದವಳು. ಇಲ್ಲಿಯ ಭೀಮ ಮೂಲನಾಟಕದ ಮಿನಿ
ಯಸ್ ಮತ್ತು ಆಗಮೆಮ್ನನ್ ಎಂಬಿಬ್ಬರ ಕರ್ತವ್ಯವನ್ನು ನಿರ್ವಹಿಸುತ್ತಾನ
ಕೊನೆಯವರಾಗಿ ಕೃಷ್ಣ (ಒಡಿಸ್ಯೂಸ್) ಮತ್ತು ರುದ್ರ (ಅಥೀನೆ)—ಇವರಿ
ರಿಗೂ ಮೂಲದಲ್ಲಿರುವ ಕೆಲಸವೇ ಇಲ್ಲಿಯೂ ಇದೆ.

ಇಲ್ಲಿಯ ಘಟನೆಗಳ ಅನುಕ್ರಮ—ನಾಯಕ ತಾನು ಶೂರನೆಂಬ ಮ
ಹಂಕಾರದಿಂದ ಕೊಬ್ಬಿ ದೈವಚಿತ್ತಕ್ಕೆ ಎದುರು ಬೀಳುವುದು; ದೈವ ಬೀಸಿ
ಮಾಯಕ್ಕೆ ಸಿಕ್ಕಿ ಹುಚ್ಚೆದ್ದು ಕಗ್ಗೊಲೆ ನಡೆಸುವುದು; ಭ್ರಮೆ ಕಳೆದಮೇಲೆ ತನ
ಕೃತ್ಯ ಎಷ್ಟು ಹೇಯವಾದದ್ದು ಎಂಬುದರ ಅರಿವುಂಟಾಗಿ ತಾನು ದೈವದೆದುರಿನಲ್ಲ
ಮಾನವನೆದುರಿನಲ್ಲೂ ಮಾನಗೆಟ್ಟವನು, ತಿರಸ್ಕೃತ ಎಂದುಕೊಳ್ಳುವುದು ಆತ
ಹತ್ಯೆ; ನಾಯಕನ ಮೃತದೇಹಕ್ಕೆ ಉತ್ತರಕ್ರಿಯೆ ನಡೆಯಬೇಕೆ ಬೇಡವೆ ಎಂ
ಚರ್ಚೆ; ನಾಯಕನ ಉದಾತ್ತತೆಯನ್ನು ಹೊಗಳಿ ಶವಸಂಸ್ಕಾರ ನಡೆಸುವುದು—
ಇದೆಲ್ಲ ಮೂಲನಾಟಕದಂತೆಯೇ ಇಲ್ಲಿಯೂ ಇದೆ.

ಮುಖ್ಯವಾದ ಎರಡು ಅಂಶಗಳಲ್ಲಿ ಶ್ರೀಕಂಠಯ್ಯನವರು ಸೋಫೊಕ್ಲೀಸನನ
ಬಿಟ್ಟು ಮಹಾಭಾರತವನ್ನು (ಸ್ವಲ್ಪ ಮಟ್ಟಿಗೆ, ಪೂರ್ತಿಯಲ್ಲ) ಅನುಸರಿ
ದ್ದಾರೆ. ಏಜಾಕ್ಸ್ ಜಗಳವಾಡಿದ್ದು ತನ್ನ ಸ್ವಂತ ಜನರೊಂದಿಗೆ, ತನ್ನ ಸೇನೆ
ನಾಯಕರೊಂದಿಗೆ. ಆ ಜನ ಅವನಲ್ಲಿ ವಿಶ್ವಾಸವಿಟ್ಟಿದ್ದರು; ಅಕಿಲೀಸ್‌ನನ
ಬಿಟ್ಟರೆ ಇವನಿಗೆ ಸಮನಾದ ವೀರನಿಲ್ಲ ಎಂದು ಅವನನ್ನು ಗೌರವಿಸಿದ್ದರು. ಅವನ
ಯಾರನ್ನು ಕೊಲ್ಲಹೊರಟನೋ ಅವರು ಅವನ ಸ್ವಂತ ಮಿತ್ರರು. ಅಲ್ಲದೆ ಆ
ಆರ್ಗೈವ್ ಸೈನ್ಯ ಶತ್ರುಗಳ ರಾಜ್ಯದಲ್ಲಿತ್ತು. ಆದ್ದರಿಂದ ಏಜಾಕ್ಸ್ ತನ್ನವರ
ವಿರುದ್ಧವಾಗಿ ನಡೆದಿದ್ದರೆ, ಸೇನೆಯ ನಾಯಕರನ್ನು ಕೊಂದಿದ್ದರೆ, ಅದರಿಂದಾ
ತನ್ನ ಜನ ಭಯಂಕರವಾದ ಅಪಾಯಕ್ಕೆ ಸಿಕ್ಕುತ್ತಿದ್ದರು. ನಮ್ಮ ನಾಟಕದಲ
ದರೋ—ಅಶ್ವತ್ಥಾಮನು ಕೊಲ್ಲಹೊರಟ ಜನ, ಕೊಂದ ಜನ, ಅವನ ಶತ್ರುಗಳ
—ಕೌರವ ಪಾಂಡವರು ದಾಯಾದಿಗಳಾದರೂ ಶತ್ರುಗಳೇ ತಾನೆ! ಅಶ

ತ್ಥಾಮನ ಪ್ರಭು ಅವರ ಮೇಲೆ ಯುದ್ಧ ಘೋಷಿಸಿದ್ದಾನೆ. ಆದ್ದರಿಂದ ಅವನ ಅಪರಾಧ ಏಜಾಕ್ಸನದ್ದರಷ್ಟು ಗುರುತರವಾದದ್ದಲ್ಲ.

ಎರಡನೆಯ ಅಂಶಕ್ಕೂ ಮೊದಲನೆಯದಕ್ಕೂ ನಿಕಟವಾದ ಸಂಬಂಧವಿದೆ. ಏಜಾಕ್ಸನನ್ನು ಕೊಲೆಗೆ ಪ್ರೇರಿಸಿದ ಶಕ್ತಿ ಯಾವುದು? ಆಗಮೆಮ್ನನ್ ಮಿನಿಲೇಯಸ್, ಒಡಿಸ್ಯೂಸ್ ಮೊದಲಾದವರು ತನ್ನ ವಿರುದ್ಧ ಒಳಸಂಚು ಮಾಡಿ ತನಗೆ ಬರಬೇಕಾದ ಬಹುಮಾನವನ್ನು ಮತ್ತೊಬ್ಬನಿಗೆ ಕೊಟ್ಟರು ಎಂಬ ರೋಷ; ಅದಕ್ಕಾಗಿ ಸೇಡು ತೀರಿಸಿಕೊಳ್ಳುವ ಉತ್ಕಟ ಬಯಕೆ. ಅವನ ಗಾಯವಡೆದ ಸ್ವಾಭಿಮಾನಕ್ಕೆ ಅವನ ಸಂಗಡಿಗರ ಕೊಲೆ ಅಮೃತಲೇಪವಾಗಬೇಕು. ಸತ್ತ ವೀರನ ಕವಚ ಮೊದಲಾದ್ದನ್ನು ಯಾರಿಗೆ ಕೊಡಬೇಕು ಎಂಬ ವಿಷಯಕ್ಕೆ ಗ್ರೀಕರು ನಾವು ಕೊಡದ ಪ್ರಾಮುಖ್ಯವನ್ನು ಕೊಟ್ಟಿದ್ದರು; ಇದನ್ನು ಒಪ್ಪೋಣ. ಆದರೂ ಏಜಾಕ್ಸ್ ಕೊಲೆಗಡುಕನಾದದ್ದಕ್ಕೆ ಕಾರಣ ಅಷ್ಟೇನೂ ದೊಡ್ಡದಲ್ಲ; ಮಾತ್ರವಲ್ಲ, ಅದು ಸ್ವಾರ್ಥದಿಂದ ಕಲುಷಿತವಾದದ್ದು ಎಂಬುದು ಸ್ಪಷ್ಟ. ಅಶ್ವತ್ಥಾಮ ಕೊಲೆಗಡುಕನಾದದ್ದೂ ಸೇಡಿಗಾಗಿಯೇ. ಆದರೆ ಅವನು ಸೇಡು ತೀರಿಸಿಕೊಳ್ಳ ಹೊರಟದ್ದು ತನಗಾದ ಅವಮಾನಕ್ಕಾಗಿಯಲ್ಲ, ಪಾಂಡವರು ತನ್ನ ಸ್ವಾಮಿಗೆ ಅವಮಾನ ಮಾಡಿ ಅವನನ್ನು ಧರ್ಮವಿರುದ್ಧವಾದ ರೀತಿಯಲ್ಲಿ ಕೊಂದದ್ದಕ್ಕಾಗಿ. ತನ್ನ ತಂದೆಯಾದ ದ್ರೋಣನನ್ನೂ ಪಾಂಡವರು ಮೋಸದಿಂದಲೇ ಕೊಂದರು. ಅದೂ ಅವನ ಮನಸ್ಸಿನಲ್ಲಿದೆ—"ಆಹ, ಧೃಷ್ಟದ್ಯುಮ್ನ, ಗುರುವನ್ ಇಂತಲ್ತೆ ಕೊರೆದು ಪುಣ್ಯಂಗೊಂಡೆ! ಎಂದೊಂದು ಕುದುರೆಯನ್ ಕೊರಲೌಂಕಿ ಕೊರೆದನ್." ಆದರೆ ಅವನ ರೋಷದ ಬಹುಭಾಗ ಆ "ರಾಕ್ಷಸಾ, ದೈತ್ಯಾ, ಕೌರವೇಂದ್ರನ, ಬಿಳ್ದ ಚಕ್ರವರ್ತಿಯ ಮುಡಿಯನ್ ಒದೆದ" ಭೀಮಸೇನನನ್ನೂ ಕೃಷ್ಣನನ್ನೂ ಕುರಿತದ್ದು. ಅಂದಮೇಲೆ ಅವನನ್ನು ಕೊಲೆಗೆ ಪ್ರೇರಿಸಿದ್ದು ಸ್ವಾರ್ಥವಲ್ಲ, ಸ್ವಾಮಿಭಕ್ತಿ. ಏಜಾಕ್ಸನಿಗೆ ಒಡಿಸ್ಯೂಸ್ ತನ್ನ ಸ್ವಂತ ಶತ್ರು, ತನ್ನ ಪ್ರತಿಸ್ಪರ್ಧಿಯಾಗಿ ಗೆದ್ದವನು; ಅಶ್ವತ್ಥಾಮನ ದೃಷ್ಟಿಯಲ್ಲಿ ಕೃಷ್ಣನು ಕುರುಕುಲವನ್ನು ನಿರ್ನಾಮ ಮಾಡಿದ, ಮಹಾಯುದ್ಧವನ್ನು ಹೊತ್ತಿಸಿದ, ಮಾಯಾವಿ. ಕೃಷ್ಣ "ಕಪಟನಾಟಕ ಸೂತ್ರಧಾರಿ" ಎಂಬ ಕಲ್ಪನೆಯಿದೆಯಷ್ಟೆ! ಅಶ್ವತ್ಥಾಮನಿಗೆ ಕೃಷ್ಣನ ಮೇಲಿರುವ ದ್ವೇಷ ಸ್ವಲ್ಪಮಟ್ಟಿಗೆ ತಿರುಗು ಮುರುಗಾದ ನೀತಿ ಶ್ರದ್ಧೆಯೆಂದರೂ ವೆನ್ನಬಹುದು. ಈ ಮಾತು ಅನ್ವಯಿಸುವುದು ಈ ನಾಟಕದ ಅಶ್ವತ್ಥಾಮನಿಗೆ, ಮಹಾಭಾರತದ ಅಶ್ವತ್ಥಾಮನಿಗಲ್ಲ.

ಮಹಾಭಾರತದ ಅಶ್ವತ್ಥಾಮ ಕೊಲೆ ಮಾಡಲು ಉದ್ಯುಕ್ತನಾದಾಗ ಅವನಿಗೆ ತಾನೇನು ಮಾಡುತ್ತಿದ್ದೇನೆಂಬ ಅರಿವು ಚೆನ್ನಾಗಿಯೇ ಇತ್ತು. ಅವನು ತನ್ನ ಉದ್ದೇಶವನ್ನು ಕೃಪಾಚಾರ್ಯನಿಗೆ ತಿಳಿಸಿದಾಗ, ಆತ ಅದು ಧರ್ಮವಲ್ಲವೆಂದು ಹೇಳಿ ಅಶ್ವತ್ಥಾಮನನ್ನು ತಡೆಯಲು ಪ್ರಯತ್ನಿಸಿದ. ಅಶ್ವತ್ಥಾಮನೇ ಸ್ವಲ್ಪ

ಒಂದೆ "ದುರ್ಬಲರು, ಜಡರು, ಕುರುಡರು, ನಿದ್ರೆಯಲ್ಲಿರುವವರು, ಮತ್ತರು, ಅಜಾಕರೂಕರಾಗಿರುವವರು—ಇಂಥವರ ಮೇಲೆ ಶಸ್ತ್ರಪ್ರಯೋಗ ಮಾಡಬಾರದು" ಎಂಬ ಧರ್ಮವನ್ನು ನೆನೆಮುಕೊಂಡಿದ್ದಾನೆ*. ಅಂದಮೇಲೆ ಅವನು ಮೊದಲೇ ಆಲೋಚನೆ ಮಾಡಿ, ಸ್ನೇಹಿತರೊಡನೆ ಆ ವಿಷಯವನ್ನು ಚರ್ಚಿಸಿ, ಬುದ್ಧಿಪೂರ್ವಕವಾಗಿ ಕಗ್ಗೊಲೆಗೆ ಕೈ ಹಾಕಿದ್ದಾನೆ. ಈ ನಾಟಕದ ಅಶ್ವತ್ಥಾಮನಾದರೋ, ಕೊಲೆ ಮಾಡಿದ್ದು ತಾನು ಭ್ರಮೆಗೆ ತುತ್ತಾಗಿದ್ದಾಗ—ಬುದ್ಧಿಪೂರ್ವಕವಾಗಿಯಲ್ಲ. ಆದ್ದರಿಂದ ನೀತಿಯ ದೃಷ್ಟಿಯಿಂದ ಅವನು ವ್ಯಾಸರ ಅಶ್ವತ್ಥಾಮನಿಗಿಂತ ಮೇಲು. ಹಾಗೆಂದ ಮಾತ್ರಕ್ಕೆ "ವ್ಯಾಸರ ಪಾತ್ರಚಿತ್ರಣ ಅಸಮರ್ಪಕ; ಶ್ರೀಕಂಠಯ್ಯನವರು ಅದನ್ನು ಸರಿಪಡಿಸಿದರು" ಎಂದಂತಾಗಲಿಲ್ಲ. ಅಶ್ವತ್ಥಾಮನನ್ನು ಮೇಲ್ಕಂಡಂತೆ ಚಿತ್ರಿಸುವುದೇ ವ್ಯಾಸರ ಉದ್ದೇಶ.

ಸೋಫೊಕ್ಲೀಸನ ಪಾತ್ರಗಳ ಹೆಸರುಗಳನ್ನು ತೆಗೆದು ಅವಕ್ಕೆ ಬದಲಾಗಿ ಮಹಾಭಾರತದ ಪಾತ್ರಗಳ ಹೆಸರುಗಳನ್ನಿಟ್ಟ ಕೂಡಲೆ ಇಡೀ ನಾಟಕದ ವಾತಾವರಣವೇ ಬದಲಾಗಬೇಕಾದ್ದು ಅನಿವಾರ್ಯವಷ್ಟೆ. ಈ ಕೆಲಸ ಬಹಳ ಯಶಸ್ವಿಯಾಗಿ ನಡೆದಿದೆ. ಇದಕ್ಕಿಂತ ಹೆಚ್ಚಾಗಿ ನಮ್ಮ ಮನಸ್ಸನ್ನು ಸೆಳೆಯುವುದೆಂದರೆ—'ಏಜಾಕ್ಸ್' ನಾಟಕದ ಭಾಷಣಗಳನ್ನು ತೆಗೆದುಕೊಂಡು ಇಲ್ಲಷ್ಟು ಅಲ್ಲಷ್ಟು ಬದಲಾವಣೆ ಮಾಡಿ ಅವು ಮತ್ತಷ್ಟು ಕಣ್ಣಿಗೆ ಕಟ್ಟವಂತೆ, ಮತ್ತಷ್ಟು ನಾಟಕೋಚಿತವಾಗುವಂತೆ (dramatic) ಮಾಡಿರುವ ಆಶ್ಚರ್ಯಕರವಾದ ಕೈಚಳಕ. ಇದಕ್ಕೆ ಉತ್ತಮವಾದ ಉದಾಹರಣೆ ನಾಟಕದ ಮೊದಮೊದಲಲ್ಲೇ ಸಿಕ್ಕುತ್ತದೆ. ಕೃಷ್ಣನು "ಆರ್ ತಡೆದರ್ ಆ ಕೊಲೆಯ ಕಯ್ಯನ್?" ಎಂದು ಕೇಳಿದ್ದಕ್ಕೆ ರುದ್ರನ ಉತ್ತರ ಇದು:

ಕೇಳ್ ಪೇಳ್ವೆನ್,
ನೇಸರೊಡನಾ ಕೌರವನ್ ಮುಳುಗೆ, ನಿಡುಪೊಳ್ತು ಪಕ್ಕದೊಳ್ ಕುಳ್ತು,
ದುಃಖದೊಳ್ಕನ್ ನುಂಗಿ, ಕಟ್ಟೊಲ್ಮೆಯಾಳ್ದಂಗೆ ಭಕ್ತಿಯಿನ್ ಕಡೆಗೆ
ಕಣ್ಮುಚ್ಚಿ, ಅಡಿಗಡಿಗೆ ಪಲ್ಗದು, ತನ್ನ ಬೀಡನ್ ಪೊಕ್ಕು, ಕೆಳದರ್ಪ,
ಬಿಲ್ಲನ್ ಒರ್ಕಡೆ ಬಿಸುಟು, ಒರೆಯಿಂದಮ್ ಇರ್ಬಾಯ ಖಡ್ಗಮನ್
ಪಿರಿದು,

* ಹೀನಪ್ರಾಣ ಜಡಾಂಧೇಷು ಸುಪ್ತಭೀತೋತ್ಥಿತೇಷು ಚ। ಮತ್ತೋನ್ಮತ್ತ ಪ್ರಮತ್ತೇಷು ನಶಸ್ತ್ರಾಣಿ ಚ ಪಾತಯೇತ್॥

(ಸೌಪ್ತಿಕಪರ್ವ, ೬ನೇ ಅಧ್ಯಾಯ, ೨೨)

ನಿಟ್ಟೋಟದಿನ್ ಪರಿದು, ನಿಶಿಯೊಳಗೆ ನಿಮ್ಮ ಪಾಳೆಯದೊಳಗೆ
ನೆಗೆದನ್.
ಕಾಣಿಸಿದೆನ್ ಆಗಳ್ ಆನ್, "ಪ್ರಿಯವೀರ, ದಾಳಿಯೇನ್?
ವರಮಾವುದೀವೆನ್?"
"ಪಾಂಡವರ ಲೋಕಕೆನ್ನಿನ್ ಪ್ರಳಯ" ಮೆಂದನ್.—"ಕೆಲರ್
ಉಳಿದು", ಎಂದೆನ್:
ನೋಡುತಿರು, ನೋಡುತಿರು, ಎಲೆ ರುದ್ರ, ದೂರದೊಳ್ ನೋಡು
ತಿರು, ವೀರ್ಯಂ
ಮಾನುಷಮ್ ಅದೆಂತಿರ್ಕುಮೆಂಬುದನ್!"—ಮದಿಸಿ ತಾನ್ ನಕ್ಕನ್;
ಆನ್ ನಕ್ಕೆನ್.
ಮಾಯಮನ್ ಬೀಸಿದೆನ್. ಮರುಳ್ಗೊಂಡನನ್ ಮಾಡಿ, ಕಣ್
ಮುಸುಕಿ, ತಿರಿಪಿ
ನಿಮ್ಮ ನಡುಬೀಡಿನಿನ್, ಪೊರವೀಡ ಮಂದಿ ಇರ್ದೆಡೆಗಳೊಳೆ!
ಬಿಟ್ಟೆನ್.
ಆಹ, ಏನ್ ಆರ್ಭಟಂ! ಆಹ, ಏನ್ ಚೀರಾಟಂ! ಏನ್ ಕೊಲ್ವ
ಗರ್ವಂ
ಮೇಲ್ಬಿಳ್ದು ತುರುಗಳನ್ ತರಿದನ್. ಎಳ್ಟಟ್ಟೆ ಪೆಣ್ಗಳನ್ ಪೋಳ್ದನ್.
ನಾನ್ ಅವನ ಬಳಿ ಇರ್ದು, ಮರುಳ್ಗೆ ಧೂಪಂದೋರುತಾ ಮನಃ
ಕ್ಷೋಭಂ
ತೆರೆಮಸಗೆ ಊದಿದೆನ್—ಆಹ, ಧೃಷ್ಟದ್ಯುಮ್ನ, ಗುರುವನ್
ಇಂತಲ್ತೆ
ಕೊರೆದು ಪುಣ್ಯಂಗೊಂಡೆ! ಎಂದೊಂದು ಕುದುರೆಯನ್ ಕೊರಲೊಂಕಿ
ಕೊರೆದನ್.
ಆನೆಯೊಂದನ್ ತಳ್ಟಿ, ಭೀಮಸೇನನೆಗೆತ್ತು, ರಾಕ್ಷಸಾ, ದೈತ್ಯಾ
ಕೌರವೇಂದ್ರನ, ಬಿಳ್ದ ಚಕ್ರವರ್ತಿಯ ಮುಡಿಯನ್ ಒದೆದ ಕಾಲ್
ಎಲ್ಲಿ?
ಎಲ್ಲಿ ತೋರೆಂದದರ ಕಾಲ್ ಮುರಿದು, ಬಲ್ಪೆಣನನ್ ಒದೆದೊದೆದು,
ಬಿಸುಟನ್
ಕಡೆಗೆಲ್ಲರನ್ ಕೊಂದೆನೆಂದೆಣಿಸಿ, ಕೌಂಕುಳೊಳ್ ಕುರಿಯೊಂದನ್
ಇರುಕಿ
ಬಾ, ಕೃಷ್ಣ, ಯುದ್ಧಮನ್ ಪೊತ್ತಿಸಿದ ಮಾಯಾವಿ, ಫಲಮನ್
ಉಣ್, ಬಾರ,

ನೀನ್ ಪಿರಿಯ ಬಿರ್ದಿನನ್, ಎನುತೆ ಬೀಡಿಂಗುಯ್ದು ಹಿಂಸಿಸು
ತ್ತಿರ್ಪನ್.
(ಪಂ. 33 ff)*

ಶ್ರೀಕಂಠಯ್ಯನವರ ನಾಟಕದಲ್ಲಿ ಸೋಫೊಕ್ಲೀಸನದಕ್ಕಿಂತ ಸುಮಾರು ೪೨೦ ಪಂಕ್ತಿಗಳು ಕಡಿಮೆ ಇವೆ. ಆದರೆ ಮೇಲೆ ಉದಾಹರಿಸಿರುವ ಭಾಷಣದಲ್ಲಿ ಏಜಾಕ್ಸ್ ಇದೇ ಸಂದರ್ಭದಲ್ಲಿ ಮಾಡಿದ ಭಾಷಣಕ್ಕಿಂತ ೧೧ ಪಂಕ್ತಿಗಳು ಹೆಚ್ಚಾಗಿವೆ. ಶ್ರೀಕಂಠಯ್ಯನವರ ಮನಸ್ಸಿನಲ್ಲಿ ಟ್ರೋಜನ್ ಯುದ್ಧ ಹಿಂಸರಿದು ಮಹಾಭಾರತದ ಪ್ರಸಂಗಗಳೇ ಹೆಚ್ಚಾಗಿ ಸುಳಿದಾಡುತ್ತಿವೆ; ಇದು ಸ್ವಾಭಾವಿಕ, ಒಂದು ವೇಳೆ ಸ್ವಾಭಾವಿಕವಾಗಿರದಿದ್ದರೂ ಅವಶ್ಯಕವಾಗುತ್ತಿತ್ತು. "ನೇಸರೊಡನಾ ಕೌರವನ್ ಮುಳುಗೆ"—ಇದು ರನ್ನನ ಚಂಪುವಿನಿಂದ ಗದಾಯುದ್ಧ ನಾಟಕಕ್ಕೆ ಬಂದು ಅಲ್ಲಿಂದ ಈ ನಾಟಕಕ್ಕೆ ಇಳಿದು ಬಂದಿರುವ ಸುಂದರವಾದ ಕಲ್ಪನೆ. "ಮದಿಸಿ ತಾನ್ ನಕ್ಕನ್ ; ಆನ್ ನಕ್ಕೆನ್"—ದೈವ ತನ್ನನ್ನು ಎದುರಿಸಿ ನಿಂತ ಮಾನವನ ಹೆಮ್ಮೆಯನ್ನು ಸಹಿಸದು ಎಂಬ ಭಾವನೆ ನಮ್ಮಲ್ಲಿ ಇಲ್ಲವೇ ಇಲ್ಲ ಎನ್ನಲಾಗದು. ಆದರೂ ಒಟ್ಟಿನಲ್ಲಿ ಈ ಭಾವನೆ ಗ್ರೀಕ್ ನಾಟಕಕ್ಕೇ ಹೆಚ್ಚು ಉಚಿತವಾದದ್ದು ಎನ್ನಬಹುದು:—ನಮ್ಮ ದೇವರುಗಳು ಇಂಥ ಸಾಹಸವನ್ನು ಮೆಚ್ಚಬಲ್ಲರು ! ಆದರೂ ಅದನ್ನು ಇಲ್ಲಿ ಉಪಯೋಗಿಸಿರುವುದು ಅನುಚಿತವೇನಲ್ಲ. ಈ ನಾಟಕ ಅಶ್ವತ್ಥಾಮನನ್ನು ಕುರಿತದ್ದಾದ್ದರಿಂದ ಧೃಷ್ಟದ್ಯುಮ್ನ ದ್ರೋಣನ ತಲೆಯನ್ನು ಕತ್ತರಿಸಿದ್ದು, ಭೀಮ ಚಕ್ರವರ್ತಿಯ ಮುಡಿಯನ್ನು ಒದೆದದ್ದು, ಇಂಥ ನೆನಪುಗಳು ಬರುವುದೂ ಸಹಜವೇ. ಇವುಗಳನ್ನೆಲ್ಲಾ ಉಪಯೋಗಿಸಿಕೊಂಡಿರುವುದರಿಂದ ಭಾರತದ ವಾತಾವರಣ ಸೃಷ್ಟಿಯಾಗಿರುವುದು ಮಾತ್ರವಲ್ಲದೆ ಬೇರೊಂದು ಪ್ರಯೋಜನವೂ ಆಗಿದೆ.

ಸಾಮಾನ್ಯವಾಗಿ ಶ್ರೀಕಂಠಯ್ಯನವರ ಬದಲಾವಣೆಗಳಿಂದಾಗಿ ಈ ಭಾಷಣದ ದೃಶ್ಯಗುಣ (visual effect) ಮತ್ತು ನಾಟಕ ಗುಣ (dramatic effect) ಹೆಚ್ಚಾಗಿದೆ. ಮೂಲದಲ್ಲಿ "Aias stood....at the general's gates" ಎಂದಿರುವ ಮಾತು ಇಲ್ಲಿ ವಿಸ್ತಾರವಾಗುತ್ತದೆ. ಅಶ್ವತ್ಥಾಮ ಕೌರವನ ಪಕ್ಕದಲ್ಲಿ ಕುಳಿತಿದ್ದಾನೆ, 'ದುಃಖದೊಳ್ಕನ್ ನುಂಗಿ'ಕೊಳ್ಳುತ್ತಾನೆ, ಭಕ್ತಿಯಿಂದ ಕೌರವನ ಕಣ್ಣು ಮುಚ್ಚಿ ಹಲ್ಲುಕಡಿಯುತ್ತ ಹೊರಗೆ ಹೋಗುತ್ತಾನೆ. ಈ ಪಂಕ್ತಿಗಳಲ್ಲಿ ದೃಷ್ಟಿಗೆ ವಿಷಯವಾಗುವ ಅಂಶಗಳು ಹೆಚ್ಚು. ಇದು ಹಲವಾರು ವಿವರಗಳನ್ನೊಳಗೊಂಡ ಸಂಕೀರ್ಣ ಚಿತ್ರ. ಅಶ್ವತ್ಥಾಮನ ಮನಸ್ಸಿನಲ್ಲಿ ಕುದಿಯುತ್ತಿರುವುದು ರೋಷ

* ಕಂಸಗಳಲ್ಲಿರುವ ಅಂಕಿಗಳು ಪಂಕ್ತಿ ಸಂಖ್ಯೆಯನ್ನು ಸೂಚಿಸುತ್ತವೆ.

ವೊಂದೇ ಅಲ್ಲ, ಕರುಣೆಯೂ ಸೇರಿದೆ. ಕರುಣೆಯಿಂದ ರೋಷ ಹೆಚ್ಚುತ್ತದೆ. ಮೂಲದಲ್ಲಿ ಕತ್ತಲೆಯು ಮಾತಿದ್ದರೆ ಇಲ್ಲಿ: 'ನೇಸರೊಡನಾ ಕೌರವನ್ ಮುಳುಗೆ'. ನಮ್ಮ ಮನಸ್ಸಿಗೆ ನೇಸರು ಮತ್ತು ಕೌರವರ ಸಾಮ್ಯದ ಕಲ್ಪನೆ ಬರುತ್ತದೆ— ದುರ್ಯೋಧನ ಕುರುಲಾರ್ಕನಸ್ತೆ. ದುರ್ಯೋಧನನ ಘನತೆ ಮಾತ್ರವಲ್ಲದೆ, ಅವನು ಅಸ್ತನಾದ್ದರಿಂದ ಕೌರವ ಪ್ರಪಂಚವನ್ನೆಲ್ಲ ಕತ್ತಲೆ ಮುಸುಗಿತೆಂಬ ಭಾವ ನೆಯೂ ಬರುತ್ತದೆ. ಇಡೀ ಚಿತ್ರದ ಸಂಕೀರ್ಣತೆ ಹೆಚ್ಚಿ ಅದರ ಭಾವಪ್ರಚೋದಕ ಶಕ್ತಿಯೂ ಹೆಚ್ಚುತ್ತದೆ.

ಮೇಲೆ ಉದಾಹರಿಸಿರುವ ಪಂಕ್ತಿಗಳಲ್ಲಿ "ನೋಡುತಿರು, ನೋಡುತಿರು"ಎಂದು ಮೊದಲಾಗುವ ಒಂಬತ್ತನೆಯ ಮತ್ತು ಹತ್ತನೆಯ ಪಂಕ್ತಿಗಳನ್ನೂ ಮುಖ್ಯವಾಗಿ "ಮದಿಸಿ ತಾನ್ ಸಕ್ಕನ್ ; ಆನ್ ನಕ್ಕೆನ್" ಎಂಬ ಪದಗಳನ್ನೂ ಗಮನಿಸಬೇಕು. ಇವು ಮೂಲದಿಂದ ಬಂದುವಲ್ಲ, ಶ್ರೀಕಂಠಯ್ಯನವರು ಸೇರಿಸಿದವು. ಇವುಗಳಿಂದಾಗಿ ಅಶ್ವತ್ಥಾಮನ ಸೊಕ್ಕನ್ನು ಬೆಳಗಿಟ್ಟು ತೋರಿಸಿದಂತಾಗಿದೆ. ಅಶ್ವತ್ಥಾಮನ ನಗು ಸೊಕ್ಕಿನ ನಗು ; ರುದ್ರನದು ಐರನಿಯ (irony) ನಗು. ಮೂಲ ನಾಟಕದಲ್ಲಿ ಈ ಸೊಕ್ಕಿನ ಪ್ರಸ್ತಾಪ ಬಂದು ಸ್ವಲ್ಪ ಹೊತ್ತಾದ ಮೇಲೆ ಟ್ಯೂಸರ್ ಅದಕ್ಕೆ ಉದಾ ಹರಣೆಗಳನ್ನು ಕೊಡುತ್ತಾನೆ. ಏಜಾಕ್ಸ್ ಅಥೀನೆಯ ವಿಷಯದಲ್ಲಿ ಸೊಕ್ಕಿನಿಂದ ಅಪರಾಧ ಮಾಡುವುದಕ್ಕೆ ಮುಂಚಿತವಾಗಿಯೇ ಅವಳು ಅವನನ್ನು ಭ್ರಮೆಗೆ ಗುರಿಮಾಡಿದ್ದಾಳೆ.

Pallas in all things else have thou thy will
But none shall wrest Odysseus from this doom.

ಈ ಸೊಕ್ಕಿನ ಮಾತಾಡುವ ವೇಳೆಗೆ ಅವನು 'blind phantasies' ಗೆ ಬಲಿಯಾಗಿ ಸ್ವಲ್ಪಕಾಲ ಕಳೆದಿತ್ತು. ಅಶ್ವತ್ಥಾಮನಾದರೋ, ರುದ್ರನನ್ನು ಕಂಡೊ ಡನೆ ತನ್ನ ಸೊಕ್ಕನ್ನು ಪ್ರದರ್ಶಿಸುತ್ತಾನೆ. ರುದ್ರ 'ವರಮಾವುದೀವೆನ್' ಎಂದು ಕೇಳಿದ್ದು ತನ್ನ ಕಿವಿಗೆ ಬೀಳಲೇ ಇಲ್ಲವೇನೋ ಎಂಬಂತೆ ನಡೆದುಕೊಳ್ಳುತ್ತಾನೆ. ("ಪಾಂಡವರ ಲೋಕಕ್ಕೆನ್ನಿನ್ ಪ್ರಳಯಂ" ಎಂದದ್ದು "ಪ್ರಿಯವೀರ, ದಾಳಿ ಯೇನ್ ?" ಎಂಬ ಪ್ರಶ್ನೆಗೆ ಉತ್ತರವೇ ಹೊರತು ಅಶ್ವತ್ಥಾಮ ಬೇಡಿದ ವರವಲ್ಲ.) ಮೂಲನಾಟಕದಲ್ಲಿ ವರಕೊಡುವ ಮಾತೇನೂ ಇಲ್ಲವೆಂಬುದೂ ಗಮನಾರ್ಹವಾ ದದ್ದು. ಅಶ್ವತ್ಥಾಮನು ವರವನ್ನು ಬೇಡುವುದಂತಿರಲಿ, ವರ ಕೊಡುತ್ತೇನೆಂದ ದ್ದಕ್ಕೆ ರುದ್ರನಿಗೆ ಕೃತಜ್ಞತೆ ತೋರಿಸುವುದಂತಿರಲಿ, ತಾನೇ ರುದ್ರನಿಗೆ ವರಕೊಡು ವವನಂತೆ ಮಾತಾಡುತ್ತಾನೆ; ರುದ್ರನಿಗೆ "ವೀರ್ಯಂ ಮಾನುಷಂ ಅದೆಂತಿರ್ಪುದೋ" ಎಂಬುದರ ದರ್ಶನ ಕೊಡುತ್ತಾನೆ—ಆ ದೃಶ್ಯ ದೇವರು ಎಂದೂ ಕಾಣದ್ದು, ಆದರೆ ನೋಡಲೇಬೇಕಾದ್ದು ಎಂಬಂತೆ! 'ವೀರ್ಯಂ ಮಾನುಷಂ' ಅಂದರೆ ತನ್ನ ಸ್ವಂತ

ಪೌರುಷ ಎಂದೇ ಅಶ್ವತ್ಥಾಮನ ಅರ್ಥ. ರುದ್ರನು ಮಾಯೆಯನ್ನು ಬೀಸಿದ್ದು ಅಶ್ವತ್ಥಾಮನ ಸೊಕ್ಕಿನ ಪ್ರದರ್ಶನವಾದಮೇಲೆ. ಶ್ರೀಕಂಠಯ್ಯನವರು ಈ ಸಂದರ್ಭದಲ್ಲಿ ಮಾಡಿರುವ ಸಣ್ಣ ಬದಲಾವಣೆಯಿಂದಾಗಿ ಅಶ್ವತ್ಥಾಮನ ಅಪರಾಧವೂ ಅದಕ್ಕಾದ ಶಿಕ್ಷೆಯೂ ಒಂದಕ್ಕೊಂದು ಹತ್ತಿರ ಬರುತ್ತವೆ. ಅವೆರಡಕ್ಕೂ ಕಾರ್ಯ ಕಾರಣ ಸಂಬಂಧವಿದೆಯೆಂಬುದು ಸ್ಪಷ್ಟವಾಗುತ್ತದೆ.

ಸೌಪ್ತಿಕಪರ್ವದ ಕಥೆಯನ್ನು ತಮ್ಮ ಕೃತಿಯ ಮೂಲವನ್ನಾಗಿ ಆರಿಸಿಕೊಂಡಿದ್ದರಿಂದ ಶ್ರೀಕಂಠಯ್ಯನವರಿಗೆ ಆದ ಮತ್ತೊಂದು ಪ್ರಯೋಜನವೆಂದರೆ—ಅಶ್ವತ್ಥಾಮನ ಕ್ರೋಧಕ್ಕೆ ವಿಶಾಲವಾದ ಹಿನ್ನೆಲೆಯನ್ನು ಕೊಡುವುದು ಸಾಧ್ಯವಾದದ್ದು. ಆ ಕ್ರೋಧ ಮತ್ತು ಅದರ ಪರಿಣಾಮ ಚಿತ್ರಿತವಾಗಿರುವುದು ದುರ್ಯೋಧನನ ಮತ್ತು ದ್ರೋಣನ ಸಾವಿನ ಹಿನ್ನೆಲೆಯಲ್ಲಿ ಮಾತ್ರವಲ್ಲ. ಒಂದು ಚಕ್ರಾಧಿಪತ್ಯದ—ಒಂದು ಪ್ರಪಂಚದ ಎಂದರೂ ತಡೆಯುತ್ತದೆ—ಅಳಿವೇ ಅದಕ್ಕೆ ಹಿನ್ನೆಲೆಯಾಗುತ್ತದೆ. ಇದಕ್ಕೆ ಹೋಲಿಸಿ ನೋಡಿದರೆ ಏಜಾಕ್ಸ್‌ನ ಕ್ರೋಧದ ಹಿನ್ನೆಲೆಯು—ತನು ತ್ರಾಣಕ್ಕೆ ಸಂಬಂಧಪಟ್ಟ ಕಲಹದ—ಪರಿಣಾಮ ತೀರ ದುರ್ಬಲವಾದದ್ದು.

ಸೋಫೊಕ್ಲೀಸನ ನಾಟಕದ ಅಥೀನೆ ಅಷ್ಟೇನೂ ಸುಸಂಸ್ಕೃತಳಾದ ದೇವತೆಯಲ್ಲ. ಅವಳು ಒಡಿಸ್ಯೂಸ್‌ನಲ್ಲಿ ಪಕ್ಷಪಾತವುಳ್ಳವಳು ಎಂಬುದನ್ನು ನಾವು ದೊಡ್ಡದು ಮಾಡಬೇಕಾಗಿಲ್ಲ—ಅಂಥ ಪಕ್ಷಪಾತ ಗ್ರೀಕರ ದೇವತೆಗಳಲ್ಲಿ ಸರ್ವಸಾಮಾನ್ಯ. ಆದರೆ 'laughter is sweetest o'er a foe' ಎಂಬ ಮಾತು ದೇವತೆಯ—ಜ್ಞಾನನಿಧಿಯಾದ ದೇವತೆಯ-ಬಾಯಿಂದ ಬರತಕ್ಕದ್ದಲ್ಲ. ಕಗ್ಗೊಲೆಯನ್ನು ನಡೆಸಿಯಾದ ಮೇಲೆ ಇನ್ನೂ ಭ್ರಮೆಯಲ್ಲಿಯೇ ಇರುವ ಬಡಪಾಯಿ ಏಜಾಕ್ಸ್‌ನನ್ನು ನೋಡಿ ಅವಳು ಆಡುವ ಮಾತು-"The Gods are strong, Odysseus"— ಅವಳ ಗೌರವವನ್ನು ಹೆಚ್ಚಿಸುವಂಥದಲ್ಲ! ದೈವಕ್ಕೂ ಇಂಥ ಹೆಮ್ಮೆಯಿರಬೇಕೆ? ಆದರೆ ಅದಾದಮೇಲೆ ಬರುವ ಮಾತಿನಲ್ಲಿ ಮರುಕವಿದೆ:

> What man than Aias was more provident,
> Or who for timeliest action more approved!

ಶ್ರೀಕಂಠಯ್ಯನವರ ನಾಟಕದಲ್ಲಿ ಅಥೀನೆಯ ಸ್ಥಾನಕ್ಕೆ ರುದ್ರ ಬಂದಿದ್ದಾನಷ್ಟೆ. ಅಥೀನೆಯಲ್ಲಿದ್ದ ಕರುಣೆಯ ಎಳೆ ಈ ನಾಟಕದಲ್ಲೂ ಉಳಿದುಕೊಂಡಿದೆ, ಅಥೀನೆಯಲ್ಲಿ ನಾವು ಮೆಚ್ಚಲಾಗದ ಅವಗುಣಗಳು ಉಳಿದುಕೊಂಡಿವೆ ಮಾತ್ರವಲ್ಲ, ಸ್ವಲ್ಪ ಹೆಚ್ಚು ಪ್ರಕಾಶವನ್ನೂ ಪಡೆದಿವೆ; ರಂಗಸ್ಥಳದ ಮೇಲೆ ಮತ್ತಷ್ಟು ಪರಿಣಾಮಕಾರಿಯಾಗಿವೆ.

ಅಶ್ವ :—ಎನ್ನ ಗೂಡಾರದ ಕಂಬಕ್ಕೆ ಬಿಗಿದು—
ರುದ್ರ:— ಬಿಗಿದು—

(94)

ಎರಡನೆಯ 'ಬಿಗಿದು' ಎಂಬ ಮಾತಿನಲ್ಲಿರುವ ಅಣಕ; ಅಲ್ಲದೆ ಕೃಷ್ಣನ ವಿಷಯದಲ್ಲಿ ಪರಿತಾಪ ತೋರಿಸುವಂತೆ ರುದ್ರನು ಆಡಿದ "ಪಾಪ, ರಾಸಕ್ರೀಡೆ ಯಾಡುವೊನ್ ಪೆಂಡಿರೊಳ್"ಎಂಬ ಮಾತಿನ ಅಣಕ; "ನಿನ್ನಿಚ್ಛೆ ಗೆನ್ನಿಚ್ಛೆಯೇನ್?" ಎಂಬುದರಲ್ಲಿರುವ ಮೂದಲಿಕೆ–ಇವೆಲ್ಲ ಶ್ರೀಕಂಠಯ್ಯನವರು ಸೇರಿಸಿದ್ದು. ಅಶ್ವತ್ಥಾಮ ತನಗೆ ಬಲಿಯಾದವರ ಸಂಕಟವನ್ನು ನೋಡಿ ನಲಿಯುವಂತಿದೆ. ಬೆಕ್ಕು ಇಲಿಯೊಡನೆ ಆಡುವಂತೆ ಬಡಮಾನವನೊಡನೆ ಆಡುವ ಈ ಬಗೆಯ ದೈವದ ವಿಷಯದಲ್ಲಿ ಭಯವಿರಬಹುದೇ ಹೊರತು ಪ್ರೀತಿವಿಶ್ವಾಸಗಳಿರುವುದು ಕಷ್ಟ. ಮಹಾಭಾರತದಲ್ಲಿ ಇದೇ ಸಂದರ್ಭದಲ್ಲಿ ಬರುವ ರುದ್ರನು ಅಷ್ಟೇನು ಮೆಚ್ಚತಕ್ಕ ವ್ಯಕ್ತಿಯಲ್ಲ. ನಿದ್ರಿಸುವವರನ್ನು ಕೊಲ್ಲಹೊರಟಿರುವ ಅಶ್ವತ್ಥಾಮನ ಕೈಗೆ ಆ ರುದ್ರ ಮಹಾಖಡ್ಗವೊಂದನ್ನು ಕೊಟ್ಟು ಕಳಿಸುತ್ತಾನೆ! ಮೇಲೆ ಹೇಳಿದ ಮಾತುಗಳು ದೈವಕ್ಕೆ ಅನ್ವಯಿಸುವ ಮಾತುಗಳಲ್ಲ; ದೈವವನ್ನು ಚಿತ್ರಿಸಿರುವ ರೀತಿಗೆ ಅನ್ವಯಿಸುವಂಥವು. ಕಲೆಯ ದೃಷ್ಟಿಯಿಂದ ನೋಡಿದರೆ, ಹಾಗೆ ಚಿತ್ರಿಸಿರುವುದು ನಾಟಕಕಾರರಲ್ಲಿ ತಪ್ಪು ಎಂದೂ ಹೇಳುವಂತಿಲ್ಲ. ನಾಟಕಕಾರ ತನ್ನ ಉದ್ದೇಶಕ್ಕೆ ತಕ್ಕಂತೆ ತನ್ನ ಪಾತ್ರಗಳನ್ನು (ದೈವವಾಗಲಿ ಮಾನವನಾಗಲಿ) ಚಿತ್ರಿಸುತ್ತಾನೆ, ಅವನಿಗೆ ಆ ಹಕ್ಕು ಇದೆ.

ಏಜಾಕ್ಸ್‌ನ ಪ್ರೇಯಸಿ ಮತ್ತು ದಾಸಿಯಾದ ಟೆಕ್‌ಮೆಸ ಅವನೊಡನೆ ಟ್ರಾಯ್ ನಗರದ ಮುಂದಿನ ಪಾಳೆಯದಲ್ಲಿದ್ದಳೆಂದರೆ ಅಸಹಜವಲ್ಲದಿರಬಹುದು. ಆದರೆ ಕುರುಕ್ಷೇತ್ರದ ವಾತಾವರಣದಲ್ಲಿ ಅಶ್ವತ್ಥಾಮನೊಡನೆ ಹೀಗೆ ಪ್ರೇಯಸಿ ಇರುವುದು ಅಸಹಜವೇ ಆಗುತ್ತದೆ. ಆದ್ದರಿಂದ ಇಲ್ಲಿ ಭಾರ್ಗವಿ (ಟೆಕ್‌ಮೆಸಳಿಗೆ ಬದಲಾದ ಪಾತ್ರ) ಅಶ್ವತ್ಥಾಮನ ಅಜ್ಜಿಯಾಗುತ್ತಾಳೆ. ಆಕೆ ಅಶ್ವತ್ಥಾಮನನ್ನು ಅವನು ಎಳೆಯನಾಗಿದ್ದಾಗಿನಿಂದಲೂ ಸಾಕಿ ಸಲಹಿ ದೊಡ್ಡವನನ್ನಾಗಿ ಮಾಡಿದವಳು; ಜೀವನದಲ್ಲಿ ಸಾಕಾದಷ್ಟು ಸಂಕಟವನ್ನು ಕಂಡವಳು. ಟೆಕ್‌ಮೆಸಳಂತೆ ಭಾರ್ಗವಿಯೂ ನಮ್ಮ ಕರುಣೆಗೆ ಪಾತ್ರಳಾಗುತ್ತಾಳೆ. ಮೂಲನಾಟಕದ ಟ್ಯೂಸರ್‌ನನ್ನು ಏಕಲವ್ಯನಾಗಿ ಮಾರ್ಪಡಿಸಿದ್ದರಿಂದ ನಾಟಕಕ್ಕೆ ವಿಶೇಷ ಪ್ರಯೋಜನವೇನೂ ಇಲ್ಲ, ನಷ್ಟವೂ ಇಲ್ಲ. ಮಹಾಭಾರತದ ಅಶ್ವತ್ಥಾಮನಿಗೆ ಮಲತಮ್ಮನಿಲ್ಲ; ಶ್ರೀಕಂಠಯ್ಯನವರು ಬದಲಾವಣೆ ಮಾಡಿದ್ದರಿಂದ ಮಹಾಭಾರತವನ್ನು ಈ ವಿಷಯದಲ್ಲಿ ಅನುಸರಿಸಿದಂತಾಯಿತು,ಅಷ್ಟೆ.

'ಏಜಾಕ್ಸ್'ನಾಟಕದ ವಸ್ತುಸಂವಿಧಾನ ಒಂದು ದೊಡ್ಡ ಟೀಕೆಗೆ ಒಳಗಾಗಿದೆ; ಏಜಾಕ್ಸ್ ಸತ್ತಮೇಲೆ ಅವನ ವಿಷಯದಲ್ಲಿ ಯಾರ ಬಾಯಿಂದಲಾದರೂ ನಾಲ್ಕಾರು

ಒಳ್ಳೆಯ ಮಾತುಗಳನ್ನಾಡಿಸಿ ನಾಟಕವನ್ನು ಅಲ್ಲಿಗೇ ಮುಗಿಸಬೇಕಾಗಿತ್ತಲ್ಲವೆ? ಈ ಟೀಕೆಯ ಹಿಂದಿರುವ ತತ್ತ್ವ—"ರುದ್ರ ನಾಟಕದಲ್ಲಿ ನಾಯಕನ ಮರಣವೇ ಮುಖ್ಯ, ಅದಾದ ಮೇಲೆ ಏನು ನಡೆದರೂ ಅದರಲ್ಲಿ ನಮಗೆ ಆಸಕ್ತಿಯಿಲ್ಲ" ಎಂಬುದಲ್ಲ. ರುದ್ರನಾಟಕದಲ್ಲಿ ಮುಖ್ಯವಾದದ್ದು ನಾಯಕನ ಮರಣವಲ್ಲ. ಮಹೋನ್ನತನಾದ ವ್ಯಕ್ತಿಯೊಬ್ಬ ತೀವ್ರವಾದ ಸಂಕಟಕ್ಕೆ ಒಳಗಾಗುತ್ತಾನೆ; ಅವನು ವಿಧಿಯ ಎದುರಿಗೆ ಸಮಸಮವಾಗಿ ನಿಂತು ಅದರ ಸವಾಲಿಗೆ ಪ್ರತಿಸವಾಲು ಹಾಕುವ ಕೆಚ್ಚುಳ್ಳವನು—ಇದು ಮುಖ್ಯವಾದದ್ದು. ನಾಯಕ ಸಾಯಲಿ ಬದುಕಲಿ, ಅವನಲ್ಲಿ ಪ್ರಚಂಡ ಶೌರ್ಯ, ಗಾಂಭೀರ್ಯ ಅಥವಾ ಮಾನಸಿಕ ಶಕ್ತಿ-ಸಾಮಾನ್ಯ ಮಾನವನ ಮಟ್ಟಕ್ಕಿಂತ ಅವನನ್ನು ಬಹು ಎತ್ತರಕ್ಕೆ ಏರಿಸುವಂಥಾದ್ದು (ಅವನ ಮಾನವತೆಗೆ ಕುಂದಿಲ್ಲದಂತೆ), ಏನಾದರೂ ಇಲ್ಲದಿದ್ದರೆ ಅವನು ರುದ್ರನಾಯಕ ನಾಗಿರಲಾರ. ಇಂಥ ನಾಯಕ ವಿಪತ್ತಿಗೆ ಒಳಗಾದಾಗ ರುದ್ರನಾಟಕದ ವಾತಾವರಣ ಮೂಡುತ್ತದೆ. ಈ ನಾಟಕದ ವಿಷಯದಲ್ಲಿ ಮೇಲೆ ಹೇಳಿದ ಟೀಕೆ ಬಂದಿರುವುದಕ್ಕೆ ಕಾರಣ: ರುದ್ರನಾಯಕನ ಶವದ ಬಳಿ ನಿಂತು ಅವನ ಉತ್ತರಕ್ರಿಯೆಗೆ ಸಂಬಂಧಪಟ್ಟಂತೆ ನಡೆಯುವ ವಾಕ್ಕಲಹ ರುದ್ರನಾಟಕದ ಗಂಭೀರ ವಾತಾವರಣವನ್ನು ಹಠಾತ್ತಾಗಿ ಇಳಿಸಿಬಿಡುತ್ತದೆ ಎಂಬುದು.

ಗ್ರೀಕ್ ಪುರಾಣಗಳಲ್ಲಿನ ಏಜಾಕ್ಸನು ಸೋಪೊಕ್ಲೀಸನ ಕೈಗೆ ಬಂದಾಗಲೇ ಅವನಿಗೆ ಸ್ವಲ್ಪಮಟ್ಟಿಗೆ ನಾಯಕಪಟ್ಟ ಸಿದ್ಧಿಸಿತ್ತು. ಅವನು ಜ್ಯೂಸ್‌ನ ಮಗನೆಂದು ಪ್ರತೀತಿ; ಶೌರ್ಯ—ಧೈರ್ಯಗಳಲ್ಲಿ ಅವನನ್ನು ಮೀರಿಸಿದವರು—ಅಕಿಲೀಸ್ ಹೊರತು ಯಾರೂ ಇಲ್ಲ. ಅಥೆನ್ಸಿನಲ್ಲಿ ಅವನನ್ನು ಒಂದು ಬಗೆಯ ದೇವತೆಯೆಂದೇ ಪರಿಗಣಿಸಿ ಅವನನ್ನು ಗೌರವಿಸುವುದಕ್ಕಾಗಿಯೇ ಹಬ್ಬವನ್ನು ಆಚರಿಸುತ್ತಿದ್ದುದುಂಟು. ಸೋಪೊಕ್ಲೀಸನ ಮತ್ತು ಅವನ ಪ್ರೇಕ್ಷಕರ ದೃಷ್ಟಿಯಲ್ಲಿ ಏಜಾಕ್ಸ್‌ನ ಹಿರಿಮೆ ಮೊದಲೇ ಬಹುಮಟ್ಟಿಗೆ ಸ್ಥಾಪಿತವಾಗಿತ್ತು. ಇಂಥ ಮಹಿಮಾವಂತನು ಮೂಕ ಪ್ರಾಣಿಗಳನ್ನು ಕೊಲೆ ಮಾಡಿ ಅನಂತರ ಆತ್ಮಹತ್ಯೆ ಮಾಡಿಕೊಂಡು ಸತ್ತನೆಂದರೆ ಅವನ ಮಹಿಮೆ ಇಳಿದಂತಾಯಿತು. 'ಏಜಾಕ್ಸ್' ನಾಟಕ ಅವನನ್ನು ಮತ್ತೆ ಮೊದಲಿನ ಸ್ಥಾನಕ್ಕೆ ಏರಿಸಬೇಕು. ಗ್ರೀಕರಲ್ಲಿ ವೀರಪೂಜೆಗೆ ಕೇಂದ್ರವಾದದ್ದು ವೀರನ ಸಮಾಧಿ. ಆದ್ದರಿಂದ ವೀರರಿಗೆ ವಿಧಿಪೂರ್ವಕವಾದ ಉತ್ತರಕ್ರಿಯೆ ನಡೆಯಬೇಕು, ಗೌರವಿಸುವುದಕ್ಕಾಗಿ ಗೋರಿಯೂ ಇರಬೇಕು. ಆದ್ದರಿಂದ ವೀರನನ್ನು ಸಮಾಧಿಮಾಡುವ ವಿಷಯ ಗ್ರೀಕರಿಗೆ ಬಹಳ ಮುಖ್ಯವಾಗಿತ್ತು. 'ಏಜಾಕ್ಸ್' ನಾಟಕದಲ್ಲಿ ಕೊನೆಯ ದೃಶ್ಯದ ಉದ್ದೇಶ ಎರಡು ಬಗೆಯದು. ನಾಯಕನನ್ನು ಮೊದಲಿನ ಔನ್ನತ್ಯಕ್ಕೆ ಮತ್ತೆ ಏರಿಸುವುದು. ಮತ್ತು ಅವನಿಗೆ ಉತ್ತರಕ್ರಿಯೆ ಸರಿಯಾಗಿ ನಡೆಯಿತೆಂದು ತೋರಿಸುವುದು.

ಈ ಕೊನೆಯ ದೃಶ್ಯ ಅನವಶ್ಯಕ ಎಂಬ ಟೀಕೆಗೆ ಮೇಲೆ ಹೇಳಿರುವ ಉತ್ತರ ಸಮರ್ಪಕವಾಗಿದೆಯೆಂದರೂ ಅದು ದುರ್ಬಲವಾದ ದೃಶ್ಯವೆಂದು ಒಪ್ಪಬೇಕಾಗುತ್ತದೆ. ಸಾಯುವ ಮುನ್ನ ಏಜಾಕ್ಸ್ ಆಡುವ ಮಾತುಗಳಲ್ಲಿ ಗಾಂಭೀರ್ಯವಿದೆ, ಅವನು ತನ್ನ ಮನಸ್ಸಿನ ತಳಮಳವನ್ನು ಒಂದು ಬಗೆಯ ಶಾಂತಿಗೆ ತಂದುಕೊಂಡಿದ್ದಾನೆ; ಆತನಲ್ಲಿ ಯೋಚನಾಪರತೆಯಿದೆ, ಪ್ರಕೃತಿ ಸೌಂದರ್ಯವನ್ನು ನೋಡಿ ಅನುಭವಿಸುವ ಶಕ್ತಿಯಿದೆ. ಇವೆಲ್ಲ ಆದಮೇಲೆ ಅವನಿಗಿಂತ ಕೆಳಮಟ್ಟದ ಜನರು ಅವನ ಕೀರ್ತಿಯನ್ನು ಎಳೆದಾಡಿ ಜಗಳವಾಡುವ ದೃಶ್ಯ—ತಂತ್ರದ ದೃಷ್ಟಿಯಿಂದ ಅದನ್ನು ಸಮರ್ಥಿಸಬಹುದು ಎಂದರೂ—ಕಳೆಗಟ್ಟಲಾರದು. ತಂತ್ರಕ್ಕಿಂತ ಇಡೀ ನಾಟಕ ನಮ್ಮ ಮೇಲೆ ಉಂಟುಮಾಡುವ ಪರಿಣಾಮ ಮುಖ್ಯ.

'ಅಶ್ವತ್ಥಾಮನ್' ನಾಟಕದಲ್ಲೂ ನಾಯಕನ ಮರಣವಾದ ಮೇಲಿನ ವಾದಗ್ರಸ್ತವಾದ ಕೊನೆಯ ದೃಶ್ಯ ಉಳಿದುಕೊಂಡಿದೆ. ಆತನನ್ನು ಗೌರವಿಸಲು ಒಂದು ಗುಡಿಯನ್ನು ಕಟ್ಟಿಸಬೇಕು, ಹಬ್ಬವನ್ನು ಆಚರಿಸಬೇಕು ಎಂಬ ಮಾತು ಬರುತ್ತದೆ. ಹಬ್ಬವನ್ನು ಆಚರಿಸುವುದೇನೋ ನಮ್ಮ ಸಂಪ್ರದಾಯಕ್ಕೆ ಹೊಂದಿಕೊಳ್ಳುತ್ತದೆ. ಆದರೆ ಅವನಿಗಾಗಿ—ಭಾರತದ ಅತಿರಥ ಮಹಾರಥರೆಲ್ಲರನ್ನೂ ಬಿಟ್ಟು ಅಶ್ವತ್ಥಾಮನಿಗೆ—ಗುಡಿಕಟ್ಟುವುದೆಂದರೆ ಸ್ವಲ್ಪ ವಿಚಿತ್ರವೆನ್ನಿಸುತ್ತದೆ. ಕಟ್ಟಿದರೂ ಅದು ಮಾರಿ ಮಸಣಿಯರ ಗುಡಿಯ ಮಟ್ಟಕ್ಕೆ ಇಳಿದೀತು! ಈ ನಾಟಕದಲ್ಲೂ ನಾಯಕನ ಶವದ ಬಳಿ ಜಗಳ ನಡೆಯುತ್ತದೆ. ಭೀಮನ ಮಾತು ಉನ್ನತಮಟ್ಟದ್ದೇನೂ ಅಲ್ಲ, ದುರ್ಯೋಧನನ ತಲೆಯನ್ನು ಒದೆದ ಭೀಮನೇ ಇವನು. ಏಕಲವ್ಯನೂ ಆ ಮಟ್ಟಕ್ಕೆ ತಕ್ಕಂತೆ ಉತ್ತರ ಕೊಡುತ್ತಾನೆ. ಶ್ರೀಕಂಠಯ್ಯನವರಿಗೆ ಈ ದೃಶ್ಯವನ್ನು ಬರೆಯುವುದು ಬಹಳ ಬೇಸರದ ಕೆಲಸವಾಗಿದ್ದಿರಬೇಕು. ಸೋಫೊಕ್ಲೀಸನ ನಾಟಕದಲ್ಲಿ ಈ ದೃಶ್ಯ (Enter Menelaus ಎಂಬಲ್ಲಿಂದ) ೩೭೨ ಪಂಕ್ತಿಗಳಷ್ಟು-ಇಡೀ ನಾಟಕದ ಕಾಲುಭಾಗ—ಆಗುತ್ತದೆ. ಅದರಲ್ಲಿ ೨೫೦ ಪಂಕ್ತಿಗಳು ಜಗಳದ ಮಾತುಗಳಿಗೇ ಮೀಸಲು-'ಅಶ್ವತ್ಥಾಮನ್'ನಲ್ಲಿ ಒಟ್ಟು ದೃಶ್ಯಕ್ಕೆ ಕೊಟ್ಟಿರುವುದು ೧೮೬ ಪಂಕ್ತಿಗಳು ಮಾತ್ರ; ಜಗಳದ ಮಾತುಗಳು ೩೭ ಪಂಕ್ತಿಗಳೊಳಗೆ ಮುಗಿಯುತ್ತವೆ. ಮೂಲ ನಾಟಕದಲ್ಲಿ ಮಿನಿಲೇಯಸ್ ಆಗಮೆಮ್ನನ್‌ರ ಅಧಿಕಾರವನ್ನು ಕುರಿತ ವಾದ ಎದ್ದಿದೆ. ಇಲ್ಲಿ ಆ ವಾದಕ್ಕೆ ಅವಕಾಶವಿಲ್ಲದ್ದರಿಂದ ಶ್ರೀಕಂಠಯ್ಯನವರು ದೃಶ್ಯವನ್ನು ಮೊಟಕು ಮಾಡುವುದು ಸುಲಭಸಾಧ್ಯವಾಯಿತು. ಇದರಿಂದಾಗಿ ಭೀಮ-ಏಕಲವ್ಯರ ಕೂಗಾಟ ಅಬ್ಬರಗಳು ಕಡಮೆಯಾದದ್ದು ಮಾತ್ರವಲ್ಲದೆ, ಯುದ್ಧದ ಹೊಲ್ಲತನವನ್ನೂ ಶಾಂತಿಯ ಹಿರಿಮೆಯನ್ನೂ ಬಣ್ಣಿಸುವ ಭಾಗ ಎದ್ದುಕಾಣುವಂತಾಯಿತು.

ಮೂಲನಾಟಕದಲ್ಲಿ ಏಜಾಕ್ಸ್‌ನನ್ನು ಮತ್ತೆ ಘನತೆಗೆ ಏರಿಸುವ ಪ್ರಯತ್ನ ನಡೆದಿದೆಯೆಂದು ಕಂಡೆವಷ್ಟೆ. ಇಲ್ಲಿಯೂ ನಾಯಕನ ಘನತೆಯನ್ನು ಸಾರಿಹೇಳುವ ಕೆಲಸವನ್ನು ಕೃಷ್ಣ ನಿರ್ವಹಿಸುತ್ತಾನೆ. ಇಲ್ಲಿ ನಾಯಕನನ್ನು ಘನತೆಗೇರಿಸುವುದ

ಕ್ಕಿಂತ ಹೆಚ್ಚಾಗಿ ಧರ್ಮವನ್ನು ಎತ್ತಿ ಹಿಡಿಯುವ ಕೆಲಸ ನಡೆದಿದೆ. ರಾಗ ದ್ವೇಶಾದಿಗಳ ತಾಂಡವ, ಹಿಂಸೆ, ಯುದ್ಧ, ಕೊಲೆ ಇತ್ಯಾದಿಗಳನ್ನು ಹಳಿದು ಶಾಂತಿಗಾಗಿ ಹಾತೊರೆಯುವ ಮಾತು ಮೇಲೆದ್ದು ಕೇಳುತ್ತದೆ.

ಓ ಪೊಲ್ಲ ಯುದ್ಧಮೇ,
ಎಂದು ನಿಲ್ವೆಯ್ !
ಓ ತಾಯಿ ಶಾಂತಿಯೇ
ಎಂದು ಗೆಲ್ವೆಯ್ ! (860 ff)

ಮೇಳದವರು

ಯುದ್ಧಮನ್ ನೆಲಕೆ ಬಿತ್ತಿದ........
ಸರ್ಪದುರಿಪಲ್ಗಳನ್ ಬಿತ್ತಿದಾ......* (868-9)

ಆ ಕಾಲದಿಂದ ಹಿಡಿದು ಮಹಾಭಾರತದ ಕಾಲದವರೆಗೂ ಯುದ್ಧ ಹೇಗೆ ಸಂತತವಾಗಿ ಬೆಳೆಯುತ್ತ ಬಂದಿದೆಯೆಂಬುದನ್ನು ಕುರಿತು ದುಃಖಗೀತೆಯನ್ನು ಹಾಡುತ್ತಾರೆ. ಅದು ದ್ರೌಪದಿ ಹುಟ್ಟಿದ ಸಂದರ್ಭವನ್ನು ನೆನೆಯುತ್ತಾರೆ. ಅವಳು ಅಗ್ನಿಯಲ್ಲಿ ಹುಟ್ಟಿದಳೆಂಬುದು ಅರ್ಥಪೂರ್ಣವಾದದ್ದು! ಪಾಂಡವರ ಅರಮನೆಯಲ್ಲಿ ದುರ್ಯೋಧನ ಕಾಲುಜಾರಿ ಬಿದ್ದಾಗ ದ್ರೌಪದಿ ತಿರಸ್ಕಾರದಿಂದ ನಕ್ಕಳು ; ಸ್ವಲ್ಪ ಕಾಲ ಕಳೆದಮೇಲೆ ಅವಳನ್ನು ಸಭೆಗೆ ಜುಟ್ಟುಹಿಡಿದು ಎಳೆತಂದಾಗ ದುರ್ಯೋಧನನ ಸರದಿ—ನಗುವುದಕ್ಕೆ. ಅವನು ನಕ್ಕು ಅವಳಿಗೆ ತನ್ನ ತೊಡೆಯನ್ನು ತೋರಿಸಿದ. ದ್ರೌಪದಿಗೆ ಆದ ಅವಮಾನಕ್ಕೆ ಸೇಡು ತೀರಿಸಿಕೊಳ್ಳಲು ಭೀಮ ಆ ತೊಡೆಯನ್ನು ಮುರಿದು ಅವನ ತಲೆಯನ್ನು ಒದೆದ. ಈಗ ಅಶ್ವತ್ಥಾಮ ಅದಕ್ಕೆ ಸೇಡು ತೀರಿಸಲು ಹೊರಟ ! ಹೀಗೆ ಪಾಪದ ಸಂತತಿ ಬೆಳೆಯುತ್ತಲೇ ಹೋಗುತ್ತದೆ.

ಈ ಪಾಪಪರಂಪರೆಯ ಮರುಕಥನ ಶ್ರೀಕಂಠಯ್ಯನವರೇ ಸೇರಿಸಿದ್ದೆಂಬುದು ಸ್ಪಷ್ಟವಾಗಿಯೇ ಇದೆ. ಅನಂತರ

* ಇಲ್ಲಿ ಶ್ರೀಕಂಠಯ್ಯನವರು ಗ್ರೀಕ್ ಪುರಾಣಗಳಲ್ಲಿ ಬರುವ ಡ್ರೇಗನ್ (dragon's teeth) ಹಲ್ಲುಗಳ ಕಥೆಯನ್ನು ಬಳಸಿಕೊಂಡಿದ್ದಾರೆ. ಕ್ಯಾಡ್ಮಸ್ ಎಂಬುವನು ಆ ಹಲ್ಲುಗಳನ್ನು ಬಿತ್ತಿದಾಗ ಒಂದೊಂದು ಹಲ್ಲಿನಿಂದಲೂ ಒಬ್ಬೊಬ್ಬ ಯೋಧ ಹುಟ್ಟಿದ. ಕನಕೋರ್ಣವನ್ನು ತರಹೊರಟ ಜೇಸನ್ ಎಂಬುವನೂ ಹಾಗೆಯೇ ಡ್ರೇಗನ್ ಹಲ್ಲುಗಳನ್ನು ಬಿತ್ತಿದ. ಹುಟ್ಟಿದ ಯೋಧರೆಲ್ಲ ಪರಸ್ಪರ ಹೊಡೆದಾಡಿ ಸತ್ತರು. 'ಅಶ್ವತ್ಥಾಮನ್' ನಾಟಕದಲ್ಲಿ ಇದು ವಿದೇಶೀಯವಾಗಿ ಕಂಡರೂ ಶಕ್ತಿಯುಕ್ತವಾದ ರೂಪಕವೆಂದು ಅದನ್ನು ಸ್ವಾಗತಿಸಬಹುದು.

ಕರ್ಮಮನ್ ಈ ಪರಿ ಮರಿಗೆ ಮರಿ ಇಕ್ಕುತಿರ್ಕುಂ
ಕ್ಷಮೆಯಿಂದೆ ಸಮೆಯದಿರೆ ಮರುಕೊಳಿಸುತಿರ್ಕುಂ (896-7)

ಮೇಳದವರು ಕೃಷ್ಣನನ್ನು ಬೇಡುತ್ತಾರೆ: "ಶಾಂತಿಯನ್ ಕಲಿಸು ಬಾ ನಿಲಿಸು ಬಾ ತಂದೆ." ಶಾಂತಿಯನ್ನು ಕಲಿಸುವ ಕೃಷ್ಣನ ಉದಾತ್ತ ವಾಣಿ ಇದು;

ಆ ರುದ್ರನಾಪರಮ
ನಾಜ್ಞೆಯಿನ್ ಪೇಳ್ದಪೆನ್, ಹೃದಯಮನ್ ಕಲ್ ಮಾಡಿ
ತಡೆಯದಿರು ಸತ್ತಂಗೆ ನಡೆವ ಸಂಸ್ಕಾರಮನ್
ದ್ವೇಷಮೆನಿತಿರ್ದೊಡಂ ತುಳಿಯದಿರು ಧರ್ಮಮನ್ (921 ff)

ಭೀಮನ ದೃಷ್ಟಿಯಲ್ಲಿ ಅಶ್ವತ್ಥಾಮನ ಮೇಲೆ ಸೇಡು ತೀರಿಸಿಕೊಳ್ಳದಿದ್ದರೆ ಪಾಂಡವರ ಜಯ ನಿರರ್ಥಕ. ಆದರೆ ಕೃಷ್ಣ ಹೇಳುತ್ತಾನೆ (ಮೂಲ ನಾಟಕದಲ್ಲೂ ಇದೇ ಅರ್ಥ ಬರುವ ಮಾತುಗಳಿವೆ):

ಕೆಳೆಯಂಗೆ ಸೋಲ್ವುದೆ ಜಯಂ; ಕ್ಷಮೆಯೇ ತಾನ್ ಜಯಂ;
ಕ್ರೋಧಮನ್ ತುಳಿದಿಟ್ಟು, ಬಲ್ವಿಡಿದು ಧರ್ಮಮನ್,
ಬಗೆಯೊಡನೆ ಪೋರಾಡುವುದೇ ಜಯಂ. (949 ff)

ಅಶ್ವತ್ಥಾಮನನ್ನು ಏರಿಸಿರುವುದಕ್ಕಿಂತ ಹೆಚ್ಚಾಗಿ ಧರ್ಮವನ್ನು ಅದಕ್ಕೆ ಸಲ್ಲಬೇಕಾದ ಸ್ಥಾನಕ್ಕೆ ಏರಿಸಿರುವುದು ಗಮನಾರ್ಹ. ಶ್ರೀಕಂಠಯ್ಯನವರು ಸೋಫೊಕ್ಲೀಸನಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ರುದ್ರನನ್ನೂ ಅವನ ನಿಜವಾದ ಸ್ಥಾನಕ್ಕೆ ಏರಿಸಿದ್ದಾರೆ. ಹಿಂದೆ ರುದ್ರ "ನಗೆ ಇನಿದು—ಪೆಗೆಗಳನ್ ನಗುವ ನಗೆ" ಎಂದಿದ್ದನಷ್ಟೆ. ಅಶ್ವತ್ಥಾಮನನ್ನು "ಎಮ್ಮೆಲ್ಲರ ದೈವಂ ಆ ರುದ್ರನ್ ಅವನೆ ಕಯ್ಬಿಟ್ಟನ್" ಎಂದು ಭೀಮ ವಾದಿಸಿದಾಗ ಕೃಷ್ಣ ಹೇಳುತ್ತಾನೆ:

ಬಿಟ್ಟನೋ, ತೊಟ್ಟನೋ, ನಾಮೆಂತು ಕಂಡೆಪೆವು
ಆ ರುದ್ರಹೃದಯಮನ್? ಪರಿಶುದ್ಧನನ್ ಮಾಡಿ
ಆತ್ಮಮನ್ ಸೆಳೆವನೆನ್ಬೆನ್ (934 ff)

ಈ ನಾಟಕದ ಪಾತ್ರಗಳ ವಿಷಯವಾಗಿ ಕೆಲವು ಮಾತುಗಳನ್ನು ಹೇಳಿ ಈ ಅಧ್ಯಾಯವನ್ನು ಮುಗಿಸಬಹುದು. ಪ್ರಾಸಂಗಿಕವಾಗಿ ಅಶ್ವತ್ಥಾಮನನ್ನು ಕುರಿತು ಒಂದೆರಡು ಮಾತು ಹೇಳಿದ್ದಾಗಿದೆ. ಗ್ರೀಕ್ ವೀರರಲ್ಲಿ ಅಕಿಲೀಸನನ್ನು ಬಿಟ್ಟರೆ ಏಜಾಕ್ಸನೇ ಮೊದಲಿಗನೆಂಬುದನ್ನು ಕಂಡಿದ್ದೇವೆ. ಮಹಾಭಾರತದ ವೀರರ ಗುಂಪಿನಲ್ಲಿ ಅಶ್ವತ್ಥಾಮನೂ ಸೇರಿದ್ದಾನೆ. ಆದರೆ ಅವನಿಗೆ ಹೆಚ್ಚಿನ ಸ್ಥಾನವೇನೂ ಇಲ್ಲ.

ಅವನಿಗೆ ಸೇನಾಪತಿಯ ಪಟ್ಟ ಬರುವುದು ಭೀಷ್ಮ, ದ್ರೋಣ, ಕರ್ಣ, ಶಲ್ಯ ಇವರೆಲ್ಲರ ಸರದಿ ಮುಗಿದಮೇಲೆ. ಕೊನೆಯಲ್ಲಿ ಅವನಿಗೆ ಆ ಪಟ್ಟ ಬಂದದ್ದೂ ಕೂಡ ಸಾಯಲಿದ್ದ ದುರ್ಯೋಧನ ಕೊನೆಯದಾಗಿ ಅವನಿಗೆ ಮಾಡಿದ ಒಣ ಸನ್ಮಾನವಾಗುತ್ತದೆ—ಆ ವೇಳೆಗೆ ಅಶ್ವತ್ಥಾಮ ಸೇನೆಯಿಲ್ಲದ ಸೇನಾಪತಿ! ಆದ್ದರಿಂದ ಶ್ರೀಕಂಠಯ್ಯನವರು ಇವನನ್ನು ಘನತೆಗೆ ಏರಿಸುವುದಕ್ಕೆ ಏಜಾಕ್ಸನ ಘನತೆಯನ್ನು ಯನ್ನು ಎರವು ತಂದು ಇವನಿಗೆ ದಾನ ಮಾಡಬೇಕಾಯಿತು. ಈ ಕೆಲಸ ಯಶಸ್ವಿಯಾಗಿಯೇ ನಡೆದಿದೆ. ಅಶ್ವತ್ಥಾಮನಲ್ಲಿ ರುದ್ರನ ಅಂಶವಿದೆಯೆಂಬ ಸೂಚನೆ ಮಹಾಭಾರತದಲ್ಲಿಯೇ ಇದೆ. ಶ್ರೀಕಂಠಯ್ಯನವರು ಅದನ್ನೂ ಉಪಯೋಗಿಸಿಕೊಂಡು ಅವನನ್ನು 'ರುದ್ರಾವತಾರ' ನನ್ನಾಗಿ ಮಾಡಿದ್ದಾರೆ. ರುದ್ರನು ಅವನನ್ನು "ಬೀರರ ಬೀರ, ದೈವಮನ್ ಲೆಕ್ಕಿಸದ ರುದ್ರಾವತಾರ!" ಎಂದು ಅಣಕವಾಡಿದರೂ ಅವನು ರುದ್ರನ ಮೆಚ್ಚಿಕೆಯನ್ನು ಗಳಿಸಿರುವ ರುದ್ರಾವತಾರನೇ ಹೌದು. "ಆರಿರ್ದರ್ ಈತನಿನ್ ಜ್ಞಾನಿಯುಂ ಶೂರನುಂ?" ಎಂದು ರುದ್ರನೇ ಹೊಗಳಿದ್ದಾನಷ್ಟೆ.

ಅಶ್ವತ್ಥಾಮನು ಒಂದು ಕಡೆ ಮಹಾಭಾರತದ ಅಶ್ವತ್ಥಾಮನಿಂದಲೂ ಮತ್ತೊಂದು ಕಡೆ ಏಜಾಕ್ಸ್‌ನಿಂದಲೂ ಒಳ್ಳೆ ಗಟ್ಟಿಮುಟ್ಟಾದ 'ಅಹಂ' ಅನ್ನು ಪಡೆದಿದ್ದಾನೆ. ನೀತಿಯ ದೃಷ್ಟಿಯಿಂದ ಇವನು ಮಹಾಭಾರತದ ಅಶ್ವತ್ಥಾಮನಿಗಿಂತ ಉತ್ತಮ—ಏಕೆಂದರೆ ಇವನು ಕೊಲೆ ಮಾಡಿದ್ದು ಬುದ್ಧಿಪೂರ್ವಕವಾಗಿ ಅಲ್ಲ. ಹಾಗೆಯೇ ಇವನು ಏಜಾಕ್ಸ್‌ನಿಗಿಂತಲೂ ಉತ್ತಮ—ಏಕೆಂದರೆ ಇವನು ಕೊಲೆ ಮಾಡಿದ್ದಕ್ಕೆ ಕಾರಣ ಸ್ವಾಭಿಮಾನವಲ್ಲ, ಸ್ವಾಮಿಭಕ್ತಿ. ಸೋಫೊಕ್ಲೀಸನ ನಾಟಕದ ಮೊದಮೊದಲಲ್ಲಿನ ಏಜಾಕ್ಸ್ 'magnificent brute' ಎನ್ನಿಸಿಕೊಂಡಿದ್ದಾನೆ. ಅಶ್ವತ್ಥಾಮನಲ್ಲೂ ಈ ಪಾಶವೀ ಗುಣ ಅವನ 'ಕೊಲ್ವ ಗರ್ವ'ದಲ್ಲಿ ಮಾತ್ರವಲ್ಲದೆ, ಅವನು ಭಾರ್ಗವಿಯೊಡನೆ ಮಾತಾಡುವ ರೀತಿಯಲ್ಲೂ ಸ್ವಲ್ಪ ಕಾಣಿಸಿಕೊಳ್ಳುತ್ತದೆ. ತಾಯಿಯಿಲ್ಲದ ತಬ್ಬಲಿಯಾದ ತನ್ನನ್ನು ಸಾಕಿ ಸಲಹಿದ ವೃದ್ಧೆಯೊಡನೆ ಅವನ ಮಾತು ಮತ್ತಷ್ಟು ಮೃದುವಾಗಬೇಕಿತ್ತು. ಅವಳೊಡನೆ ಯಾವಾಗಲೂ ಗಡುಸಾಗಿಯೇ ಮಾತನಾಡುತ್ತಾನೆಂದಲ್ಲ. ಒಂದು ಸಾರಿ, ರುದ್ರಶಕ್ತಿಯನ್ನು ಹರಸುವ ಸಂದರ್ಭದಲ್ಲಿ, ಆ ಹುಡುಗನಿಗೆ ಭಾರ್ಗವಿಯನ್ನು ಬೆರಳಿಟ್ಟು ತೋರಿಸಿ "ಇವಳ, ಈ ನಮ್ಮ ಮನೆಯ ದೇವತೆ ಇವಳ, ಕಣ್ಣ ಮಣಿಯಾಗಿ ನೀನ್ ಬಾಳಯ್" (456-7) ಎಂದು ಬಹಳ ಗೌರವದಿಂದಲೇ ಅವಳನ್ನು ನಿರ್ದೇಶಿಸುತ್ತಾನೆ. ರುದ್ರಶಕ್ತಿಗೆ ಹೇಳಿದ ಆ ಮಾತು ಭಾರತದ ಅತ್ಯುತ್ತಮ ಸಂಪ್ರದಾಯಕ್ಕೆ ಅನುಗುಣವಾದದ್ದು. ಮತ್ತೊಂದು ಸಾರಿ ಅವಳ 'ಮುಂದುಗಾಣ್ಕೆಯನ್'ಹೊಗಳುತ್ತಾನೆ. ಆದರೆ ಮತ್ತೆ ಕೆಲವು ಸಂದರ್ಭಗಳಲ್ಲಿ ಅವನು ಆಕೆಯೊಡನೆ ನಿಷ್ಠುರವಾಗಿ, ಕಟುವಾಗಿ (ತಿರಸ್ಕಾರದಿಂದ ಎಂದರೂ ತಡೆದೀತು) ಮಾತಾಡುತ್ತಾನೆ.

'ಇಂತಾಡದಿರು, ಬೇಡ; ಬೇಡಿಕೊಳ್ವೆನ್ ಕಂದ'' ಎಂದು ಭಾರ್ಗವಿ ಹೇಳಿದ್ದಕ್ಕೆ ಅಶ್ವತ್ಥಾಮನ ಉತ್ತರ: ''ಪೋಗು ಪೋಗೆಲಗೆ, ತೊಲಗು, ತೊಲಗು''! (309) ''ಕೇಳದಿರು ಕೆಣಕದಿರು, ನಿನಗಡಕಮ್ ಒಳ್ಳಿತ್ತು'' (474)—ಇಂಥ ಮಾತು ಗಳನ್ನು ಏಜಾಕ್ಸ್ ತನ್ನ ದಾಸಿಗೆ ಹೇಳಬಹುದೇನೊ; –ಅವನಿಗೂ ಅವು ಕೀರ್ತಿ ತರಲಾರವು; ಅವು ಅಶ್ವತ್ಥಾಮನು ಭಾರ್ಗವಿಗೆ ಹೇಳತಕ್ಕುವಲ್ಲ. ಭಾರ್ಗವಿಗೆ ಇಂಥ ಮಾತು ಅಭ್ಯಾಸವಾಗಿರುವಂತೆ ತೋರುತ್ತದೆ, ಅವಳು ಹೇಳುವುದು ನೋಡಿ ದರೆ: ''ಪೊಯ್ವೆತ್ತ ಪಾವಂತೆ ಮೊರೆದು, ಪೆಣ್ ಬಲ್ಲ ಮಾತಿನೊಳ್, ಬಾಯ್ ಮುಚ್ಚಿರಲ್ ಚೆಲ್ವು ಪೆಣ್ಣಿಂದು ಗದರಿ ಸೂಂಕಿ, ಪೊರಮೊಟ್ಟನ್", (252-4) ಒಂದು ಸಾರಿಯಂತೂ ಭಾರ್ಗವಿ ಎದುರಿಗೇ ಇದ್ದರೂ ಅವನು ಅವಳೊಡನೆ ನೇರ ವಾಗಿ ಮಾತಾಡದೆ ''ಪೇಳ್ದ ಮಾತು ಕೇಳ್ವಳೋ?'' ಎಂದು ಮೇಳ ನಾಯಕನಿಗೆ ಪ್ರಶ್ನೆ ಹಾಕುತ್ತಾನೆ. (ಪ.436). ಈ ಸಂದರ್ಭಗಳಲ್ಲಿ ಶ್ರೀಕಂಠಯ್ಯನವರ ಬರ ವಣಿಗೆ ಸ್ವಲ್ಪ ಹದ ತಪ್ಪಿದೆ; ಗ್ರೀಕ್ ಮೂಲದ ಪ್ರಭಾವ ಎಷ್ಟಿರಬೇಕಾಗಿತ್ತೋ ಅದಕ್ಕಿಂತ ಹೆಚ್ಚಾಯಿತೆಂದು ತೋರುತ್ತದೆ.

ತನ್ನ ದಾರುಣವಾದ ಅನುಭವದ ಫಲವಾಗಿ ಅಶ್ವತ್ಥಾಮನಲ್ಲಿ ಹೊಸದೊಂದು ನೀತಿ ಪ್ರಜ್ಞೆಯ ಉದಯವಾಯಿತೆಂದಾಗಲಿ, ಅವನ ಆತ್ಮ ತನ್ನಲ್ಲಿದ್ದ ಮಾಲಿನ್ಯ ವನ್ನು ಹೊರಹಾಕಿ ಪರಿಶುದ್ಧತೆಯನ್ನು ಪಡೆಯಿತೆಂದಾಗಲಿ ಹೇಳಲಾಗುವುದಿಲ್ಲ. ಇದು ಶ್ರೀಕಂಠಯ್ಯನವರು ಪಾತ್ರನಿರೂಪಣೆ ಮಾಡಿರುವ ರೀತಿಯಲ್ಲಿ ದೋಷವನ್ನು ಬೆದಕುವ ಮಾತಲ್ಲ. ಅಶ್ವತ್ಥಾಮನ ಆತ್ಮ ಪರಿಶುದ್ಧವಾದಂತೆ ಅವನನ್ನು ಚಿತ್ರಿಸ ಬೇಕೆಂಬ ನಿಯಮವೇನೂ ಇಲ್ಲ. ಅವನು ಮೂಕಪ್ರಾಣಿಗಳನ್ನೂ ಹೆಂಗಸರು ಮಕ್ಕಳನ್ನೂ ಕೊಂದದ್ದಕ್ಕಾಗಿ ನಾಚಿಕೆಪಟ್ಟ, ಅಸಹ್ಯಪಟ್ಟ—ಅದು ನಿಜ. ಒಂದೆ ರೆಡು ಸಾರಿ 'ಪಾಪಿ' ಎಂದು, 'ಕಟುಕನ್' ಎಂದು ತನ್ನನ್ನೇ ಹಳಿದುಕೊಂಡ– ಇದರಲ್ಲಿ ಪಶ್ಚಾತ್ತಾಪದ ಸುಳಿವಾದರೂ ಇದೆಯೆಂದು ಒಪ್ಪಬೇಕು. ಆದರೂ ಅವನಿಗೆ ತನಗೆ ಬಲಿಯಾಗಿ ಸತ್ತವರ ವಿಷಯದಲ್ಲಿ ಮರುಕಕ್ಕಿಂತ, ಅವರನ್ನು ಕೊಂದದ್ದಕ್ಕೆ ಅವನು ಪಡುವ—ಅಷ್ಟೇನೂ ಹೆಚ್ಚಿನ ಪ್ರಮಾಣದ್ದಲ್ಲ—ಪಶ್ಚಾ ತ್ತಾಪಕ್ಕಿಂತ,''ಎಲ್ಲರೆದುರಿಗೂ ನಾನು ಕೀಳಾದೆನಲ್ಲ, ಎಲ್ಲರ ಗೌರವವನ್ನು ಕಳೆದು ಕೊಂಡೆನಲ್ಲ'' ಎಂಬ ಭಾವನೆಯೇ ಹೆಚ್ಚಾಗಿದೆ.

ಅಶ್ವತ್ಥಾಮನಲ್ಲಿರುವ ದೋಷ ಮೂರು ರೀತಿಯದು : ೧) ಅವನು ಮಾಡ ಹೊರಟ ಕೆಲಸ—ಪಾಂಡವರ ಲೋಕಕ್ಕೆ ಪ್ರಳಯವನ್ನು ತರುವುದು ("ಪಾಂಡವರ ಲೋಕಕೆನ್ನಿನ್ ಪ್ರಳಯಂ", ಎಂದು ಅವನು ರುದ್ರನಿಗೆ ಹೇಳಿದ.), ಮುಖ್ಯವಾಗಿ ಭೀಮನನ್ನೂ ಕೃಷ್ಣನನ್ನೂ ಕೊಲ್ಲುವುದು. ರುದ್ರನು ಬೀಸಿದ ಮಾಯೆಯಿಂದಾಗಿ ಈ ಕೊಲೆ ನಡೆಯಲಿಲ್ಲ. ಆದರೂ ಅಶ್ವತ್ಥಾಮನ ಉದ್ದೇಶ ದೋಷಪೂರಿತವಾದದ್ದು ತಾನೆ! ಅದರಲ್ಲೂ ನಿರಾಯುಧರಾಗಿ ನಿದ್ದೆಯಲ್ಲಿರುವವರನ್ನು, ಅವನು ಕೊಲ್ಲಲು

ಹೊರಟದ್ದು ! (ಮಹಾಭಾರತದಲ್ಲಿ ಈ ಬಗೆಯ ಕೊಲೆ ನಡೆದೇ ಹೋಗುತ್ತದೆ) ಅಶ್ವತ್ಥಾಮನ ಮನಸ್ಸಿನಲ್ಲಿ ಇದು ದೋಷವೆಂಬ ಅರಿವು ಕಾಣುವುದೇ ಇಲ್ಲ. ಅವನ ದುಃಖ "ಪರಮ ನೀಚರನ್ ನುಣ್ಚಿ" ಹೋಗಬಿಟ್ಟು ಪಶುಗಳನ್ನು ಕೊಂದೆನೆಂದು. ಅವರನ್ನು (ಕೃಷ್ಣ-ಭೀಮರನ್ನು) ಕೊಂದಿದ್ದರೆ ಅವನೇನೂ ಪಶ್ಚಾತ್ತಾಪ ಪಡುತ್ತಿರಲಿಲ್ಲ. ಈಗಲೂ ಅವನು ಕೃಷ್ಣನನ್ನೂ ಭೀಮನನ್ನೂ ಕೊಲ್ಲುವುದು ಸಾಧ್ಯವಾದರೆ ಸಂತೋಷದಿಂದ ಸತ್ತಾನು.

ಓ ರುದ್ರ ! ಗುರುದೇವ ! ಎನ್ನ ಗುರುವಿನ ಗುರುವೆ !
ಕೊಲೆ ಕುಡಾ ಮಾಯಾವಿಯೋರ್ವರನ್, ಕ್ಷುದ್ರನನ್ !
ಕೀಳ್ ಭೀಮನೊರ್ವನನ್, ಬಳಿಕೆನ್ನುಮನ್ ಕೊಳ್.

(೩೨೫–೨೭)

(ಸದ್ಯ ಇದು "ನಿದ್ರೆಯಲ್ಲಿರುವವರನ್ನೂ ನಿರಾಯುಧರನ್ನೂ ಕೊಲ್ಲಗೊಡು" ಎನ್ನುವ ಪ್ರಾರ್ಥನೆಯಲ್ಲ !)

ಅವನು ಸಾಯುವುದಕ್ಕೆ ಒಂದೆರಡು ನಿಮಿಷ ಮುಂಚೆ 'ಉಗ್ರಕನ್ನಿಕೆ' ಯರನ್ನು (ಇವರು ಗ್ರೀಕ್ ಪುರಾಣಗಳಿಂದ ಎರವು ತಂದ ಸೇಡು ಮಾರಿಯರು) ಪ್ರಾರ್ಥಿಸುತ್ತಾನೆ :

ಬೆನ್ನಮರ್ದುರ್ ಗಿಡಿಯಿಮ್ ಅವರ್ಗವರವರ ಕರ್ಮಂ !
ಬನ್ನಿಮ್, ಏಳಿಂ, ಕ್ರೂರಮಾತೆಯರ, ರೌದ್ರಿಯರ,
ಕಟ್ಟುಗ್ರಮ್ ಎರಗಿಂ,
ತೀರಿಸಿಂ ನಿಮ್ಮ ಕೋಪಂಗಳನ್ ಪಾಂಡವರ ಸೇನೆಯೊಳ
ಗೊಂದುಳಿಯಗುಡದೆ ! (೬೫೭–೮)

ಅವನಲ್ಲಿ ದ್ವೇಶ ಏನೇನೂ ಕಡಿಮೆಯಾಗಿಲ್ಲ, ಮನಸ್ಸೂ ತಿಳಿಯಾಗಿಲ್ಲ. ಅವರಿಗವರ ಕರ್ಮವನ್ನು 'ಗಿಡಿಯಿಮ್' ಎಂಬ ಪ್ರಾರ್ಥನೆ ಅಶ್ವತ್ಥಾಮನ ಬಾಯಿಂದ ಬರಬಾರದು. ಸೇಡುಮಾರಿಯರು ಆ ಪ್ರಾರ್ಥನೆಯನ್ನು ನಿಷ್ಪಕ್ಷಪಾತವಾಗಿ ಸಲ್ಲಿಸಿದರೆ ಪ್ರಾರ್ಥಿಸಿದವನ ಗತಿಯೇನು !

೨) ಅಶ್ವತ್ಥಾಮನ ಎರಡನೆಯ ಅಪರಾಧ ಅವನು ಮಾಡಹೊರಟದ್ದಲ್ಲ, ವಾಸ್ತವವಾಗಿ ಮಾಡಿದ್ದು—ಪಶುಗಳನ್ನು, ಹೆಂಗಸರನ್ನು, ಹಸುಳೆಗಳನ್ನು ಕೊಂದದ್ದು. ಇದು ನಡೆದದ್ದು ರುದ್ರನ ಮಾಯೆಯಿಂದಾಗಿ ; ಆದ್ದರಿಂದ ತಪ್ಪು ಅಶ್ವತ್ಥಾಮನದ್ದಲ್ಲ ಎನ್ನಬಹುದು. ಇದರ ಹೊಣೆ ರುದ್ರನ ಮೇಲೆಯೇ ಒರಗಬೇಕು. ಅವನು ಪಾಂಡವರನ್ನು ರಕ್ಷಿಸಿದ್ದೇನೋ ಸರಿಯೆ ; 'ದೈವಮನ್ ಲೆಕ್ಕಿಸದ' ಅಶ್ವತ್ಥಾಮನನ್ನು ಶಿಕ್ಷಿಸಿದ್ದು........ಅದನ್ನೂ ಆಗಲಿ ಎಂದು ಅರಿ

ಮನಸ್ಸಿನಿಂದ ಒಪ್ಪೋಣ. ಆದರೆ ಹೆಂಗಸರು ಮಕ್ಕಳನ್ನು ಏಕೆ ಕೊಲ್ಲಗೊಟ್ಟನೋ! ಅವರು ಮಾಡಿದ ಅಪರಾಧವೇನು ? ಅದು ಹೋಗಲಿ, ಈಗ ನಾವು ಯೋಚಿಸುತ್ತಿರುವುದು ಅಶ್ವತ್ಥಾಮನ ವಿಷಯ, ಅವನು ಕೊಲೆ ಮಾಡಿದ್ದು ಭ್ರಮೆಯಲ್ಲಿದ್ದಾಗ. ಆದರೆ ಭ್ರಮೆ ಕಳೆದ ಮೇಲೆ ಅವನು ಆ ಕೊಲೆಯನ್ನು ಯಾವ ದೃಷ್ಟಿಯಿಂದ ನೋಡುತ್ತಾನೆ ? ಮೇಲೆ ಹೇಳಿರುವಂತೆ ಅವನ ಹಿನ್ನೋಟದಲ್ಲಿ 'ಪಾಪಿ', 'ಕಟುಕನ್' ಎಂಬ ಪದಗಳಿಂದಲೂ "ಪಶುಗಳನ್ ಪೊಯ್ದು ನೆತ್ತರನ್ ಕೋಡಿ ಕೆಡಪಿದಯ್ !" ಎಂಬ ಮಾತಿನಿಂದಲೂ ಸೂಚಿತವಾಗುವ ಪಶ್ಚಾತ್ತಾಪದ ಎಳೆಯೊಂದಿದೆ. ಆದರೆ ಅದು ಬಹಳ ತೆಳುವಾದ ಎಳೆ. ಅದಕ್ಕಿಂತ ಅವನ ಮನಸ್ಸಿನಲ್ಲಿ ಪ್ರಬಲವಾಗಿರುವ ಭಾವನೆ "ನನ್ನಂಥ ಶೂರ ಈ ಕೆಲಸವನ್ನು ಮಾಡಿ ಹೆಸರು ಕೆಡಿಸಿಕೊಂಡೆನಲ್ಲ" ಎಂಬುದು. ಈ ಮಾತುಗಳನ್ನು ನೋಡಿ:

ಕಾಣ, ಕಾಣ, ಕೆಚ್ಚೆದೆಯ ಶೂರನನ್ !
ಪಗೆಗೆ ತೆಗೆಯದಾ ರಣದ ಧೀರನನ್ !
ತುರುಗಳ್ ಅರಿಯದುವನ್ ಒರ್ವನ್ ಇರಿದವನ್ !

ಆಹ ಧೀರನ್ ! ಆಹ ಶೂರನ್ !
ಪೆಸರೊ, ಹೋ, ರುದ್ರಾವತಾರನ್ ! (೩೦೩ ff)

ಇದು ತನ್ನನ್ನು ತಾನೇ ಹಳಿದುಕೊಳ್ಳುವ ಮಾತು ಎಂದು ತೋರಿದರೂ ನಿಜವಾಗಿ ಅದರಲ್ಲಿರುವ ಭಾವನೆ "ಇತರರು ನನ್ನನ್ನು ಕುರಿತು ಹೀಗೆ ಆಡಿಕೊಳ್ಳುತ್ತಾರೆ" ಎಂಬುದು. ತಾನು ಎಲ್ಲರಿಗೂ ನಗೆಪಾಟಲಾದೆನೆಂಬ ಅರ್ಥವುಳ್ಳ ಮಾತು ಅವನ ಬಾಯಿಂದ ಮತ್ತೆ ಮತ್ತೆ ಬರುತ್ತದೆ :

ಎಲವೊ ಕೃಷ್ಣಾ ! ಮರ್ಮಘಾತಕಾ
. . . . . .
ನಿಲಿಸಲಾರದೆಯೆ ನಗುತುಮಿರ್ಪೆಯೇ ! (೩೧೭, ೩೨೧)
ಬಾನವರ ಮಾನವರ ಕಣ್ಣೊಳ್ ಇನ್ನೆಪ್ಪೆನ್. (೩೩೮)
ಪುಡಿಯೊಳಗೆ ಪುಡಿಯಾದೆನ್-
ನಾಣ ನುಡಿಯಾದೆನ್. (೩೬೭-೮)
ಮಾನಂಗೆಟ್ಟು ಸಾವೆನ್. (೩೭೫)
ಬೀರರ್ ನಗುವ ಪಾಡಾದವನ್. (೩೮೮-೯)

ಇದೆಲ್ಲ ಮಾತಿಗೆ ಮೂಲವಾದದ್ದು 'ಅವನ ಅಹಂ'ಕಾರ., ಅದರ ಉರುಬಿನಲ್ಲಿ ಅವನು ಕೃಷ್ಣನ ಘನತೆಯನ್ನು ಕಾಣಲಾರ-ಕೃಷ್ಣನಿಗೆ ಅಶ್ವತ್ಥಾಮನ ವಿಷಯ

ದಲ್ಲಿ ಸಹಾನುಭೂತಿಯಿತ್ತೇ ಹೊರತು ತಿರಸ್ಕಾರವಲ್ಲ! 'ಅಹಂ'ಕಾರ ಅಶ್ವತ್ಥಾಮ
ನನ್ನು ಆತ್ಮಾನುಕಂಪದ ಕಮರಿಗೂ ತಳ್ಳುವುದರಲ್ಲಿತ್ತು :

ಬರ್ದುಕಿನೊಳಮ್ ಆವ ಸುಖಮನ್ ಕಣ್ಡೆನ್ ? ಆರ್ಗೆ ನಾನ್
ಪ್ರಾಣಮನೆ ತೆರುವೆನ್,
ಆತ್ಮಕಲ್ಯಾಣಮನ್ ಒತ್ತರಿಸಿ ನಾನ್ ಆರ ಕುರಿತುದನೆ ಕುರಿವೆನ್,
ಆ ಸ್ವಾಮಿಗಾನಲ್ತು ಮೊದಲೊಲ್ಮೆ, ಕರ್ಣನ್ .
ಸೇನಾಧಿಪತ್ಯಮೇ, ಕರ್ಣನ್;
ಶೃಂಗಾರಮೇ, ಕರ್ಣನ್ ; ಎಂಜಲ್, ಎಂಜಲ್ ಎನಗೆ ಪಿಡುಕಂಗೆ-
ಹುಂ! (೩೭೬-೯)

ಸಾಯುವುದಕ್ಕೆ ಒಂದು ನಿಮಿಷ ಮುಂಚೆಯೂ ಈ ಮನೋವೃತ್ತಿ
ಮರುಕಳಿಸಿತು : ಆಹ ಏನೊರಲ್ವರ್
ಕೇಳ್ದೊರ್ ಈ ಕಥೆಯನ್ ! ಊರೇ ಮೊಳಂಗದೇ
ಗೋಳಾಟಮಿಟ್ಟು !
ಆದರೆ ಬೇಗಲೇ "ಸಾಲ್ಗುಂ, ಸಾಲ್ಗುಮ್ ಈ ಕನಿಕರಂ"
(೭೬೨-೪)

ಎಂದುಕೊಂಡು ಪಾರಾದ.

೩) ಅಶ್ವತ್ಥಾಮನ ಮೂರನೆಯ ಅಪರಾಧ : ದೈವದ ಎದುರಿನಲ್ಲಿ
ಔದ್ಧತ್ಯದಿಂದ ನಡೆದುಕೊಂಡದ್ದು. ಇದಕ್ಕೂ ಮೂಲ ಅಹಂಕಾರವೇ.

ಎಲೆ ರುದ್ರ, ದೂರದೊಳ್ ನೋಡುತಿರು, ವೀರ್ಯಂ
ಮಾನುಷಮ್ ಅದೆಂತಿರ್ಪುಮೆಂಬುದನ್ ! (೪೦-೪೧)
ಮತ್ತೀನ್ ಕೇಳ್, ರುದ್ರ, ಕೊಟ್ಟಪೆನ್. (೯೯)

ಇಂಥ ಮಾತುಗಳಲ್ಲಿರುವ ಔದ್ಧತ್ಯವನ್ನು ಕಂಡೇ ರುದ್ರ "ನಿನ್ನಿಚ್ಚೆಗೆನ್ನಿಚ್ಚೆ-ಯೇನ್ ?" ಎಂದು ಅವನನ್ನು ಹಂಗಿಸುತ್ತಾನೆ. ಪುರಾತನ ಗ್ರೀಕರ ದೃಷ್ಟಿಯಲ್ಲಿ ಈ ಔದ್ಧತ್ಯ ನಮಗೆ ತೋರುವುದಕ್ಕಿಂತ ಬಹಳ ಹೆಚ್ಚಿನ ಅಪರಾಧ. ಅವರ ದೃಷ್ಟಿ ರುದ್ರನ ಈ ಮಾತಿನಲ್ಲಿ ಸ್ಪಷ್ಟವಾಗಿ ಹೊರಬಿದ್ದಿದೆ.

ಇಂತಪ್ಪ ನೋಟಂಗಳನ್ ನೋಡಿ, ದೈವದೊಳ್
ಸೊರ್ಕು ನುಡಿ ನುಡಿಯದಿರ್ ; ಕೊರ್ಬದಿರ್, ನಿನಗೊರ್ಮೆ
ಸಿರಿಯೆನಿತು, ಬಲುಮೆನಿತು, ಕಯ್ಯೆನಿತು ನಡೆದೊಡಂ !
ಒಂದು ಪಗಲ್ ಎತ್ತುವುದು, ಒಂದು ಪಗಲ್ ಉರುಳಿಪುದು

ಮಾನುಷಮನ್ ಎಲ್ಲಮನ್, ಮಿತಿಯರಿದು ನೆಗಳ್ವರ್ಗೆ
ದೇವರ್ಕಳ್ ಒಸೆದಪರ್—ಮುರಿದಪರ್ ಮಿಕ್ಕರನ್.

(೧೧೨-೧೧೭)

ದೈವದ ಎದುರಿನಲ್ಲಿ 'ಮಿತಿಯರಿದು' ನಡೆಯದಿರುವುದು ದೊಡ್ಡ ಅಪರಾಧ. ಅಶ್ವತ್ಥಾಮ ಈ ಅಪರಾಧಕ್ಕಾಗಿ ಪಶ್ಚಾತ್ತಾಪ ಪಡುವುದೇ ಇಲ್ಲ. ಭಾರ್ಗವಿ 'ದೇವತೆಗಳಾಣೆ' ಇಟ್ಟುಕೊಂಡಾಗ ಅವನು ಖಡಾಖಂಡಿತವಾಗಿ ಹೇಳುತ್ತಾನೆ:

ಅರಿಯೆಯಾ ದೇವತೆಗ
ಳೆನಗವರ್ ಇರ್ದಾ ಕ್ಷಣಂ ಪರಿದು ಪೋಯ್ತೆಂಬುದನ್ ?

(೪೭೭-೮)

ಒಟ್ಟಿನಲ್ಲಿ ಅವನ ಮನಸ್ಸಿನಲ್ಲಿ "ನಾನು ಭಯಂಕರ ಕೃತ್ಯವನ್ನು ಮಾಡಿ ನೀತಿಗೆಟ್ಟೆ" ಎಂಬ ಅರಿವು ಬಹಳ ಕಡಮೆ ; "ಹೇಡಿ ಮಾಡಬಹುದಾದ ಕೆಲಸವನ್ನು ಮಾಡಿ ಮಾನಗೆಟ್ಟೆ" ಎಂಬ ಅರಿವು ಮನಸ್ಸನ್ನು ತುಂಬಿದೆ.

ಅವನ ಆತ್ಮಹತ್ಯೆಗೆ ಕಾರಣವಾದದ್ದೂ ಈ ಅವಮಾನವೇ ; "ಅಧರ್ಮಕ್ಕೆ ಕೈಹಾಕಿ ನನ್ನ ಬದುಕನ್ನು ಬರಡುಮಾಡಿಕೊಂಡೆ, ಇನ್ನು ಬದುಕಿ ಫಲವೇನು !" ಎಂಬ ಭಾವನೆಯಲ್ಲ. "ಕಂಡಂತೆ ದೇವರ್ಕಳ್ ಒಲ್ಲದನ್ ; ಬೀರರ್ ನಗುವ ಪಾಡಾದವನ್ ;..........ಅವ ಮೊಗದೊಳ್ ಬರ್ಪ ನಂಟರನ್ ನೋಳ್ಪೆನ್ ?"

(೩೮೮ ff) ಆದ್ದರಿಂದ

ಸಾಹಸಮನ್ ಏನಾನುಮೊಂದೆಸಗಿ, ಮಗನ್ ಅರಿಯೆ
ಕಲಿಯೆ, ಎರ್ದೆಯುಕ್ಕಿನ್
ತಾನ್ ಅಳಿದನೆಂಬುದನ್ ತೋರಲೇವೇಳ್ಕುಮ್ ಎಮ್ಮಯ್ಯಂಗೆ
ಗುರುಗೆ. (೩೯೬-೭)

ಶತ್ರುಗಳೊಡನೆ ಯುದ್ಧಮಾಡಿ ಸಾಯಬಹುದು; ಆದರೆ ಹಾಗೆ ಮಾಡಿದರೆ ಅವರಿಗೆ ಜಯದ ಸೌಖ್ಯವನ್ನು ಕೊಟ್ಟಂತಾಗುತ್ತದೆ.ಆದ್ದರಿಂದ ಆತ್ಮಹತ್ಯೆಯೊಂದೇ ದಾರಿ....ಇದು ಅವನ ತರ್ಕ. ಅವನ ಸಾವು ಪಾಪವನ್ನು ಕಳೆದುಕೊಳ್ಳಲು ಮಾಡಿಕೊಂಡ ಪ್ರಾಯಶ್ಚಿತ್ತವಲ್ಲ.

ಅಶ್ವತ್ಥಾಮನ್ ನಾಟಕವನ್ನು ರಂಗಸ್ಥಳದ ಮೇಲೆ ಪ್ರದರ್ಶಿಸಿದ ಕೂಡಲೆ ಅದರ ವಿಷಯದಲ್ಲಿ ವಾದವಿವಾದಗಳೆದ್ದು ತಿಂಗಳುಗಟ್ಟಲೆ ಕೋಲಾಹಲವಾಯಿತು. "ಅಶ್ವತ್ಥಾಮನು ಚಿರಂಜೀವಿಯೆಂಬ ನಂಬಿಕೆ ನಮ್ಮಲ್ಲಿ ಬಹಳ ಹಿಂದಿನ ಕಾಲದಿಂದ ನೆಲೆಸಿದೆ. ಈ ಶ್ರೀಕಂಠಯ್ಯನವರು ಅವನಿಗೆ ಮೃತ್ಯುವನ್ನು ತಂದು ಒಡ್ಡಿದ್ದಾರೆ ; ಅಷ್ಟು ಸಾಲದು ಎಂಬಂತೆ ಅವನ ತಲೆಗೆ ಆತ್ಮಹತ್ಯದ ದೋಷವನ್ನು ಬೇರೆ ಕಟ್ಟಿದ್ದಾರೆ ; ಇದೆಲ್ಲ ನಮ್ಮ ಸಂಪ್ರದಾಯಕ್ಕೆ ತೀರ ವಿರುದ್ಧ." ಇದು

ಶ್ರೀಕಂಠಯ್ಯನವರ ಮೇಲೆ ಬಂದ ಆಪಾದನೆ, ನಾವು ಚಿಕ್ಕ ಹುಡುಗರಾಗಿದ್ದಾಗ ಬಾಯಿ ಪಾಠದ ಅಂಗವಾಗಿ ಕೆಳಗೆ ಉದಾಹರಿಸಿದ ಶ್ಲೋಕವನ್ನು ಹೇಳಿ ಕೊಡುತ್ತಿದ್ದರು :

ಅಶ್ವತ್ಥಾಮಾ ಬಲಿರ್ವ್ಯಾಸಃ ಹನೂಮಾಂಶ್ಚ ವಿಭೀಷಣಃ ಕೃಪಃ
ಪರಶುರಾಮಶ್ಚ ಸಪ್ತೈತೇ ಚಿರಜೀವಿನಃ ||

ಇದು ಜನಸಾಮಾನ್ಯರಲ್ಲಿ ರೂಢಿಯಲ್ಲಿದ್ದ ಶ್ಲೋಕ. ಅಶ್ವತ್ಥಾಮನ ಚಿರಂಜೀವತ್ವದ ಮಾತು ಇಲ್ಲಿ ಹೊರತು ಮತ್ತೆಲ್ಲೂ ಬರುವಂತೆ ಕಾಣುವುದಿಲ್ಲ. ಈ ಶ್ಲೋಕವನ್ನು ಬರೆದವನು ಯಾರೋ, ಯಾವ ಆಧಾರದ ಮೇಲೆ ಅವನು ಚಿರಂಜೀವಿಗಳ ಪಟ್ಟಿಮಾಡಿದನೋ–ಬಹುಶಃ ಯಾರಿಗೂ ತಿಳಿಯದು. ಮಹಾಭಾರತದಲ್ಲಂತೂ ಅಶ್ವತ್ಥಾಮನು ಚಿರಂಜೀವಿ ಎನ್ನುವುದಕ್ಕೆ ಆಧಾರವೇನೂ ಇಲ್ಲ. ಅವನು ಚಿರಂಜೀವಿಯಲ್ಲ ಎನ್ನುವುದಕ್ಕೆ ಆಧಾರವಿದೆ. ಅವನು ಚಿರಂಜೀವಿಯಾಗಿದ್ದರೆ ಅವನ ತಂದೆಯಾದ ದ್ರೋಣನಿಗೆ ಆ ವಿಷಯ ತಿಳಿದಿರಬೇಕಷ್ಟೆ ? 'ಅಶ್ವತ್ಥಾಮಾ ಹತಃ' ಎಂದು ಧರ್ಮರಾಜ ಹೇಳಿದಾಗ ಆ ಮಾತನ್ನು ದ್ರೋಣ ಕೂಡಲೇ ನಂಬುತ್ತಾನೆ ! ಚಿರಂಜೀವಿಯಾದವನು ಸಾಯುವುದೆಂದರೇನು ಎಂಬ ಸಂದೇಹವೇನೂ ಅವನಿಗೆ ಬರುವುದಿಲ್ಲ. ವಾಸ್ಥವವಾಗಿ ನೋಡಿದರೆ, ಅವನ ಚಿರಂಜೀವತ್ವಕ್ಕೆ ಮಹಾಭಾರತದಲ್ಲಿ ಆಧಾರವಿದೆಯೆ ಎಂಬ ಪ್ರಶ್ನೆಯೇ ಅಪ್ರಕೃತ. ನಿಜವಾಗಿ ನಾವು ಕೇಳಬೇಕಾದ ಪ್ರಶ್ನೆ ಇದು : "ಈ ನಾಟಕದ ಅಶ್ವತ್ಥಾಮನಿಗೆ ಕಲೆಯ ದೃಷ್ಟಿಯಿಂದ ಸಾವು ಅವಶ್ಯಕವೇ ?" ಅವಶ್ಯಕವೆಂದೇ ಉತ್ತರ ಕೊಡಬೇಕಾಗುತ್ತದೆ. ಅವಮಾನದ ಸಂಕಟ ಅವನನ್ನು ಹೇಗೆ ದಹಿಸುತ್ತಿದೆಯೆಂಬುದನ್ನು ಕಂಡಿದ್ದೇವೆ. ಆ ಅವಮಾನವನ್ನು ಸಹಿಸಿಕೊಂಡು ಅವನು ಬದುಕಿರಲಾರ. ಸಾವೇ ಅವನಿಗೆ ಶರಣು.

ಅಶ್ವತ್ಥಾಮನ ಆತ್ಮಹತ್ಯೆಯ ವಿಷಯವಾಗಿ ಒಂದೆರಡು ಮಾತು ಹೇಳುವುದು ಅವಶ್ಯಕ. ಆತ್ಮಹತ್ಯೆಯೆಂದರೆ ತನ್ನನ್ನು ತಾನು ಕೊಂದುಕೊಳ್ಳುವುದು ಎಂದು ಮಾತ್ರ ಅರ್ಥ ; ಆ ಕೆಲಸಕ್ಕೆ ಕಳಂಕದ, ಅಧರ್ಮದ ಲೇಪವಿರಲೇಬೇಕೆಂಬ ನಿಯಮವೇನೂ ಇಲ್ಲದಿದ್ದರೂ ಸಾಮಾನ್ಯವಾಗಿ ಜನರು ಅದು ದೊಡ್ಡ ಪಾಪವೆಂದೇ ಭಾವಿಸಿದ್ದಾರೆ. ವಾಸ್ತವವಾಗಿ ಯಾವುದಾದರೂ ಒಂದು ದೊಡ್ಡ ಆದರ್ಶಕ್ಕಾಗಿ—ದೇಶ ರಕ್ಷಣೆಗಾಗಿ, ಧರ್ಮ ರಕ್ಷಣೆಗಾಗಿ, ಇತರರ ಪ್ರಾಣ ಉಳಿಸುವುದಕ್ಕಾಗಿ—ಒಬ್ಬ ತನ್ನ ಪ್ರಾಣವನ್ನು ಕೊಟ್ಟರೆ ಅದು ಆತ್ಮಹತ್ಯೆಯೇ ಆದರೂ ಪುಣ್ಯಕಾರ್ಯವೆನಿಸಿಕೊಳ್ಳುತ್ತದೆ. ಇಂಥ ಸಂದರ್ಭಗಳಲ್ಲಿ ನಾವು ಅದನ್ನು ತ್ಯಾಗ ಎಂದೋ ಆತ್ಮಾರ್ಪಣ ಎಂದೋ ಕರೆಯುತ್ತೇವೆ. ಈ ಬಗೆಯ ಆತ್ಮಹತ್ಯೆಗೆ ಭಾರತದ ಸಂಪ್ರದಾಯದಲ್ಲಿ ಗೌರವವಿದೆ. ಅಶ್ವತ್ಥಾಮ ಆತ್ಮಹತ್ಯೆ

ಮಾಡಿಕೊಂಡಿದ್ದರಿಂದ ಯಾವ ಘನೋದ್ದೇಶ ಸಫಲವಾಯಿತು, ಯಾವ ಭವ್ಯ ಆದರ್ಶವನ್ನು ಸಾಧಿಸಿದಂತಾಯಿತು ? ಪ್ರಪಂಚದ ತಿರಸ್ಕಾರವನ್ನು ಎದುರಿಸ ಬೇಕಾಗಲಿಲ್ಲ ಎಂಬುದೊಂದೇ ಅವನಿಗೆ ಬಂದ ಫಲ ! ತಾನು ಉದ್ದೇಶಿಸಿದ ಪಾಪ ಕ್ಕಾಗಿಯೂ ಮಾಡಿದ ಪಾಪಕ್ಕಾಗಿಯೂ ಪ್ರಾಯಶ್ಚಿತ್ತರೂಪವಾದ ಆತ್ಮಹತ್ಯೆ ಯಾಗಿದ್ದಿದ್ದರೆ ಅದು ಅವನನ್ನು ಘನತೆಗೆ ಏರಿಸುತ್ತಿತ್ತು. ಆತ್ಮಹತ್ಯೆಗೆ ಆಕ್ಷೇಪಿಸ ಬೇಕಾದ್ದಿಲ್ಲ ; ಆದರೆ ಅದಕ್ಕೆ ಇನ್ನೂ ಘನವಾದ ಕಾರಣವಿದ್ದಿದ್ದರೆ ಚೆನ್ನಾಗಿತ್ತು ಎನ್ನಬಹುದು.

ಇನ್ನೇನು ಸಾಯಬೇಕು ಎನ್ನುವ ಘಳಿಗೆಯಲ್ಲೂ ಅವನ ದೃಷ್ಟಿ ಸ್ವಚ್ಛ ವಾಗಿರಲಿಲ್ಲ, ಮನಸ್ಸು ದ್ವೇಷವನ್ನು ಹೊರಹಾಕಿ ನಿರ್ಮಲವಾಗಲಿಲ್ಲ ಎಂಬುದನ್ನು ಕಂಡೆವಷ್ಟೆ. ಮೊದಲೇ ಹೇಳಿದಂತೆ, ಇದು ಅವನ ಪಾತ್ರಚಿತ್ರಣದಲ್ಲಿ ದೋಷವಲ್ಲ. ಅಶ್ವತ್ಥಾಮನನ್ನು ಕವಿ ಕಲ್ಪಿಸಿಕೊಂಡಿರುವುದೇ ಹಾಗೆ—ಅವನಲ್ಲಿ ರುದ್ರನಾಯಕ ನಿಗೆ ಸಹಜವಾದ ಹಿರಿಮೆಯ ಜೊತೆಗೆ ಈ ಕುಂದೂ ಇದೆಯೆಂದು. ಅವನಲ್ಲಿ ಹಿರಿಮೆಯಿದೆ ; ಅವನು ನಮ್ಮ ಸಹಾನುಭೂತಿಯನ್ನೂ ಗೌರವವನ್ನೂ ಗಳಿಸುತ್ತಾನೆ. ಅವನ್ನು ಗಳಿಸುವುದು ಅವನು ನಾಟಕದ ಎಲ್ಲೆಗಳೊಳಗೆ ಮಾಡುವ ಕೆಲಸದಿಂದಲ್ಲ, ನಾಟಕದ ಕ್ರಿಯೆ ಆರಂಭವಾಗುವುದಕ್ಕಿಂತ ಮುಂಚೆ ಅವನು ಎಂಥವನಾಗಿದ್ದ ಎಂಬುದರ ಅರಿವು ನಮಗಾಗುವುದರಿಂದ. ಒಂದು ರೀತಿಯಲ್ಲಿ ನೋಡಿದರೆ ಅವನ ಘನತೆಗೆ ನಾಟಕದಲ್ಲಿ ದೊರೆಯುವ ಸಾಕ್ಷ್ಯ ಕಿಂವದಂತಿಯ (hearsay) ಸಾಕ್ಷ್ಯ. ನ್ಯಾಯಾಸ್ಥಾನದಲ್ಲಿ ಈ ಬಗೆಯ ಸಾಕ್ಷ್ಯಕ್ಕೆ ಬೆಲೆಯಿಲ್ಲ. ಆದರೆ ಸಾಹಿತ್ಯದಲ್ಲಿ ಅದನ್ನು ಕೆಲವು ವೇಳೆ ಒಪ್ಪಬಹುದು. ಇಲ್ಲಿ ಅಶ್ವತ್ಥಾಮನ ಸ್ನೇಹಿತರು ಮಾತ್ರವಲ್ಲದೆ ಅವನ ಶತ್ರುಗಳು ಅವನ ಶೌರ್ಯವನ್ನೂ ಹಿರಿಮೆ ಯನ್ನೂ ಹೊಗಳುತ್ತಾರೆ. ತನ್ನನ್ನು ಲೆಕ್ಕಿಸದೆ ಇದ್ದದ್ದಕ್ಕಾಗಿ ಕೋಪಗೊಂಡು ಅವನನ್ನು ದಂಡಿಸಿರುವ ರುದ್ರನೂ ಅವನನ್ನು ಹೊಗಳುತ್ತಾನೆ ; ಆ ಹೊಗಳಿಕೆ ಯನ್ನು ಕೃಷ್ಣ ಅನುಮೋದಿಸುತ್ತಾನೆ :

ರುದ್ರ

ಆರಿರ್ವರ್ ಈತನಿನ್ ಜ್ಞಾನಿಯುಂ ಶೂರನುಂ ? ಬಲ್ಲಯ್ ಆರಾನುಮನ್ ?

ಕೃಷ್ಣನ್

ನಾನ್ ಕಾಣೆನ್ ಆರುಮನ್ (೧೦೬-೭)

ಅಶ್ವತ್ಥಾಮನೇ ತನ್ನ ಸ್ವಂತ ವಿಷಯದಲ್ಲಿ ಹೇಳಿಕೊಳ್ಳುವ ಮಾತನ್ನು ಕೂಡ—ಆ ಬಗೆಯ ಸಾಕ್ಷ್ಯಕ್ಕೆ ಹೆಚ್ಚು ಬೆಲೆಯಿಲ್ಲವೆಂದರೂ—ಈ ಸಂದರ್ಭದಲ್ಲಿ ನಂಬಹುದು. ಅದರಲ್ಲಿ ಆತ್ಮಸ್ತುತಿಗಿಂತ ಆತ್ಮಜ್ಞಾನ ಹೆಚ್ಚಾಗಿರುವಂತೆ ತೋರುತ್ತದೆ :

ಸೊರ‍್ಕು ನುಡಿ ನುಡಿವೆನ್—ಇಂತಪ್ಪನ್ ಇಲ್ಲಮೆಂದಾದೆನ್ (೬೪-೬೫)

ಕೇಳಿಕೆಯ ಮಾತಿಗಿಂತ ಹೆಚ್ಚಿನ ಸಾಕ್ಷ್ಯವಿದ್ದಿದ್ದರೆ ಚೆನ್ನಾಗಿತ್ತು ಎನಿಸಬಹುದಾದರೂ ಒಟ್ಟಿನಲ್ಲಿ ನಾಟಕವನ್ನು ಓದುವವರಿಗೂ ನೋಡುವವರಿಗೂ "ಈ ಅಶ್ವತ್ಥಾಮ ಬಹಳ ಉನ್ನತನಾದವನು" ಎಂಬ ಭಾವನೆ ಬರುತ್ತದೆ. ಅವನ ಅಹಂಕಾರದ ಪ್ರಮಾಣ ಕೂಡ ಈ ಭಾವನೆಗೆ ಪುಷ್ಟಿ ಕೊಡುತ್ತದೆ. "ನೋಡುತಿರು, ವೀರ್ಯಂ ಮಾನುಷಂ ಅದೆಂತಿರ್ಕುಮೆಂಬುದನ್" ಎಂದು ದೈವದೆದುರು ನಿಂತು ಹೇಳುವುದು ಔದ್ಧತ್ಯವೇ, ಸಂದೇಹವಿಲ್ಲ. ಆದರೆ ಅಂಥ ಔದ್ಧತ್ಯ ಅಲ್ಪಾತ್ಮರಿಗೆ ಬರತಕ್ಕದ್ದಲ್ಲ ! ಅಲ್ಲದೆ ಅವನ ಬಾಯಿಂದ ಅದೆಂಥ ಅಮೃತವಾಣಿ ಉಕ್ಕುತ್ತದೆ !

ಓವೊ, ಕನ್ನಡದ ನಾಡೆ, ಮುನ್ನೀರ್ ಮೊಳಂಗು ಕರೆನಾಡೆ,ೀ
ಮಲೆನಾಡೆ, ಪೊನಲ್‌ನಾಡೆ, ಬಯಲ ಪೊನ್‌ನಾಡೇ
ಪಲಕಾಲಮ್ ಆನ್ ಅಗಲ್ದಿರ್ದ್ದೆನ್. ಅಲ್ಲಿ ಕಣ್ಮುಚ್ಚಲೆಂದಿರ್ದ್ದೆನ್.
ಇಲ್ಲಮೆನಗಾ ಪುಣ್ಯಂ ಓ ಚೆಲ್ವುನಾಡೇ ! ಎಲೆ ಕುರುಕ್ಷೇತ್ರಮೇ,
ಅಮೃತ ತೀರ್ಥಂಗಳೇ, ಆರ್ಯ ನಗರಂಗಳೇ, ಸ್ವರ್ಗಂಗಳೇ,
ದಿವ್ಯ ಜನಮೇ, ಮನಮೆ, ತಂದೆಯೊಡನೆಳಮೆಯೊಳೆ
ನಿಮ್ಮೊಳ್ ಒಂದಾದೆನ್. ಆಳ್ದಂಗೆ ನೆಚ್ಚಿನಾಳಾದೆನ್.
ಸೊರ‍್ಕುನುಡಿ ನುಡಿವೆನ್—ಇಂತಪ್ಪನಿಲ್ಲಮೆಂದಾದೆನ್.
ಈಗಳೋ, ಇಂತಪ್ಪನ್ ಇಲ್ಲಮೆಂದೇ ಆದೆನ್ ! *

ಪುಡಿಯೊಳಗೆ ಪುಡಿಯಾದೆನ್—ನಾಣ ನುಡಿಯಾದೆನ್ (೩೫೧ ff)

ಸರಳ, ಸುಂದರ, ಭಾವಪೂರ್ಣ ಪಂಕ್ತಿಗಳು ; ಅಯತ್ನತಃ ಅಲ್ಲಲ್ಲಿ ಬಂದು ಸೇರಿ ಮರೆಯಲ್ಲಿದ್ದುಕೊಂಡೇ ಭಾವಕ್ಕೆ ಪುಷ್ಟಿಯನ್ನೂ ಕಿವಿಗೆ ಇಂಪನ್ನೂ ಕೊಡುವ ಒಳಪ್ರಾಸ ಸ್ವರಪ್ರಾಸಗಳು ; ಭಾವಕ್ಕೆ ಹೊಂದಿಕೊಳ್ಳುವ ಲಯಸೌಂದರ್ಯ-ಇದು ಮುಂದೆ ಮೇಳದವರು ಹಾಡಲಿರುವ "ಚೆಲ್ವಿನ ನೆಲೆ ಸೊಬಗಿನ ಬಲೆ" ಎಂಬ ಗೀತೆ (ಅದೂ ಕರ್ಣಾಟಕದ ಸೊಬಗನ್ನು ಕುರಿತದ್ದೇ) ಯೊಡನೆ ಸ್ಪರ್ಧಿಸುತ್ತದೆ. ಸ್ಪರ್ಧಿಸಿ ಗೆಲ್ಲುತ್ತದೆ ಎನ್ನುವುದು ಸರಿಯಲ್ಲ ; ಏಕೆಂದರೆ 'ಚೆಲ್ವಿನ ನೆಲೆ'ಯ ಉದ್ದೇಶ ಬೇರೆ, 'ಚೆಲ್ವಿನ ನೆಲೆ' ಓವೋ, ಕನ್ನಡ ನಾಡೇ' -ಇವೆರಡರಲ್ಲಿ ಮೊದಲನೆಯದರ ಪಂಕ್ತಿಗಳು ಸಾವಧಾನವಾಗಿ ಸಾಗುತ್ತವೆ. ನೋವಿಗೆ ಅಭಿವ್ಯಕ್ತಿ ಕೊಡುವ ಲಯವೆ ಮೈತಡವಿ ನೋವನ್ನು ಮರೆಸುತ್ತದೆಯೋ ಎನ್ನುವ ಅನುಭವವನ್ನು ತರುತ್ತವೆ (ಮೇಳ ನಿರ್ವಹಿಸುವ ಕರ್ತವ್ಯಗಳಲ್ಲಿ ಇದೂ ಒಂದು). ಎರಡನೆಯದರ ಅನುಭವ

---

* ರುದ್ರ ಸನ್ನಿವೇಷಕ್ಕೆ ತಕ್ಕಂಥ 'ಇರಿವ ಬೆಡಂಗ'ನ್ನು ಉಳ್ಳ ಈ ಪಂಕ್ತಿ ಶ್ರೀಕಂಠಯ್ಯನವರೇ ಸೇರಿಸಿದ್ದು, ಈ ಅರ್ಥದ ಮಾತೇನೂ 'ಏಜಾಕ್ಸ್'ನಲ್ಲಿ ಇಲ್ಲ-ನನ್ನ ನೆನಪಿರುವ ಮಟ್ಟಿಗೆ ಹೇಳುವುದಾದರೆ.

ಬೇರೆ ರೀತಿಯದು. ಮೊದಲನೆಯದು ಭಾವಗೀತೆ; ಗೀತೆಯ ಗುಣವೇ ಅಲ್ಲಿ ಪ್ರಧಾನ, ಎರಡನೆಯದಾದರೋ ನಾಟಕಕ್ಕೆ ಉಚಿತವಾದ ಗೀತೆ (dramatic lyric). ಮೊದಲನೆಯದು ಒಂದು ಬಗೆಯ 'ಚಿಂತಾಗತಿ'ಯಿಂದ ಹರಿಯುತ್ತದೆ; ಎರಡನೆಯದು ಭಾವದ ಬುಗ್ಗೆಯಾಗಿ ಚಿಮ್ಮುತ್ತದೆ; ಅದರಲ್ಲಿ ಏರಿಳಿತ ಹೆಚ್ಚು, ವೈವಿಧ್ಯ ಹೆಚ್ಚು. ಮೊದಲನೆಯದರಲ್ಲಿರುವುದು ಶಾಂತೋದ್ವೇಗ; ಎರಡನೆಯದರಲ್ಲಿ, ಬಯಸಿದ ಶಾಂತಿಯನ್ನು ಕಳೆದುಕೊಂಡವನ ಉದ್ವೇಗ. ಇಂಥ ಕಾವ್ಯಮಯವಾದ ಮಾತುಗಳನ್ನಾಡ ಬಲ್ಲ ಅಶ್ವತ್ಥಾಮನ ಕಡೆಗೆ—ಅವನಲ್ಲಿ ಏನೇ ಕೊರತೆಗಳಿರಲಿ—ನಮ್ಮ ಮನಸ್ಸು ಒಲಿಯುತ್ತದೆ.

ಬಿಲ್ಲಿಗೆ ಅಂಬನ್ನು ಹೂಡುತ್ತಿರುವ ತನ್ನ ಮಗ ರುದ್ರಶಕ್ತಿಯ ಕೈಚಳಕವನ್ನು ಕಂಡು ಅಶ್ವತ್ಥಾಮನು ಉತ್ಸಾಹಿತನಾಗಿ 'ಗೆಲ್ ಗೆಲ್' ಎಂದು ಕೂಗುತ್ತಾನೆ; ಮಹತ್ತರವಾದ ಸಂಕಟವನ್ನು ಮೆಟ್ಟಿ ಅವನ ಮುಖದಲ್ಲಿ ಮೆಚ್ಚಿಕೆಯ ಮುಗುಳು ನಗೆ ಮೂಡುತ್ತದೆ. ಆಗ ಅವನು "ರುದ್ರಾವತಾರ"ನಲ್ಲ, ವಾತ್ಸಲ್ಯಮೂರ್ತಿ. ಇದನ್ನು ನೋಡಿದಾಗ ನಮ್ಮ ಮನಸ್ಸು ಅವನ ವಿಷಯದಲ್ಲಿ ಮೃದುವಾಗುತ್ತದೆ: ಭ್ರಮೆಗೆ ತುತ್ತಾಗದಿದ್ದರೆ ಇವನು ಎಂದಿಗೂ ಹಸುಳೆಗಳನ್ನು ಕೊಲ್ಲುತ್ತಿರಲಿಲ್ಲ" ಎನ್ನಿಸುತ್ತದೆ. ಅವನ ಕೊನೆಯ ಮಾತುಗಳಲ್ಲಿ ಗಾಂಭೀರ್ಯವಿದೆ.

ಓ ರುದ್ರ—ಪ್ರಾರ್ಥಿಪುದು ಸಾವರ್ಗೆ ಧರ್ಮಂ—
ಎನಗೊಳ್ಳಿಯವನಾಗು. ದೊಡ್ಡ ವರಮಲ್ತು ನಾನ್ ಬೇಡುವುದು ನಿನ್ನನ್.
ಈ ಜಾಳಮೇಲ್ ಬಿಳ್ದ ನೆತ್ತರನ್ ಬಸಿವನನ್, ಬಂದುಮೊದಲ್ ಎತ್ತಲ್
ಏಕಲವ್ಯಂಗರಿಪೆ, ಅಟ್ಟು ಆರಾನುಮನ್; ಪಗೆಮೊದಲ್ ಕಾಣಲ್,
ಎಳೆದಪರ್ ನಾಯ್‌ನರಿಗೆ ಪರ್ದುಗಳ್ಗೆರೆಯಾಗಿ, ಇದೊಂದು ಕೃಪೆದೋರು
(೬೪೪ ff)

ಯಾವ ರುದ್ರ ಮಾಯೆಯನ್ನು ಬೀಸಿ ತನ್ನನ್ನು ವಿಪತ್ತಿಗೆ ಎಳೆದನೋ ಅವನನ್ನೇ ಈಗ ಅಶ್ವತ್ಥಾಮನು ಪ್ರಾರ್ಥಿಸುತ್ತಿದ್ದಾನೆ. ಆದರೆ ಈಗ ಆತನ ಮಾತಿನಲ್ಲಿ ಇತ್ತ ಔದ್ಧತ್ಯವೂ ಇಲ್ಲ, ಅತ್ತ ದೈನ್ಯವೂ ಇಲ್ಲ; ಅವನು ಗಂಭೀರವಾಗಿ ವಾಸ್ತವತೆಯನ್ನು ಎದುರಿಸುತ್ತಿದ್ದಾನೆ. ಅವನ ಹೃದಯದಲ್ಲಿ ಆಗಲೂ ದ್ವೇಷ ತುಂಬಿದೆಯೆನ್ನುವುದು ನಿಜವಾದರೂ ಒಟ್ಟಿನಲ್ಲಿ ಈ ಕೊನೆಯ ಮಾತುಗಳು ಅವನಿಗೆ ನಮ್ಮ ಸಹಾನುಭೂತಿಯನ್ನು ದೊರಕಿಸಿಕೊಡುತ್ತವೆ. ಎಳೆಬಿಸಿಲು, ಪುಣ್ಯಭೂಮಿಯಾದ ಕನ್ನಡನಾಡು. ಬನವಾಸಿ, 'ತೆಂಗುಗರಿ ಕೊಡೆಯಿರ್ಪ ಕಡಲುಲಿಯ ಮನೆ', ತೆರೆ' ಹೊನಲು, ಹಸುರು ಬಯಲು—ಸಾಯುವ ಘಳಿಗೆಯಲ್ಲಿ ಇದೆಲ್ಲ ಸಂಪತ್ತು ಅವನ ಮನಸ್ಸನ್ನು ತುಂಬಿದೆ; ಜೊತೆಗೆ ಭಾರತದ ಸಂದ ಸಿಂಹಗಳ ನೆನಪೂ ಕೂಡಿಕೊಳ್ಳುತ್ತದೆ. ಅವನ ಮರಣ ಗಂಭೀರವಾದ ಮರಣ.

ಇಲ್ಲಿಯ ಭೀಮ ಒರಟ; ಅಶ್ವತ್ಥಾಮನ ಶವವನ್ನು "ನಾಯ್ಗಳ್ಗೆ, ನರಿಗಳ್ಗೆ, ಪರ್ದುಗಳ್ಗೆ ಬಿರ್ದಿಕ್ಕಿ ಬಿಸುಡು" ವವರೆಗೂ ಅವನಿಗೆ ಸಮಾಧಾನವಿಲ್ಲ. ಆ ಶವಕ್ಕೆ ಮರ್ಯಾದೆ ತೋರಿಸುವುದೂ ಅದಕ್ಕೆ ಸಂಸ್ಕಾರ ಮಾಡಗೊಡುವುದೂ ಅವನ ದೃಷ್ಟಿಯಲ್ಲಿ ಹೇಡಿತನ. ಕೃಷ್ಣನ ಮಾತಿಗೆ ಬೆಲೆಕೊಟ್ಟು ಶವವನ್ನು ಬಿಟ್ಟುಕೊಟ್ಟ ನಾದರೂ ''ನಿನ್ನಿಷ್ಟದಂತಕ್ಕೆ, ನಾನ್ ಕ್ಷಮಿಸಲಾರೆನ್ ಈ ಘೋರನನ್'' ಎಂದು ಸೆಟೆದುಕೊಂಡೇ ನಿಲ್ಲುತ್ತಾನೆ. ಶ್ರೀಕಂಠಯ್ಯನವರು ಅವನ ಈ ಸ್ವಭಾವದ ಪ್ರದರ್ಶನಕ್ಕೆ ಹೆಚ್ಚು ಅವಕಾಶ ದೊರೆಯದಂತೆ ಆ ದೃಶ್ಯವನ್ನು ಮೊಟಕು ಮಾಡಿದ್ದಾರೆ.

ಭಾರ್ಗವಿಯ ವಿಷಯ ಹಿಂದೆಯೇ ಒಂದೆರಡು ಮಾತು ಹೇಳಿದ್ದಾಗಿದೆ. ಉಳಿದವರಲ್ಲಿ ನಮ್ಮನ್ನು ಹೆಚ್ಚು ಆಕರ್ಷಿಸುವ ವ್ಯಕ್ತಿಯೆಂದರೆ, ಕೃಷ್ಣ. ಮಹಾಭಾರತದ ಕೃಷ್ಣ ದೇವರ ಅವತಾರ ಎನ್ನುವವರಿದ್ದಾರೆ, ಅವತಾರವಲ್ಲ ಎನ್ನುವವರೂ ಇದ್ದಾರೆ. ಅದು ಹೇಗಾದರೂ ಇರಲಿ, ''ಇವನು ದೇವರ ಅವತಾರ'' ಎನ್ನಿಸುವಂಥ ಔನ್ನತ್ಯ ಅವನಲ್ಲಿದೆ. ಇಲ್ಲಾದರೋ ಶ್ರೀಕಂಠಯ್ಯನವರು ಅವನನ್ನು ''ಇವನು ಮಾನವನ ಇತಿಮಿತಿಗಳಿಗೆ ಒಳಪಟ್ಟವನು'' ಎನ್ನಿಸುವಂತೆ ಚಿತ್ರಿಸಲು ಶ್ರಮವಹಿಸಿದಂತೆ ಕಾಣುತ್ತದೆ. ಹಾಗೆ ಚಿತ್ರಿಸಲು ಅವರಿಗೆ ಹಕ್ಕಿಲ್ಲ ಎನ್ನುವಂತಿಲ್ಲ. ಆದರೆ ಯಾವ ಮತ ಕೃಷ್ಣನನ್ನು ದೇವರು ಎಂದು ನಂಬಿದೆಯೋ ಅದು ಭಾರತದಲ್ಲಿ ಇನ್ನೂ ಜೀವಂತವಾಗಿರುವ ಮತ. (ಪುರಾತನ ಗ್ರೀಕರ ಮತ ಹೀಗೆ ಜೀವಂತವಾಗಿಲ್ಲ). ಕೋಟಿಗಟ್ಟಲೆ ಜನ ''ಆ ಹೆಸರನ್ನು ಉಚ್ಚರಿಸಿದರೆ ಸಾಕು, ಜನ್ಮ ಸಾರ್ಥಕವಾಗುತ್ತದೆ,'' ಎಂದು ನಂಬಿದ್ದಾರೆ. ಆದ್ದರಿಂದ ಇಲ್ಲಿಯ ವಾತಾವರಣದಲ್ಲಿ ನಮ್ಮ ನಾಟಕದಲ್ಲಿನ ಕೃಷ್ಣ ಆಡುವ ಕೆಲವು ಮಾತುಗಳು ಅವನು ದೇವರಲ್ಲ ಎನ್ನುವವರಿಗೂ ಕೂಡ ಸ್ವಲ್ಪ ವಿಚಿತ್ರವಾಗಿ ಕಾಣುತ್ತವೆ. ಅವನಿಗೆ ಅಶ್ವತ್ಥಾಮನು 'ಅರಿಯ ಪಗೆ'—ಗೆಲ್ಲಲಸಾಧ್ಯವಾದ ಶತ್ರು. ಅವನ ಬಾಳೂ ನಮ್ಮೆಲ್ಲರ ಬಾಳಿನಂತೆ ಅಶಾಶ್ವತ.

> ಇಂದವನ್, ನಾಳೆ ನಾನ್. ಏನ್ ಪಾಡೊ ಆಳ ಬಾಳ್!
> ಬೀಸುವ ಬಯಲ್ಗಾಳಿ, ಪರಿದಡಂಗುವ ನೆಳಲ್! (೧೧೦-೧೧೧)
> ಓ ಮಿತ್ರ, ನಾನುಮ್ ಇಂತಾಗೆನೇ ಒಂದು ದಿನಂ (೯೫೫)

ಇಂಥ ಪಂಕ್ತಿಗಳು ಅವನ ಮಾನವತೆಯನ್ನು ಒತ್ತಿಹೇಳುತ್ತವೆ. ಶ್ರೀಕಂಠಯ್ಯನವರು ಈ ಪಾತ್ರಕ್ಕೆ ಬೇರೆ ಯಾವುದಾದರೂ ಹೆಸರನ್ನು (ವಿದುರನ ಹೆಸರನ್ನು ?) ಕೊಟ್ಟದ್ದಿದ್ದರೆ ಚೆನ್ನಾಗಿತ್ತು. ಆದರೆ ಬೇರೆ ದೇಶದವರಿಗೆ ಕೃಷ್ಣನ ಮಾತುಗಳು-ವಿಚಿತ್ರವಾಗಿ ಕಾಣುವುದಿಲ್ಲ. ಅವರಿಗೆನ್ನಿಸಬಹುದು— ಈ ನಾಟಕದಲ್ಲಿ ಎಲ್ಲರೂ ದೈವ ಎಂದು ಪರಿಗಣಿಸಿರುವ ರುದ್ರನಿಗಿಂತ ದೈವತ್ವ ಇವನಲ್ಲೇ ಹೆಚ್ಚಾಗಿದೆ

ಯೆಂದು. ಅವನು ದೇವರಲ್ಲ ಎಂದು ಒಪ್ಪಿಬಿಟ್ಟಮೇಲೆ "ದೇವರಂಥ ಮನುಷ್ಯ" ಎಂದು ಅವನಿಗೆ ಕೈಮುಗಿಯಬಹುದು. ಅವನಿಗೆ "ಪಗೆಗಳನ್ ನಗುವ ನಗೆ" ಇನಿದಲ್ಲ. ತನ್ನ ಶತ್ರುವಾದ ಅಶ್ವತ್ಥಾಮನ ವಿಷಯದಲ್ಲಿ ಅವನಿಗೆ ಎಳ್ಳಷ್ಟೂ ದ್ವೇಷ ವಿಲ್ಲ, ಕನಿಕರವಿದೆ.

ಅವನ ಗತಿಯನ್ ಕಂಡು, ಎನ್ನ ಪಗೆಯಾದೊಡಂ
ವಿಧಿವಶದೆ ಕಾಲ್ ತೊಡರ್ದು ಬಿಳ್ದಂಗೆ ಮರುಗುವೆನ್ (೧೦೮-೯)

"ಅಶ್ವತ್ಥಾಮನನ್ನು ಇದೊಂದು ದಿನ ಎಚ್ಚರಿಕೆಯಿಂದ ಕಾಮುಕೊಳ್ಳಿ" ಎಂದು ಹೇಳಿ ಕಳುಹಿಸುವವನು ಕೃಷ್ಣ. ಅಶ್ವತ್ಥಾಮನೆಂಬ ವ್ಯಕ್ತಿಯೊಬ್ಬನ ಸಂಕಟ ವನ್ನು ಕಂಡಾಗ ಅವನ ಮನಸ್ಸು ಇಡೀ ಮಾನವಕುಲದ ಪಾಡನ್ನು ಕುರಿತು ಚಿಂತಿಸ ತೊಡಗುತ್ತದೆ. ಆ ಪಾಡನ್ನು ಕುರಿತು ಅವನು ಆಡುವ ಮಾತು ಹೆಂಗರುಳಿಗೆ ಸಹಜವಾದದ್ದು. ಅವನು 'ಜಯ'ದ ವಿಷಯದಲ್ಲಿ ಹೇಳುವ ಮಾತಿನಲ್ಲಿ ಕ್ರಿಸ್ತ ಬೆಟ್ಟದ ಮೇಲೆ ಕೊಟ್ಟ ಉಪದೇಶದ ಮತ್ತು ಭಗವದ್ಗೀತೆಯ ಮನೋಧರ್ಮವಿದೆ.

ಕ್ಷಮೆಯೆ ತಾನ್ ಜಯಂ;

ಕ್ರೋಧಮನ್ ತುಳಿದಿಟ್ಟು, ಬಿಲ್ವಿಡಿದು
ಧರ್ಮಮನ್, ಬಗೆಯೊಡನೆ ಪೋರಾಡುವುದೆ ಜಯಂ. (೯೪೯-೫೧)

ಛಂದಸ್ಸಿನ ಸೌಂದರ್ಯ, ಶೈಲಿಯ ಸೌಂದರ್ಯ—ಈ ದೃಷ್ಟಿಗಳಿಂದಲೂ 'ಅಶ್ವತ್ಥಾಮನ್' ಅತ್ಯುನ್ನತ ಮಟ್ಟದ ಕೃತಿ. ಈ ನಾಟಕದಲ್ಲಿ ದುರ್ಬಲವಾದ ಅಥವಾ ಗದ್ಯತೆಗೆ ಇಳಿಯುವ ಪಂಕ್ತಿ ಇಲ್ಲವೇ ಇಲ್ಲವೆನ್ನಬಹುದು. ಶ್ರೀಕಂಠಯ್ಯ ನವರು ಬುದ್ಧಿಪೂರ್ವಕವಾಗಿ ಈ ನಾಟಕವನ್ನು ಹಳೆಗನ್ನಡದಲ್ಲಿ ಬರೆಯಬೇಕೆಂದು ನಿಶ್ಚಯಿಸಿದರು. ನಾಟಕದ ವಸ್ತುವಿಗೂ ವಾತಾವರಣಕ್ಕೂ ಅದು ಬಹಳ ಚೆನ್ನಾಗಿ ಹೊಂದುವಂತೆ ತೋರುತ್ತದೆ. ಹಳೆಯ ಕಾಲದ ವಾತಾವರಣವನ್ನು ಮತ್ತೆ ಸೃಷ್ಟಿ ಮಾಡಹೊರಟಾಗ ಬಳಸುವ ಭಾಷೆಗೂ ಇಂದಿನ ಭಾಷೆಗೂ ನಡುವೆ ಸ್ವಲ್ಪ ದೂರ ಇದ್ದರೇ ಒಳ್ಳೆಯದೇನೊ. ಪರಿಣಾಮದ ದೃಷ್ಟಿಯಿಂದ ನೋಡಿದರೆ ಶ್ರೀಕಂಠಯ್ಯ ನವರು ಹಳೆಗನ್ನಡವನ್ನು ಆಯ್ದುಕೊಂಡದ್ದು ಒಳ್ಳೆಯದೆಂದೇ ತೋರುತ್ತದೆ. "ಅವರು ನ್ಯಾಯವಾಗಿ ಹೊಸಗನ್ನಡದಲ್ಲೇ ಬರೆಯಬೇಕಾಗಿತ್ತಲ್ಲವೆ?" ಹೊಸ ಗನ್ನಡದಲ್ಲಿ ಅದೇ ಬಿಗಿಯನ್ನು ತರುವುದು ಅಸಾಧ್ಯವೇ? ಎಂದು ಕೆಲವರು ಟೀಕಿಸಿ ದ್ದುಂಟು. ಶ್ರೀಕಂಠಯ್ಯನವರಂಥವರು ಹೊಸಗನ್ನಡದಲ್ಲಿ ಈ ಪ್ರಯೋಗವನ್ನು ನಡೆಸಿದ್ದರೆ ಚೆನ್ನಾಗಿತ್ತು ಎನ್ನುವ ಮಾತನ್ನು ಒಂದು ದೃಷ್ಟಿಯಿಂದ ಒಪ್ಪಬಹುದು. ಆದರೂ ಅವರು ಮಾಡಿರುವ ಪರಿಣಾಮ ಇಷ್ಟೊಂದು ಸೊಗಸಾಗಿರುವಾಗ 'ಮತ್ತೊಂದನ್ನು ಮಾಡಿಲ್ಲವಲ್ಲ' ಎಂದೇಕೆ ಹಲುಬಬೇಕು!

ಮೇಲ್ಕಂಡ ವಿಷಯದಲ್ಲಿ ಒಂದು ವೇಳೆ ಭಿನ್ನಾಭಿಪ್ರಾಯ ಸಾಧ್ಯವೆಂದರೂ ಈ ನಾಟಕದಲ್ಲಿರುವ ವಿಸ್ಮಯಕಾರಕ ಗೀತಸೌಂದರ್ಯದ (Lyrical beauty) ವಿಷಯದಲ್ಲಿ ಭಿನ್ನಾಭಿಪ್ರಾಯ ಸಾಧ್ಯವಿಲ್ಲ. "ಓವೊ, ಕನ್ನಡದ ನಾಡೇ" (೩೫೧-ff) ಮತ್ತು "ಚೆಲ್ವಿನ ನಲಿ" (೪೮೮ ff) ಎಂದು ಮೊದಲಾಗುವ ಗೀತೆಗಳ ಪ್ರಸ್ತಾಪ ಒಂದೆಯೇ ಬಂದಿದೆ. ಇನ್ನೂ ಒಂದು ಉದಾಹರಣೆ ಬೇಕೆಂದರೆ "ಹೋ ! ಆನಂದಂ ! ಪೇರಾನಂದಂ" ಎಂಬ ಮೇಳದವರು ಹಾಡುವ ಗೀತೆಯನ್ನು ತೆಗೆದುಕೊಳ್ಳಬಹುದು.

ಹೋ ! ಆನಂದಂ ! ಪೇರಾನಂದಂ !
ನೆಗೆವಾ ಕುಣಿವಾ ಮಿಗುವಾನಂದಂ !
ಓ ಶಿವ, ಬಾರಯ್ !
ಓ ಶಿವ, ಬಾರಯ್ !
ಬೆಳ್ಳಿಯ ಬೆಟ್ಟದ ಕೋಡಿನ ಬೀಡಿನ್,
ತೆಂಕಣ ನಾಡಿನ ಕೋಯಿಲ ಕೋಡಿನ್,
ಒಂದೇ ನೆಗೆತಂ ನೆಗೆಯುತ ಬಾರಯ್,
ಬಾ ನಟರಾಜಾ,
ಬಾ ನಟರಾಜಾ,
ಲೋಕಂ ಪುಟ್ಟಲ್, ಲೋಕಂ ಸಾಯಲ್,
ದೇವತೆಗಳ ಗಣಮೆಲ್ಲಂ ಪಾಯಲ್,
ಒರ್ವನೆ ತಾಂಡವವಾಡುವ ರಾಜಾ,
ನಾಟ್ಯಂಗಲಿಸುವ ಓ ನಟರಾಜಾ,
ಕುಣಿವೆನ್, ಕಲಿಸೆನಗೀಗಳ್, ಬಾರಯ್,
ಕುಣಿವೆನ್, ಬಾರಯ್ !
ಓ ಶಿವ, ಬಾರಯ್ ! (೫೪೫ ff)

'ಅಶ್ವತ್ಥಾಮನ್' ನಾಟಕವನ್ನು ಆಡಿದ ಮೇಲೆ ತಿಂಗಳುಗಟ್ಟಲೆ ಕಾಲೇಜಿನಲ್ಲಿ ಎಲ್ಲರೂ ಇದನ್ನು ಹಾಡುವವರೇ. ಈ ಗೀತೆಯನ್ನು ನಾವು ಉದ್ದೇಶಪೂರ್ವಕವಾಗಿ ಹಾಡಲು ಹೊರಡಬೇಕಾಗಿಲ್ಲ; ಅದು ನಮ್ಮ ಯತ್ನವಿಲ್ಲದೆಯೇ ಕಂಠದಿಂದ ಹೊರಹೊಮ್ಮುತ್ತದೆ; ತನ್ನನ್ನು ತಾನೇ ಹಾಡಿಕೊಳ್ಳುತ್ತದೆಯೆಂದರೂ ಎನ್ನಬಹುದು. ಈ ಗೀತೆಯಲ್ಲಿರುವ ಇನ್ನೊಂದು ವಿಶೇಷ ಗುಣ ಗಮನಿಸಬೇಕಾದದ್ದು. ನಾಟಕದಲ್ಲಿ ಇದು ಬರುವ ಸಂದರ್ಭವನ್ನು ಮರೆತು ಇದನ್ನು ಓದಿದರೆ, ಹಾಡಿದರೆ–ಇದು ಅದ್ಭುತವಾದ ಆನಂದದ ಗೀತೆ; ಸಂದರ್ಭವನ್ನು ಗಮನಿಸಿ ನೋಡಿದರೆ—ಇದರಲ್ಲಿ ಮೈನಡುಗಿಸುವಂಥ ರುದ್ರ ಐರನಿಯಿದೆ. ಮೇಳದವರು ಗೀತೆಯನ್ನು ಹಾಡಿಕೊಂಡು ಕುಣಿಯುವುದು "ಅಶ್ವತ್ಥಾಮ ಸಾಯುವ ಯೋಚನೆ

ಯನ್ನು ಬಿಟ್ಟ ; 'ಬದುರ್ಕಿದನೇ ನಮ್ಮಶ್ವತ್ಥಾಮನ್'!'' ಎಂಬ ಹಿರಿಹಿಗ್ಗಿನಲ್ಲಿ. ಆದರೆ ಇತ್ತ ಇವರು ಹಾಡು ಕುಣಿತಗಳಲ್ಲಿ ಮೈಮರೆತಿರುವಾಗ ಅತ್ತ ಅಶ್ವತ್ಥಾಮ ಮರಣೋನ್ಮುಖನಾಗಿದ್ದಾನೆ!

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ 'ಅಶ್ವತ್ಥಾಮನ್' ನಾಟಕಕ್ಕೆ ಹೆಚ್ಚಿನ ಗೌರವದ ಸ್ಥಾನ ಇದ್ದೇ ಇರುತ್ತದೆ. ಪಾಶ್ಚಾತ್ಯ ಮತ್ತು ಭಾರತೀಯ ಸಂಸ್ಕೃತಿಗಳೆರಡೂ ಬೆರೆತು ಹೊಸದೊಂದು ಭವ್ಯವಾದ ಸಂಸ್ಕೃತಿ ಮೂಡಬೇಕು, ಅದರಿಂದ ಎಲ್ಲರಿಗೂ ಕಲ್ಯಾಣವಾಗಬೇಕು—ಇದು ಶ್ರೀಕಂಠಯ್ಯನವರ ಮನಸ್ಸಿನಲ್ಲಿ ಯಾವಾಗಲೂ ಜೀವಂತವಾಗಿದ್ದ ಬಯಕೆ. ಇನ್ನೆಲ್ಲ ಕೃತಿಗಳಿಗಿಂತ ಹೆಚ್ಚಾಗಿ ಅವರು ಈ ನಾಟಕದಲ್ಲಿ ಅವೆರಡು ಸಂಸ್ಕೃತಿಗಳ ಮಿಲನವನ್ನು ಸಾಧಿಸಿದ್ದಾರೆ.

೪. ಪಾರಸಿಕರು

೧೯೩೫ರಲ್ಲಿ ಪ್ರಕಟವಾದ ಈ ನಾಟಕವು ಪ್ರಸಿದ್ಧ ಗ್ರೀಕ್ ನಾಟಕಕಾರ ಈಸ್ಕಿಲಸ್‌ನ The Persae ಎಂಬ ಕೃತಿಯ ಅನುವಾದ. ನಾಟಕದ ವಸ್ತು: ಪಾರಸಿಕ ಸಾಮ್ರಾಜ್ಯದ ಮೇಲೆ ಗ್ರೀಕರು ಗಳಿಸಿದ ವಿಜಯ—ಅಥವಾ ಹಾಗೆನ್ನುವುದಕ್ಕಿಂತ "ಪಾರಸಿಕರು ಅನುಭವಿಸಿದ ಸೋಲು" ಎನ್ನುವುದೇ ಸತ್ಯಕ್ಕೆ ಹತ್ತಿರವಾದ ಮಾತು. ಈಸ್ಕಿಲಸ್ ಸ್ವತಃ ಸಾಲಮಿಸ್ ಕದನದಲ್ಲಿ ಹೋರಾಡಿದ್ದವನು. ಆದ್ದರಿಂದ ಅವನು ಆ ವಿಷಯವನ್ನು ಕುರಿತು ಬರೆದದ್ದೇನೂ ಆಶ್ಚರ್ಯವಲ್ಲ. ಆದರೆ ಪೌರಾಣಿಕ ವ್ಯಕ್ತಿಗಳ ವಿಷಯ ಬರೆಯುತ್ತಿದ್ದಾಗ ಅವನ ಶಕ್ತಿ ಯಾವ ಮಟ್ಟಕ್ಕೆ ಏರಿತೋ ಅದೇ ಮಟ್ಟಕ್ಕೆ ಇಲ್ಲಿ ಏರಲಾರದೆ ಹೋಯಿತು. ಸಾಧಾರಣವಾಗಿ ಕಾವ್ಯವಸ್ತು ತೀರ ಹತ್ತಿರದ ಅನುಭವವಾದರೆ ಕವಿಯ ಪ್ರತಿಭೆ ವಾಸ್ತವ ಜೀವನದ ಬಂಧನಕ್ಕೆ ಸಿಕ್ಕಿ ಸುಲಭವಾಗಿ ಗರಿಗೆದರಲಾರದೆ ಹೋಗುವ ಸಂಭವವುಂಟು. ಈಸ್ಕಿಲಸ್ ಅತಿಮಾನುಷ ವಾತಾವರಣದಲ್ಲಿರಬೇಕಾದವನು. ವಿಶ್ವಕ್ಕೆ ಒಡೆಯನಾದ ಸ್ಯೂಸ್, ಅವನ ಎದುರಿಗೆ ಸರಿಗಟ್ಟಿನಿಂತ ಟೈಟನ್ ಪ್ರೊಮಿಥ್ಯೂಸ್, ಪಾಪದ ಪ್ರಾಯಶ್ಚಿತ್ತವೇ ಮೂರ್ತಿಮತ್ತಾಗಿ ಬಂದ ಘೋರ ರೂಪಿಗಳಾದ ಸೇಡುಮಾರಿಯರು—ಇಂಥ ಆವರಣದಲ್ಲಿಯೇ ಈಸ್ಕಿಲಸ್‌ನ ಪ್ರತಿಭೆಗೆ ಸ್ವತಂತ್ರ ಸಂಚಾರ. ಆದ್ದರಿಂದ ಯಾವುದೋ ಒಂದು ಸಂದರ್ಭಕ್ಕಾಗಿ ಆರಿಸಿಕೊಂಡ ಈ ಐತಿಹಾಸಿಕ ವಸ್ತು ಅವನ ಕೈಯನ್ನು ತಡೆಯಿತೆಂದರೂ ಎನ್ನಬಹುದು. ಅಲ್ಲದೆ ಈ ನಾಟಕವನ್ನು ಬರೆದಾಗ ಈಸ್ಕಿಲಸ್‌ನ ಕೈ ಸಾಕಾದಷ್ಟು ಕುದುರಿರಲಿಲ್ಲ. ಕಲೆ ಪೂರ್ಣವಾಗಿ ಹದಕ್ಕೆ ಬಂದಿರಲಿಲ್ಲ.

ನಾಟಕದ ಕ್ರಿಯೆ ನಡೆಯುವುದು ಅಥೆನ್ಸಿನಲ್ಲಲ್ಲ. ಇದು 'ರುದ್ರನಾಟಕ'ವಾಗುವುದು ಪರ್ಸದವರ ದೃಷ್ಟಿಯಿಂದಲೇ ತಾನೆ! ಅಷ್ಟೇ ಅಲ್ಲ, ಅದು ರುದ್ರವಾಗಿರುವುದು ನಾಟಕದ ನಾಯಕನಾದ ಕ್ಷಯಾರ್ಷನಿಗೆ ಮಾತ್ರವಲ್ಲ, ಅವನ ಸೈನಿಕರಿಗೆ ಮಾತ್ರವಲ್ಲ, ಇಡೀ ಚಕ್ರಾಧಿಪತ್ಯಕ್ಕೆ. ಆದ್ದರಿಂದ ನಾಟಕದ ಕ್ರಿಯೆ ಚಕ್ರಾಧಿಪತ್ಯದ ರಾಜಧಾನಿಯಾದ ಸೂಸದಲ್ಲಿ ನಡೆಯುತ್ತದೆ. ಪಾರಸಿಕ ಸೈನ್ಯವು "ಬೀಸಿ ಬರ್ಪ ಕಡಲ ಪೊನಲ್ ನೆಲವ ನುಂಗಿಕೊಳುವುದೆನಲ್" ಗ್ರೀಕರ ಮೇಲೆ ದಾಳಿಯಿಟ್ಟು ಕೆಲ ಕಾಲವಾಗಿದೆ. ಪರ್ಸದ ಹಿರಿಯ ಮಂತ್ರಿಗಳು—ಈ ನಾಟಕದಲ್ಲಿ ಇವರೇ ಮೇಳದವರು—ನಿಂತು ದಂಡೆಯಾತ್ರೆಯ ವಿಷಯವನ್ನೇ ಯೋಚಿಸುತ್ತಿದ್ದಾರೆ. ಅವರ ಮನಸ್ಸಿಗೆ ನೆಮ್ಮದಿಯಿಲ್ಲ. ಪಾರಸಿಕ ವೀರರೇನೋ ನೆಚ್ಚಿನ ವೀರರು. ಆದರೂ ದೈವ ವಂಚಿಸಿದರೆ ಅವರ ಶಕ್ತಿಯಿಂದೇನಾದೀತು! ಅವರ

ಮನಸ್ಸಿನಲ್ಲಿ ತಮ್ಮ ಪಡೆ ಮರಳಿ ಬಾರದೇನೋ ಎಂಬ ಭಯದ ಇರಿತ. ಅವರು ಹೀಗೆ ನಿಂತಿರುವಾಗ ಚಕ್ರವರ್ತಿಯ ತಾಯಿ ಹುತೌಶ ಅಲ್ಲಿಗೆ ಬರುತ್ತಾಳೆ. ಅವಳ ಮನಸ್ಸಿಗೂ ನೆಮ್ಮದಿಯಿಲ್ಲ. ಹಿಂದಿನ ರಾತ್ರಿ ಅವಳೊಂದು ಕೆಟ್ಟ ಕನಸು ಕಂಡಿದ್ದಾಳೆ. ಕನಸು ಹರಿದು ಬೆಳಗಾದ ಮೇಲೆ ಅವಳು ದೇವರಿಗೆ ಮಧುಪರ್ಕ ಧೂಪಗಳನ್ನಿಡುತ್ತಿರುವಾಗ ಗರುಡನೊಂದು ಮಿಥ್ರದೇವನ ವೇದಿಯಲ್ಲಿ ಬಿತ್ತು. ಕಿರುಗಿಡುಗವೊಂದು ಬೆನ್ನಟ್ಟಿ ಬಂದು ಗರುಡನನ್ನು ಕುಕ್ಕಿ ನಡುಗಿಸಿತು. ರಾತ್ರಿಯ ಕನಸೂ ಬೆಳಗಿನ ಉತ್ಪಾತವೂ ಹುತೌಶಳನ್ನು ಅಂಜಿಸಿವೆ. ಚಕ್ರಿಯೆನಿಸಿ ಮೆರೆದ ತನ್ನ ಪತಿಯಾದ ದರ್ಯವುಷನ ಸಿರಿಯನ್ನು ಈ ದುಡುಕು ಹೆಮ್ಮೆಯ ಮಗ ಎಲ್ಲಿ ಮಣ್ಣುಪಾಲು ಮಾಡುವನೋ ಎಂಬ ಶಂಕೆಯಿಂದ ಹೃದಯ ಭಾರವಾಗಿದೆ.

ಅವಳು ಮೇಳದವರೊಡನೆ ಮಾತನಾಡುತ್ತಿರುವಾಗಲೇ ರಣಕ್ಷೇತ್ರದಿಂದ ಚಿಂದಿ ಬಟ್ಟೆಗಳನ್ನು ಧರಿಸಿ ಬಳಲಿ ಬಂದ ದೂತನು ಕ್ಷಯಾರ್ಷನ ಸೋಲಿನ ವರ್ತಮಾನವನ್ನು ತರುತ್ತಾನೆ. "ಕುಣಿ ಕುಣಿಯುತ ಪೋದ" ಪಾರಸಿಕರ ಪಡೆ ನುಚ್ಚುನೂರಾಯಿತು. ಗ್ರೀಕರ ಹೂಟವನ್ನೂ ದೈವದ ಹಂಚಿಕೆಯನ್ನೂ ಅರಿಯದೆ ಕ್ಷಯಾರ್ಷನು ಹೆಮ್ಮೆಯಿಂದ ಕೈ ಬೀಸಿದನು. ಆದರೆ "ಪಲ್ಲಸ್ ಅಥೀನೆ ಕಾಪಾಡಿದಳ್ ತನ್ನ ಪೊಳಲನ್" ಪಾರಸಿಕರ ಹಡಗುಗಳು ಪುಡಿ ಪುಡಿಯಾದವು. "ಪರ್ಸದ ಪೊಸ ಅರಳು, ಪೂವು" ಸುಟ್ಟು ಕರಿಕಾಯಿತು. ಸೊಕ್ಕಿದ ಪಾರಸಿಕರು ದೈವವನ್ನು ಕೆಣಕಿದರು: "ದೇವಾಧಿದೇವಾ, ಮಹಾದೇವ, ನೀನ್ ಮುರಿದೆ ಪಾರಸಿಕರುಕ್ಕನ್.....ಮುಸಿದೀಗ ನೀನ್ ಮುರಿದೆ ಸೊಕ್ಕನ್."

ಕಂಗೆಟ್ಟ ಪಾರಸಿಕರು ತಮ್ಮ ಹಿಂದಿನ ದೊರೆ ದರ್ಯವುಷನ ಆತ್ಮಕ್ಕೆ ತನಿಯೆರೆದು ಅವನ ಸಲಹೆಯನ್ನು ಬೇಡುತ್ತಾರೆ. ದರ್ಯವುಷ ಸಮಾಧಿಯಿಂದೆದ್ದು ಕ್ಷಯಾರ್ಷನ ಹುಚ್ಚುತನವನ್ನು ಸ್ಪಷ್ಟಗೊಳಿಸುವುದಲ್ಲದೆ ಪಾರಸಿಕರ ವಿಪತ್ತು ಸಾಲಮಿಸ್‌ನಲ್ಲಾದ ಸೋಲಿನಲ್ಲೇ ಕೊನೆಗಾಣುವುದಿಲ್ಲವೆಂದು ಎಚ್ಚರಿಕೆ ಕೊಡುತ್ತಾನೆ.

ಅನಂತರ ಸೋತು ನಿಸ್ತೇಜನಾಗಿ ಬರುವ ಕ್ಷಯಾರ್ಷನ ಪ್ರವೇಶ. ಮೇಳದವರು ಆತನೊಡನೆ ಸ್ವಲ್ಪ ಕಠಿನವಾಗಿಯೇ ವರ್ತಿಸುತ್ತಾರೆ.

ಅಯೊ, ಅಯೊ, ಏನ್ ಕೇಳ್ವಯ್ !
ಕೂರಲಗಿಂದಂ ಕೊರಳನ್ ಕೊರೆವಯ್ ! (೮೬೪)

ಎಂದು ಅಂಗಲಾಚಿಕೊಂಡರೂ ಬಿಡದೆ ಅವರು ಮತ್ತೆ ಮತ್ತೆ ಪರ್ಸದ ವೀರರ ಹೆಸರನ್ನೆತ್ತಿ ಮೊನೆಯುಳ್ಳ ಪ್ರಶ್ನೆಗಳಿಂದ ಕ್ಷಯಾರ್ಷನನ್ನು ಇರಿಯುತ್ತಾರೆ. ಅವರು ಕ್ಷಯಾರ್ಷನಿಗೆ ಭವಿಷ್ಯದ ವಿಷಯದಲ್ಲಿ ಭರವಸೆಯೇನನ್ನೂ ಕೊಡಲಾರರು.

ಮತ್ತೆ ಸೂಸ ಮೆರೆವುದೆ ಪೇಳ್ ?
ನಮ್ಮ ಪರ್ಸ ಬೆಳೆವುದೆ ಪೇಳ್ ? (೯೩೫ ff)

ಎಂಬ ಪ್ರಶ್ನೆಗಳಿಗೆ 'ಮೆರೆವುದು, ಬೆಳೆವುದು' ಎಂದು ಉತ್ತರ ಕೊಡುವ ಧೈರ್ಯವಿಲ್ಲದೆ, 'ಮೆರೆಯಲಿ, ಬೆಳೆಯಲಿ' ಎಂಬ ಆಸೆಯನ್ನು ಮಾತ್ರ ವ್ಯಕ್ತ ಪಡಿಸುತ್ತಾರೆ.

ಘಳಿಗೆ ಘಳಿಗೆಗೂ ಹೊಸ ಘಟನೆಗಳನ್ನು ತಂದೊಡ್ಡಿ, ಪ್ರತಿಪಕ್ಷಗಳ ಹೋರಾಟವು ಬೆಳೆದು ವಿಷಮ ಘಟ್ಟವನ್ನು ಮುಟ್ಟುವಂತೆ ಮಾಡಿ, ಅನಂತರ ನಾಯಕನ ಸೋಲಿನಲ್ಲಿ ಕೊನೆಗಾಣುವಂತೆ ನಾಟಕದ ಕ್ರಿಯೆಯನ್ನು ಹೆಣೆಯುವುದು ಸಾಧಾರಣ ವಾಗಿ ರುದ್ರನಾಟಕಗಳ ತಂತ್ರ. ಆ ಬಗೆಯ ಕ್ರಿಯಾರಚನೆಗೆ ಇಲ್ಲಿ ಅವಕಾಶವಿಲ್ಲ. ನಡೆಯಬೇಕಾದ ದುರಂತ ಮೊದಲೇ ನಡೆದುಹೋಗಿದೆ; ನಾಟಕ ಪ್ರಾರಂಭವಾಗುವ ವೇಳೆಗೆ ಯುದ್ಧ ಮುಗಿದು ಪರ್ಸಕ್ಕೆ ಸೋಲಾಗಿ ಹೋಗಿದೆ. ಇಲ್ಲಿ ಕಾಣುವುದು ಸೋಲಿನ ನಿರೂಪಣೆ ಮಾತ್ರ. ಇಲ್ಲಿಯ ತಂತ್ರ ಅತಿ ಸರಳವಾದದ್ದು. ಬಾಹ್ಯ ವಾಗಿ ನಡೆಯುವ ಕ್ರಿಯೆ ಅತ್ಯಲ್ಪ. ಮೇಳದವರ ಶಂಕೆ, ಹುತೌಶ ಕಂಡ ಕನಸು ಮತ್ತು ಉತ್ಪಾತ, ಸೋಲಿನ ವಾರ್ತೆಯನ್ನು ತರುವ ದೂತ, ಯುದ್ಧದ ವರ್ಣನೆ, ಸೈನ್ಯ ಮರಳಿ ಬರುವಾಗ ಸಂಭವಿಸಿದ ವಿಪತ್ತುಗಳು—ಇವು ಬೆನ್ನುಹತ್ತಿದ ವಿಧಿಯ ಪೆಟ್ಟುಗಳಂತೆ ರಾಣಿಯ ಮತ್ತು ಮಂತ್ರಿಗಳ ಮೇಲೆ ಬಂದೆರಗುತ್ತವೆ. ದರ್ಯವುಷನ ಪ್ರೇತ ಅದೃಶ್ಯವಾದಮೇಲೆ ಬರುವ ಕ್ಷಯಾರ್ಷನ ನಿರ್ವೀರ್ಯ ಸ್ಥಿತಿಯೇ ಪರ್ಸಕ್ಕೆ ಕೊನೆಯ ಪೆಟ್ಟು. ಈ ಬಗೆಯ ಕ್ರಿಯಾರಚನೆ ಆಧುನಿಕ ನಾಟಕಕಾರರಿಗೆ ಒಪ್ಪಿಗೆಯಾಗಲಾರದು. ಆದರೆ ಅದು ನಾಟಕಕ್ಕೆ ಹೊಂದುವುದೇ ಇಲ್ಲವೆಂದು ಹೇಳಲಾಗುವುದಿಲ್ಲ.

ದರ್ಯವುಷನು ಸಮಾಧಿಯಿಂದೆದ್ದು ಬರುವ ಪ್ರಕರಣ ರಂಗಸ್ಥಳದ ಮೇಲೆ ಆಕರ್ಷಕವಾದ ದೃಶ್ಯವಾಗುತ್ತದೆ. ಆದರೆ ಅದರ ಪರಿಣಾಮ ಅಷ್ಟರಲ್ಲೇ ಪರ್ಯವ ಸಾನವಾಗುವುದಿಲ್ಲ. ಆಗ ಅಲ್ಲಿ ನೆರೆದಿರುವವರಲ್ಲಿ ಯಾರೂ ಪರ್ಸಕ್ಕೆ ಒದಗಿದ ದುರಂತದ ಅರ್ಥವನ್ನು ತಿಳಿಯಲು ಶಕ್ತರಲ್ಲ. ಈ ಕೆಲಸ ಮೇಳದವರಿಗೆ ಸಾಧ್ಯ ವಾಗಬೇಕಾಗಿತ್ತು; ಆದರೆ ಇಲ್ಲಿಯ ಮೇಳ ಅಂಥದಲ್ಲ. ಅವರು ರಾಷ್ಟ್ರದ ಅವನತಿ ಯನ್ನು ಕಂಡು ಶೋಕಾವಿಷ್ಟರಾಗಿದ್ದಾರೆ; ಹುತೌಶಳ ಮನಸ್ಸಿನಲ್ಲಿ ಈ ಶೋಕದ ಜೊತೆಗೆ ತನ್ನ ಮಗನ ವಿಷಯವಾದ ಚಿಂತೆ; ದೂತನಾದರೋ ರಣರಂಗದಲ್ಲಿ ಪಾರಸಿಕರ ರಕ್ತ ಕೋಡಿ ಹರಿದದ್ದನ್ನು ಸ್ವತಃ ನೋಡಿದವನು, ತಾನೂ ಗ್ರೀಕರಿಂದ ಪೆಟ್ಟು ತಿಂದವನು. ಇವರಲ್ಲಿ ಯಾರೂ ಶೋಕ ಕ್ರೋಧಗಳನ್ನು ಮೆಟ್ಟಿನಿಂತು ಆತ್ಮ ಪರೀಕ್ಷೆಗೆ ಮನಸ್ಸು ಕೊಟ್ಟು "ಈ ಸೋಲಿನ ಅರ್ಥವೇನು? ನಮ್ಮ ವಿಷಯ ದಲ್ಲಿ ದೈವ ಮುನಿದದ್ದೇಕೆ?" ಎಂದು ನಿಷ್ಪಕ್ಷಪಾತವಾದ ಪ್ರಶ್ನೆ ಹಾಕಿಕೊಳ್ಳಲು ಸಮರ್ಥರಲ್ಲ. ನಡೆದಿರುವ ಅನಾಹುತದಲ್ಲಿ ಅವರ ವಿಚಾರಶಕ್ತಿ ಮುಳುಗಿಹೋಗಿದೆ– ಆ ವಿಪತ್ತು ಅವರಿಗೆ ತೀರ ಹತ್ತಿರದ ಅನುಭವ. ಆದರೆ ದರ್ಯವುಷನ ಮಾತು ಬೇರೆ. ಇತಿಹಾಸದ ದರ್ಯವುಷ ಎಂಥವನೆಂಬ ಮಾತು ಇಲ್ಲಿ ಪ್ರಕೃತವಲ್ಲ. ಇಲ್ಲಿ

ಸಮಾಧಿಯಿಂದೇಳುವ ದರ್ಯವುಷ ಮರಣದ ಬಾಗಿಲನ್ನು ದಾಟಿ ಭೌತಶರೀರಿಗೆ ಅನಿವಾರ್ಯವಾದ ಕಟ್ಟುಗಳನ್ನು ನೀಗಿಕೊಂಡವನು; ಪತ್ನೀ ಪುತ್ರರಲ್ಲಿ ಪ್ರೀತಿಯಿದ್ದರೂ ಅದನ್ನು ಒತ್ತಟ್ಟಿಗಿಟ್ಟು ನಡೆದ ವಿಷಯಗಳನ್ನು ಸ್ವಚ್ಛ ದೃಷ್ಟಿಯಿಂದ, ಬೇರೊಂದು ಲೋಕದಲ್ಲಿ ಪಡೆದ ವಿಶೇಷ ಜ್ಞಾನದಿಂದ, ಧರ್ಮ ದೃಷ್ಟಿಯಿಂದ, ಪರಿಶೀಲಿಸಬಲ್ಲವನು. ಈಸ್ಕಿಲಸ್‌ನ ಉದ್ದೇಶ ಸಾಧನೆಗೆ ಇಂಥ ವ್ಯಕ್ತಿಯೊಬ್ಬನನ್ನು ರಂಗಕ್ಕೆ ತರದೆ ವಿಧಿಯಿಲ್ಲ.

ಈಸ್ಕಿಲಸ್‌ನು ಯುದ್ಧದ ಕಥೆಯನ್ನು ಉದಾತ್ತವಾದ ಧಾರ್ಮಿಕತತ್ತ್ವದ ಬೋಧನೆಗಾಗಿ ಅಳವಡಿಸಿಕೊಂಡಿದ್ದಾನೆ. ಕ್ರಿಯೆಗೆ ಹೊಸದೊಂದು ಬೆಳಕು ಕೊಟ್ಟು ಅದರ ಬೆಳವಣಿಗೆ ಹೀಗೇ ಆಗಬೇಕೆಂದು ನಿರ್ಧರಿಸಿ, ಅದರ ಎಲ್ಲ ಸೂತ್ರಗಳನ್ನೂ ಹಿಡಿದು ಆಳುವುದೆಂದರೆ ಈ ತತ್ತ್ವ, ದೊಡ್ಡದೊಂದು ಚಕ್ರಾಧಿಪತ್ಯ ಉರುಳಿಬಿದ್ದುದನ್ನು ಮಾತ್ರ ರೂಪಿಸಿದರೆ ಆ ಚಿತ್ರ ಕರುಣಾಜನಕವಾಗಬಹುದಾಗಿತ್ತು; ಆದರೆ ರುದ್ರನಾಟಕವಾಗುತ್ತಿರಲಿಲ್ಲ. 'ಹ್ಯೂಬ್ರಿಸ್'ನ ಕ್ರಿಯೆ, ಅದಕ್ಕೆ ಆಗಲೇಬೇಕಾದ ಪ್ರಾಯಶ್ಚಿತ್ತ-ಇವು ನಾಟಕದ ಮುಖ್ಯವಸ್ತು; ಎರಡು ರಾಷ್ಟ್ರಗಳ ಹೋರಾಟವಲ್ಲ. ಇಲ್ಲಿಯ ಕ್ಷಯಾರ್ಷ ಪೂರ್ವದೇಶದ ಚಕ್ರವರ್ತಿಯೆನ್ನುವುದಕ್ಕಿಂತ ಪಾಪಕ್ಕೆ ಎಡೆಗೊಟ್ಟು ಅದರ ಫಲವನ್ನು ಅನುಭವಿಸಿದವನು ಎಂದರೆ ಸರಿಯಾಗುತ್ತದೆ; ದೈವವು ಗ್ರೀಕರ ಪರವಾಗಿ ನಿಂತಿತೆನ್ನುವುದಕ್ಕಿಂತ ಪಾರಸಿಕರ ಅಧರ್ಮಕ್ಕೆ ಎದುರಾಗಿ ನಿಂತಿತೆನ್ನುವುದು ಸತ್ಯದ ಮಾತು. ಕೇವಲ ನಮ್ಮ ಅಭ್ಯುದಯವನ್ನು ಸಹಿಸಲಾರದೆ ದೈವ ನಮ್ಮನ್ನು ಮುರಿಯುತ್ತದೆಂಬ ವಾದವನ್ನು ಈಸ್ಕಿಲಸ್ ಒಪ್ಪುವವನಲ್ಲ. ಈ ವಾದವನ್ನು ಸಮರ್ಥಿಸುವಂಥ ಮಾತುಗಳೇನೋ ನಾಟಕದಲ್ಲಿ ಬರುತ್ತವೆ. ಆದರೆ ಅವು ಭಯಂಕರವಾದ ಸಂಕಟದಿಂದ ದೃಷ್ಟಿ ಮುಸುಕಾಗಿ ಸತ್ಯವನ್ನು ನೋಡಲಾರದವರ ಉದ್ಗಾರ.

ತಾನು ಪಾರಸಿಕನಾದರೂ ಮರ್ತ್ಯ ಪ್ರಪಂಚದ ಹೋರಾಟದಿಂದ ದೂರವಾಗಿ ನಿಂತು ಅದನ್ನು ಪೊರೆಕಳೆದ ದೃಷ್ಟಿಯಿಂದ ನೋಡಬಲ್ಲವನೆಂದರೆ ದರ್ಯವುಷ. ಅವನ ಅಭಿಪ್ರಾಯದಲ್ಲಿ, ದೈವ ತಾನಾಗಿ ನಮ್ಮ ಬುದ್ಧಿಯನ್ನು ಕೆಡಿಸುವುದಿಲ್ಲ. ಕೇಡಿಗೋಡಲೆಳಸಲೊಬ್ಬ, ದೈವವವನ ತಳ್ಳುವುದು. ಕ್ಷಯಾರ್ಷ ಕೇಡಿಗೋಡಲೆಳಸಿದ್ದಾನೆ. ಯೌವನದ ಮದದಿಂದ ಸೊಕ್ಕಿದ್ದಾನೆ. ಸಾಗರವೂ ತನ್ನ ಅಧೀನವೆಂದು ತೋರಿಸಲು ನೀರಿಗೆ ಸಂಕಲೆಗಳನ್ನು ಬಿಡಿಸಿ ಪೊಸೈಡನ್* ದೇವನನ್ನೇ ದಾಸ್ಯಕ್ಕೆಳೆಯುವ ಯತ್ನ ಮಾಡಿದವನಲ್ಲವೆ ಈ ಕ್ಷಯಾರ್ಷ! ಹೆಲಸ್ಪಾಂ

---

* ಸಮುದ್ರದ ಅಧಿದೇವತೆ

ಟನ್ನು ದಾಟಿ ಗ್ರೀಸಿಗೆ ಕಾಲಿಟ್ಟಮೇಲೂ ಪಾರಸಿಕರೇನು ಧರ್ಮಯುದ್ಧವನ್ನು ನಡೆಸಿದರೆ!

ಹೆಲಸಿಂಗೆ ಹೋದವರು ಭಯ ಮರೆತು ಕೊಬ್ಬಿನಲಿ
ದೇವಾಲಯಂಗಳ್ಗೆ ಕಿಚ್ಚಿಕ್ಕಿ ಸೂರೆಗೆಯ್ದರ್.
ಭಕ್ತಿಯೆಂಬುದ ಕಾಣೆ—ಬಲಿಪೀಠಗಳನೊಡೆದು
ಪ್ರತಿಮೆಗಳ ಕಿತ್ತೆಸೆದು, ಪೂಜೆ ಸಾಮಗ್ರಿಗಳ
ನಿಟ್ಟಾಡಿ ಹೊಲೆಗೆಯ್ದರೆಲ್ಲಮನ್. ಮಾಡಿದೀ
ಪಾಪಂಗಳುಣ್ಣದೇ ಪೋಕುಮೇ? (೬೯೬ ff)

ಆದ್ದರಿಂದ ಮಾನವನಿಗೆ ಹೆಮ್ಮೆ ಸಲ್ಲದು ;

ಅಳ್ಗಲ್ಲ, ಮರ್ತ್ಯಂಗೆ ಹೆಮ್ಮೆ ಬಗೆ.....
ಆ ಸೊಕ್ಕು ಹೂವಾಗಿ, ಕೊರಗಿನಲಿ ತೆನೆಯಾಗಿ
ಆವ ಹಂಬಲುಮಳಿದ ಬೆಳೆಯಾಗಿ, ಕೊಯ್ಯುವುದು
ಪಾಪಫಲವನು ತಿಳಿ.....
ಗಗನಕ್ಕೆ ನೆಗೆದಡರುವರ ಹಮ್ಮುಗಳ ಮೆಟ್ಟಿ
ತಕ್ಕ ಕಾಲಕೆ ಕೊಬ್ಬನಿಳಿಸದಿರನಾ ಸ್ಯೂಸ್. (೭೦೬ ff)

ದರ್ಯವುಷನ ಈ ಮಾತುಗಳು ಮೇಳದವರ ಕಣ್ಣು ತೆರೆಯುತ್ತವೆ. ಇವನ್ನು ನೆನೆದೇ ಅವರು ನಾಟಕದ ಕೊನೆಯಲ್ಲಿ ಹೇಳುತ್ತಾರೆ:

ಕ್ಷಯಾರ್ಷ— ಏಷ್ಯದ ಸಾಮ್ರಾಜ್ಯಕಾರು?
ಮೇಳ— ದೇವರೇ.
ಕ್ಷಯಾರ್ಷ— ಸಾಮ್ರಾಜ್ಯವ ಕಾವರಾರು?
ಮೇಳ— ಧರ್ಮವೇ:
ದೈವ ಕಾವ ಧರ್ಮವೇ. (೯೨೫ ff)

ಈ ಕೊನೆಯ ಮಾತುಗಳನ್ನು ಶ್ರೀಕಂಠಯ್ಯನವರೇ ಸೇರಿಸಿದ್ದಾರೆ—ಈಸ್ಕಿಲಸ್‌ನ ಧರ್ಮದೃಷ್ಟಿ ನಮ್ಮ ಮನಸ್ಸಿನಲ್ಲಿ ದೃಢವಾಗಿ ನಿಲ್ಲಲೆಂದು.

ನಾಟಕವು ದೃಶ್ಯಕಾವ್ಯ. ಆದರೆ ಬಹುಮಟ್ಟಿಗೆ ಈ ನಾಟಕ ಕಥನ ಕಾವ್ಯವಾಯಿತು. ಇಲ್ಲಿ ಕ್ರಿಯೆ ಸಾಲದು—ಆ ಕುಂದನ್ನು ಸ್ವಲ್ಪಮಟ್ಟಿಗೆ ಸರಿಪಡಿಸುವುದೆಂದರೆ ದರ್ಯವುಷನ ಪುನರುತ್ಥಾನ ಪ್ರಕರಣ. ಆದರೆ ಎಲಿಜಬೆತ್ ಕಾಲದ ಇಂಗ್ಲಿಷ್ ನಾಟಕಗಳಲ್ಲಿ ಸಾಮಾನ್ಯವಾಗಿ ಕಾಣುವ ಕ್ರಿಯಾಬಾಹುಳ್ಯವನ್ನು

ನಾವು ಗ್ರೀಕ್ ನಾಟಕಗಳಲ್ಲಿ ನಿರೀಕ್ಷಿಸಲಾಗದು. ಅಲ್ಲದೆ ಇದು ಸಾಲಮಿಸ್ ಕದನದ ಸಂಧರ್ಭವನ್ನು ಕುರಿತ ನಾಟಕ. ಆ ಸಂದರ್ಭ ಈಸ್ಕಿಲಸ್‌ನ ಪ್ರೇಕ್ಷಕರ ನೆನಪಿನಲ್ಲಿ ಇನ್ನೂ ಜೀವಂತವಾಗಿತ್ತು—ಅದರ ನೆನಪು ಅವರಿಗೆ ಹೆಮ್ಮೆಯ ವಿಷಯ, ನಮಗೆ ಸಾಲದೆಂದು ತೋರುವ 'ನಾಟಕ' ಅವರ ಮನಸ್ಸಿನಲ್ಲೇ ಸ್ವಲ್ಪಮಟ್ಟಿಗೆ ನಡೆದಿರಬೇಕು.

ಆದರೆ ಗ್ರೀಕರ ವಿಜಯದ ಅಟ್ಟಹಾಸವನ್ನು ಈಸ್ಕಿಲಸ್ ಬಲವಾಗಿ ತಡೆದಿಟ್ಟಿದ್ದಾನೆ. ಕವಿ ತನ್ನ ಮಾಯಾದಂಡವನ್ನು ಬೀಸಿದ ಮೇಲೆ ಈ ಕಥೆ ಕೇವಲ ಎರಡು ಜನಾಂಗಗಳ ಕಲಹವಾಗಿ ಉಳಿಯಲಿಲ್ಲ. ಅವನು ಇಲ್ಲಿ ಹಾಡಿರುವುದು ಸೊಕ್ಕಿದ ಮಾನವನ ಚರಮಗೀತೆ. ಅದರಿಂದಲೇ ಅವನು ಈ ನಾಟಕದಲ್ಲಿ ಗ್ರೀಕರ ಶೌರ್ಯ ಪ್ರತಾಪಗಳನ್ನು ಮೆರೆಸಲಿಲ್ಲ. ಒಬ್ಬನೇ ಒಬ್ಬ ಗ್ರೀಕ್ ವೀರನ ಹೆಸರನ್ನೂ ಸಹ ಅವನು ಹೇಳಿಲ್ಲ-ಪಾರಸಿಕವೀರರ ದೊಡ್ಡ ಪಟ್ಟಿಯನ್ನೊಳಗೊಂಡ ಈ ನಾಟಕದಲ್ಲಿ. ಈಗ ಎರಡು ಜನಾಂಗಗಳಿಗೆ ಯುದ್ಧ ಸಂಭವಿಸಿದರೆ ಒಬ್ಬರ ವಿಷಯವಾಗಿ ಮತ್ತೊಬ್ಬರು ಮಾಡುವ ಅಪಪ್ರಚಾರವನ್ನೂ ಕೆರಳಿಸುವ ದ್ವೇಷವನ್ನೂ ನೋಡಿದರೆ ಈಸ್ಕಿಲಸ್ ಎಂಥ ಉನ್ನತ ವಾತಾವರಣದಲ್ಲಿದ್ದಾನೆನ್ನುವುದು ಸ್ಪಷ್ಟವಾಗುತ್ತದೆ—ಈಗಿನವರು ನಾಚಿ ತಲೆ ತಗ್ಗಿಸಬೇಕಾಗುತ್ತದೆ. ಈ ನಾಟಕಕ್ಕೆ ಈಸ್ಕಿಲಸ್‌ನ ಕೃತಿಗಳಲ್ಲಿ ಹೆಚ್ಚಿನ ಸ್ಥಾನವೇನೂ ಇಲ್ಲವಾದರೂ ಇದರಲ್ಲಿರುವ ಮೇಲೆ ಹೇಳಿದ ಗುಣ ಶ್ರೀಕಂಠಯ್ಯನವರನ್ನು ಆಕರ್ಷಿಸಿತು. ಅವರೇ ಈ ಮಾತನ್ನು ಹೇಳಿದ್ದನ್ನು ಕೇಳಿದ್ದೇನೆ.

ಪಾತ್ರರಚನೆಯಲ್ಲಿ ಈಸ್ಕಿಲಸ್ ಸೂಕ್ಷ್ಮವಾದ ವಿಶ್ಲೇಷಣದ ಕೆಲಸಕ್ಕೆ ಕೈ ಹಾಕುವವನಲ್ಲ. ಹುತೌಶಳಲ್ಲೂ ಸಮಾಧಿಯಿಂದೇಳುವ ದರ್ಯವುಷನಲ್ಲೂ ಚಕ್ರವರ್ತಿತನಕ್ಕೆ ಸಹಜವಾದ ಗಾಂಭೀರ್ಯವಿದೆ. ಹುತೌಶಳಲ್ಲಿ ಕಾಣುವ ದರ್ಪವೂ ದರ್ಯವುಷನಲ್ಲಿ ಮರೆಯಾಗಿ ಅದಕ್ಕೆ ಬದಲು ಪರಿಪೂರ್ಣವಾದ ಜ್ಞಾನ ಕಂಡುಬರುತ್ತದೆ. ಕ್ಷಯಾರ್ಷ ನಾಟಕದ ಕೊನೆಯಲ್ಲಿ ರಂಗಸ್ಥಳಕ್ಕೆ ಬರುತ್ತಾನೆ. ಅವನು ಶೂರನಾಗಿದ್ದನೋ ಏನೊ. ಇಲ್ಲಿಯ ಶೌರ್ಯದ ಲಕ್ಷಣಗಳೇನೂ ಕಾಣುವುದಿಲ್ಲ. ಅವನಲ್ಲಿ ತನ್ನ ಶಕ್ತಿಯ ಅರಿವೂ ಇಲ್ಲ, ಪಾಪದ ಅರಿವೂ ಇಲ್ಲ. "ಪರಿಣಾಮವೇನಾದರೂ ಆಗಲಿ, ನಾನು ಕೈಹಾಕಿದ್ದು ಮಹತ್ವದ ಕೆಲಸಕ್ಕೆ" ಎಂದುಕೊಳ್ಳುವ ಕೆಚ್ಚಿಲ್ಲ. ತನ್ನ ಸೋಲನ್ನೊಪ್ಪಿಕೊಳ್ಳುವಾಗ ಅಳುಕದೆ ನಿಂತು ವಿಧಿಯ ಪೆಟ್ಟನ್ನು ಸಹಿಸಿಕೊಳ್ಳುವ ಚೈತನ್ಯವಿಲ್ಲ. ರುದ್ರನಾಟಕದ ನಾಯಕ ಸೋತು ಮರಣ ಹೊಂದಿದರೂ ಅವನಲ್ಲಿ ಕಂಡುಬರುವ ಉದಾತ್ತತೆ, ಅವನ ಪಾಪವನ್ನೂ ಸಹ ಮರೆಸಿ ಮೇಲೆದ್ದು ಕಾಣುವ ಏನೋ ಒಂದು ದೊಡ್ಡತನ, ಅವನಲ್ಲಿರಬೇಕು. ಕ್ಷಯಾರ್ಷನಲ್ಲಿ ಅದೇನೂ ಕಾಣುವುದಿಲ್ಲ. ಬಹುಶಃ ನಮಗೆ ಈ ನಾಟಕ ಅಷ್ಟಾಗಿ ರುಚಿಸದಿರುವುದಕ್ಕೆ ಇದೇ ಕಾರಣ. ನಾಟಕಕ್ಕೆ ಐಕ್ಯ ಕೊಡಬಹುದಾದ ಉದಾತ್ತ ತತ್ತ್ವ

ವಿದ್ದರೂ ಮೊದಲಿಂದ ಕಡೆಯವರೆಗೆ ನಿಂತು ಅದರ ಕ್ರಿಯೆಯನ್ನು ನಡೆಸಬಲ್ಲ ವ್ಯಕ್ತಿಯಿಲ್ಲ. ಕ್ಷಯಾರ್ಷ ಅಂಥ ವ್ಯಕ್ತಿಯಲ್ಲ.

ರಂಗಸ್ಥಳದ ಮೇಲೆ ಈ ನಾಟಕ ಯಶಸ್ವಿಯಾಗಲಿಲ್ಲ. ಶ್ರೀಕಂಠಯ್ಯನವರು 'ಅಶ್ವತ್ಥಾಮನ್' ನಾಟಕವನ್ನು ಬರೆದ ಮೇಲೆ ಅನುವಾದ ಮಾಡುವುದಕ್ಕೆ ಈ ನಾಟಕವನ್ನೇಕೆ ಆರಿಸಿಕೊಂಡರು ? ಇದಕ್ಕೆ ಅವರೇ ಕೊಟ್ಟ ಕಾರಣವನ್ನು ಮೇಲೆ ಹೇಳಿದ್ದಾಗಿದೆ. ಆದರೂ ಈ ಪ್ರಶ್ನೆ ಅನೇಕರನ್ನು ಬಾಧಿಸುತ್ತದೆ. ಈಸ್ಕಿಲಸ್‌ನ ನಾಟಕವೊಂದನ್ನು ಅನುವಾದಿಸಬೇಕು ಎಂದು ಹೊರಟವರು 'ಅಗಮೆಮ್ನನ್'ಅನ್ನು ಆರಿಸಿಕೊಳ್ಳಬಾರದಾಗಿತ್ತೆ ಎಂಬ ಯೋಚನೆ ನಮ್ಮಲ್ಲಿ ಅನೇಕರನ್ನು ಕಾಡಿದೆ. ನಮಗೆ ಆ ಅದೃಷ್ಟವಿರಲಿಲ್ಲ ಎಂದು ಸುಮ್ಮನಾಗಬೇಕು. 'ಅಶ್ವತ್ಥಾಮನ್' ನಾಟಕದಲ್ಲಿ ಕಾಣುವ ಉಜ್ವಲ ಪ್ರತಿಭೆ, ಅಲ್ಲಿಯ ಬಿಗಿ, ಗೀತೆಗಳ ಅಸಾಧಾರಣ ಮಾಧುರ್ಯ ಇಲ್ಲಿ ಕಾಣದೆಂದು ಒಪ್ಪಲೇಬೇಕು. ಶೈಲಿಯಲ್ಲಿ ಕೆಲವು ವೇಳೆ ಶೈಥಿಲ್ಯ ಕಂಡುಬರುತ್ತದೆ. ಇಲ್ಲಿ ಶ್ರೀಕಂಠಯ್ಯನವರು ಸ್ವತಂತ್ರ ಕವಿಗಳಲ್ಲ; ಈಸ್ಕಿಲಸ್ ಹೋದಂತೆ ಇವರೂ ಹೋಗಬೇಕು. ಮೂಲ ನಾಟಕದ ಕುಂದು ಕೊರತೆಗಳೆಲ್ಲ ಇಲ್ಲಿಯೂ ಇವೆ. ಕಥನ ಹೆಚ್ಚು, ಕ್ರಿಯೆ ಕಡಿಮೆ ; ದರ್ಯವುಷನ ಪ್ರೇತ ಅದೃಶ್ಯವಾದ ಮೇಲಂತೂ ನಾಟಕ ತೀರ ಇಳಿಮುಖವಾಗುತ್ತದೆ ; ಕ್ಷಯಾರ್ಷನ ಪಾತ್ರ ಉದಾತ್ತವಾದದ್ದಲ್ಲ; ನಾಟಕದಲ್ಲಿ ಗೋಳು ಕರೆ ವಿಪರೀತ. ಇದೆಲ್ಲ ನಿಜ. ಆದರೂ ಇಲ್ಲಿಯ ಸೋಲು ಈಸ್ಕಿಲಸ್‌ನ ಸೋಲು; ಮಿಡಿದಿರುವುದು ಒಂದೇ ತಂತಿಯೆಂದರೂ ಅದರಿಂದ ಹೊರಟಿರುವ ಗಾನದಲ್ಲಿ ಗಾಂಭೀರ್ಯವಿದೆ.

೬. ಹೊಂಗನಸುಗಳು

೧೯೨೬ರಲ್ಲಿ ಪ್ರಕಟವಾದ ಈ ಪುಸ್ತಕ ಆಗಿಂದಾಗ, ಬೇರೆ ಬೇರೆ ಸಂದರ್ಭಗಳಲ್ಲಿ, ಶ್ರೀಕಂಠಯ್ಯನವರು ಬರೆದ ಕವನಗಳ ಸಂಗ್ರಹ. ಸುಮಾರು ಮೂರು ದಶಕಗಳ ಕಾಲದಲ್ಲಿ ಅವರ ಮನಸ್ಸಿನಲ್ಲಿ ಸುಳಿದಾಡಿದ ಭಾರತ ಮತ್ತು ಕರ್ಣಾಟಕಗಳನ್ನು ಕುರಿತ ಆಲೋಚನೆಗಳು, ಬಯಕೆಗಳು ; ಅವರಿಗೆ ಸ್ಫೂರ್ತಿಕೊಟ್ಟ ಆದರ್ಶಗಳು ; ಮೈಸೂರಿನ ಮಹಾರಾಜರ (ಏಕೀಕೃತ ಕರ್ಣಾಟಕಕ್ಕೆ ಅವರು ಅರಸರಾಗಲಿ ಎಂಬುದು ಶ್ರೀಕಂಠಯ್ಯನವರ ಹೆಬ್ಬಯಕೆ) ವಿಷಯದಲ್ಲಿ ಅವರಿಗಿದ್ದ ಭಕ್ತಿ—ಇವೆಲ್ಲ ಇಲ್ಲಿಯ ಕವನಗಳಲ್ಲಿ ಅಡಕವಾಗಿವೆ. ಮೊದಲನೆಯ ಕವನ (೧೯೧೨ರಲ್ಲಿ ಬರೆದ 'ಭರತಮಾತೆಯ ನುಡಿ', ಇದೇ ಅವರ ಮೊಟ್ಟಮೊದಲನೆಯ ಕವನವಿರಬಹುದು.) ವಲ್ಲಿ ಆದಿಪ್ರಾಸವಿದೆ. ೧೯೨೬ರಲ್ಲಿ ಬರೆದ 'ಧರ್ಮಯುದ್ಧ' ಆದಿಪ್ರಾಸವನ್ನೊಳಗೊಂಡ ಷಟ್ಪದಿಯಲ್ಲಿದೆ. ಬಹಳ ಹಿಂದಿನಿಂದಲೂ ಬಳಕೆಯಲ್ಲಿದ್ದು ಪೂಜ್ಯತೆ ಪಡೆದಿದ್ದ, ಆದರೆ ತಾವು ಬಿಟ್ಟುಕೊಟ್ಟಿದ್ದ ಈ ಸಾಧನಗಳನ್ನು ಮತ್ತೆ ಬಳಸಿರುವುದನ್ನು ನೋಡಿದರೆ, ಶ್ರೀಕಂಠಯ್ಯನವರು ತಮ್ಮನ್ನು ಟೀಕಿಸಿದವರಿಗೆ, "ನೋಡಿ, ನಾನೇನೂ ಸಂಪ್ರದಾಯವನ್ನು ಅರಿಯದವನಲ್ಲ, ಅದನ್ನು ದ್ವೇಷಿಸುವವನೂ ಅಲ್ಲ. ಸೂಕ್ತ ತೋರಿದಂತೆ ಅದನ್ನುಬಳಸಲು ಹಿಂಜರಿಯುವುದಿಲ್ಲ" ಎಂದು ಹೇಳಿದಂತಿದೆ. ಉಳಿದೆಲ್ಲ ರೀತಿಯಲ್ಲೂ ಇಲ್ಲಿಯ ಕವನಗಳಲ್ಲಿ ಆಧುನಿಕತೆ ಸ್ಪಷ್ಟವಾಗಿ ಕಾಣುತ್ತದೆ.

ಭರತಮಾತೆಯೆ, ಭರತಮಾತೆಯೆ, ಎಂದು ನೀ ತಲೆಯೆತ್ತುವೆ? ಎಂದು ಆರಂಭವಾಗುತ್ತದೆ, ಮೊದಲನೆಯ ಕವನ. ಭಾರತ ತನ್ನಲ್ಲಿರುವ ಜಳ್ಳು ಕಸ ಕಲ್ಮಷಗಳನ್ನು ಕಿತ್ತೊಗೆಯಬಾರದೆ! ಇದೇನು ವಿಚಿತ್ರ ವಿರೋಧಾಭಾಸ, ನಮ್ಮ ದೇಶದಲ್ಲಿ?

ಯಾರು ಮುಸುಕಿದ ಕಣ್ಣ ಮುಂಜನು ತೆಗೆದು ಬೆಳಕನು ಬಿಟ್ಟರೋ,
ಯಾರು ಜಾಡ್ಯವ ಹರಿಸಿ ನಮ್ಮಲಿ ಹೊಸದು ಜೀವವನಿಟ್ಟರೋ,
    ಅವರೆ ಕಣ್ಣನು ಹರಿವರೇ—ಕುದಿ
    ದವರೆ ಕೊರಳನು ಮುರಿವರೇ !

ನಮ್ಮ ಪುರಾತನ ಸಂಸ್ಕೃತಿಯ ಭವ್ಯತೆಯೇ ನಮಗೆ ಹೊರಲಾರದ ಹೊರೆಯಾಗಿ ಪರಿಣಮಿಸಿದೆ ; ಅದರ ದಟ್ಟ ನೆರಳಿನಿಂದ ನಮ್ಮ ಪಥ ಮಸಕಾಗಿದೆ, ಬದುಕು ಜಡವಾಗಿದೆ, ಪ್ರಗತಿ ನಿಂತಲ್ಲಿ ನಿಂತಿದೆ!

ಹೊಳೆದ ಸತ್ಯವ ಹಿಡಿದು ಮುಂದಕೆ ನೂಕಲಮ್ಮದೆ ಸೆಡೆದಿರಿ,
ಹಳದ ನೆಮ್ಮುತ ಜಾತಿ ಮತಗಳ ಮದದ ಗುಹೆಯಲಿ ಕೆಡೆದಿರಿ ;

ಬಯಲ ಬೆಳಕಿಗೆ ಮುಳಿದಿರಿ—ಸಮ
ದಯದ ನಡತೆಯ ಹಳಿದಿರಿ

ಇದು, ಭರತಮಾತೆ ತನ್ನ ಮಕ್ಕಳ ಮೇಲೆ ಹೊರಿಸುವ ಆಪಾದನೆ. ಭಾರತದ ಪದೇ ಪದೇ ಶತ್ರುಗಳು ದಾಳಿಯಿಟ್ಟು ಬಂದರಷ್ಟೆ. ಶ್ರೀಕಂಠಯ್ಯನವರ ದೃಷ್ಟಿಯಲ್ಲಿ ಆ ದಾಳಿಗಳೆಲ್ಲ ಭರತಮಾತೆ ತನ್ನ ಮಕ್ಕಳನ್ನು ಜಡತೆಯಿಂದ ಎಚ್ಚರಿಸಿ ಹುರಿದುಂಬಿಸಲು ಮಾಡಿದ ಪ್ರಯತ್ನಗಳು. ಆಗಲೇನೋ ಜನರು ಎಚ್ಚೆತ್ತರು, ಆದರೆ ಮತ್ತೆ ಮುಸುಕು ಎಳೆದುಕೊಂಡು ಮಲಗಿದರು. ಮಾತೆ ಬೇರೊಂದು ಉಪಾಯವನ್ನು ಹುಡುಕಬೇಕಾಯಿತು.

ಕಡೆಗೆ ನೆನೆದೆನು ನನ್ನ ಮನೆತನ ನೇರವಾಗುವ ತೆರವನು,
ಕಡಲ ರಾಣಿ ಬ್ರಿಟಾನಿಯಳ, ನನ್ನಿನಿಯ ತಂಗಿಯ ನೆರವನು ;
ಗೆಲಿದು ನಾಡನು ಬೆಸೆದಳು—ನೆಲ
ದೊಲುಮೆ ಕಟ್ಟನು ಹೊಸೆದಳು.

ಈ ಕವನ ಶ್ರೀಕಂಠಯ್ಯನವರ ಮನೋವೃತ್ತಿಯನ್ನು ಬಹಳ ಚೆನ್ನಾಗಿ ಪ್ರತಿಬಿಂಬಿಸುತ್ತದೆ ; ಇಂಗ್ಲೆಂಡ್-ಇಂಡಿಯಾ ಸಂಬಂಧದ ಸ್ವರೂಪ—ಅವರ ದೃಷ್ಟಿಯಲ್ಲಿ—ಎಂಥದೆಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಶ್ರೀಯವರು ಹೇಳುವಂತೆ, ಆ 'ಇನಿಯ ತಂಗಿ' ಬ್ರಿಟಾನಿಯ "ಸಕಲ ಜ್ಞಾನವ ತೆರೆದಳು ; ಸಕಲ ಸೀಮೆಯ ಬಳಕೆಗೆಳೆದಳು" ಎಂಬ ಮಾತು ಒಪ್ಪತಕ್ಕದ್ದೇ—ಆಕೆ ಭಾರತವನ್ನು ತನ್ನ 'ಇನಿಯ ಅಕ್ಕ' ಎಂದು ಭಾವಿಸಿದಳೆ, ಸಕಲ ಜ್ಞಾನವನ್ನೂ ತೆರೆದದ್ದು ಉದ್ದೇಶಪೂರ್ವಕವಾಗಿಯೇ, ಎಂಬುದು ಬೇರೆ ಮಾತು. ಆದರೆ ಅವಳು 'ನಾಡನ್ನು ಬೆಸದಳೆ' ? 'ಒಲುಮೆಕಟ್ಟನು ಹೊಸೆದಳೆ' ? ಬ್ರಿಟನ್ನಿನ ಆಳ್ವಿಕೆಯಲ್ಲಿ ನಾಡು ಒಂದಾದದ್ದು ನಿಜ ; ನಾಡು ಒಂದು ಎಂಬ ಭಾವನೆ ಬೆಳೆದದ್ದೂ ನಿಜ. ಆದರೆ ಬ್ರಿಟಿಷರು ಇಂಡಿಯಾದಲ್ಲಿ ಮತಕ್ಕೆ ಸಂಬಂಧಪಟ್ಟ, ಜಾತಿಗೆ ಸಂಬಂಧಪಟ್ಟ ವೈಷಮ್ಯಗಳನ್ನು ಬೆಳೆಸಿದರೆಂಬುದೂ ನಿಜ. ಅದರಲ್ಲಿ ಅನೇಕರು ಇಂಡಿಯಾ ಒಡೆದುಹೋಗುತ್ತದೆ ಎಂದು ಭವಿಷ್ಯ ನುಡಿಯುತ್ತಿದ್ದುದಲ್ಲದೆ, ಒಡೆದುಹೋಗಲೆಂದು ಹಾರೈಸುತ್ತಲೂ ಇದ್ದರು ಎನ್ನಬಹುದು. ನಿಜವಾಗಿ ನೋಡಿದರೆ, ಬ್ರಿಟಿಷ್ ಆಡಳಿತಗಾರರ ಉದ್ದೇಶವೇ ಬೇರೆ, ಅವರ ಆಡಳಿತದಿಂದಾದ ಪರಿಣಾಮವೇ ಬೇರೆ. ಅದನ್ನೆಲ್ಲ ಈಗ ಮೆಲುಕುಹಾಕಿದ್ದರಿಂದ ಪ್ರಯೋಜನವಿಲ್ಲ. ಶ್ರೀಕಂಠಯ್ಯನವರು ಬ್ರಿಟನ್ನಿಗೆ ಸಲ್ಲಿಸಿರುವ ಹೊಗಳಿಕೆಯನ್ನು ಸಂಪೂರ್ಣವಾಗಿ ಅನುಮೋದಿಸುವುದು ಸಾಧ್ಯವಲ್ಲವಾದರೂ ಈ ಮುಂದೆ ಉದಾಹರಿಸಿರುವ ಮಾತನ್ನು ಒಪ್ಪಬಹುದು :

ಅವಳ ಗುಣವನು ಮೆರೆಯಿರಿ—ಕಳೆದವಳ ಕೊರತೆಯ ಮರೆಯಿರಿ. ಇದು ಮಹಾತ್ಮ ಗಾಂಧಿಯವರು ಒಪ್ಪಬಹುದಾದ ಮಾತು. ಉದ್ದಿಷ್ಟವಾಗಿಯೋ ಅನು

ದ್ವಿಷ್ಟವಾಗಿಯೋ ಬ್ರಿಟನ್ನಿಗೆ ಭಾರತಕ್ಕಿದ್ದ ಸಂಬಂಧದಿಂದಾಗಿ ಭಾರತದ ಮೇಲೆ ಕೆಲವಾದರೂ ಒಳ್ಳೆಯ ಪರಿಣಾಮಗಳಾಗಿವೆ. ಅದನ್ನು ನೆನೆಯುವುದು ಸೌಜನ್ಯದ ಲಕ್ಷಣ.

ಈ ಪುಸ್ತಕದಲ್ಲಿ ಮೈಸೂರಿನ ರಾಜಮನೆತನವನ್ನು ಕುರಿತ ನಾಲ್ಕು ಕವನಗಳಿವೆ : 'ಶ್ರೀ ಕೃಷ್ಣರಾಜ ರಜತಮಹೋತ್ಸವ ಪ್ರಗಾಥ', 'ಬಾನ್‌ಕೊಂಡ ಕೃಷ್ಣನ್', ಶ್ರೀ ಜಯನ ಬೆಳಕು', 'ಅರಮನೆಯ ಒಸಗೆ' 'ಮೈಸೂರು ಮಕ್ಕಳು' ಎಂಬ ಕವನವೂ ಬಹುಮಟ್ಟಿಗೆ ಅದೇ ಗುಂಪಿಗೆ ಸೇರುತ್ತದೆ. ಈ ಗುಂಪಿನಲ್ಲಿ ಅತ್ಯುತ್ತಮವಾದ ಕವನವೆಂದರೆ 'ಶ್ರೀ ಕೃಷ್ಣರಾಜ ರಜತಮಹೋತ್ಸವ ಪ್ರಗಾಥ'—ನಾಲ್ಮಡಿ ಕೃಷ್ಣರಾಜ ರಜತ ಮಹೋತ್ಸವದ ಸಂದರ್ಭದಲ್ಲಿ ಬರೆದದ್ದು. ಇದರಲ್ಲಿ ಶ್ರೀಯವರು ಇಂಗ್ಲಿಷ್ ಸಾಹಿತ್ಯಾಭ್ಯಾಸಿಗಳಿಗೆ ಪರಿಚಿತವಾದ 'ಓಡ್' (Ode) ಎಂಬ ಕವನ ರೂಪವನ್ನು ಮೊಟ್ಟಮೊದಲಾಗಿ ಕನ್ನಡಕ್ಕೆ ತಂದಿದ್ದಾರೆ. ರಾಜ್ಯದಲ್ಲಿ ನಡೆಯುವ ದೊಡ್ಡ ಮಹೋತ್ಸವಗಳನ್ನು—ರಜತ ಅಥವಾ ಸುವರ್ಣ ಮಹೋತ್ಸವಗಳು, ಕಿರೀಟಧಾರಣೆ, ರಾಜ ಮನೆತನದಲ್ಲಾಗುವ ವಿವಾಹ, ರಾಷ್ಟ್ರ ಗಳಿಸಿದ ವಿಜಯ ಇತ್ಯಾದಿಗಳನ್ನು ಕುರಿತು ಕವನ ಕಟ್ಟುವುದು ಇಂಗ್ಲೆಂಡಿನಲ್ಲಿ ಪೊಯೆಟ್ ಲಾರಿಯೆಟ್' (poet laureate) ಎನ್ನಿಸಿಕೊಳ್ಳುವವನ ಕೆಲಸ. ಇಂಥ ಸಂದರ್ಭಗಳಲ್ಲಿ ಕವಿಯು ತಾನಾಗಿ ಬರದ ಭಾವೋತ್ಕರ್ಷವನ್ನು ಹೇಗಾದರೂ ತಂದುಕೊಂಡು, ಬಲವಂತವಾಗಿಯಾದರೂ ಪ್ರತಿಭೆಯನ್ನು ಹೊಡೆದು ಎಚ್ಚರಿಸಿಕೊಂಡು ಕವನವನ್ನು ಕಟ್ಟಬೇಕಾಗುತ್ತದೆ. ಈ ಬಗೆಯ ಕವನಗಳಲ್ಲಿ ಕವಿತಾಶಕ್ತಿ ಉನ್ನತ ಮಟ್ಟಕ್ಕೆ ಏರುವುದು ಕಷ್ಟ ; ಆದರೆ 'ಅಸಾಧ್ಯ' ಎನ್ನಲಾಗದು. ಒಟ್ಟಿನಲ್ಲಿ ಶ್ರೀಯವರು ಈ ಬಗೆಯ ಕವನಗಳಿಗೆ ಸಹಜವಾಗಿ ಬರುವ ತೊಡರುಗಳನ್ನು ಜಯಿಸಿ ಮೇಲಕ್ಕೆ ಹತ್ತಿದ್ದಾರೆ ಎಂದು ಹೇಳಬಹುದು. ಇಲ್ಲಿಯ ಛಂದಸ್ಸಿನ ಪ್ರಯೋಗದಲ್ಲಿ ಆಶ್ಚರ್ಯಕರವಾದ ಕೌಶಲವಿದೆ ; ರಾಜರ ಮೆರವಣಿಗೆ ನಡೆದಂತೆ ನಡೆಯುವ ಗಂಭೀರವಾದ ಕಥನ (narrative) ಕ್ಕಾಗಲಿ ಗೀತೆಯ ಭಾವೋತ್ಕರ್ಷಕ್ಕಾಗಲಿ ಲಯ ಅಯತ್ನತಃ ಹೊಂದಿಕೊಳ್ಳುತ್ತದೆ.

ಪಡುಗಡಲಿನ ತೆರೆ ಮುದ್ದಾಡುವ ಕರೆ, ಹೊಳೆ ಹಾಲಿಳಿಯುವ ಘಟ್ಟದೆಡೆ,

. . . . . .

ಜಲಜಲನುಕ್ಕುವ ಕಾಲುವೆ ಬಯಲಲಿ ಪಚ್ಚೆಯ ಪಯಿರಿನ ತುಂಬು ಬೆಳೆ—
—ಪ್ರಕೃತಿದೇವಿ ಅರಮನೆಯ ಮಹೋತ್ಸವಕ್ಕಾಗಿ ಸಿಂಗರಿಸಿಕೊಂಡಿದ್ದಾಳೆ.
ಮೇಲಿನಿಂದ ಮೂರುಜನ ದೇವಿಯರು—ಮೂರು ಬೆಳಕುಗಳು—ಇಳಿದುಬರುತ್ತಾರೆ.

ಕನ್ನಡದ ಸಿರಿಯೊಬ್ಬಳು, ಅಕ್ಕತಂಗಿಯರಂತೆ ತಬ್ಬುತ, ಕಡಲರಾಣಿಯ
ದೊಬ್ಬಳು, ಶ್ರೀ ಭರತಮಾತೆಯದೊಬ್ಬಳು.

ದೇಶದಲ್ಲಿ ಎಲ್ಲೆಲ್ಲೂ ಶೃಂಗಾರ, ಮಂಗಳದ ದೃಶ್ಯಗಳು, ದೀಪೋತ್ಸವ, ಹರ್ಷದ ಸಂಭ್ರಮ. 'ಮೈಸೂರು ಮನೆತನದ ಮೊದಲಿಗ'ನ ಬೇಡಿಕೆ,

ಧರ್ಮದೊಲವ ನಮಗೆ ನೀಡು,
ಸತ್ಯ ನಿಲಿಸುವಂತೆ ಮಾಡು,
ಹಿರಿಯ ಮೈತ್ರಿಗಳನು ಕೊಡು,

ಎಂಬ ಬೇಡಿಕೆ, ಫಲಿಸಿದೆ. ಜನತೆಯೆಲ್ಲ 'ಕನ್ನಡಿಗರ ವಯಿರಮುಡಿಯ ರಾಯ ಕೃಷ್ಣ'ನನ್ನು ಹರಸುತ್ತದೆ.

ಇಂದಿನ ಓದುಗರಿಗೆ ಶ್ರೀಕಂಠಯ್ಯನವರ ರಾಜಭಕ್ತಿಯಲ್ಲಿ ಭಾಗಿಗಳಾಗುವುದು ಸಾಧ್ಯವಲ್ಲ. ಈ ಕವನ ಪ್ರಕಟವಾದಾಗ (೧೯೨೭) ಯುವಕನಾಗಿದ್ದ ನನಗೂ ನನ್ನ ಸಂಗಡಿಗರನೇಕರಿಗೂ ಆ ಕಾಲದಲ್ಲಿ ಸಹ ಅದು ಸಾಧ್ಯವಾಗಲಿಲ್ಲ. 'ಕನ್ನಡದ ಸಿರಿಗೆ' 'ಕಡಲ ರಾಣಿ' ಕೊಟ್ಟ ಅಪ್ಪುಗೆಯ ಪ್ರಸ್ತಾವವನ್ನು ನುಂಗಿಕೊಳ್ಳುವುದಂತೂ ಇನ್ನೂ ಕಷ್ಟವಾಯಿತು. ಆದರೂ ಶ್ರೀಕಂಠಯ್ಯನವರ ವಿಷಯದಲ್ಲಿ ನಮಗಿದ್ದ ಗೌರವದಲ್ಲಿ ಈ ಅಸಮಾಧಾನಗಳು ತೇಲಿ ಹೋದುವು. ಶ್ರೀಕಂಠಯ್ಯನವರ ಮನಸ್ಸಿನ ಈ ಮುಖದ ಮಾತು ಬಂದಾಗ ನಾವು ಒಂದು ಅಂಶವನ್ನು ಗಮನ ದಲ್ಲಿಟ್ಟುಕೊಳ್ಳಬೇಕು. ಶ್ರೀಕಂಠಯ್ಯನವರು 'ನನ್ನೊಲವಿನಾಣ್ಮ', 'ನನ್ನುಸಿರ ಭಕ್ತಿಯೊಡೆಯ' ಎಂದು ಮುಂತಾಗಿ ಹೊಗಳಿದ ನಾಲ್ಮಡಿ ಕೃಷ್ಣರಾಜ ಒಡೆಯರು ನಿಜವಾಗಿಯೂ ದೊಡ್ಡ ಮನುಷ್ಯರು ; ಪ್ರಪಂಚವನ್ನು ತಿಳಿದವರು ; ತಮ್ಮ ಮತದಲ್ಲಿ ಶ್ರದ್ಧೆಯುಳ್ಳವರು ; ಪರಮತದ ವಿಷಯದಲ್ಲಿ ಸಹನೆಯುಳ್ಳವರು ; ಪ್ರಜೆಗಳ ಯೋಗಕ್ಷೇಮದಲ್ಲಿ ಆಸಕ್ತಿಯುಳ್ಳವರು ; ಲಲಿತ ಕಲೆಗಳಿಗೆ ಆಶ್ರಯ ಕೊಟ್ಟವರು ; ಜನಾಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಒಳ್ಳೆಯ ಮಂತ್ರಿ ಗಳನ್ನು ಆರಿಸಿಕೊಂಡು ದೇಶ ಸರ್ವತೋಮುಖವಾಗಿ ಮುಂದುವರಿಯುವಂತೆ ಆಳಿದವರು. ಶ್ರೀಕಂಠಯ್ಯನವರ ರಾಜಭಕ್ತಿ ನಮಗೆ ಸಾಧ್ಯವಲ್ಲದಿದ್ದರೂ ಆ ಭಕ್ತಿ ಅಪಾತ್ರದಲ್ಲಿ ಸಮರ್ಪಿತವಾಗಲಿಲ್ಲವೆಂದು ಒಪ್ಪಬೇಕು.

ಇದೇ ಕೃಷ್ಣರಾಜ ಒಡೆಯರ ಮರಣಕ್ಕಾಗಿ ದುಃಖಿಸುವ ಗೀತೆ "ಬಾನ್ ಕೊಂಡ ಕೃಷ್ಣನ್". ಇಂಗ್ಲಿಷ್‌ನಲ್ಲಿ ಈ ಬಗೆಯ ಕವನವನ್ನು elegy ಎಂದು ಕರೆಯುತ್ತಾರೆ. ಇಂಥ ಕವನಗಳಲ್ಲಿರುವ ಮನೋಧರ್ಮ ನಮ್ಮ ಸಾಹಿತ್ಯಕ್ಕೆ ಅಪರಿಚಿತವೇನಲ್ಲ. ಆದರೂ ಕನ್ನಡದಲ್ಲಿ ಶೋಕಗೀತೆಯೇ ವಿಶಿಷ್ಟವಾದೊಂದು ಸಾಹಿತ್ಯಪ್ರಕಾರವಾಗಿ ಗಣನೆಗೆ ಬಂದಿರಲಿಲ್ಲ. ಈ ಸಾಹಿತ್ಯರೂಪ ಶ್ರೀಕಂಠಯ್ಯ ನವರ ಕೊಡುಗೆಯೆನ್ನಬಹುದು. ವಾಗ್‌ದೇವತೆಗೆ (ಇಂಗ್ಲಿಷ್ ಕವನಗಳಲ್ಲಿ Muse) ಪ್ರಾರ್ಥನೆ, ಮಾನವರ ಮತ್ತು ಪ್ರಕೃತಿಯ ಶೋಕ. ಶೋಕದ ಮನೋ-ಭಾವದಲ್ಲಿ ಬದಲಾವಣೆಯಾಗಿ ಸತ್ತವನು ನಿಜವಾಗಿ ಸತ್ತಿಲ್ಲ.

ಅಳಿದನೇ ಶ್ರೀಕೃಷ್ಣನಳಿಯನ್ !
ಇರ್ಪನೇ ಶ್ರೀಕೃಷ್ಣನಿರ್ಪನ್—ಧೀರಧರ್ಮಾತ್ಮರಲ್ಲಿರ್ಪನ್ !

ಎಂದು ಆಶ್ವಾಸನೆ ಕೊಡುವುದು, ಕೊನೆಗೆ ನೊಂದ ಮನಸ್ಸಿಗೆ ಸಮಾಧಾನ ಕೊಡುವಂಥ ಮಾತುಗಳು :

ಲೋಕವೇ ಕೊಂಡಾಡೆ ನಲ್ಲ ಬಾಳ್ ಬಾಳ್ದಿ
ನಮ್ಮ ಹೆಮ್ಮೆಯ ಮನೆಗೆ ಹಿರಿಯ ಹೆಸರಾಳ್ದಿ
ಬಾ ಕೃಷ್ಣ, ನೀ ಧನ್ಯ, ನಿನ್ನಾಳ್ಕೆ ಧನ್ಯ
ನಾಡಿಂಗೆ ನೀ ನೆಟ್ಟ ನಮ್ಮ ಜಯ ಧನ್ಯ

—ಈ ಬಗೆಯ ಪ್ರಸಿದ್ಧ ಇಂಗ್ಲಿಷ್ ಕವನಗಳಲ್ಲಿರುವ ಮೇಲ್ಕಂಡ ಲಕ್ಷಣಗಳೆಲ್ಲ ಈ ಗೀತೆಯಲ್ಲೂ ಕಂಡುಬರುತ್ತವೆ. ಆದರೆ ಸಾಹಿತ್ಯ ವಿಮರ್ಶಕನ ದೃಷ್ಟಿಯಿಂದ ಇರುವ ಛಂದಸ್ಸಿನ ಸಂಪತ್ತು, ಪದಸಂಪತ್ತು, ಭಾವಸಂಪತ್ತು—ಇವೆಲ್ಲ ಕಾವ್ಯ ವಸ್ತುವಿಗೆ ತೀರ ಹೆಚ್ಚಾಯಿತು—ಎನ್ನಿಸುತ್ತದೆ. ಮೈಸೂರಿನ ರಾಜಮನೆತನವನ್ನು ಕುರಿತ ಉಳಿದೆರಡು ಕವನಗಳು—'ಶ್ರೀ ಜಯನ ಬೆಳಕು' ಮತ್ತು 'ಅರಮನೆಯ ಒಸಗೆ'—ಕಾವ್ಯ ದೃಷ್ಟಿಯಿಂದ ಅಷ್ಟೇನೂ ಉತ್ತಮವಲ್ಲ.

ದೇಶಾಭಿಮಾನದಿಂದ ಪ್ರೇರಿತವಾದ ಶ್ರೀಕಂಠಯ್ಯನವರ ಕವನಗಳಲ್ಲಿ ಅತ್ಯುತ್ತಮವಾದದ್ದೆಂದರೆ 'ಕನ್ನಡ ತಾಯ ನೋಟ'. ಇದು ವಿಜಯನಗರ ಸಾಮ್ರಾಜ್ಯದ ಆರುನೂರು ವರ್ಷದ ಹಬ್ಬವನ್ನು ಆಚರಿಸಿದ ಸಂದರ್ಭದಲ್ಲಿ ಬರೆದದ್ದು. ದೇಶ ಪ್ರೇಮದ ಉಜ್ವಲತೆ ಇಲ್ಲಿ ಕಾವ್ಯವಾಗಿಯೇ ಪರಿಣಮಿಸಿದೆ—ಅಲ್ಲಲ್ಲಿ ಭಾವ ಶೈಥಿಲ್ಯ ಕಾಣುತ್ತದೆಯಾದರೂ.

ಬಳಸಿ ಬಂದೆನು ಸುತ್ತಿ ಕನ್ನಡದ ನಾಡುಗಳ ಸಿರಿಯ ನೋಡುತ್ತ,
ತಾಯಡಿಯ ಹುಡಿಯ ತಲೆಗಾನುತ್ತ, ಹರಕೆಯ ಪವಿತ್ರಯಾತ್ರೆಯಲಿ
ಏನು ಚೆಲುವಿನ ನಾಡು! ಚೆಲುವು ಚೆಲ್ಲುವ ನಾಡು! ಕನ್ನಡದ ನಾಡು!
ಏನು ಚಿನ್ನದನಾಡು! ನಮ್ಮೊಲುಮೆಯಾ ನಾಡು! ನಮ್ಮನಿಯ ನಾಡು!
ಕಾವೇರಿಯಿಂದಮಾ ಗೋದಾವರಿಯವರೆಗೆ ಚಾಚಿರುವ ನಾಡು !
ಬಳಸಿದೆನು, ಸುತ್ತಿದೆನು, ಕಣ್ದಣಿಯ ನೋಡಿದೆನು, ಕುಣಿದು
ಹಾಡಿದೆನು :

ಶ್ರೀಕಂಠಯ್ಯನವರು ನಿಜವಾಗಿಯೂ ಕನ್ನಡ ನಾಡನ್ನು ಬಳಸಿದರು, ಸುತ್ತಿದರು, ಕಣ್ದಣಿಯ ನೋಡಿದರು, ಕುಣಿದು ಹಾಡಿದರು—ಅಥವಾ ಕುಣಿಯದಿದ್ದರೂ ಹಾಡಿದ್ದೇನೋ ನಿಜ ! ಕನ್ನಡ ನಾಡಿಗೆ ಕರ್ನಾಟಕ ಎಂಬ ಹೆಸರು ಬಂದಿದ್ದು ಹತ್ತಿ ಬೆಳೆಯುವ ಕರಿಯ ನೆಲದಿಂದ, ಎಂದೊಂದು ಥಿಯರಿ ಇದೆಯಷ್ಟೆ. ಶ್ರೀಕಂಠಯ್ಯ

ನವರು 'ಕಪ್ಪು' ಎಂಬ ಪದವನ್ನು ಹಿಡಿದು ಅದನ್ನು ಹೊರಳಿಸಿ ಹೊರಳಿಸಿ ನೋಡಿ ಅದರ ಸೌಂದರ್ಯವನ್ನು ಸೆಳೆದು ತೋರಿಸುತ್ತಾರೆ.

ಕಾರ್‌ಮೋಡಗಳು ಕಪ್ಪು, ಹೊಳೆಕೆರೆಯ ಮಡುಕಪ್ಪು, ತಾಯ ಕಾಲ್ ತೊಳೆವ
ಉಪ್ಪು ಕಡಲದು ಕಪ್ಪು, ಜನಕಪ್ಪು—ಏನೆಂದೆ? ತಪ್ಪು, ತಪ್ಪು!—
ಸಿಮ್ಮೂರ ಹೆಣ್ಣುಗಳ ಕಣ್‌ನೋಟ, ತಣ್‌ನೋಟ ಕರ್ಪು, ಬಲು ಕರ್ಪು!
ಕರ್ಪೊ, ಬೆಳ್ಪೋ ಕಾಣೆ, ಕನ್ನಡದ ಕಣ್ಣೋಟ—ಕೂರ್ಪು, ಆರ್ಪು!
ಓ ತಾಯೆ, ಕನ್ನಡದ ಪೆಣ್ ತಾಯೆ, ನಮ್ಮಮ್ಮ, ದೇವಿ, ಸಾಮ್ರಾಜ್ಞಿ.
ಸುಳಿಗುರುಳು, ನಗೆಗಣ್ಣು ಏನು ಕಪ್ಪೇ ನಿನಗೆ—ಮುತ್ತಿಡುವ ಕಪ್ಪು! ಈ
ಕಪ್ಪಿನ ಸವಾಲಿಗೆ ಜವಾಬಾಗಿ ಬಿಳುಪು—'ಕೂರಸಿಯ ಮಿಂಚು, ಕಾರ್
ಮಿಂಚು, ಪೆಣ್ಮಣಿಗಳಾ ಕಣ್ಣನುಣ್ಮಿಂಚು', 'ಬೆಳ್ಳಂಗೆಡೆವ ನೀರ್ ಬೀಳು
ಬೆಳ್ಪು! ಕಡೆದ ನೊರೆ, ಚಿಗಿವ ನೊರೆ, ತೂರು ನೂರೆ, ಕುಡಿವ ನೂರೆ, ಬೆಳ್ಪಿನೊಳ್
ಬೆಳ್ಪು!'

ಕಾರ್ವಾರ, ಗೋಕರ್ಣ, ಉಡುಪಿ, ಜಾಮರ್ಾಡಿ—ನಾಡೆಲ್ಲವನ್ನೂ ಬಳಸಿ ಬಂದ ಕವಿಗೆ ಕನ್ನಡ ತಾಯಿ ತನ್ನ ಕರುಣ ಕಥೆಯನ್ನು ಹೇಳುತ್ತಾಳೆ. ಕನ್ನಡಿಗರು ಎಚ್ಚೆತ್ತು ಭಾರತಾಂಬೆಯ ಹಿರಿಯ ಹೆಣ್ಮಗಳು ಭುವನೇಶ್ವರೀ ದೇವಿಯನ್ನು ರಥ ದಲ್ಲಿ ಕೂರಿಸಿ ಬಿಜಯ ಮಾಡಿಸುವ ದೃಶ್ಯದಿಂದ ಕವನ ಮುಗಿಯುತ್ತದೆ.

ಕನ್ನಡದ ಬಾವುಟ

ಇದು ಕನ್ನಡಿಗರನ್ನು ಎಚ್ಚರಿಸಿ ಕನ್ನಡ ತಾಯ ಸೇವೆಗೆ ಹುರಿದುಂಬಿಸಲು ಬರೆದ ಕವನ. ಕನ್ನಡವು ತನ್ನ ಇರವನ್ನು ದೇಶ ಒಪ್ಪಿಕೊಂಡರೆ ಸಾಕು ಎನ್ನುವಷ್ಟು ಹೀನಸ್ಥಿತಿಯಲ್ಲಿದ್ದ ಕಾಲದಲ್ಲಿ ಕನ್ನಡಿಗರಿಗೆ ಉತ್ಸಾಹವನ್ನೂ ಚೈತನ್ಯವನ್ನೂ ಕೊಟ್ಟ ಈ ಕವನ ತನ್ನ ಉದ್ದೇಶವನ್ನು ಸಾಧಿಸಿತು. ಆದರೆ ಇದರಲ್ಲಿ ಕಾವ್ಯಗುಣ ಹಿಂದಾಗಿ ರೆಟರಿಕ್ (rhetoric) ಮುಂದಾಗಿದೆ.

ಶುಕ್ರಗೀತೆ

ಮಿಕ್ಕ ಕವನಗಳಲ್ಲಿ ಮುಖ್ಯವಾದದ್ದು 'ಶುಕ್ರಗೀತೆ'. ಈ ಕವನ ಸಂಗ್ರಹ ದಲ್ಲಿರುವ ಎಲ್ಲ ಕವನಗಳಿಗಿಂತಲೂ ಇದೇ ಮೇಲ್ಮಟ್ಟದ್ದು ಎಂದರೂ ತಡೆಯುತ್ತದೆ. ಇದು ಮೈಸೂರು ವಿಶ್ವವಿದ್ಯಾಲಯದ ಬೆಳ್ಳಿಯ ಹಬ್ಬದ ಕವಿ ಸಮ್ಮೇಳನದಲ್ಲಿ ಓದಿದ ಕವನ. ಇದರಲ್ಲಿ ಕವಿಯ ಪ್ರತಿಭೆಗೆ ಯಾವುದೊಂದು ರಾಜಮನೆತನದ, ಸಂಕುಚಿತ ಕ್ಷೇತ್ರದ ಎಲ್ಲೆಕಟ್ಟುಗಳಿಲ್ಲ; ಯಾವ ರಾಜಕೀಯ ಸೋಂಕೂ ಇಲ್ಲ; ಶ್ರೀಕಂಠಯ್ಯ

ನವರ ಉಜ್ವಲ ದೇಶಾಭಿಮಾನ ಭಾಷಾಭಿಮಾನಗಳನ್ನೂ ಹಿಂದೆ ಬಿಟ್ಟು ಈ ಕವನ ಮೇಲಕ್ಕೆ ಏರುತ್ತದೆ. ಇಲ್ಲಿ ಅವರು ಹಾಡುತ್ತಿರುವುದು ಜ್ಞಾನವನ್ನು ಕುರಿತು; ಸತ್ಯವನ್ನು ಕುರಿತು; ವಿದ್ಯಾವಿದ್ಯಗಳ, ಋತ--ಅನೃತಗಳ, ದೇವದಾನವರ, ಸಂತತವಾದ ಹೋರಾಟವನ್ನು ಕುರಿತು. ಕವನವು ಪ್ರಸಿದ್ಧವಾದ "ಓಂ, ಸಹನಾವವತು; ಸಹನೌ ಭುನಕ್ತು"ಎಂಬ ಶಾಂತಿಮಂತ್ರದಿಂದ ಆರಂಭವಾಗಿ ಹೀಗೆ ಮುಂದುವರಿಯುತ್ತದೆ:

ಮೊತ್ತ ಮೊದಲ್, ಬೆಳಕಾಗಲೆಂದಾಗ, ಬೆಳಕಾಯ್ತು; ಬೆಳಕು ಚೆಲುವಾಯ್ತು:
ಕಿಡಿ ಕಿಡಿದು ಮಿನುಗಿದವು ಜ್ಯೋತಿಗಳ್; ಮೂಡಿದರು ಸೂರ್ಯ ಚಂದಿರರು
ಲೋಕಚಕ್ಷುಗಳೆನಿಸಿ, ಸತ್ಯಧರ್ಮಗಳಂತೆ, ಕ್ಷಮೆ ದಯೆಗಳಂತೆ,
ಹಸುರ ಸೊಬಗಂ ತೊಟ್ಟು, ಹಾಡುತ್ತ, ಬಾನ್ ಬಯಲೊಳಾಟ ವಾಡುತ್ತ,
ಸೌಂದರ್ಯದಿಂ ತೀವಿ, ಭೂದೇವಿ ಬೆಳಗಿದಳು, ಜೀವ ಪರಮಾತ್ಮರಿಂ ತೊಳಗಿ.

ಆ ದಿವ್ಯ ದರ್ಶನಂ ಕಣ್ತುಂಬೆ ನೋಡಿದರ್
ದಿವಿಜರುಂ, ಋಷಿಗಳುಂ; ನಲಿದು ಕುಣಿದಾಡಿದರ್;
ಪಾಟಮಂ ಪಾಡಿದರ್—

ಅವರು ಹಾಡಿದ್ದು ಗಾಯತ್ರಿ ಮಂತ್ರ, ಜೊತೆಗೆ "ಹಿರಣ್ಮಯೇನ ಪಾತ್ರೇಣ" "ಅಸತೋಮಾ ಸದ್ಗಮಯ" ಎಂದು ಮೊದಲಾಗುವ ಉಪನಿಷನ್ಮಂತ್ರಗಳು—ಅವರಿಗೆ ಬೇಕಾದದ್ದು ಸತ್ಯ, ಜ್ಯೋತಿ, ಅಮೃತತ್ವ. ಇಂದಿಗೂ ನಮಗೆ ಆ ಅಮೃತಪುತ್ರರು ಬಯಸಿದ್ದೇ ದರ್ಶನ.

ಬ್ರಹ್ಮಮೀ ವಿಶ್ವಂ; ಬ್ರಹ್ಮಮುಂ ಪೂರ್ಣಮೆನೆ ಏನ್ ಚೆಲುವೋ ನಮ್ಮ ಬಾಳ್ ಚೆಲುವು!

ಆದರೆ ಈ ಪ್ರಪಂಚದಲ್ಲಿ ಆ ದರ್ಶನವನ್ನು ನೋಡಲಾರದ, ಆ ಗಾನವನ್ನು ಕೇಳಲಾರದ—''ಆನಂದವರಿಯದರ್, ಆತ್ಮವನೆ ಒಲ್ಲದರ್''—ಜನರೂ ಇದ್ದಾರೆ.

ಮೆಲ್ಲಮೆಲ್ಲನೆ ನುಸುಳಿ ದೇವರಾವರಣದಲಿ, ಆಳ ತೋಟದಲಿ,
ತೆಕ್ಕೆ ತೆಕ್ಕೆಯೊಳೆದ್ದು ಹೊರಬಿದ್ದು, ಕಾರಿರುಳ ಮೊತ್ತಂಗಳಾಗಿ,

ಪೊಗೆಯಾಗಿ, ನೊಣೆವ ಪಡಿನೆಳಲಾಗಿ, ನಂಜಾಗಿ, ಕಣ್ಣ ಮಂಜಾಗಿ,
ಮುತ್ತಿ ಮರುಳ್ಗೊಳಿಸಿದರ್ ಸಂಶಯಂಗಳನೊತ್ತಿ, ಪಾಪಮಂ ಬಿತ್ತಿ.

ಅಲ್ಲದುದನಹುದೆಂದು, ಅಹುದನಲ್ಲೆಂದು,
ಇಲ್ಲದುದನಿಹುದೆಂದು, ಇಹುದನಿಲ್ಲೆಂದು,
ನಲ್ಲದಂ ಪೊಲೆಯೆಂದು, ಪೊಲೆ ನಲ್ಲದೆಂದು,
ತಿರಿಸಿದರ್ ಮಾಯಾವಿಗಳ್ ಬಾಳ್ವ ಮಕ್ಕಳಂ ಸಾವ ಸಂಸಾರ ಸುತ್ತಿ.

ಪಲ ಪೆಸರ್, ಪುರುಳೊಂದು,
ಪಲ ತೆರನ್, ನೆರನೊಂದು,—
ಅಹಿ, ವೃತ್ರ, ಮಾರ, ಕಲಿ, ಅಹ್ರಿಮನ್, ಸೈತಾನ್ !

*   *   *   *

ಅಂದು ಮೊದಲಾದುದೇ ದೇವಾಸುರಂ !
ಎಂದು ಕೊನೆಗಾಣ್ಬುದೋ ದೇವಾಸುರಂ !

ಈ ಕವನವನ್ನು ಓದುವಾಗ ವೇದೋಪನಿಷತ್ತುಗಳ 'ದರ್ಶನ', ಪಾರಸಿಕರ, ಬೌದ್ಧರ, ಕ್ರೈಸ್ತರ ನಂಬಿಕೆಗಳು, ಸಾಕ್ರೆಟೀಸನ ಸಂವಾದಗಳು, ಷೇಕ್ಸ್‌ಪಿಯರ್‌ನ ನಾಟಕವೊಂದು—ಇವೆಲ್ಲ ನಮ್ಮ ಮನಸ್ಸಿನಲ್ಲಿ ಸುಳಿದಾಡುತ್ತವೆ. ಶ್ರೀಕಂಠಯ್ಯನವರು ಸಮುದ್ರಮಥನದ 'ಮಿಥಕ' (myth) ವನ್ನು ಅರ್ಥಪೂರ್ಣವಾದ ಬದಲಾವಣೆ ಮಾಡಿ ಬಹಳ ಸೊಗಸಾಗಿ ಉಪಯೋಗಿಸಿಕೊಂಡಿದ್ದಾರೆ. ಇಲ್ಲಿ ಮಥನದಿಂದ ಹುಟ್ಟಿಬರುವ ಅಮೃತ-ವಿಷಗಳು ಬೇರೆಬೇರೆಯಲ್ಲ; ನಿರ್ಜರರೂ ಅಸುರರೂ ವಿಷದಿಂದಲೇ ಅಮೃತವನ್ನು ಪಡೆಯುತ್ತಾರೆ.

ವಿಷದಿನಮೃತವ ಕಡೆದು, ರೌದ್ರರೂಪಂಗಳಿಂ ರಮ್ಯತೆಯ ಪಡೆದು
ವಿಕ್ರಮಂ ಋಜುಗೊಳಿಸಿ, ಒಲ್ಲದದನೊಲ್ಮೆಯಿಂದೊಲಿಸಿ,

ಧರ್ಮಾಮೃತವನ್ನು ಎರೆದು ಹಾಡುತ್ತಾರೆ.

ಋತಮೊಂದೆ ಗೆಲ್ಲುವುದು, ಅನೃತಮಲ್ತು ;
ಅನೃತಮೆನೆ ವಿದ್ಯೆಯೆ ; ಅವಿದ್ಯೆಯಲ್ತು ;
ವಿಶ್ವಭಾರತಿ ಶರಣು, ಕಿರುತೀರ್ಥವಲ್ತು.
"ಪುಣ್ಯಪುರಮಂ ಕಟ್ಟಿ ಪುರುಷನೊಳ ಅಗ್ನಿಯಂ ಕಾವವರೆ ದೇವರ್."

ಈ ಸುಂದರವಾದ, ಧೀಶಕ್ತಿಪ್ರಚೋದಕವಾದ ಕವನದ ಕೊ... ...ಲ್ಲಿ ಬರುವ

ಶ್ರೀ ಜಯನ್ ನಿಡುಬಾಳಿ ನಮ್ಮೊನ್ನೊಲಿದಾಳ್ಗೆ ;
ಕನ್ನಡಿಗರುಸಿರಾಗಿ ಕನ್ನಡಂ ಬಾಳ್ಗೆ.

ಎಂಬ ಎರಡು ಪಂಕ್ತಿಗಳನ್ನು ಬಿಟ್ಟಿದ್ದರೆ ಚೆನ್ನಾಗಿತ್ತು. ನಾನು ಆಕ್ಷೇಪಿಸುತ್ತಿರುವುದು ರಾಜಾಶೀರ್ವಾದ ಕೂಡದೆಂದಲ್ಲ, ಈ ಕವನದಲ್ಲಿ ಅದಕ್ಕೆ ಸ್ಥಾನವಿಲ್ಲವೆಂದು. ಹಾಗೆಯೇ 'ಕನ್ನಡಂ ಬಾಳ್ಗೆ' ಎಂಬ ಪ್ರಾರ್ಥನೆ ಕೂಡದೆಂದು ಆಕ್ಷೇಪಿಸುತ್ತಿಲ್ಲ; ಅದು ಇತರ ಸಂದರ್ಭಗಳಲ್ಲಿ ನಾನೂ ಮಾಡುವ ಪ್ರಾರ್ಥನೆ. ಆದರೆ ಈ ಕವನ ನಮ್ಮನ್ನು ದ್ವಂದ್ವಗಳಿಲ್ಲದ ಯಾವ ಉನ್ನತಮಟ್ಟಕ್ಕೆ ಒಯ್ಯುತ್ತದೋ ಆ ಮಟ್ಟದಲ್ಲಿ ಕನ್ನಡದ ಪರವಾದ ಈ ಪ್ರಾರ್ಥನೆ ಕೂಡ ಸಲ್ಲದೆಂದು ಸೂಚಿಸುತ್ತಿದ್ದೇನೆ—ಕನ್ನಡಿಗನೇ ಆದ ನನ್ನನ್ನು ಕನ್ನಡಿಗರು ಕ್ಷಮಿಸಲಿ! ಈ ಕವನ ಮುಗಿಯಬೇಕಾದದ್ದು 'ವಿಶ್ವಭಾರತಿ ಶರಣು' ಎಂಬ ಮಟ್ಟದಲ್ಲಿಯೇ.

೩. ಇತರ ಲೇಖನಗಳು

೧೯೩೬ರಲ್ಲಿ ಶ್ರೀಕಂಠಯ್ಯನವರು ಕನ್ನಡ ಛಂದಸ್ಸಿನ ಚರಿತ್ರೆಯೊಂದನ್ನು ಬರೆದರು. ಅವರು ದ್ರಾವಿಡ ಛಂದಸ್ಸುಗಳ, ಮುಖ್ಯವಾಗಿ ಕನ್ನಡ ತಮಿಳು ಛಂದಸ್ಸುಗಳ ಅಭ್ಯಾಸಕ್ಕೆ ಬಹಳ ಗಮನ ಕೊಟ್ಟಿದ್ದರು. ಸುಮಾರು ನಲವತ್ತು-ನಲವತ್ತೈದು ವರ್ಷಗಳ ಕೆಳಗೆ ಅವರು ಛಂದಸ್ಸನ್ನು ಕುರಿತು ವಿಚಾರಪೂರ್ಣವಾದ ಭಾಷಣ ಮಾಡಿದ ನೆನಪಿದೆ. ಅಂದು ಅವರು ಸಂಸ್ಕೃತದ ಅನುಷ್ಟುಪ್, ಇಂಗ್ಲಿಷಿನ ಹೆರೋಯಿಕ್ ಕಪ್ಲೆಟ್ (heroic coulpet), ಸರಳ ರಗಳೆ, ಗೀತೆಗಳಿಗೆ ಉಚಿತವಾದ ಇತರ ಛಂದಸ್ಸುಗಳು, ಕನ್ನಡದ ರಗಳೆ—ಇವುಗಳನ್ನೆಲ್ಲ ಉದಾಹರಿಸಿದ್ದು ನೆನಪಿದೆ. ಈ ವಿಷಯದಲ್ಲಿ ಅವರ ಬರವಣಿಗೆ ಅಧಿಕಾರಯುತವಾದದ್ದು ಮತ್ತು ಉಪಯುಕ್ತವಾದದ್ದು.

ಕನ್ನಡ ಛಂದಸ್ಸಿನ ಚರಿತ್ರೆಯೂ ಅವರ ಅಪೂರ್ಣವಾದ ಕನ್ನಡ ಸಾಹಿತ್ಯದ ಚರಿತ್ರೆಯೂ 'ಕನ್ನಡ ಕೈಪಿಡಿ'ಯ ಭಾಗಗಳು. ಕನ್ನಡ ಸಾಹಿತ್ಯದ ಚರಿತ್ರೆಯ ಮುನ್ನುಡಿಯ ಕೊನೆಯಲ್ಲಿ ಅವರು ಹೀಗೆ ಬರೆದಿದ್ದಾರೆ: "ಕಾವ್ಯ ಸಾಹಿತ್ಯ ಎಂಬ ಶಬ್ದಗಳ ಶ್ಲಾಘ್ಯವಾದ ಅರ್ಥದ ಮೇಲೆ ದೃಷ್ಟಿಯಿಟ್ಟು, ವಿದ್ಯಾರ್ಥಿಗಳ ಪ್ರಥಮ ಪರಿಚಯಕ್ಕಾಗಿ, ಪ್ರಸಿದ್ಧರಾಗಿಯೂ ಬೇರೆ ಬೇರೆ ಮತಗಳಿಗೆ ಪ್ರತಿನಿಧಿಗಳಾಗಿಯೂ ಯಾವುದಾದರೂ ಒಂದು ಕಾರಣದಿಂದ ಗಣ್ಯರಾಗಿಯೂ ಇರುವ ಕವಿಗಳನ್ನು ಮಾತ್ರ ಆಯ್ದುಕೊಂಡು, ಒಟ್ಟಿನ ಮೇಲೆ ಕನ್ನಡ ಸಾಹಿತ್ಯದ ಬೆಳವಣಿಗೆ, ವಿಭಾಗಗಳು, ಸ್ವರೂಪ, ಯೋಗ್ಯತೆ ಇವುಗಳನ್ನು ಸ್ಪಷ್ಟಪಡಿಸಬೇಕೆಂದು ಪ್ರಯತ್ನಪಟ್ಟಿರುತ್ತದೆ. ಕಾವ್ಯವಿಮರ್ಶೆಯ ಭಾಗದಲ್ಲಿ ವ್ಯವಸ್ಥೆಯಾಗಿ ಎಲ್ಲರೂ ಒಪ್ಪಬಹುದಾದ ಅಭಿಪ್ರಾಯಗಳು ಪ್ರಚಾರದಲ್ಲಿಲ್ಲವಾದ್ದರಿಂದಲೂ ಹೊಸದಾಗಿ ಸಿಕ್ಕಿರುವ ನಿಕ್ಷೇಪವನ್ನು ಕನ್ನಡಿಗರು ಇನ್ನೂ ಆಶ್ಚರ್ಯಪಟ್ಟು ಹೊಗಳಿಕೊಳ್ಳುವ ಸಂಭ್ರಮದಲ್ಲಿಯೇ ಇರುವುದರಿಂದಲೂ ಪೂರ್ವ ಸಂಪ್ರದಾಯವಾದ ಸಂಸ್ಕೃತ ಕಾವ್ಯಲಕ್ಷಣ ರುಚಿಗೂ ಈ ಕಾಲದ ಇಂಗ್ಲಿಷ್ ಕಾವ್ಯಾಭ್ಯಾಸ ಬಲದಿಂದ ಉಂಟಾಗುವ ಹೊಸ ರುಚಿಗೂ ಬಹಳ ತಾರತಮ್ಯವಿರುವುದರಿಂದಲೂ ಆ ಭಾಗಕ್ಕೆ ಇಲ್ಲಿ ಹೆಚ್ಚಾಗಿ ಪ್ರವೇಶ ಮಾಡುವುದು ಸೂಕ್ತವಾಗಿ ಕಾಣಿಸಲಿಲ್ಲ." ಅವರಿಗೆ ವಿಮರ್ಶೆಗೆ ಹೆಚ್ಚು ಗಮನ ಕೊಡುವ ಉದ್ದೇಶವೇ ಇರಲಿಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಆದರೂ ಅವರು ಉದಾಹರಣೆಗಾಗಿ ಕಾವ್ಯಗಳ ಭಾಗಗಳನ್ನು ಆಯ್ದುಕೊಳ್ಳುವುದರಲ್ಲೇ ವಿಮರ್ಶೆಯಿದೆ. ಅಲ್ಲದೆ ಕೆಲವು ಕಡೆ ಸ್ಪಷ್ಟವಾಗಿ ವಿಮರ್ಶಾತ್ಮಕವಾದ ವಾಕ್ಯಗಳೂ ಬಂದಿವೆ-

ಇದನ್ನು ಕೆಳಗೆ ಕೊಟ್ಟಿರುವ ಉದಾಹರಣೆಗಳಲ್ಲಿ ಕಾಣಬಹುದು: "ಇಲ್ಲಿ ರನ್ನನು ನಾಟಕವನ್ನು ಬಿಟ್ಟು ಆಖ್ಯಾನವನ್ನೆತ್ತಿಕೊಳ್ಳುವನು; ವರ್ಣನೆಗೆ ಕೈಯಿಕ್ಕುವನು; ಸರೋವರ, ಯುದ್ಧ, ಚಮತ್ಕಾರದ ಸಂಭಾಷಣೆಗಳಲ್ಲಿ ಸಮುಭೂಮಿಗಿಳಿಯುವನು. ಆದರೂ ಮಿಂಚು ಸಿಡಿಲು ಹೊಡೆಯುತ್ತಲೇ ಇರುವುದು. ರನ್ನನಲ್ಲವೆ?" "ಮುಡಿದ ದ್ರೌಪದಿಯ ಶೃಂಗಾರ ವರ್ಣನೆ—ಇದು ಇಲ್ಲಿ ಬೇಕೆ? ಭೀಮನ ಬಯ್ಗುಳೂ 'ಇವಳ ಸ್ತನಕುಂಭಂ ಪೂರ್ಣ ಕುಂಭಕ್ಕೆಣೆಯೆನೆ' .... ಮುಂತಾದ ಸೌಭಾಗ್ಯವೂ ಸರಸವೋ ವಿರಸವೋ—ಈ ಸಂದರ್ಭದಲ್ಲಿ?"

ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ

ಇಂದು ಛಂದಸ್ಸಿನ ಮತ್ತು ಸಾಹಿತ್ಯದ ಚರಿತ್ರೆಗಳಿಗಿಂತ ಬಹಳ ಮುಖ್ಯವಾದ ಪುಸ್ತಕ. ಶ್ರೀಕಂಠಯ್ಯನವರ ಭಾಷಣಗಳು, ಮುನ್ನುಡಿಗಳು, ಪುಸ್ತಕಾವಲೋಕನಗಳು—ಇವುಗಳನ್ನೆಲ್ಲ ಒಳಗೊಂಡ ಈ ಪುಸ್ತಕ ಅವರ ಮರಣಾನಂತರ ೧೯೪೮ರಲ್ಲಿ ಪ್ರಕಟವಾಯಿತು. ಅವರು ಮಾಡಿದ ಎಷ್ಟೋ ಭಾಷಣಗಳು ಬರವಣಿಗೆಗೆ ಇಳಿಯಲೇ ಇಲ್ಲ; ಛಂದಸ್ಸನ್ನು ಕುರಿತ ಭಾಷಣವೂ The Burden of the Prophets (ಪ್ರವಾದಿಗಳ ಪಲ್ಲವಿ) ಎಂಬ ವಿಷಯವನ್ನು ಕುರಿತ ಭಾಷಣಗಳೂ ಹೀಗೆ ಕೈತಪ್ಪಿಹೋದವು. ಈ ಪುಸ್ತಕದಲ್ಲಿರುವ ಲೇಖನಗಳಲ್ಲಿ ಕೆಲವು ಕನ್ನಡಿಗರನ್ನು ಜಡತೆಯಿಂದ ಎಚ್ಚರಿಸಿ ಕಾರ್ಯಕ್ಕೆ ಅನುವಾಗುವಂತೆ ಹುರಿದುಂಬಿಸುತ್ತವೆ; ಕೆಲವು ಕನ್ನಡ ಉದ್ಧಾರವಾಗಬೇಕಾದರೆ ಏನು ಮಾಡಬೇಕೆಂಬುದಕ್ಕೆ ಯೋಜನೆ ಕೊಡುತ್ತವೆ; ಇತರ ಭಾಷೆಗಳಿಂದ ನಾವು ಪದಗಳನ್ನು ಎರವು ತೆಗೆಯಬೇಕಾದಾಗ, ನಮ್ಮ ಭಾಷೆಯಲ್ಲೇ ಸಂದರ್ಭಾನುಸಾರವಾಗಿ ಪದಗಳನ್ನು ಆಯುವಾಗ, ಯಾವ ತತ್ವದ ಆಧಾರದ ಮೇಲೆ ಆ ಕೆಲಸ ಮಾಡಬೇಕೆಂದು ಸೂಚಿಸುತ್ತವೆ; ಇನ್ನು ಕೆಲವು ಇತರರ ಪುಸ್ತಕಗಳಿಗೆ ಬರೆದ ಮುನ್ನುಡಿಗಳು ಅಥವಾ ಪ್ರಸಿದ್ಧ ವ್ಯಕ್ತಿಗಳನ್ನು ಕುರಿತ ಲೇಖನಗಳು—ಈ ಕೊನೆಯ ಬಗೆಯ ಲೇಖನಗಳ ವ್ಯಾಪ್ತಿ ಕಡಿಮೆ; ಅವುಗಳಲ್ಲಿ ಹೆಚ್ಚಿನ ವಿಮರ್ಶೆಯನ್ನು ನಿರೀಕ್ಷಿಸಲಾಗುವುದಿಲ್ಲ. ಅವರ ನಾಲ್ಕು ಇಂಗ್ಲಿಷ್ ಲೇಖನಗಳೂ ಈ ಪುಸ್ತಕದಲ್ಲಿ ಸೇರಿವೆ.

ಇಲ್ಲಿ ಅಚ್ಚಾಗಿರುವ ಲೇಖನಗಳಲ್ಲಿ ಬಹುಭಾಗ ಶ್ರೀಯವರು ಭಾಷಣ ಮಾಡುತ್ತಿದ್ದಾಗ ಯಾರೋ ಶೀಘ್ರಲಿಪಿಯಲ್ಲಿ ಅವರ ಮಾತನ್ನು ಗುರುತು ಹಾಕಿಕೊಂಡು ಅನಂತರ ಬರೆದಿದ್ದೆಂದೂ ಬರೆದು ಮುಗಿದ ಹಸ್ತಪ್ರತಿಗಳನ್ನು ಶ್ರೀಕಂಠಯ್ಯನವರು ನೋಡಿ ಒಪ್ಪಿಗೆ ಕೊಟ್ಟರೆಂದೂ ಕೇಳಿದ್ದೇನೆ. ಭಾಷಣಗಳಲ್ಲಿರುವ ಕನ್ನಡ ಸರಳವಾದದ್ದು, ತಿಳಿಯಾದದ್ದು; ವಿದ್ಯಾವಂತರಾದ ಆಧುನಿಕ ಕನ್ನಡಿಗರು ಸಾಮಾನ್ಯವಾಗಿ ಬಳಸುವ ಕನ್ನಡ. "ಇದು ಕೇವಲ ಸಾಹಿತ್ಯದ, ಪುಸ್ತಕದ, ಶೈಲಿ" ಎನ್ನಿಸುವಂಥ ಕೃತಕತೆ ಎಲ್ಲೂ ಕಾಣುವುದಿಲ್ಲ—ಕೆಲವು ವೇಳೆ

ವಾಕ್ಯಬಂಧ ತೀರ ಲಘುವಾಯಿತು ಎನ್ನಿಸಬಹುದು; ಆದರೆ ಆಕರ್ಷಕತೆಗೂ ಗಾಂಭೀರ್ಯಕ್ಕೂ ಕುಂದು ಬಂದಿಲ್ಲ. ಸಾಮಾನ್ಯವಾಗಿ ಮಿತ್ರರು ಸಂಭಾಷಣೆ ಯಲ್ಲಿ ಮಾತ್ರ ಬಳಸುವ ಪದಪುಂಜಗಳು, ಹಳಗನ್ನಡ ನಡುಗನ್ನಡ ಸಾಹಿತ್ಯದಿಂದ ತೆಗೆದ ಪಂಕ್ತಿಗಳು; ಬೈಬಲ್‌ನಿಂದಲೂ ಇಂಗ್ಲಿಷ್ ಸಾಹಿತ್ಯದಿಂದಲೂ ಎತ್ತಿ ಅನು ವಾದಿಸಿದ ವಾಕ್ಯಗಳು; ಕೆಲವು ವೇಳೆ ಕಟುವಾಗಿಯೂ ಮತ್ತೆ ಕೆಲವು ವೇಳೆ ಲಘು ವಾಗಿಯೂ ಇರುವ ಟೀಕೆ; ಮೊನೆ ಮಾತು; ಹೊಳೆದು ಹೋಗುವ ಕೋಪ, ತಮ್ಮ ಮೆಚ್ಚಿಗೆಯನ್ನು ಗಳಿಸಿದ ಜನರಿಗೆ ಮತ್ತು ಸಾಹಿತ್ಯಕ್ಕೆ ಉದಾರವಾದ ಹೊಗಳಿಕೆ; ಎಲ್ಲಕ್ಕಿಂತಲೂ ಹೆಚ್ಚಾಗಿ ಅವರ ಉಜ್ವಲವಾದ ದೇಶಪ್ರೇಮ, ಭಾಷಾ ಪ್ರೇಮ—ಇವೆಲ್ಲ ಅವರ ಶೈಲಿಯಲ್ಲಿ ಚೆನ್ನಾಗಿ ಹೊಂದಿಕೊಳ್ಳುತ್ತವೆ. ಅವರು ಕಾಲೇಜಿನಲ್ಲಿ ಪಾಠ ಹೇಳುತ್ತಿದ್ದಾಗ ಪಾಠದ ವಿಷಯವೇ ಅವರ ಮನಸ್ಸನ್ನು ತುಂಬಿರುತ್ತಿತ್ತು. ವಿದ್ಯಾರ್ಥಿಗಳ ಕಡೆಗೆ ಗಮನ ಹೆಚ್ಚಾಗಿರುತ್ತಿರಲಿಲ್ಲ ಎಂಬ ಮಾತನ್ನು ಹಿಂದೆ ಹೇಳಿದ್ದೇನೆ. ಸಾರ್ವಜನಿಕ ವೇದಿಕೆಯ ಮೇಲೆ ಮಾತಾಡುವಾಗ ಅವರಿಗೆ ಶ್ರೋತೃಗಳ ನಾಡಿಯ ಸ್ಪಂದನದ ಅರಿವೂ ಇರುತ್ತಿತ್ತು. ಹಾಗೆಂದರೆ ಅವರು ಶ್ರೋತೃಗಳಿಗೆ ಹಿತವಾದ ಮಾತನ್ನೇ ಯಾವಾಗಲೂ ಆಡುತ್ತಿದ್ದರೆಂದು ಅರ್ಥವಲ್ಲ. ಬಹಳ ಗಂಭೀರವಾದ ವಿದ್ವತ್ಪೂರ್ಣವಾದ ಭಾಷಣ ಮಾಡುತ್ತಿದ್ದಾಗ ಯಾವ ಮುಖದಲ್ಲೋ ಅಸಹನೆ ಅಥವಾ ವಿರೋಧ ಕಂಡುಬಂದರೆ ಅವರ ಮನಸ್ಸು ಕೆರಳಿ, ಕಟುವಾದ ಮಾತುಗಳು ಹೊರಟು ಜನರಿಗೆ ಅಸಮಾಧಾನ ತಂದು, ಅಂದಿನ ಭಾಷಣ ಕೆಟ್ಟುಹೋದ ಸಂದರ್ಭಗಳುಂಟು. ಆದ್ದರಿಂದ ಅವರು—ರಾಜಕಾರಣಿ ಗಳಂತೆ—ಜನರ ಮನಸ್ಸನ್ನು ಒಲಿಸುವ ಮಾತನ್ನೇ ಆಡುತ್ತಿದ್ದರೆಂದು ಹೇಳ ಲಾಗದು. ಆದರೆ ಸಾಮಾನ್ಯವಾಗಿ—ಕೆಲವು ಸಂದರ್ಭಗಳನ್ನುಳಿದು—ಅವರ ಮಾತಿನ ವೈಖರಿ ಶ್ರೋತೃಗಳ ಮನಸ್ಸಿಗೆ ಹಿತವಾಗುತ್ತಿತ್ತು; ಅನೇಕ ಭಾಷಣ ಗಳಲ್ಲಿ ಆಧುನಿಕ ಕನ್ನಡದ ವಿಶಿಷ್ಟಗುಣ, ಅದರ ರುಚಿ, ಕಂಪು, ಅತ್ಯುತ್ತಮ ರೂಪದಲ್ಲಿ ಅಭಿವ್ಯಕ್ತಿ ಪಡೆದಿದೆ.

ಆದರೆ ಕೊನೆಕೊನೆಗೆ ಅವರ ಗದ್ಯ—ಅದರಲ್ಲೂ ತಾವಾಗಿ ಕುಳಿತು ಬರೆದ ಗದ್ಯ—ಬಹಳ ಪೆಡಸಾಯಿತು. ಆರಂಭವಾದ ವಾಕ್ಯ ಮುಂದಕ್ಕೆ ಹೋಗದೆ ಅಲ್ಪ ವಿರಾಮ ಅರ್ಧ ವಿರಾಮ ಪೂರ್ಣವಿರಾಮಗಳ, ಆಶ್ಚರ್ಯಸೂಚಕ ಚಿಹ್ನೆಗಳ, ಮತ್ತು ಅರ್ಥಕ್ಕೆ ಬದಲಾಗಿ ಉದ್ಗಾರವನ್ನು ಸೂಚಿಸುವ ಪದಗಳ ತಡೆಯಿಂದಾಗಿ ನಿಂತುಹೋದಂತೆ ಅಥವಾ ಎಡವಿ ಬಿದ್ದಂತೆ ಅನುಭವವಾಗುತ್ತಿತ್ತು. ಮುಂದೆ ಕೊಟ್ಟಿರುವ ಉದಾಹರಣೆಯಿಂದ ಮೇಲೆ ಹೇಳಿದ ಮಾತು ಸ್ಪಷ್ಟವಾಗಬಹುದು:

"ಸಾಮಾನ್ಯ ದೃಷ್ಟಿಯಿಂದ, ಈಗಿನ ಮಕ್ಕಳ ಕಣ್ಣೆಂದು ಹೇಳಬಹುದಾದ—ಪಂಪ, ಹಳಗನ್ನಡ: ಸರಳತೆ, ಕಾವು, ತಿರುಳ್ಗನ್ನಡ, ಸಾಜ, ಉಂಟು: ಆದರೆ ಕಷ್ಟವೂ ಉಂಟು, ಮಾರ್ಗದ ಮುಗ್ಗವೂ ಉಂಟು: ನಮಗೆ 'ತಿಪ್ಪಾರಹಳ್ಳಿ ಬಲು

ದೂ-ಉ-ಉ-ರ'. ಗಾಂಭೀರ್ಯ—ಹೌದು, ಗಂಭೀರ ಮಿತವಚನ ರಚನ. ಸರಸತಿಯ ವಾಣಿ. ಕನ್ನಡದ ಹೆಮ್ಮೆ: ಆರಂಕುಸಮಿಟ್ಟೊಡಂ. "ಕಡೆಗೆ ಕೋಗಿಲೆಯಾಗಿ, ಮರಿದುಂಬಿಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್" ಸರಿಯೆ ಆದರೆ—ಆದರೆ—ಅರ್ಜುನನನ್ನ ಅರಿಕೇಸರಿಯನ್ನೇಕೆ ಮಾಡಿದ? ನಮ್ಮ ಕನ್ನಡ ದರಸರ ಹಿರಿಮೆಯನ್ನು ಕನ್ನಡಿಗರು ಬಲ್ಲರು—ಹೆರರೂ ಬಲ್ಲರು. ಆದರೆ ಅರ್ಜುನ! ದ್ರೌಪದಿ ಯಾರ ಹೆಂಡತಿ? ಭೀಮಸಿಗೂ ಅವಳಿಗೂ ಏನು, ಎಷ್ಟು ಸಂಬಂಧ? ಹೋಗಲಿ. ಕೃಷ್ಣ, ನಮ್ಮ ಸಲಿಗೆಯ, ಸಮ್ಮೋಹನದ, ಸರ್ವವೂ ತಾನಾದ ಆ ಕೃಷ್ಣ? 'ಇವರ್ಗಳಿನೀ ಭಾರತಂ ಲೋಕಪೂಜ್ಯಂ'—ಯಾರಿಂದ? (ಯಾವ ಭಾರತ?)—ದುರ್ಯೋಧನ, ಕರ್ಣ,—..........." ಶೈಲಿ ಹೀಗೇಕೆ 'ಬಿಕ್ಕಳಿಕೆ' ಯಾಯಿತು? ಇತರರು ಯಾರೂ ಬರೆಯದಂತೆ ಬರೆಯಬೇಕೆಂಬ ಆಸೆಯೆ? ವಿಕೃತ ರೂಪದ ಶೈಲಿಯ ಮೇಲೆ ವ್ಯಾಮೋಹವೆ? ಇಂಥವು ಲೇಖಕರನ್ನು ಕಾಡುವು ದುಂಟು. ಆದರೆ ಶ್ರೀಕಂಠಯ್ಯನವರ ವಿಷಯದಲ್ಲಿ ಈ ಕಾರಣಗಳನ್ನು ಕೊಡಲಾಗು ವುದಿಲ್ಲ. ಅವರು ಕೃತಕ ಶೈಲಿಗೆ ಮನಸೋತವರಲ್ಲ. ನಿಜವಾದ ಕಾರಣ: ಅವರ ಆಲೋಚನೆಯ ಓಟ ಬರವಣಿಗೆಯ ಓಟಕ್ಕಿಂತ ವೇಗವಾಯಿತೆಂಬುದಿರಬೇಕು. ಅವರ ಹಿಂದಿನ ಗದ್ಯ ಬರವಣಿಗೆಯಲ್ಲಿ ಈ ದೋಷ ಅಷ್ಟಾಗಿ ಕಂಡುಬರುವುದಿಲ್ಲ; ಪದ್ಯದಲ್ಲಂತೂ ಕಾಣುವುದೇ ಇಲ್ಲ.

ಈ ಪುಸ್ತಕ ಶ್ರೀಕಂಠಯ್ಯನವರ ಸ್ವಭಾವಕ್ಕೂ ವಿದ್ವತ್ತಿಗೂ ಯಶಸ್ವಿಯಾಗಿ ಅಭಿವ್ಯಕ್ತಿ ಕೊಡುತ್ತದೆ.

೭. ನೆನಪುಗಳು

ಸಮಾಜವೇನೋ ರಾಜಮಹಾರಾಜರುಗಳಿಗೆ ಮಹೋನ್ನತವಾದ ಸ್ಥಾನವನ್ನು ಬಿಟ್ಟುಕೊಡುತ್ತದೆ—ಅಥವಾ ಬಿಟ್ಟುಕೊಡುತ್ತಿತ್ತು. ಆದರೆ ಆ ಸ್ಥಾನದಲ್ಲಿರಬೇಕಾದವರಿಗೆ ಸ್ಥಾನಕ್ಕೆ ತಕ್ಕ ಠೀವಿ ಗಾಂಭೀರ್ಯಗಳನ್ನು ಕಾಪಾಡಿಕೊಳ್ಳುವುದು ಬಹುಶಃ ಸುಲಭದ ಕೆಲಸವಲ್ಲ. ಕನ್ನಡನಾಡು ಶ್ರೀಕಂಠಯ್ಯನವರನ್ನು ಗದ್ದುಗೆಯ ಮೇಲೆ ಕೂರಿಸಿತು. ಆ ಕಾಲದಲ್ಲಿ ಅಲ್ಲಿ ಕೂರಬಹುದಾದವರೆಂದರೆ ಶ್ರೀಕಂಠಯ್ಯನವರೊಬ್ಬರೇ. ಆದರೆ ಅವರನ್ನು ಸಿಂಹಾಸನದ ಮೇಲೆ ಕೂರಿಸಿದ್ದರಿಂದ ಅವರಿಗೂ ಪ್ರಜೆಗಳಿಗೂ ನಡುವೆ ಗೋಡೆಯೊಂದನ್ನು ಎಬ್ಬಿಸಿದಂತಾಯಿತು. ಈ ಅನುಭವ ಪ್ರಜೆಗಳಿಗೆ ಹೇಗೋ ಹಾಗೇ ಶ್ರೀಕಂಠಯ್ಯನವರಿಗೂ ಆಯಿತು. ತಮ್ಮ ವಿದ್ವತ್ತಿನಿಂದಲೂ ಭಾಷೆಗಾಗಿ ನಾಡಿಗಾಗಿ ಮಾಡಿದ ದುಡಿಮೆಯಿಂದಲೂ ಗಳಿಸಿದ ಸ್ಥಾನ ಅವರಿಗೆ ಸಂತೋಷವುಂಟುಮಾಡಿತೆಂಬುದು ನಿಜ— ಹಾಗೆ ಸಂತೋಷಪಡದಿರಬೇಕಾದರೆ ಮಾನವನ ಮಟ್ಟದಿಂದ ಮೇಲಿರುವವರಾಗಬೇಕು. ತಾವು ಮಾಡಿದ ಕೆಲಸ ತಮ್ಮ ಜನಕ್ಕೆ ಮೆಚ್ಚಿಕೆಯಾಯಿತೆಂಬ ಭಾವನೆ, ತಾವು ಜನಕ್ಕೆ ಕೊಟ್ಟ ಪ್ರೀತಿ ಅವರಿಂದ ತಮಗೆ ಮರಳಿ ಬಂದಿತೆಂಬ ಭಾವನೆ, ಆನಂದಕರವಾಗದೆ ಇದ್ದೀತೆ? ಉನ್ನತ ಸ್ಥಾನದಲ್ಲಿದ್ದದ್ದರಿಂದ ಜನತೆಗಾಗಿಯೂ ಸಾಹಿತ್ಯಕ್ಕಾಗಿಯೂ ಹೆಚ್ಚು ಫಲಪ್ರದವಾದ ಕೆಲಸ ಮಾಡುವುದು ಸಾಧ್ಯವಾಯಿತು ಎಂಬ ಅರಿವೂ ಅವರಿಗೆ ತೃಪ್ತಿ ಕೊಟ್ಟಿತು. ಆದರೂ ಆ ಪೀಠದಲ್ಲಿರುವುದು ಅವರಿಗೆ ಅನೇಕ ವೇಳೆ ಹಿತವಾಗಲಿಲ್ಲ. ಅವರಿಗೆ ಕೆಲವರು ಹತ್ತಿರದ ಸಂಗಡಿಗರಿದ್ದರು—ಅವರ ಜೊತೆಯಲ್ಲಿದ್ದಾಗ ಶ್ರೀಕಂಠಯ್ಯನವರು 'ಸರಿಸಮರಲ್ಲಿ ಮೊದಲಿಗರು'; ಆ ಕೆಲವರೊಡನೆ ಅವರು ತಡೆಯಿಲ್ಲದೆ ಮನಸ್ಸನ್ನು ಹರಿಯಬಿಟ್ಟು ಮಾತಾಡುತ್ತಿದ್ದರಲ್ಲದೆ ಹಾಸ್ಯ ಕುಚೋದ್ಯಗಳಲ್ಲಿ ಸಹ ಭಾಗಿಗಳಾಗುತ್ತಿದ್ದರು. ಡಾ|| ಡಿ. ವಿ. ಗುಂಡಪ್ಪನವರು ಇಂಥ ಕೆಲವು ಸಂದರ್ಭಗಳನ್ನು ತಮ್ಮ 'ಸಾಹಿತ್ಯೋಪಾಸಕರು' ಎಂಬ ಪುಸ್ತಕದಲ್ಲಿ ಕಾಣಿಸಿದ್ದಾರೆ. ಆದರೂ ಸಾಮಾನ್ಯವಾಗಿ ಶ್ರೀಕಂಠಯ್ಯನವರ ವಿಷಯದಲ್ಲಿ ಜನರ ಕಲ್ಪನೆ: ಅವರು ಯಾವಾಗಲೂ ಸಿಂಹಾಸನಕ್ಕೆ ಉಚಿತವಾದ ವೇಷಭೂಷಣ ಗಾಂಭೀರ್ಯಗಳೊಡನೆ ಇರುತ್ತಿದ್ದರೆಂದು. ಇದು ಶ್ರೀಕಂಠಯ್ಯನವರಿಗೆ ಹಿತವಾಗಲಿಲ್ಲ!

ಅದು ಹಿತವಾಗಲಿಲ್ಲವೆಂದು ನನ್ನ ಸ್ವಂತ ಅನುಭವದಿಂದಲೇ ಹೇಳಬಲ್ಲೆ. ಆ ಗಾಂಭೀರ್ಯವನ್ನು ಚೆಲ್ಲಿಕೊಟ್ಟು ಸರಳವಾಗಿಯೂ ಆರಾಮವಾಗಿಯೂ ಇದ್ದುದನ್ನು ನೋಡುವ ಯೋಗ ನನಗೆ ಒಂದೆರಡು ವೇಳೆ ಲಭಿಸಿತು. ೧೯೪೩ರಲ್ಲಿ ಎಂದು ನೆನಪು—ನಾನು ಶಿವಮೊಗ್ಗ ಇಂಟರ್ಮೀಡಿಯೆಟ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದೆ. ಆ ವರ್ಷ ಕಾಲೇಜಿನ ಇಂಗ್ಲಿಷ್ ಇಲಾಖೆಯ ಕೆಲಸ ಕಾರ್ಯಗಳನ್ನು ಪರಿ

ಶೀಲಿಸಿ ವರದಿ ಮಾಡುವ ಕೆಲಸವನ್ನು ವಿಶ್ವವಿದ್ಯಾಲಯವು ಶ್ರೀಕಂಠಯ್ಯನವರಿಗೆ ವಹಿಸಿಕೊಟ್ಟಿತ್ತು. ಅವರನ್ನು ಬರಮಾಡಿಕೊಂಡು ಸತ್ಕಾರ ಮಾಡಲು ನನಗಿಂತಲೂ ಎಷ್ಟೋ ಹೆಚ್ಚು ಗಣ್ಯರಾದ ನಾಲ್ಕಾರು ಜನ ಆತುರರಾಗಿದ್ದರೆಂಬುದು ನನಗೆ ತಿಳಿದಿತ್ತಾದರೂ ಧೈರ್ಯಮಾಡಿ "ತಾವು ಶಿವಮೊಗ್ಗಕ್ಕೆ ಬಂದಾಗ ನನ್ನ ಮನೆಯಲ್ಲೇ ಇಳಿದುಕೊಳ್ಳಬೇಕು" ಎಂದು ಪ್ರಾರ್ಥಿಸಿ ಅವರಿಗೆ ಕಾಗದ ಬರೆದೆ. ಅವರು ಒಪ್ಪಿಕೊಳ್ಳುತ್ತಾರೆಂಬ ನಂಬಿಕೆ ನನಗಿರಲಿಲ್ಲ. ಆದರೆ ಮರುಟಪಾಲಿಗೇ ಅವರಿಂದ ಕಾಗದ ಬಂತು—"ಸಂತೋಷದಿಂದ ಬರುತ್ತೇನೆ" ಎಂದು. ನನಗೆ ಮಿತಿಯಿಲ್ಲದ ಆಶ್ಚರ್ಯ ಮತ್ತು ಆನಂದ. ಹೀಗಾಗಿ ನನಗೆ ಅವರ ಸಹವಾಸ ಎರಡು ದಿನ ಸಂಪೂರ್ಣವಾಗಿ ದೊರಕಿತು. ಅವರ ಸ್ವಭಾವದ ಅಪರಿಚಿತ ಮುಖವೊಂದರ ಪರಿಚಯವಾಯಿತು. ಅವರು ಮನೆಗೆ ಬಂದ ಮೇಲೆ ಹತ್ತು ಹದಿನೈದು ನಿಮಿಷಗಳ ಕಾಲ ನಾವಿಬ್ಬರೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕ-ಉಪಪ್ರಾಧ್ಯಾಪಕರಿಗೆ ಉಚಿತವಾದ (ಅಥವಾ ಸುತ್ತಣ ವಾತಾವರಣ 'ಇದು ಉಚಿತ' ಎಂದು ನಮ್ಮ ಮೇಲೆ ಹೇರಿದ್ದ) ಮರ್ಯಾದೆಯಿಂದ ನಡೆದುಕೊಂಡೆವು. ಅಪ್ಪಟ ಹದಿನಾರಾಣೆ 'ಕಿಂಗ್ಸ್ ಇಂಗ್ಲಿಷ್' (King's English) ನಲ್ಲೇ ಮಾತಾಡಿದೆವು; ವಿಧ್ಯುಕ್ತವಾಗಿ ಕೇಳಬೇಕಾದ ಪ್ರಶ್ನೆಗಳನ್ನು ಕೇಳಿದೆವು, ಕೊಡಬೇಕಾದ ಉತ್ತರಗಳನ್ನು ಕೊಟ್ಟೆವು. ಆಮೇಲೆ ಅಕಸ್ಮಾತ್ತಾಗಿ ನಮ್ಮಿಬ್ಬರಲ್ಲಿ ಒಬ್ಬರಿಂದ (ಯಾರಿಂದ ಎಂಬುದು ನೆನಪಿಲ್ಲ) ಒಂದೆರಡು ಕನ್ನಡ ಮಾತುಗಳು ಹೊರಬಿದ್ದವು. ಕೂಡಲೆ ವಾತಾವರಣ ಬದಲಾಯಿಸಿತು. ಊಟಕ್ಕೆ ಕುಳಿತುಕೊಳ್ಳುವ ವೇಳೆಗೆ ಬಿಗುವಿಗೆ ಬದಲಾಗಿ ಸಲಿಗೆ—ಅವರಿಂದ ಸಲಿಗೆ, ನನ್ನಿಂದ ವಿನಯ ಬೆರೆತ ಸಲಿಗೆ—ಬಂತು. ಸಾಹಿತ್ಯವನ್ನು ಬಿಟ್ಟು ಊಟಕ್ಕೆ ಬಾಳೆಯೆಲೆ ಹಿತವೋ ತಟ್ಟೆ ಉತ್ತಮವೋ ಎಂಬ ಪಾಮರ ವಿಷಯವನ್ನು ಚರ್ಚಿಸುವ ಮಟ್ಟಿಗೆ ವಾತಾವರಣ ತಿಳಿಯಾಯಿತು!

ಅಂದು ಸಂಜೆ ಯುವಮಿತ್ರರೊಬ್ಬರು—ಅವರು ಶ್ರೀಕಂಠಯ್ಯನವರ ಶಿಷ್ಯರು, ನನ್ನ ಶಿಷ್ಯರೂ ಹೌದು—ಶ್ರೀಕಂಠಯ್ಯನವರನ್ನು ನೋಡಲು ಬಂದರು. ಅವರ ನಡೆನುಡಿ ನಿರಾಳವಾಗಿರಲಿಲ್ಲ. "ನಾನು ಗುರುಗಳ ಬಳಿಗೆ ಬಂದಿದ್ದೇನೆ, ಭಕ್ತಿ ವಿನಯಗಳಿಂದ ನಡೆದುಕೊಳ್ಳಬೇಕು" ಎಂಬ ಮನೋಭಾವ ಸ್ಪಷ್ಟವಾಗಿ ಕಾಣುತ್ತಿತ್ತು. ಇದನ್ನು ಗಮನಿಸಿ ಶ್ರೀಕಂಠಯ್ಯನವರು ನಸುನಕ್ಕು "ಪುಟ್ಟನಂಜಪ್ಪ, ಭಕ್ತಿ ಕಡಿಮೆಯಾಗಿ ಸಲಿಗೆ ಹೆಚ್ಚಾದರೆ ಹಿತವಲ್ಲವೆ?" ಎಂದರು. ಮಾತು 'ಅಶ್ವತ್ಥಾಮನ್' ನಾಟಕದ ಕಡೆ ತಿರುಗಿತು. ಪುಟ್ಟನಂಜಪ್ಪನವರು ಆ ನಾಟಕದಲ್ಲಿ ಒಂದೆರಡು ಸಾರಿ ಯಾವುದೋ ಪಾತ್ರವನ್ನು ವಹಿಸಿದ್ದರೆಂದು ನೆನಪು—ದೃಢವಾಗಿ ಹೇಳಲಾರೆ. ನಾನು ಶಿವಮೊಗ್ಗ ಕಾಲೇಜಿನ ಸಂಘದಲ್ಲಿ ಕೆಲವು ವಾರಗಳ ಹಿಂದೆ ಅಶ್ವತ್ಥಾಮನ್ ನಾಟಕವನ್ನು ಓದಿ ವ್ಯಾಖ್ಯಾನ ಮಾಡಿದ್ದೆ. ಪುಟ್ಟನಂಜಪ್ಪನವರು ಅದನ್ನು ಹೇಳಿದಾಗ ಶ್ರೀಕಂಠಯ್ಯನವರು ಹುಸಿಕೋಪದಿಂದ ನನ್ನನ್ನು ತರ್ಜನಿ

ಯಿಂದ ತೋರಿಸಿ "ನೋಡಿ, ಪುಟ್ಟನಂಜಪ್ಪ, ಈತ ನನ್ನ ಶಿಷ್ಯ ಎಂದು ಹೇಳಿಕೊಳ್ಳುತ್ತಾನೆ. ಆದರೂ ನಾನು ಮಾಡಿದ ಕೆಲಸವನ್ನು ಹಾಳುಮಾಡುತ್ತಾನೆ!" ಎಂದರು. ನನಗೆ ಅರ್ಥವಾಗಲಿಲ್ಲ. ಶ್ರೀಕಂಠಯ್ಯನವರು ವಿವರಣೆ ಕೊಟ್ಟರು: "ನಾನು ಅಶ್ವತ್ಥಾಮನನ್ನು ಕೊಂದುಹಾಕಿದೆ. ಸ್ವಲ್ಪ ಕಷ್ಟದ ಕೆಲಸವೇ ಆಯಿತು —ಆತ, ಚಿರಂಜೀವಿ, ನೋಡಿ! ಅಷ್ಟು ಕಷ್ಟಪಟ್ಟು ಕೊಂದವನನ್ನ ಈತ ಮತ್ತೆ ಎಬ್ಬಿಸಿ ಓಡಾಡಿಸುವುದೆ!"

ಈ ಹಾಸ್ಯದ ಲಾಘವದಲ್ಲಿ ಬಹುಶಃ ಸ್ವಲ್ಪ ಭಾರವೂ ಸೇರಿತ್ತು ಎನ್ನಬೇಕು —ವಾಚಕರು ಈ ವಿರೋಧಾಭಾಸದ ಮಾತನ್ನು ಕ್ಷಮಿಸಲಿ. ಶ್ರೀಕಂಠಯ್ಯನವರು 'ಅಶ್ವತ್ಥಾಮನ್' ನಾಟಕದ ವಿಷಯದಲ್ಲಿ ನಡೆದಿದ್ದ (ಹಿಂದೆಯೇ ಪ್ರಸ್ತಾಪಿಸಿರುವ) ವಾಕ್ಕಲಹವನ್ನು ನೆನೆದು ಮೇಲೆ ಕಾಣಿಸಿರುವ ಮಾತನ್ನಾಡಿದರು. ಆದರೆ ಮುಂದೆ ಹೇಳುವ ಪ್ರಸಂಗದಲ್ಲಿ 'ಭಾರ' ಏನೂ ಇಲ್ಲ. ಇದು ಸುಮಾರು ನಲವತ್ತು ವರ್ಷದ ಹಿಂದಿನ ಮಾತು. ಶ್ರೀಕಂಠಯ್ಯನವರು, ನಾನು, ಇನ್ನಿಬ್ಬರು ನನ್ನ ವಯಸ್ಸಿನ ಮಿತ್ರರು (ಅವರೂ ಶ್ರೀಯವರ ಶಿಷ್ಯರು) ಯಾವುದೋ ವಾರ್ಷಿಕೋತ್ಸವಕ್ಕಾಗಿ ಚನ್ನರಾಯಪಟ್ಟಣಕ್ಕೆ ಹೋಗಿದ್ದು, ಅಲ್ಲಿಂದ ಗೋಮಟೇಶ್ವರನ ದರ್ಶನಕ್ಕಾಗಿ ಶ್ರವಣಬೆಳಗೊಳಕ್ಕೆ ಹೋದೆವು. ಅಲ್ಲಿಯ ಕೆಲಸ ಮುಗಿದಮೇಲೆ ಹೊರಡಲು ಎಲ್ಲರೂ ಸಿದ್ಧರಾದೆವು. ಒಬ್ಬ ಯುವಮಿತ್ರರು ೧೫-೨೦ ನಿಮಿಷ ತಡಮಾಡಿದರು. ಶ್ರೀಕಂಠಯ್ಯನವರು ತಾಳ್ಮೆಗೆಡಬಹುದು, ಬೇಸರವನ್ನು ತೋರಿಸಬಹುದು ಎಂದು ಕೊಂಡಿದ್ದೆ. ಅವರು ನಮ್ಮಿಬ್ಬರ ಕಡೆ ತಿರುಗಿ, ಚೇಷ್ಟೆಯ ನಗುವನ್ನು ನಕ್ಕು, "ಏನಪ್ಪ, ಇವರೇಕೋ ಹೊರಡುವ ಹಾಗೆ ಕಾಣಲಿಲ್ಲ. ಬನ್ನಿ, ದ್ವಾರಪಾಲಕರ ಹಾಗೆ ಎರಡು ಮಗ್ಗುಲಲ್ಲೂ ನಿಂತುಕೊಂಡು ಸುಪ್ರಭಾತ ಹಾಡೋಣ. ಹೂ, ಶುರುಮಾಡಿ: "ಏಳಯ್ಯ ಬೆಳಗಾಯಿತು!" ಎಂದರು. ನಾವು ಸುಪ್ರಭಾತವನ್ನು ಹಾಡಲಿಲ್ಲ; ಆದರೆ ಶ್ರೀಯವರು ನಮ್ಮೊಡನೆ ಅಷ್ಟು ಸಲಿಗೆಯಿಂದ ಮಾತಾಡಿದರಲ್ಲ ಎಂದು ನಮಗೆ ಆನಂದವಾಯಿತು.

ಸಾಹಿತ್ಯಪ್ರಪಂಚದಲ್ಲಿ ಅಷ್ಟು ಉನ್ನತ ಸ್ಥಾನವನ್ನು ಗಳಿಸಿದ್ದ ಶ್ರೀಕಂಠಯ್ಯನವರು ತಮ್ಮಿಂದ ತಮ್ಮ ಶಿಷ್ಯರೊಂದಿಗೆ ಅನ್ಯಾಯವಾಯಿತೆಂದು ಕಂಡುಬಂದಾಗ ಕ್ಷಮೆ ಬೇಡಲು ಹಿಂಜರಿಯುತ್ತಿರಲಿಲ್ಲ. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದಾಗ (ಆಗ ಪರಿಷತ್ತಿನ ಹೆಸರು 'ಕರ್ಣಾಟಕ ಸಾಹಿತ್ಯ ಪರಿಷತ್ತು' ಎಂದಿತ್ತು) ಆ ಸಂಸ್ಥೆಯ ಹೆಸರನ್ನು ನಿಯಾನ್ ದೀಪಗಳಲ್ಲಿ ಹಾಕಿಸುವ ಏರ್ಪಾಡು ಮಾಡಿದರು. ಅದಕ್ಕೆ ಅನುಕೂಲವಾಗಲೆಂದು 'ಕರ್ಣಾಟಕ' ಎಂಬ ಪದದಲ್ಲಿರುವ 'ಣ'ಕಾರಕ್ಕೆ ಬದಲು 'ನ' ಕಾರವನ್ನು ಉಪಯೋಗಿಸಬೇಕೆಂದು ನಿಶ್ಚಯಿಸಿದರು. (ಇದರ ಪ್ರಸ್ತಾಪ ಈ ಪುಸ್ತಕದ ಮೊದಲನೆಯ ಅಧ್ಯಾಯದಲ್ಲಿ ಬಂದಿದೆ.) ಆಗ ಪ್ರಾ|| ಕೆ. ವಿ. ರಾಘವಾಚಾರ್ಯರು ಪರಿಷತ್ತಿನ ಕಟ್ಟಡದಲ್ಲೇ ಇದ್ದ ಇಂಗ್ಲಿಷ್-

ಕನ್ನಡ ನಿಘಂಟಿನ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರು "ಸಾರ್, ತಾವು ಸೂಚಿಸಿದ ಬದಲಾವಣೆಯನ್ನು ಮಾಡದೆಹೋದರೆ ಕೆಲವು ತೊಂದರೆಗಳು ಬರಬಹುದು. ಈ ಪರಿಷತ್ತು ರಿಜಿಸ್ಟರಾಗಿರುವ ಸಂಘ. ರಿಜಿಸ್ಟರ್ ಮಾಡುವಾಗಿನ ಕಾಗದಪತ್ರಗಳಲ್ಲೆಲ್ಲ 'ಣ'ಕಾರವನ್ನು ಉಪಯೋಗಿಸಿರುತ್ತಾರೆ. ಪರಿಷತ್ತಿನ ಸಾಮಾನ್ಯ ಸಭೆ (general body)ಯ ಅನುಮೋದನೆಯಿಲ್ಲದೆ 'ಣ' ಕಾರವನ್ನು ತೆಗೆದು 'ನ' ಕಾರ ಹಾಕಿದರೆ ಕಾನೂನಿನ ದೃಷ್ಟಿಯಿಂದ ತಪ್ಪಾಗುತ್ತದೆ" ಎಂದು ಬಹಳ ವಿನಯದಿಂದಲೇ ಹೇಳಿದರು. ಅಲ್ಲಿದ್ದ ಇತರರಿಗೆ ಶ್ರೀ ರಾಘವಾಚಾರ್ಯರು ಧಾರ್ಷ್ಟ್ಯದಿಂದ ಮಾತಾಡಿದರು ಎನ್ನಿಸಿ ಅಸಮಾಧಾನವಾಯಿತು. ಶ್ರೀಕಂಠಯ್ಯನವರು ಏನೂ ಹೇಳಲಿಲ್ಲ; ಆದರೆ ಅವರಿಗೂ ಸ್ವಲ್ಪ ಕೋಪ ಬಂತೆಂಬುದೇನೋ ಸ್ಪಷ್ಟವಾಗಿತ್ತು. ಕೆಲವು ತಿಂಗಳು ಕಳೆದವು. ಆ ವೇಳೆಗೆ ಆ ಬದಲಾವಣೆ ದೊಡ್ಡ ಬಿರುಗಾಳಿಯನ್ನೇ ಎಬ್ಬಿಸಿತ್ತು. ಚರ್ಚೆ ಬಿಸಿಬಿಸಿಯಾಗಿದ್ದ ಕಾಲದಲ್ಲೇ ಒಂದು ದಿನ ಬೆಳಗ್ಗೆ ಶ್ರೀ ರಾಘವಾಚಾರ್ಯರ ಮನೆಯ ಮುಂದೆ ಶ್ರೀಕಂಠಯ್ಯನವರ ಕಾರು ಬಂದು ನಿಂತಿತು; ಚಾಲಕ ತನ್ನ ಯಜಮಾನರಿಂದ ಸಂದೇಶವೊಂದನ್ನು ತಂದಿದ್ದ: "ನಿಮಗೆ ಪುರಸೊತ್ತಿದ್ದರೆ ದಯವಿಟ್ಟು ನನ್ನ ಮನೆಗೆ ಬನ್ನಿ. ನಿಮ್ಮೊಡನೆ ಮಾತಾಡಬೇಕಾದ್ದಿದೆ. ಕಾರು ನಿಮಗಾಗಿ ಕಾದಿರುತ್ತದೆ." ರಾಘವಾಚಾರ್ಯರು ಅವರ ಮನೆಗೇ ಹೋದಾಗ ಶ್ರೀಕಂಠಯ್ಯನವರು ಮೊದಲು ಆಡಿದ ಮಾತು: "ರಾಘವಾಚಾರ್ಯರೆ, ಅಂದು ನೀವು ಹೇಳಿದ್ದು ಸರಿ. ನಾನು ಮಾಡಿದ್ದು ತಪ್ಪು, ನೀವು ಕಾನೂನಿನ ಮಾತಾಡಿದಾಗ 'ಈತ ಎಲ್ಲಕ್ಕೂ ಆಕ್ಷೇಪಣೆ ಎತ್ತುವ ಸ್ವಭಾವದವನು' ಎಂದುಕೊಂಡೆ. ಅದು ತಪ್ಪು ಭಾವನೆ. ನನ್ನನ್ನು ಕ್ಷಮಿಸಿಬಿಡಿ."

ಆ ಕಾಲದಲ್ಲಿ ಯುವಕರಾಗಿದ್ದವರಿಗೆ ಶ್ರೀಕಂಠಯ್ಯನವರ ರಾಜಭಕ್ತಿಯೂ ಬ್ರಿಟಿಷ್ ಸಾಮ್ರಾಜ್ಯದ ವಿಷಯದಲ್ಲಿ ಅವರಿಗಿದ್ದ ನಂಬಿಕೆಯೂ ಹಿಡಿಸಲಿಲ್ಲ. "ಬ್ರಿಟಿಷರ ಆಳಿಕೆಯಿಂದ ತಾತ್ಕಾಲಿಕವಾಗಿ ಭಾರತದಲ್ಲಿ ರಾಜಕೀಯ ಐಕ್ಯ ಅನಿವಾರ್ಯವಾಗಿ ಬಂದಿತಾದರೂ ನಾಡನ್ನು ಅವರು ಒಂದಾಗಿ ಬೆಸೆಯಲಿಲ್ಲ; 'ಒಡೆದು ಆಳು' ಎಂಬ ತತ್ವವನ್ನನುಸರಿಸಿದರು: ಅವರು ಬಿಟ್ಟುಹೋದ ಕೂಡಲೆ ನಾಡು ಒಡೆದು ಹೋಗುತ್ತಿತ್ತು; ಅದನ್ನು ತಪ್ಪಿಸಿದವರು ನಮ್ಮ ನಾಯಕರು, ಬ್ರಿಟಿಷರಲ್ಲ; ಭಾರತದಲ್ಲಿ ಭಾವೈಕ್ಯ ಸ್ವಲ್ಪಮಟ್ಟಿಗೆ ಹಿಂದಿನಿಂದಲೂ ಇದ್ದದ್ದೇ; ಅದನ್ನು ಇತ್ತೀಚೆಗೆ ಬೆಳಸಿದ್ದಕ್ಕೆ ಕೀರ್ತಿ ಸಲ್ಲಬೇಕಾದದ್ದು ಸ್ವಾಮಿ ವಿವೇಕಾನಂದರಿಗೆ, ರವೀಂದ್ರನಾಥ ಠಾಕೂರರಿಗೆ, ಮಹಾತ್ಮ ಗಾಂಧಿಯವರಿಗೆ"—ಇದು ಈಗ ನಮ್ಮೆಲ್ಲರ ನಂಬಿಕೆ. ಈ ನಂಬಿಕೆಯನ್ನು ಶ್ರೀಕಂಠಯ್ಯನವರು ಪೂರ್ಣವಾಗಿ ಅನುಮೋದಿಸುತ್ತಿರಲಿಲ್ಲವಾದರೂ 'ಕಡಲ ರಾಣಿ'ಯಲ್ಲಿ ಕೊರತೆಗಳಿದ್ದುವೆಂದೇನೊ ಒಪ್ಪಿದ್ದರು; ಅದಕ್ಕೇ ಅವರು "ಅವಳ ಗುಣವನು ಮೆರೆಯಿರಿ—ಕಳೆದವಳ ಕೊರತೆಯ ಮರೆಯಿರಿ" ಎಂದು ಬೋಧಿಸಿದರು. ಹತ್ತಿರ ಹತ್ತಿರ ಒಂದು ಶತಮಾನದ

ಕೆಳಗೆ ಹುಟ್ಟಿ, ಬ್ರಿಟಿಷರ ಸಂಸ್ಕೃತಿಯಲ್ಲಿ ಉತ್ತಮವಾದದ್ದರ ಸಾರವನ್ನು ಸವಿದವರಲ್ಲಿ ಇಂದಿನವರ ದೃಷ್ಟಿಯನ್ನು ನಿರೀಕ್ಷಿಸುವುದು ಸರಿಯಲ್ಲ. ಅಲ್ಲದೆ ಶ್ರೀಕಂಠಯ್ಯನವರು ದುಡಿದದ್ದು ರಾಜಕೀಯದಲ್ಲಲ್ಲ, ಸಾಹಿತ್ಯ-ಸಂಸ್ಕೃತಿಗಳ ಕ್ಷೇತ್ರದಲ್ಲಿ.

ಅವರು ಬುದ್ಧಿಪೂರ್ವಕವಾಗಿ ಸೀಮಿತ ಮಾಡಿಕೊಂಡ ಕ್ಷೇತ್ರದಲ್ಲಿ ಅವರ ಆದರ್ಶಗಳನ್ನೂ ಕಾರ್ಯವಿಧಾನವನ್ನೂ ಭಾರತದ ಹಿರಿಯ ನಾಯಕರು ಬಹುಶಃ ಒಪ್ಪುತ್ತಿದ್ದರು. ರಾಜಕೀಯ ಐಕ್ಯಕ್ಕೆ ಪೂರ್ವಭಾವಿಯಾಗಿ ಕರ್ಣಾಟಕದಲ್ಲಿ ಭಾಷೈಕ್ಯವನ್ನು ಮೂಡಿಸಬೇಕೆಂದು ಅವರು ದುಡಿದರು. ಮತ ವೈಷಮ್ಯಕ್ಕೆ ಎಡೆಗೊಡಬಾರದು. ಸಹನೆಯಿಂದ ನಡೆದುಕೊಳ್ಳಬೇಕು, ಎಂದು ಅವರು ತಮ್ಮ ಉಪನ್ಯಾಸಗಳಲ್ಲಿ ಬೋಧಿಸಿದರು—ಮಹಾತ್ಮ ಗಾಂಧಿಯವರು ಇದನ್ನು ಮನಸಾರ ಒಪ್ಪುತ್ತಿದ್ದರೆಂದು ಮತ್ತೆ ಹೇಳಬೇಕಾಗಿಲ್ಲ. ಕನ್ನಡ ಭಾಷೆಯ ಬೆಳವಣಿಗೆಯ ವಿಷಯದಲ್ಲಿ, ಸಾಹಿತ್ಯೋತ್ಸಾಹಿಗಳು ತಮ್ಮ ಮುಂದಿರಿಸಿಕೊಳ್ಳಬೇಕಾದ ಆದರ್ಶಗಳ ವಿಷಯದಲ್ಲಿ, ಅವರು ಆಗ ಹೇಳಿದ ಮಾತುಗಳು ಇಂದಿಗೂ ಸಾಧುವಾಗಿಯೇ ಕಾಣುತ್ತವೆ. ಕನ್ನಡ ಸಾಹಿತ್ಯದ ಮೇಲೆ ಅವರು ಬೀರಿದ ಪ್ರಭಾವದ ವಿಷಯದಲ್ಲಿ ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್ಯರು ('ಮಲಾರ'ದಲ್ಲಿರುವ ಅಷ್ಟಪದಿಯೊಂದರಲ್ಲಿ) ಹೇಳಿರುವ ಮಾತು ನಿಜ :

> ....ಕನ್ನಡದೊಳಿಂದಾವ
> ಕಲಕಂಠ ಕೇಳುತಿದೆ ಅದರ ಗಾನದೊಳೆಲ್ಲ
> ತೋರುತಿದೆ ನೀವು ತೆರೆದಾ ನಮ್ಮ ಅಕ್ಷುಲ್ಲ
> ಧೀರಗತಿ, ಸುವಿಶಾಲ ವಿಶ್ವವಿಸ್ತರ ಭಾವ.
> ನುಡಿದು ಕಲಿಸಿದಿರಿ ; ನುಡಿಯದೆ ಮತ್ತೆ ಕಲಿಸಿದಿರಿ
> ದುಡಿದು ಕಲಿಸಿದಿರಿ ; ಮನದರಕೆಗಳನೆಚ್ಚರಿಸಿ
> ಎಳೆಯರೆದೆಯಲಿ ಹಾಡುವಾಸೆಯನು ಸುಳಿಸಿದಿರಿ.....

ಶ್ರೀ ಕುವೆಂಪು ಅವರು ಬಹಳ ಹಿಂದೆಯೇ ಶ್ರೀಕಂಠಯ್ಯನವರನ್ನು 'ನವಯುಗದ ಪ್ರವರ್ತಕ'ರೆಂದು ಕರೆದರು ; "ಅವರ ಪ್ರಭಾವವು ಗುಪ್ತಗಾಮಿನಿಯಾದ ವಾಹಿನಿಯಂತೆ ಅನೇಕ ವೃಕ್ಷಗಳಿಗೆ ನೀರೆರೆದಿದೆ" ಎಂದರು.

ಶ್ರೀಕಂಠಯ್ಯನವರು ತಮ್ಮ ಚಳವಳಿಯನ್ನು ಆರಂಭಿಸಿದಾಗ ಕನ್ನಡ ಸಾಹಿತ್ಯ ರಾಜ್ಯದಲ್ಲಿ ಬರಡಾಗಿದ್ದ ಕ್ಷೇತ್ರಗಳೆಲ್ಲ ಇಂದು ಫಲವತ್ತಾಗಿವೆ. ಕನ್ನಡ ಸಾಹಿತ್ಯ ಶ್ರೀಕಂಠಯ್ಯನವರ ಕನಸನ್ನು ನನಸು ಮಾಡಿ ಅಲ್ಲಿಂದ ಮುಂದೆ ಎಷ್ಟೋ ದೂರ ಸಾಗಿದೆ. ಅವರು ನಾಯಕರಾಗಿ ನಿಂತು ನಡೆಸಿದ 'ರಮ್ಯ ಕ್ರಾಂತಿ' (The Romantic movement) ಗೆ ವಿರುದ್ಧವಾಗಿ ಕ್ರಾಂತಿ ನಡೆದಿದೆಯಾದರೂ ಈ ಹೊಸ ಕ್ರಾಂತಿಕಾರರು ಅವರ ಹಿರಿಮೆಯನ್ನೂ ಪ್ರಭಾವವನ್ನೂ ಒಪ್ಪುತ್ತಾರೆ.

ಅವರು ಮೊದಲು ನಡೆಸಿದ ಕ್ರಾಂತಿಯಿಂದಾಗಿ ಈ ಕ್ರಾಂತಿ ಸಾಧ್ಯವಾಯಿತು. ಕಾಲ ಒಂದುರುಳು ಉರುಳಿ ಕ್ರಾಂತಿಕಾರರನ್ನು ಮುಂದಗಾಮಿಗಳನ್ನಾಗಿ ಮಾಡುತ್ತದೆ; ಹೊಸ ಕ್ರಾಂತಿಯಿಂದಾಗಿ ಮುಂದೆ ಬರುತ್ತಾರೆ. ಶ್ರೀಕಂಠಯ್ಯನವರು ಈಗ ಇದ್ದಿದ್ದರೆ, "ತಥಾಸ್ತು, lest one good custom should corrupt the world," ಎನ್ನುತ್ತಿದ್ದರು.

ಬಿ. ಎಂ. ಶ್ರೀ.ಯವರು ಹೊಸಗನ್ನಡದ ಆಚಾರ್ಯಪುರುಷರಲ್ಲಿ ಒಬ್ಬರು. ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಇದರ ಏಳಿಗೆಗಾಗಿ ಹಗಲಿರುಳೂ ದುಡಿದವರು, ಕನ್ನಡದ ಮೇಲ್ಮೆಗಾಗಿ ಪಣತೊಟ್ಟವರು. 'ಕನ್ನಡ ತಲೆ ಎತ್ತುವ ಬಗೆ'ಯನ್ನು ಕುರಿತು ಬಹು ಹಿಂದೆಯೇ ಕನ್ನಡಿಗರಿಗೆ ದಾರಿ ತೋರಿದವರು. ಇಪ್ಪತ್ತನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಕನ್ನಡದ ಮುನ್ನಡೆ ಕುರಿತು ಆಳವಾಗಿ ಆಲೋಚಿಸಿದವರು. ಕನ್ನಡಕ್ಕೆ 'ಶ್ರೀ' ಸ್ವರೂಪರಾದ ಶ್ರೀಕಂಠಯ್ಯನವರ ಬದುಕು ಬರಹ ಕನ್ನಡಿಗರಿಗೆ ಹುರುಪು ತರುವಂತಹುದು. ತಮ್ಮ ವೈಯಕ್ತಿಕ ಜೀವನದಲ್ಲಿಯ ಕಷ್ಟನಷ್ಟಗಳನ್ನು ಲೆಕ್ಕಿಸದೆ ಋಜುಮಾರ್ಗದಿಂದ ತ್ಯಾಗಿಗಳಾಗಿ ತಾಯಿನುಡಿಗೆ ದುಡಿದ ಈ ತಲೆಯಾಳಿನ ಬಾಳಕಥೆಯನ್ನು ಎ. ಎನ್. ಮೂರ್ತಿರಾಯರು ಚೆನ್ನಾಗಿ ಬರೆದಿದ್ದಾರೆ. ಈ ಚರಿತ್ರೆಯನ್ನು ಬರೆಯಲು ಅವರೇ ತಕ್ಕವರು. ಅವರು ಶ್ರೀಯವರ ಜೀವನವನ್ನು ಕಂಡವರಲ್ಲದೆ ಶಿಷ್ಯರಾಗಿ, ನಿಕಟ ಸಂಪರ್ಕದಲ್ಲಿದ್ದವರು. ಶ್ರೀಕಂಠಯ್ಯನವರ ಮನೋಧರ್ಮವನ್ನು ಚೆನ್ನಾಗಿ ಅರಿತವರು. ಶ್ರೀಯವರ ಕೃತಿಗಳನ್ನೂ ಸಮಕಾಲೀನ ದೃಷ್ಟಿಯಿಂದ ಅಳತೆ ಮಾಡಬಲ್ಲ ಸಮರ್ಥರು. ಮೂರ್ತಿರಾಯರ ಸಾಹಿತ್ಯ ರಚನಾ ಶಕ್ತಿಯನ್ನು ಕುರಿತು ಮಾತನಾಡುವ ಅಗತ್ಯವಿಲ್ಲ. ಅವರು ಕನ್ನಡದ ಹಿರಿಯ ಬರಹಗಾರರಲ್ಲಿ ಒಬ್ಬರು. ಅವರ ಪ್ರಬಂಧಗಳು ಹೊಸ ಸಾಹಿತ್ಯ ಪ್ರಪಂಚದಲ್ಲಿ ಪ್ರಸಿದ್ಧವಾಗಿವೆ. ಅಂಥವರು ಬಿ.ಎಂ. ಶ್ರೀಕಂಠಯ್ಯನವರ ಜೀವನ ಚರಿತ್ರೆಯನ್ನು ಪರಿಷತ್ತಿಗಾಗಿ ಬರೆದುಕೊಟ್ಟು ಉಪಕರಿಸಿದ್ದಾರೆ. ಅದಕ್ಕಾಗಿ ಪರಿಷತ್ತು ಅವರಿಗೆ ತನ್ನ ನೆನಪುಗಳನ್ನು ಎದೆತುಂಬಿ ಸಲ್ಲಿಸುತ್ತದೆ.

ಹಂಪ. ನಾಗರಾಜಯ್ಯ
ಅಧ್ಯಕ್ಷರು